ಭಾನುವಾರ, ಏಪ್ರಿಲ್ 19, 2026 ₹ 7.00 • www.prajavani.net prajavani.net prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಮತದಾನ

ಪಶ್ಚಿಮ ಬಂಗಾಳದ ಅಲಿಪುರ್‌ದ್ವಾರ್ ಜಿಲ್ಲೆಯ ವೃದ್ಧೆಯೊಬ್ಬರು ಮನೆಯಿಂದಲೇ ಮತ ಚಲಾಯಿಸಿದರು



ಅಭಿಷೇಕ್ ಅಬ್ಬರ

ಸನ್‌ರೈಸರ್ಸ್ ಹೈದರಾಬಾದ್ ತಂಡದ ಅಭಿಷೇಕ್ ಶರ್ಮಾ ಅವರು ಶನಿವಾರ ಹೈದರಾಬಾದಿನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಎದುರು ನಡೆದ ಪಂದ್ಯದಲ್ಲಿ 15 ಎಸೆತಗಳಲ್ಲಿ ಅರ್ಧಶತಕ ಹೊಡೆದರು.

ಈ ಅಕ್ಷಯ ತೃತೀಯವು ನಿಮಗೂ ನಿಮ್ಮ ಕುಟುಂಬಕ್ಕೂ ಅಪಾರ ಸಮೃದ್ಧಿಯನ್ನು ಆಶೀರ್ವದಿಸಲಿ.

₹100* ಪ್ರತಿ ಗ್ರಾಂಗೆ ಅಧಿಕ ಹಳೆಯ ಚಿನ್ನವನ್ನು ಎಕ್ಸ್‌ಛೇಂಜ್ ಮಾಡುವಾಗ

12.5%* ರಿಯಾಯಿತಿ ವಜ್ರಗಳು ಮತ್ತು ಅನ್‌ಕಟ್ ವಜ್ರದ ಮೌಲ್ಯದ ಮೇಲೆ [ಸಾಲಿಟೈರ್‌ಗಳನ್ನು ಹೊರತುಪಡಿಸಿ]

25%* ರಿಯಾಯಿತಿ ಬೆಳ್ಳಿ ಸಾಮಗ್ರಿಗಳ ವೇಸ್ಟೇಜ್ ನ (VA) ಮೇಲೆ

10%* ರಿಯಾಯಿತಿ ಬೆಳ್ಳಿ ಆಭರಣಗಳ MRPಯ ಮೇಲೆ

ಚಿನ್ನದ ನಾಣ್ಯದ ಮೇಲೆ ವೇಸ್ಟೇಜ್ (VA) ಇಲ್ಲ

*ಚಿನ್ನದ ಬಾರ್‌ಗಳಿಗೆ ಯಾವುದೇ ವೇಸ್ಟೇಜ್ (VA) ಆಫರ್ ಅನ್ವಯಿಸುವುದಿಲ್ಲ. ಈ ಕೊಡುಗೆಗಳನ್ನು ಯಾವುದೇ ಇತರ ಕೊಡುಗೆಯೊಂದಿಗೆ ಸಂಯೋಜಿಸಲಾಗುವುದಿಲ್ಲ. ಸೀಮಿತ ಅವಧಿ ಆಫರ್. ನಿಯಮ ಮತ್ತು ಷರತ್ತುಗಳು ಅನ್ವಯಿಸುತ್ತದೆ.

ನಮ್ಮ ಎಲ್ಲಾ ಶೋರೂಮ್‌ಗಳು ಇಂದು-ಏಪ್ರಿಲ್ 19 ಮತ್ತು ನಾಳೆ-ಏಪ್ರಿಲ್ 20 ರಂದು ಬೆಳಿಗ್ಗೆ 6:00 ರಿಂದ ತೆರೆದಿರುತ್ತವೆ.

HDFC BANK | UPTO ₹5000 CASHBACK# on HDFC Bank Credit Cards. | Offer: 2% Cashback #Min. transaction: ₹75,000 Validity: 03.04.2026 to 26.04.2026. T&C apply. Attractive offer on online purchase also

Karnataka | Andhra Pradesh | Telangana | Tamil Nadu | Puducherry || Singapore

STORE LOCATOR

Shop online at: grtjewels.com | GRT LIVE VIDEO SHOPPING Shop from the comfort of your home | : 1800 203 1000 / 1800 599 1515 | Follow us:

ಸಾಧನೆಯ ಶಿಖರವೇರಿದ ದಾವಣಗೆರೆಯ ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ವಿದ್ಯಾಸಂಸ್ಥೆ

ರುಚಿ ಆರ್. ಕುಲಕರ್ಣಿ (592) | ತನಿಷ್ಕಾ ಎಸ್. ಕುಬಸದ್ (592) | ಕೆ.ಜಿ.ಪ್ರತಿಭಾ ಪಟೇಲ್ (586) | ಮನೋಜ್ ಕೆಎಸ್‌ಎಂ (584)
ಮಧು ಹಿರೇಮಠ (583) | ನಿಸರ್ಗ ವೈ.ಎಸ್. (582) | ಮಹಮ್ಮದ್ ಶೋಯೆಬ್ (582) | ಮದಕರಿ ಮಾಳಿಗಿ (581)
ಚಂದನಾ ಎಂ.ಆರ್. (580) | ಸೃಷ್ಟಿ ಉಪ್ಪಾರ (580) | ಶಂಕ್ರಯ್ಯ ಗುರುಮಠ (580) | ಸಂಜನಾ ಕಟೇನಹಳ್ಳಿ (578)
ದಿಯಾ. ಎಚ್ (577) | ದೀಪಾ ಪಾಟೀಲ (577) | ಕೆ.ವಿ. ಪ್ರಜ್ವಲ್ (577) | ಪ್ರತೀಕ್ಷಾ ಎಂ. ಪತ್ತಾರ್ (577)

ದ್ವಿತೀಯ ಪಿಯುಸಿ: ವಿಜ್ಞಾನ ವಿಭಾಗದಲ್ಲಿ 'ಡಬಲ್ ಸಂಭ್ರಮ'

ದಾವಣಗೆರೆಯ ಪುಷ್ಪಾ ಶಾಮನೂರು ಮಹಾಲಿಂಗಪ್ಪ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಇಬ್ಬರು ವಿದ್ಯಾರ್ಥಿನಿಯರು ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆಯ ವಿಜ್ಞಾನ ವಿಭಾಗದಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ವಿದ್ಯಾರ್ಥಿನಿಯರಾದ ರುಚಿ ಆರ್. ಕುಲಕರ್ಣಿ ಹಾಗೂ ತನಿಷ್ಕ ಎಸ್. ಕುಬಸದ್ ಅವರು 600ಕ್ಕೆ 592 ಅಂಕಗಳನ್ನು ಪಡೆಯುವ ಮೂಲಕ ಕಾಲೇಜಿನ ಟಾಪರ್‌ಗಳಾಗಿ ಹೊರಹೊಮ್ಮಿದ್ದಾರೆ. ಪರೀಕ್ಷೆಗೆ ಹಾಜರಾಗಿದ್ದ ಕಾಲೇಜಿನ 482 ವಿದ್ಯಾರ್ಥಿಗಳ ಪೈಕಿ 250ಕ್ಕೂ ಹೆಚ್ಚು ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆದಿದ್ದು, ಉಳಿದ ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. 76 ವಿದ್ಯಾರ್ಥಿಗಳು ನೂರಕ್ಕೆ 100 ಅಂಕಗಳನ್ನು ಪಡೆಯುವ ಮೂಲಕ ಸಾಧನೆ ಮಾಡಿದ್ದಾರೆ. ಸಂಸ್ಥೆಯ ಅಧ್ಯಕ್ಷ ಎಚ್. ಮಹಾಲಿಂಗಪ್ಪ ಹಾಗೂ ಆಡಳಿತ ಮಂಡಳಿ ಸದಸ್ಯರು ಹಾಗೂ ಬೋಧಕರು ವಿದ್ಯಾರ್ಥಿಗಳ ಸಾಧನೆಯನ್ನು ಪ್ರಶಂಸಿದ್ದಾರೆ.

ಜೆಇಇ ಮೇನ್ಸ್ ಪರೀಕ್ಷೆಯಲ್ಲೂ ಮುಂದು

ಪುಷ್ಪಾ ಶಾಮನೂರು ಮಹಾಲಿಂಗಪ್ಪ ಪದವಿಪೂರ್ವ ವಿಜ್ಞಾನ ಕಾಲೇಜಿನ ವಿದ್ಯಾರ್ಥಿಗಳು ಜೆಇಇ ಮೇನ್ಸ್ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಕಾಲೇಜಿನ ವಿದ್ಯಾರ್ಥಿಗಳಾದ ಪ್ರಜ್ವಲ್ ಹಿರೇಮಠ ಶೇ 98 ಪರ್ಸಂಟೈಲ್, ಪೃಥ್ವಿ ಹೊಂಬಾಳೆ ಶೇ 97 ಪರ್ಸಂಟೈಲ್, ಗಗನ್ ಎಂ.ಆರ್. ಶೇ 97 ಪರ್ಸಂಟೈಲ್, ಮಹೇಶ್ ಕೊನ್ನೂರು 93 ಪರ್ಸಂಟೈಲ್, ಸಿದ್ದೇಶ್ ಜಿ.ಎಸ್. 93 ಪರ್ಸಂಟೈಲ್, ಅಭಿಲಾಶ್ 91 ಪರ್ಸಂಟೈಲ್, ಪವನ್ ಕುಮಾರ್ 87 ಪರ್ಸಂಟೈಲ್ ಪಡೆದು ಉತ್ತಮ ಸಾಧನೆ ಮಾಡಿದ್ದಾರೆ.



ಪ್ರಜ್ವಲ್ ಹಿರೇಮಠ | ಪೃಥ್ವಿ ಹೊಂಬಾಳೆ | ಗಗನ್ ಎಂ.ಆರ್.
ಮಹೇಶ್ ಕೊನ್ನೂರು | ಸಿದ್ದೇಶ್ ಜಿ.ಎಸ್. | ಅಭಿಲಾಶ್ | ಪವನ್ ಕುಮಾರ್

ಓಂಕಾರ (675) | ಚನ್ನಬಸವ (650) | ನೇಹಾ ಆರ್. ಎಸ್. (632) | ರಾಕೇಶ್ (617) | ಸಾಗರ (615)
ಸಮರ್ಥ್ (612) | ಪ್ರೇಕ್ಷಾ (607) | ಸಚಿನ್ (601) | ಅಕ್ಷಯ್ (595) | ಕೃತಿಕಾ ಕೆ.ಜಿ. (581)
ಹರ್ಷಿಣಿ ಪಿ. (574) | ಕರಿಬಸಪ್ಪ ಜಿ. (564) | ಶಿವರಾಜ್ (557) | ಪೃಥ್ವಿ (548) | ಪೂಜಾ (531)

ನೀಟ್ ಪರೀಕ್ಷೆಯಲ್ಲಿ ಉತ್ತಮ ರ್‍ಯಾಂಕ್

ದಾವಣಗೆರೆಯ ಪುಷ್ಪಾ ಶಾಮನೂರು ಮಹಾಲಿಂಗಪ್ಪ ಪದವಿಪೂರ್ವ ವಿಜ್ಞಾನ ಕಾಲೇಜಿನ ವಿದ್ಯಾರ್ಥಿಗಳು ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಡೆಯುವ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯಲ್ಲೂ (ನೀಟ್) ಅತ್ಯುತ್ತಮ ಸಾಧನೆ ಮಾಡುವ ಮೂಲಕ ಕಾಲೇಜಿನ ಆಡಳಿತ ಮಂಡಳಿ ಹಾಗೂ ಪಾಲಕರ ಹಿರಿಮೆ ಹೆಚ್ಚಿಸಿದ್ದಾರೆ. ಕಾಲೇಜಿನ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇದುವರೆಗೂ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯಲ್ಲಿ ಉತ್ತಮ ರ್‍ಯಾಂಕ್ ಗಳಿಸುವ ಮೂಲಕ ಮೆಡಿಕಲ್ ಸೀಟ್ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಹತ್ತನೆ ತರಗತಿ (ಸಿಬಿಎಸ್‌ಇ), ದ್ವಿತೀಯ ಪಿಯುಸಿ, ನೀಟ್, ಜೆಇಇ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳ ಅಮೋಘ ಸಾಧನೆ

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ದಾವಣಗೆರೆ: 'ದೇವನಗರಿ', 'ವಿದ್ಯಾಕಾಶಿ' ಎಂದೇ ಖ್ಯಾತವಾಗಿರುವ ದಾವಣಗೆರೆ ನಗರದಲ್ಲಿನ ಶಾಮನೂರು ಎಜುಕೇಷನ್ ಟ್ರಸ್ಟ್‌ನ 'ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ವಿದ್ಯಾಸಂಸ್ಥೆ'ಯು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಶಿಕ್ಷಣದ ಮೂಲಕ ಪ್ರತಿ ವರ್ಷವೂ ಸಾವಿರಾರು ವಿದ್ಯಾರ್ಥಿಗಳ ಸುಭದ್ರ ಬದುಕಿಗೆ ಬುನಾದಿ ಹಾಕುತ್ತಿರುವ ವಿದ್ಯಾಸಂಸ್ಥೆಯು ಮಧ್ಯಕರ್ನಾಟಕದಲ್ಲಿ 'ಶಿಕ್ಷಣ ಕ್ರಾಂತಿ'ಗೆ ಮುನ್ನುಡಿ ಬರೆಯುತ್ತಿದೆ.

ಕೇಂದ್ರೀಯ ಪಠ್ಯಕ್ರಮದ (ಸಿಬಿಎಸ್‌ಇ) 10ನೇ ತರಗತಿ, ದ್ವಿತೀಯ ಪಿಯುಸಿ, ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್), ಜೆಇಇ ಪರೀಕ್ಷೆಗಳಲ್ಲಿ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳು ಅಮೋಘ ಸಾಧನೆ ಮಾಡುವ ಮೂಲಕ ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ.

ವರ್ಷದಿಂದ ವರ್ಷಕ್ಕೆ ಸಾಧನೆಯ ಶಿಖರವೇರುತ್ತಿರುವ ಶಾಮನೂರು ಎಜುಕೇಷನ್ ಟ್ರಸ್ಟ್‌ನ 'ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ವಿದ್ಯಾಸಂಸ್ಥೆ'ಯು ಜಿಲ್ಲೆಯ ಶೈಕ್ಷಣಿಕ ಬೆಳವಣಿಗೆಗೆ ಅಪಾರ ಕೊಡುಗೆ ನೀಡುತ್ತಿದೆ. ಪ್ರತೀ ವರ್ಷ 10ನೇ ತರಗತಿ (ಸಿಬಿಎಸ್‌ಇ), ನೀಟ್, ಜೆಇಇ ಪರೀಕ್ಷೆಗಳ ಫಲಿತಾಂಶ ಪ್ರಕಟಗೊಂಡಾಗ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳ ಹೆಸರು 'ಟಾಪ್'ನಲ್ಲಿಯೇ ಇರುತ್ತದೆ.

ಪುಷ್ಪಾ ಶಾಮನೂರು ಮಹಾಲಿಂಗಪ್ಪ ವಿದ್ಯಾಸಂಸ್ಥೆಯ ಆಡಳಿತ ಮಂಡಳಿಯು ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿಸ್ನೇಹಿ ವಾತಾವರಣ ಕಲ್ಪಿಸಿದ್ದು, ವಿದ್ಯಾರ್ಥಿಗಳು ಕೂಡ ನಿತ್ಯವೂ ಶ್ರಮವಹಿಸಿ ಅಧ್ಯಯನ ನಡೆಸುವ ಮೂಲಕ ಉತ್ತಮ ಫಲಿತಾಂಶ ಪಡೆಯುತ್ತಿದ್ದಾರೆ.

'ಕರ್ನಾಟಕದ ಹೃದಯಭಾಗ', 'ಬೆಣ್ಣೆನಗರಿ' ಎಂಬ ವಿಶೇಷಣಗಳಿಗೆ ಭಾಜನವಾಗಿರುವ ದಾವಣಗೆರೆಯು 'ಎಜುಕೇಷನ್ ಹಬ್' ಆಗಿ ಪರಿವರ್ತನೆಗೊಳ್ಳಲು ಶಾಮನೂರು ಎಜುಕೇಷನ್ ಟ್ರಸ್ಟ್‌ನ 'ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ವಿದ್ಯಾಸಂಸ್ಥೆ'ಯು ತನ್ನದೇ ಆದ ಕೊಡುಗೆ ನೀಡುತ್ತಿದೆ. ಗ್ರಾಮೀಣ ಹಾಗೂ ನಗರ ಪ್ರದೇಶದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯ ಆಶಾಕಿರಣವಾಗಿ ಹೊರಹೊಮ್ಮಿದೆ.

ಶಿಕ್ಷಣವೆಂಬುದು ಕೇವಲ ಪಠ್ಯಪುಸ್ತಕಗಳ ಜ್ಞಾನವಲ್ಲ, ಅದು ವ್ಯಕ್ತಿತ್ವ ನಿರ್ಮಾಣದ ಪೂರ್ಣ ಪ್ರಕ್ರಿಯೆ ಎಂಬ ತತ್ವವನ್ನು ಅಕ್ಷರಶಃ ಪಾಲಿಸುತ್ತಿರುವ 'ಪುಷ್ಪಾ ಶಾಮನೂರು ಮಹಾಲಿಂಗಪ್ಪ ವಿದ್ಯಾಸಂಸ್ಥೆ'ಯು ವಿಶೇಷ ಬೋಧನಾ ಶೈಲಿ ಹಾಗೂ ಕ್ರೀಡಾ ಚಟುವಟಿಕೆಗಳ ಸಾಧನೆಯ ಮೂಲಕ ಮಧ್ಯ ಕರ್ನಾಟಕದಲ್ಲಿ ಅತಿ ದೊಡ್ಡ ಹೆಸರು ಮಾಡಿದೆ.

ಪೂರ್ವ ಪ್ರಾಥಮಿಕ, ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿಪೂರ್ವ (ಪಿಯುಸಿ) ವರೆಗಿನ ವಿವಿಧ ಹಂತಗಳ ಶಿಕ್ಷಣವನ್ನು ಒಂದೇ ಸೂರಿನಡಿ ಒದಗಿಸುವ ಧ್ಯೇಯದಡಿ ಕಾರ್ಯನಿರ್ವಹಿಸುತ್ತಿರುವ ಈ ವಿದ್ಯಾಸಂಸ್ಥೆಯು 'ಆಲದ ಮರ'ದ ರೀತಿ ಬೆಳೆದು ನಿಂತಿರುವುದು ಶಿಕ್ಷಣ ಪ್ರೇಮಿಗಳ, ಶಿಕ್ಷಣ ತಜ್ಞರ ಕಣ್ಣರಳಿಸಿದೆ.

ಪ್ರತೀ ವರ್ಷ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿದ್ದರೂ, ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಮಾತ್ರ ಸಣ್ಣ ರಾಜಿಯನ್ನೂ ಮಾಡಿಕೊಳ್ಳದ ಕಾರಣಕ್ಕೆ 'ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ವಿದ್ಯಾಸಂಸ್ಥೆ'ಯು ಯಶಸ್ವಿಯಾಗಿ ಮುನ್ನಡೆಯುತ್ತಿದೆ.

ಸಂಸ್ಥೆಯ ವಿದ್ಯಾರ್ಥಿಗಳಿಗೆ ಅತ್ಯಾಧುನಿಕ ಶೈಕ್ಷಣಿಕ ಸೌಲಭ್ಯಗಳು ದೊರೆಯುತ್ತಿರುವ ಕಾರಣ ಫಲಿತಾಂಶದಲ್ಲಿ ವಿದ್ಯಾಸಂಸ್ಥೆಯು ವರ್ಷದಿಂದ ವರ್ಷಕ್ಕೆ ಏರುಮುಖದಲ್ಲೇ ಸಾಗಿ ಉತ್ತುಂಗ ಶಿಖರದಲ್ಲಿದೆ. ನಗರ–ಗ್ರಾಮ ವಿಭಜನೆಯ ಗೋಡೆಯನ್ನು ಅಳಿಸಿ, ಎಲ್ಲ ವಿದ್ಯಾರ್ಥಿಗಳಿಗೂ ಉತ್ಕೃಷ್ಟ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ರೂಪುಗೊಂಡಿರುವ ಈ ಸಂಸ್ಥೆಯು ಸಾಮಾಜಿಕ ಬದ್ಧತೆಯನ್ನೂ ಪಾಲಿಸುವ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ಈ ಸಂಸ್ಥೆಯಲ್ಲಿರುವ ಅತ್ಯಾಧುನಿಕ ಬೋಧನಾ ಕೊಠಡಿಗಳು, ವ್ಯವಸ್ಥಿತವಾಗಿ ರೂಪುಗೊಂಡಿರುವ ವಿಜ್ಞಾನ ಮತ್ತು ಗಣಿತ ಪ್ರಯೋಗಾಲಯಗಳು ವಿದ್ಯಾರ್ಥಿಗಳಲ್ಲಿರುವ ಸೃಜನಶೀಲತೆಯನ್ನು ಮತ್ತಷ್ಟು ಹೆಚ್ಚಿಸಲು ಸಹಕಾರಿಯಾಗಿವೆ.

ಸಂಸ್ಥೆಯಲ್ಲಿ ಪಾಠ ಕೇಳುವುದು ಮತ್ತು ಬರೆಯುವುದಕ್ಕೆ ಮಾತ್ರ ಕಲಿಕೆಯನ್ನು ಸೀಮಿತಗೊಳಿಸಿಲ್ಲ. ವೀಡಿಯೊ ಮೂಲಕ ಪಾಠ ಕೇಳುವುದು ಹಾಗೂ ಪ್ರಾಯೋಗಿಕ ಕಲಿಕೆಗೂ ಆದ್ಯತೆ ನೀಡಲಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳ ಕಲಿಕಾ ಪ್ರಕ್ರಿಯೆಯು ಆಸಕ್ತಿದಾಯಕವಾಗಿ ಮುಂದುವರಿದಿದೆ.

ವಿದ್ಯಾಭ್ಯಾಸದ ಜೊತೆಗೆ ವಿದ್ಯಾರ್ಥಿಗಳ ಮಾನಸಿಕ, ಬೌದ್ಧಿಕ ಹಾಗೂ ಗ್ರಹಿಕಾ ಸಾಮರ್ಥ್ಯವನ್ನು ಹೆಚ್ಚಿಸುವ ದೃಷ್ಟಿಯಿಂದ ಆರಂಭಿಸಿರುವ ಜೀವನ ಕೌಶಲ ಕೇಂದ್ರ, ಸೃಜನಶೀಲತಾ ಕೇಂದ್ರ ಹಾಗೂ ಗಣಿತ ಪ್ರಯೋಗಾಲಯಗಳು ವಿದ್ಯಾರ್ಥಿಗಳನ್ನು ಸೆಳೆಯುವಲ್ಲಿ ಹಿಂದೆ ಬಿದ್ದಿಲ್ಲ.

ಸಂಸ್ಥೆಯಲ್ಲಿ ಎಲ್ಲ ಶೈಕ್ಷಣಿಕ ಸೌಲಭ್ಯಗಳಿಗೆ ಜೀವ ತುಂಬುವ ಮೂಲಕ ವಿದ್ಯಾರ್ಥಿಗಳನ್ನು ಹಂತಹಂತವಾಗಿ ಶೈಕ್ಷಣಿಕವಾಗಿ ಮೇಲೆತ್ತುವವರು ಶಿಕ್ಷಕರು, ಉಪನ್ಯಾಸಕರು. ಅಪಾರ ಅನುಭವವುಳ್ಳ, ನುರಿತ ಹಾಗೂ ನಿತ್ಯವೂ ತಮಗೆ ತಾವೇ ಹೊಸತನಕ್ಕೆ ತೆರೆದುಕೊಳ್ಳುವ (ಅಪ್‌ಡೇಟ್) ಇಲ್ಲಿನ 'ಗುರು'ಗಳು ವಿದ್ಯಾರ್ಥಿಗಳ ಪಾಲಿಗೆ ವರವಾಗಿದ್ದಾರೆ.

ವಿದ್ಯಾರ್ಥಿಗಳ ಮನೋಭಾವ ಅರಿತುಕೊಳ್ಳುವ ಇಲ್ಲಿನ ಶಿಕ್ಷಕರು, ಉಪನ್ಯಾಸಕರು ಅತ್ಯುತ್ತಮ ಬೋಧನೆಯೊಂದಿಗೆ ಪ್ರತಿಯೊಬ್ಬ ವಿದ್ಯಾರ್ಥಿಯ ಬಗ್ಗೆ ವೈಯಕ್ತಿಕ ಕಾಳಜಿ ತೋರುತ್ತಿದ್ದಾರೆ. ಇದರಿಂದಾಗಿ ವಿದ್ಯಾರ್ಥಿಗಳಲ್ಲಿ ಆತ್ಮಸ್ಥೈರ್ಯ ಮೂಡುವ ಜೊತೆಗೆ ಅವರ ಕಲಿಕೆಯ ಆಸಕ್ತಿಯನ್ನು ಹೆಚ್ಚಿಸುತ್ತಿದೆ. ಇದರ ಫಲವಾಗಿ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಮಾತ್ರವಲ್ಲದೇ ವ್ಯಕ್ತಿತ್ವದ ದೃಷ್ಟಿಯಿಂದಲೂ ಉತ್ತಮ ಪ್ರಗತಿಯನ್ನು ಸಾಧಿಸುತ್ತಿದ್ದಾರೆ.

ಇಂದಿನ ವಿದ್ಯಾರ್ಥಿಗಳನ್ನು ಭವಿಷ್ಯದ ನಾಯಕರು, ಸತ್ಪ್ರಜೆಗಳನ್ನಾಗಿಸುವಲ್ಲಿ ವಿದ್ಯಾಸಂಸ್ಥೆಯು ನಂಬಿಕೆಯನ್ನು ಹೊಂದಿದೆ. ಜಾಗತೀಕರಣದ ಜಗತ್ತಿನಲ್ಲಿ ಹೆಚ್ಚುತ್ತಿರುವ ಬೇಡಿಕೆಗಳನ್ನು ಪೂರೈಸಲು ವಿದ್ಯಾಸಂಸ್ಥೆಯಲ್ಲಿ ಉತ್ತಮ ಕಲಿಕಾ ವಾತಾವರಣ ರೂಪಿಸಿದೆ.

ಜಗತ್ತು ವೇಗವಾಗಿ ಬದಲಾಗುತ್ತಿದ್ದು, ಅದಕ್ಕೆ ತಕ್ಕಂತೆ ವಿದ್ಯಾರ್ಥಿಗಳನ್ನು ಅಣಿಗೊಳಿಸಲು ಸೃಜನಶೀಲ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಇದರೊಂದಿಗೆ ಪ್ರಾಮಾಣಿಕತೆ, ನಿಷ್ಠೆ, ಸಹನಶೀಲತೆ ಮತ್ತು ಕರುಣೆ ಎಂಬ ಮೌಲ್ಯಗಳನ್ನೂ ಬೆಳೆಸಲಾಗುತ್ತಿದೆ.

ಹವಾನಿಯಂತ್ರಿತ (ಎಸಿ) ಸಭಾಂಗಣ: ಸಂಸ್ಥೆಯು 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಆರಾಮದಾಯಕವಾಗಿ ಕುಳಿತುಕೊಳ್ಳಬಹುದಾದ ಹವಾನಿಯಂತ್ರಿತ (ಎಸಿ) ಸಭಾಂಗಣವನ್ನು ಹೊಂದಿದೆ. ಬೋಧನಾ ಚಟುವಟಿಕೆಗಳ ಜೊತೆಗೆ ಶಾಲೆ ಹಾಗೂ ಕಾಲೇಜು ಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮಗಳು, ಸಮಾರಂಭಗಳು ಮತ್ತು ವಿಶೇಷ ಕಾರ್ಯಾಗಾರಗಳನ್ನು ವಿದ್ಯಾಸಂಸ್ಥೆಯಲ್ಲಿ ನಿಯಮಿತವಾಗಿ ಆಯೋಜಿಸಲಾಗುತ್ತಿದೆ.

ಬೋಧನೆಯ ಜೊತೆಗೆ ಕಲೆ, ಕ್ರೀಡೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೂ ಆದ್ಯತೆ ನೀಡಲಾಗಿದೆ. ಆಸಕ್ತ ವಿದ್ಯಾರ್ಥಿಗಳಿಗೆ ಸಂಗೀತ ತರಬೇತಿಯ ವ್ಯವಸ್ಥೆಯೂ ಇಲ್ಲಿ ಲಭ್ಯವಿದೆ. ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆಯನ್ನು ಗುರುತಿಸಲು ಸೂಕ್ತ ವೇದಿಕೆಯನ್ನು ಕಲ್ಪಿಸಲಾಗಿದೆ.

ವಿದ್ಯಾಸಂಸ್ಥೆಯಲ್ಲಿ ಪ್ರತೀ ವರ್ಷವೂ ಸಾವಿರಾರು ವಿದ್ಯಾರ್ಥಿಗಳಿಗೆ ಪರಸ್ಪರ ಸೌಹಾರ್ದತೆ, ಸಹಕಾರ ಮತ್ತು ಶಿಸ್ತಿನ ಪಾಠಗಳನ್ನು ಕಲಿಸಲಾಗುತ್ತಿದೆ.

ಭಾಷಣ, ಉಪನ್ಯಾಸ, ಸಂವಾದ, ವಿಚಾರಗೋಷ್ಠಿ ಹಾಗೂ ವಿಚಾರ ಸಂಕಿರಣಗಳಂತಹ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ಆತ್ಮವಿಶ್ವಾಸ, ನಾಯಕತ್ವ ಗುಣ ಬೆಳೆಸುವುದು ಮತ್ತು ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ವಾತಾವರಣವನ್ನು ನಿರ್ಮಿಸಲಾಗಿದೆ. ಎಚ್. ಮಹಾಲಿಂಗಪ್ಪ – ಪುಷ್ಪಾ ದಂಪತಿ ನೇತೃತ್ವದ ಆಡಳಿತ ಮಂಡಳಿಯು ಶಾಲೆಯಲ್ಲಿ ಸಮಗ್ರ ಶಿಕ್ಷಣ ವಾತಾವರಣವನ್ನು ಅಂದವಾಗಿ ಸೃಷ್ಟಿಸಿದೆ.

ಶಿಕ್ಷಣ ಸಂಸ್ಥೆಯು ದೃಢ ನಿಶ್ಚಯ, ಸಹನೆ ಹಾಗೂ ನಿರಂತರ ಪ್ರಯತ್ನ ಎಂಬ ಯಶಸ್ಸಿನ ಮೆಟ್ಟಿಲುಗಳನ್ನು ದಾಟಿ ಉತ್ತುಂಗಕ್ಕೇರಿದೆ. ಆತ್ಮವಿಶ್ವಾಸ ಹೊಂದಿರುವ ವಿದ್ಯಾರ್ಥಿಗಳು ಎಷ್ಟೇ ಜಟಿಲವಾದ ಶಿಕ್ಷಣವನ್ನೂ ಸರಳವಾಗಿ ಕಲಿಯಬಲ್ಲರು ಎಂಬ ನಂಬಿಕೆಯನ್ನು ಹೊಂದಿರುವ ವಿದ್ಯಾಸಂಸ್ಥೆಯು ಮಕ್ಕಳಿಗೆ ಆತ್ಮವಿಶ್ವಾಸವನ್ನು ತುಂಬುವ ಕಾರ್ಯದಲ್ಲಿ ತೊಡಗಿದೆ.

ಸುಸಜ್ಜಿತ ಗ್ರಂಥಾಲಯ, ಪ್ರಯೋಗಾಲಯ: ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ವಿದ್ಯಾಸಂಸ್ಥೆಯಲ್ಲಿ ಅತ್ಯಂತ ಸುಸಜ್ಜಿತವಾದ ಗ್ರಂಥಾಲಯವಿದೆ. ಪ್ರಾಥಮಿಕ ಹಂತದಿಂದ ಪಿಯು ಶಿಕ್ಷಣದವರೆಗೆ ವಿದ್ಯಾರ್ಥಿಗಳ ಬೌದ್ಧಿಕ ಬೆಳವಣಿಗೆಗೆ ಅಗತ್ಯವಿರುವ ಪಠ್ಯಪುಸ್ತಕಗಳು, ಪಠ್ಯೇತರ ಗ್ರಂಥಗಳು, ಸಾಮಾನ್ಯ ಜ್ಞಾನ, ವಿಜ್ಞಾನ, ಸಾಹಿತ್ಯ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಸಾವಿರಾರು ಮೌಲ್ಯಯುತ ಪುಸ್ತಕಗಳು ಇಲ್ಲಿ ಲಭ್ಯವಿವೆ.

ವಿದ್ಯಾರ್ಥಿಗಳು ಕೇವಲ ಪಠ್ಯಾಧಾರಿತ ಶಿಕ್ಷಣಕ್ಕೆ ಸೀಮಿತವಾಗಬಾರದು ಎಂಬ ಸದುದ್ದೇಶದಿಂದ ಪಠ್ಯೇತರ ವಿಷಯಗಳ ಓದಿಗೂ ಶಿಕ್ಷಕರು, ಉಪನ್ಯಾಸಕರು ಪ್ರೇರೇಪಿಸುತ್ತಿದ್ದಾರೆ. ಪಿಯುಸಿ ವಿದ್ಯಾರ್ಥಿಗಳಿಗಾಗಿ ಕೆಮಿಸ್ಟ್ರಿ, ಫಿಸಿಕ್ಸ್, ಬಯಾಲಜಿ ಹಾಗೂ ಕಂಪ್ಯೂಟರ್ ವಿಜ್ಞಾನ ವಿಭಾಗಗಳಲ್ಲಿ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಅತ್ಯುತ್ತಮ, ಗುಣಮಟ್ಟದ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿದೆ. ಇಲ್ಲಿ ವಿದ್ಯಾರ್ಥಿಗಳಿಗೆ ಪ್ರಾಯೋಗಿಕವಾಗಿ ಪರಿಣಾಮಕಾರಿ ರೀತಿಯಲ್ಲಿ ಶಿಕ್ಷಣ ನೀಡಲಾಗುತ್ತಿದೆ. ಇದರಿಂದಾಗಿ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯವು ಮತ್ತಷ್ಟು ವೃದ್ಧಿಸಿದೆ. ಶೈಕ್ಷಣಿಕ ಸಾಧನೆಯ ಜೊತೆಗೆ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೂ ಮಹತ್ವ ನೀಡಲಾಗುತ್ತಿದೆ.

ವಿದ್ಯಾಸಂಸ್ಥೆಯ ಗುರಿ, ಉದ್ದೇಶಗಳು

- ವಿದ್ಯಾರ್ಥಿಗಳ ಸಮಗ್ರ ಬೆಳವಣಿಗೆಗೆ ಶ್ರಮಿಸುವಂತಹ ಅನುಭವಿ ಹಾಗೂ ಉತ್ಸಾಹಿ ಶಿಕ್ಷಕರನ್ನು ನಿಯೋಜಿಸುವುದು
- ಕುತೂಹಲ, ಅನ್ವೇಷಣೆ ಹಾಗೂ ಜ್ಞಾನಾರ್ಜನೆಗೆ ಪ್ರೇರೇಪಿಸುವಂತಹ ವಿದ್ಯಾರ್ಥಿಸ್ನೇಹಿ ಕಲಿಕಾ ವಾತಾವರಣವನ್ನು ನಿರ್ಮಿಸುವುದು
- ಸಂವಹನ ಕೌಶಲ ಬೆಳೆಸುವುದು, ಅಭಿಪ್ರಾಯ ಮತ್ತು ಆಲೋಚನೆಗಳನ್ನು ಸ್ಪಷ್ಟವಾಗಿ, ಆತ್ಮವಿಶ್ವಾಸದಿಂದ ವ್ಯಕ್ತಪಡಿಸುವ ಸಾಮರ್ಥ್ಯವನ್ನು ವೃದ್ಧಿಸುವುದು
- ವಿದ್ಯಾರ್ಥಿಗಳಲ್ಲಿ ಸ್ವತಂತ್ರ ಚಿಂತನೆ ಮತ್ತು ನಿರ್ಧಾರ ಕೈಗೊಳ್ಳುವ ಶಕ್ತಿಯನ್ನು ಬೆಳೆಸುವುದು
- ಪ್ರತಿ ವಿದ್ಯಾರ್ಥಿಗಳಲ್ಲಿನ ಸಕಾರಾತ್ಮಕ ಹಾಗೂ ನಕಾರಾತ್ಮಕ ಅಂಶಗಳನ್ನು ಗುರುತಿಸಿ ಮಾರ್ಗದರ್ಶನದ ಮೂಲಕ ಸುಧಾರಣೆ ಸಾಧಿಸುವುದು
- ಭಾರತೀಯ ಸಂಸ್ಕೃತಿ, ಮೌಲ್ಯ ಮತ್ತು ಪರಂಪರೆಯನ್ನು ಕಾಪಾಡಿಕೊಂಡು ವಿದ್ಯಾರ್ಥಿಗಳನ್ನು ಜಾಗತಿಕ ಸವಾಲುಗಳನ್ನು ಎದುರಿಸಲು ಸಿದ್ಧಗೊಳಿಸುವ ಸಮಗ್ರ ಶಿಕ್ಷಣ ನೀಡುವುದು

ಸುರಕ್ಷಿತ, ಮೌಲ್ಯಯುತ ವಸತಿ ಸೌಲಭ್ಯ

ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ವಿದ್ಯಾಸಂಸ್ಥೆಯಲ್ಲಿ ವಸತಿಯೇತರ ಹಾಗೂ ವಸತಿ ಸೌಲಭ್ಯ ಶಿಕ್ಷಣ ನೀಡಲಾಗುತ್ತಿದೆ. ವಿದ್ಯಾರ್ಥಿಗಳ ಅಗತ್ಯ ಹಾಗೂ ಆಯ್ಕೆಯ ಅನುಸಾರವಾಗಿ ಶಿಕ್ಷಣ ಒದಗಿಸಲಾಗುತ್ತಿದೆ. ಗ್ರಾಮೀಣ ಪ್ರದೇಶ ಹಾಗೂ ಬೇರೆ ಜಿಲ್ಲೆಗಳಿಂದ ಬರುವ ವಿದ್ಯಾರ್ಥಿಗಳಿಗೆ ಯಾವುದೇ ಸಮಸ್ಯೆಯಾಗದಂತೆ ವ್ಯವಸ್ಥಿತವಾಗಿ ವಸತಿ ಸೌಲಭ್ಯ ಕಲ್ಪಿಸಲಾಗಿದೆ. ವಸತಿ ವಿದ್ಯಾರ್ಥಿಗಳಿಗಾಗಿ ಸಂಸ್ಥೆಯ ಆವರಣದಲ್ಲೇ ಅತ್ಯಾಧುನಿಕ ಹಾಗೂ ಸುಸಜ್ಜಿತ ಹಾಸ್ಟೆಲ್‌ಗಳನ್ನು ನಿರ್ಮಿಸಲಾಗಿದೆ. ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಹಾಗೂ ಸುರಕ್ಷಿತವಾದ ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ. ವಿದ್ಯಾರ್ಥಿಗಳ ಖಾಸಗಿತನದ ರಕ್ಷಣೆ ಹಾಗೂ ಆರೈಕೆಗೂ ಆದ್ಯತೆ ನೀಡಲಾಗಿದೆ. ಇಡೀ ಕ್ಯಾಂಪಸ್‌ನಲ್ಲಿ 24/7 ಭದ್ರತಾ ವ್ಯವಸ್ಥೆ ಇದೆ. ಸೆಕ್ಯೂರಿಟಿ ಸಿಬ್ಬಂದಿ, ಪ್ರವೇಶ– ನಿರ್ಗಮನದ ಮೇಲ್ವಿಚಾರಕರು ಸದಾ ಕಾರ್ಯ ನಿರ್ವಹಿಸುತ್ತಾರೆ. ಮಾತ್ರವಲ್ಲದೇ ಸಿ.ಸಿ.ಟಿವಿ ಕ್ಯಾಮೆರಾಗಳ ಕಣ್ಗಾವಲೂ ಇರುವುದು ವಿದ್ಯಾರ್ಥಿಗಳ ಭದ್ರತೆಯ ಬಗ್ಗೆ ಪಾಲಕರಿಗೆ ಯಾವುದೇ ಚಿಂತೆ ಇಲ್ಲದಂತೆ ಮಾಡಿದೆ. ವಿದ್ಯಾರ್ಥಿಗಳ ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಪೌಷ್ಟಿಕ ಆಹಾರ ಬಹು ಅಗತ್ಯ. ಇದಕ್ಕಾಗಿಯೇ ವಸತಿ ಶಾಲೆಯ ವಿದ್ಯಾರ್ಥಿಗಳಿಗೆ ಪೋಷಕಾಂಶಯುಕ್ತ, ಗುಣಮಟ್ಟದ ಆಹಾರವನ್ನು ನೀಡಲಾಗುತ್ತಿದೆ. ಆಧುನಿಕ, ಸ್ವಚ್ಛ ಮತ್ತು ಸುಸಜ್ಜಿತವಾದ ಭೋಜನಾಲಯ ಕಾರ್ಯ ನಿರ್ವಹಿಸುತ್ತಿದ್ದು, ಅಡುಗೆ ಸಿಬ್ಬಂದಿಯೂ ವಿದ್ಯಾರ್ಥಿಸ್ನೇಹಿಯಾಗಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಕೋರ್ಸ್‌ಗಳು

- ಎಲ್‌ಕೆಜಿಯಿಂದ 10ನೇ ತರಗತಿವರೆಗೆ ಸಿಬಿಎಸ್‌ಇ ಪಠ್ಯಕ್ರಮ
- 1ರಿಂದ 10ನೇ ತರಗತಿವರೆಗೆ ಐಸಿಎಸ್‌ಇ ಪಠ್ಯಕ್ರಮ
- ಪಿಯುಸಿಯೊಂದಿಗೆ ನೀಟ್ ಪರೀಕ್ಷೆಗೆ ತರಬೇತಿ
- ಪಿಯುಸಿಯೊಂದಿಗೆ ಕೆ–ಸಿಇಟಿ ಪರೀಕ್ಷೆಗೆ ತರಬೇತಿ
- ಪಿಯುಸಿಯೊಂದಿಗೆ ಜೆಇಇ ಪರೀಕ್ಷೆಗೆ ತರಬೇತಿ
- ಐಐಟಿ ಮತ್ತು ಫೌಂಡೇಷನ್ ಕೋರ್ಸ್‌ಗಳು

10ನೇ ತರಗತಿ ಸಿಬಿಎಸ್‌ಇ ಫಲಿತಾಂಶ; ಸಾಧನೆ

ಲೇಖನ | ಅಪೇಕ್ಷಾ | ಜೈಸನ್ ಸಾತ್ವಿಕ್ | ತೃಪ್ತಿ ಜಿ.ಜಿ | ಶ್ರೀಗೌರಿ
ಆದಿತ್ಯ ಎಸ್.ಡಿ. | ಸಮರ್ಥ | ಹರಿಣಿ | ಖುಷಿ

2025-26ನೇ ಸಾಲಿನ 10ನೇ ತರಗತಿ ಕೇಂದ್ರ ಪಠ್ಯಕ್ರಮದ ಪರೀಕ್ಷೆಯಲ್ಲೂ ಶ್ರೀಮತಿ ಪುಷ್ಪಾ ಮಹಾಲಿಂಗಪ್ಪ ಸಿಬಿಎಸ್‌ಇ ಶಾಲೆಯ ವಿದ್ಯಾರ್ಥಿಗಳು ಅತ್ಯುತ್ತಮ ಫಲಿತಾಂಶ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ.

ವಿದ್ಯಾರ್ಥಿಗಳಾದ ಲೇಖನ ಶೇ 96.4, ಅಪೇಕ್ಷಾ ಶೇ 96.2, ಜೈಸನ್ ಸಾತ್ವಿಕ್ ಶೇ 96 ರಷ್ಟು ಅಂಕಗಳನ್ನು ಪಡೆದು ಶಾಲೆಯ ಟಾಪರ್‌ಗಳಾಗಿ ಹೊರಹೊಮ್ಮಿದ್ದಾರೆ. ಉಳಿದಂತೆ ತೃಪ್ತಿ ಜಿ.ಜಿ. ಶೇ 95, ಆದಿತ್ಯ ಎಸ್.ಡಿ. ಶೇ 94, ಸಮರ್ಥ ಶೇ 94, ಹರಿಣಿ ಶೇ 94, ಖುಷಿ ಶೇ 94 ಹಾಗೂ ಶ್ರೀಗೌರಿ ಶೇ 94 ರಷ್ಟು ಅಂಕಗಳನ್ನು ಪಡೆದು ಶಾಲೆಯ ಕೀರ್ತಿ ಪತಾಕೆ ಹಾರಿಸಿದ್ದಾರೆ. ಶ್ರೀಮತಿ ಪುಷ್ಪಾ ಮಹಾಲಿಂಗಪ್ಪ ಸಿಬಿಎಸ್‌ಇ ಶಾಲೆಯ ಸಾಕಷ್ಟು ಸಂಖ್ಯೆಯ ವಿದ್ಯಾರ್ಥಿಗಳು ಶೇ 85ಕ್ಕಿಂತ ಅಧಿಕ ಅಂಕಗಳನ್ನು ಪಡೆದಿದ್ದಾರೆ. ಪ್ರತೀ ವರ್ಷದಂತೆ ಈ ವರ್ಷವೂ ಶಾಲೆಯು ಶೇ 100ರಷ್ಟು ಫಲಿತಾಂಶ ಸಾಧಿಸುವ ಮೂಲಕ ಅಭೂತಪೂರ್ವ ಯಶಸ್ಸು ಕಂಡಿದೆ. ವಿದ್ಯಾರ್ಥಿಗಳ ಈ ಸಾಧನೆಗೆ ಶಾಲೆಯ ಆಡಳಿತ ಮಂಡಳಿ ಅಭಿನಂದನೆ ಸಲ್ಲಿಸಿ ಪ್ರೋತ್ಸಾಹಿಸಿದೆ.

ಐಐಟಿ ಫೌಂಡೇಷನ್ ಕೋರ್ಸ್: ಶ್ರೀಮತಿ ಪುಷ್ಪಾ ಮಹಾಲಿಂಗಪ್ಪ ಶಿಕ್ಷಣ ಸಂಸ್ಥೆಯಲ್ಲಿ ಸಿಬಿಎಸ್‌ಇ ಹಾಗೂ ಐಸಿಎಸ್‌ಇ ಪಠ್ಯಕ್ರಮಗಳನ್ನು ಅಳವಡಿಸಿಕೊಳ್ಳಲಾಗಿದ್ದು, ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. 6ನೇ ತರಗತಿಯಿಂದ 10ನೇ ತರಗತಿವರೆಗೆ ವಿದ್ಯಾರ್ಥಿಗಳಿಗೆ ಐಐಟಿ ಫೌಂಡೇಷನ್ ಕೋರ್ಸ್ ಅನ್ನು ಪರಿಚಯಿಸಿದೆ. ಇಷ್ಟು ಮಾತ್ರವಲ್ಲದೇ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಕಾರ್ಯವನ್ನು ಸಂಸ್ಥೆಯು ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ.

SMT. PUSHPA SHAMANUR MAHALINGAPPA
CBSE & ICSE RESIDENTIAL SCHOOL & PU SCIENCE COLLEGE
1st Main, Swami Vivekananda Extn, Near BIET College, DAVANAGERE
www.spsmrs.org

ADMISSIONS OPEN for the year 2026-27
Seperate PU Campus for Boys & Girls
• 1st PUC Science
• Pre KG to Grade 10
• CBSE / ICSE

We offer
NEET • KCET • JEE
• IIT & Foundation Courses

8970071100 • 9035289011 • 9035289011 • 08192-263766

ಭಾನುವಾರ, ಏಪ್ರಿಲ್ 19, 2026 ₹ 7.00
www.prajavani.net
prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಗಣತಿ ಕಾರ್ಯ

ಜನಗಣತಿ ಭಾಗವಾಗಿ ಬೆಂಗಳೂರಿನಲ್ಲಿ ಮನೆ ಗಣತಿಯಲ್ಲಿ ನಿರತರಾಗಿದ್ದ ಗಣತಿದಾರರು

ರಾಹುಲ್ ಜನ್ಮದಿನ 'ಸಂಭ್ರಮ'

ಬೆಂಗಳೂರಿನಲ್ಲಿ ಶನಿವಾರ ನಡೆದ ಐಪಿಎಲ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಕೆ.ಎಲ್. ರಾಹುಲ್ ಅವರು ಆರ್‌ಸಿಬಿ ಎದುರು ಅರ್ಧಶತಕ ಗಳಿಸಿ ತಮ್ಮ ಜನ್ಮದಿನವನ್ನು ಸಂಭ್ರಮಿಸಿದರು

ಜಿಬಿಎ ವ್ಯಾಪ್ತಿಯಲ್ಲಿ 89 ಲಕ್ಷ ಮತದಾರರು

ಐದು ನಗರ ಪಾಲಿಕೆಗಳ ವಾರ್ಡ್‌ವಾರು ಮತದಾರರ ಅಂತಿಮ ಪಟ್ಟಿ ಬಿಡುಗಡೆ

88,95,361 ಐದು ನಗರ ಪಾಲಿಕೆಗಳಲ್ಲಿರುವ ಒಟ್ಟು ಮತದಾರರು | **45,71,169** ಪುರುಷ ಮತದಾರರು | **43,22,557** ಮಹಿಳಾ ಮತದಾರರು | **1,635** ಇತರೆ ಮತದಾರರು | **8,023** ಒಟ್ಟು ಮತಗಟ್ಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳ ವಾರ್ಡ್‌ವಾರು ಮತದಾರರ ಅಂತಿಮ ಪಟ್ಟಿ ಬಿಡುಗಡೆ ಮಾಡಲಾಗಿದ್ದು, ಒಟ್ಟು 88,95,361 ಮತದಾರರಿದ್ದಾರೆ ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆಗಿರುವ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

'ಮಾರ್ಚ್ 9ರಂದು ಮತದಾರರ ಪರಿಷ್ಕೃತ ಕರಡು ಪಟ್ಟಿಯನ್ನು ಬಿಡುಗಡೆ ಮಾಡಲಾಗಿತ್ತು. ಅದರಲ್ಲಿದ್ದ ಲೋಪ-ದೋಷಗಳನ್ನು ಸರಿಪಡಿಸಿ, ಮಾರ್ಪಾಡುಗಳನ್ನು ಮಾಡಿ ಅಂತಿಮ ಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ. ಜಿಬಿಎ ಅಧಿಕೃತ ಜಾಲತಾಣದಲ್ಲಿ (https://gba.karnataka.gov.in/home) ಮತದಾರರು ತಮ್ಮ ಹೆಸರನ್ನು ಪರಿಶೀಲನೆ ಮಾಡಿಕೊಳ್ಳಬಹುದು ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಒಟ್ಟು 369 ವಾರ್ಡ್‌ಗಳಲ್ಲಿ ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ವಾರ್ಡ್ ಸಂಖ್ಯೆ 51-ಸುಬ್ರಹ್ಮಣ್ಯಪುರ ಅತಿ ಹೆಚ್ಚು (53,660) ಮತದಾರರನ್ನು ಹೊಂದಿದೆ. ಬೆಂಗಳೂರು ಪೂರ್ವ ನಗರ ಪಾಲಿಕೆಯ ವಾರ್ಡ್ ಸಂಖ್ಯೆ 24-ವಿಜ್ಞಾನನಗರ ಅತಿ ಕಡಿಮೆ (12,897) ಮತದಾರರನ್ನು ಹೊಂದಿರುತ್ತದೆ. ಅಂತಿಮ ಮತದಾರರ ಪಟ್ಟಿಯಲ್ಲಿ 2,833 ಮತದಾರರು ಹೆಚ್ಚಾಗಿದ್ದಾರೆ ಎಂದು ಮಾಹಿತಿ ನೀಡಿದರು.

ಮತದಾರರು ವಾರ್ಡ್‌ವಾರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಆನ್‌ಲೈನ್‌ನಲ್ಲಿ ಎಪಿಕ್ ಸಂಖ್ಯೆ ಅಥವಾ ಅವರ ಹೆಸರಿನ ಮೂಲಕ ಹುಡುಕಲು ವ್ಯವಸ್ಥೆ ಕಲ್ಪಿಸಲಾಗಿದೆ. ಸಾರ್ವಜನಿಕರು ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾದ ಬಗ್ಗೆ ಪರಿಶೀಲಿಸಿಕೊಂಡು, ಖಚಿತಪಡಿಸಿಕೊಳ್ಳಬಹುದಾಗಿದೆ. ಎಲ್ಲ ಅರ್ಹ ಮತದಾರರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಲು ಹಾಗೂ ದೋಷರಹಿತ ಮತದಾರರ ಪಟ್ಟಿಯನ್ನು ತಯಾರಿಸಲು ಅವಶ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗಿದೆ. ಒಂದು ವೇಳೆ ಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗದಿದ್ದಲ್ಲಿ ಪೂರಕ ಪಟ್ಟಿಗಳಲ್ಲಿ ಹೆಸರನ್ನು ಸೇರಿಸಿಕೊಳ್ಳಬಹುದು ಎಂದರು.

ನೇಮಕ: ನೋಂದಾಯಿತ ಮತ್ತು ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು ಪ್ರತಿ ವಾರ್ಡಿನ ಪ್ರತಿ ಮತಗಟ್ಟೆಗೆ ಒಬ್ಬರಂತೆ ಬೂತ್ ಲೆವಲ್ ಏಜೆಂಟ್ (ಬಿಎಲ್‌ಎ) ನೇಮಕಾತಿ ಮಾಡಿ ಮತಗಟ್ಟೆ ಅಧಿಕಾರಿಗಳಿಗೆ ಅರ್ಹ ಮತದಾರರ ನೋಂದಣಿ ಕಾರ್ಯದಲ್ಲಿ ಸಹಕಾರ ನೀಡಲು ಕೋರಲಾಗಿದೆ ಎಂದರು.

'ಎಸ್‌ಐಆರ್ ನಡೆಸಲು ಸೂಚನೆ ಬಂದಿಲ್ಲ'

'ಜಿಬಿಎ ವ್ಯಾಪ್ತಿಯಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಶೀಲನೆ (ಎಸ್‌ಐಆರ್) ನಡೆಸಲು ಕೇಂದ್ರ ಚುನಾವಣಾ ಆಯೋಗದಿಂದ ನಮಗೆ ನಿರ್ದೇಶನ ಬಂದಿಲ್ಲ' ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

'ಎಸ್‌ಐಆರ್ ನಡೆಸುವ ಬಗ್ಗೆ ನಾವು ಸಿದ್ಧತೆ ನಡೆಸಿದ್ದೇವೆ. ಶೀಘ್ರವೇ ಸೂಚನೆ ಬರುವ ನಿರೀಕ್ಷೆ ಇದ್ದು, ನಾವು ಸನ್ನದ್ಧವಾಗಿದ್ದೇವೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ನಗರ ಪಾಲಿಕೆಗಳ ಚುನಾವಣೆಗೆ ಸಂಬಂಧಿಸಿದಂತೆ, ನಾವು ಎಲ್ಲ ರೀತಿಯ ಸಿದ್ಧತೆ ಮಾಡಿಕೊಂಡಿದ್ದೇವೆ. ರಾಜ್ಯ ಚುನಾವಣಾ ಆಯೋಗದ ನಿರ್ದೇಶನದಂತೆ ನಾವು ಕಾರ್ಯಚಟುವಟಿಕೆ ನಡೆಸುತ್ತೇವೆ' ಎಂದು ಚುನಾವಣೆ ಮುಂದೂಡಿಕೆ ಬಗ್ಗೆ ಚುನಾವಣಾ ಆಯೋಗಕ್ಕೆ ಬರೆದ ಪತ್ರದ ಬಗ್ಗೆ ಪ್ರತಿಕ್ರಿಯಿಸಿದರು.

ಬೆಂಗಳೂರು ನಗರ ಪಾಲಿಕೆವಾರು ಮತದಾರರ ವಿವರ

ನಗರ ಪಾಲಿಕೆಗಳು	ಒಟ್ಟು ವಾರ್ಡ್	ಒಟ್ಟು ಮತಗಟ್ಟೆ	ಮತದಾರರು			
			ಪುರುಷ	ಮಹಿಳೆ	ಇತರೆ	ಒಟ್ಟು
ಕೇಂದ್ರ	63	1,303	7,26,476	6,98,967	303	14,25,746
ಉತ್ತರ	72	1,708	9,94,421	9,59,702	381	19,54,504
ದಕ್ಷಿಣ	72	1,611	9,03,402	8,41,097	225	17,44,724
ಪೂರ್ವ	50	920	5,49,200	4,91,996	258	10,41,454
ಪಶ್ಚಿಮ	112	2,481	13,97,670	13,30,795	468	27,28,933

ಸುದ್ದಿ 2 ನಿಮಿಷ

₹8 ಕೋಟಿ ಗಾಂಜಾ ವಶ: ಬಂಧನ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಳೆದ ಮೂರು ದಿನಗಳಿಂದ ಶೋಧ ಕಾರ್ಯಾಚರಣೆ ತೀವ್ರಗೊಳಿಸಿರುವ ಕಸ್ಟಮ್ಸ್ ಅಧಿಕಾರಿಗಳು ಮೂರು ಪ್ರತ್ಯೇಕ ಪ್ರಕರಣಗಳಲ್ಲಿ ಬ್ಯಾಂಕಾಕ್‌ನಿಂದ ಬಂದ ಪ್ರಯಾಣಿಕರಿಂದ ಒಟ್ಟು ₹8.11 ಕೋಟಿ ಮೌಲ್ಯದ ಸುಮಾರು 23 ಕೆ.ಜಿ. ಹೈಡ್ರೋಪೋನಿಕ್ ಗಾಂಜಾ ಜಪ್ತಿ ಮಾಡಿದ್ದಾರೆ.

ಈ ಬಾರಿ ಲಗೇಜ್ ಬ್ಯಾಗ್‌ಗಳಲ್ಲಿ ಮುಚ್ಚಿಟ್ಟುಕೊಂಡು ಗಾಂಜಾ ಸಾಗಿಸುತ್ತಿದ್ದ ನಾಲ್ವರು ಮಹಿಳೆಯರು ಕಸ್ಟಮ್ಸ್ ಅಧಿಕಾರಿಗಳ ಕೈಗೆ ಸಿಕ್ಕಿಬಿದ್ದಿದ್ದಾರೆ. ನಾಲ್ವರು ಮಹಿಳೆಯರು ಸೇರಿದಂತೆ ಒಟ್ಟು ಆರು ಪ್ರಯಾಣಿಕ ರನ್ನು ಬಂಧಿಸಿದ್ದಾರೆ. ಏ.16ರಂದು ಬ್ಯಾಂಕಾಕ್‌ನಿಂದ ಬಂದಿಳಿದ ನಾಲ್ವರು ಮಹಿಳೆಯರ ತಪಾಸಣೆ ವೇಳೆ ಲಗೇಜ್ ಬ್ಯಾಗ್‌ಗಳಲ್ಲಿ ಮುಚ್ಚಿಟ್ಟುಕೊಂಡು ತಂದಿದ್ದ 11.72 ಕೆ.ಜಿ. ಹೈಡ್ರೋಪೋನಿಕ್ ಗಾಂಜಾ ವನ್ನು ಕಸ್ಟಮ್ಸ್ ಅಧಿಕಾರಿಗಳು ಪತ್ತೆಹಚ್ಚಿದರು. ವಶಪಡಿಸಿಕೊಂಡ ಗಾಂಜಾದ ಅಂದಾಜು ಮೌಲ್ಯ ₹4.10 ಕೋಟಿ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ನಾಲ್ವರು ಮಹಿಳೆಯರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲಾಗಿದೆ.

ಏ.17ರಂದು ನಡೆದ ಮತ್ತೊಂದು ಕಾರ್ಯಾಚರಣೆಯಲ್ಲಿ ಬ್ಯಾಂಕಾಕ್‌ನಿಂದ ಬಂದ ಒಬ್ಬ ಪ್ರಯಾಣಿಕನ ಬಳಿ 5.78 ಕೆ.ಜಿ. ಹೈಡ್ರೋಪೋನಿಕ್ ಗಾಂಜಾ ಪತ್ತೆಹಚ್ಚಲಾಗಿದೆ. ಇದರ ಮೌಲ್ಯವನ್ನು ₹2.02 ಕೋಟಿ ಎಂದು ಅಂದಾಜಿಸಲಾಗಿದೆ. ಈ ಪ್ರಯಾಣಿಕನನ್ನೂ ಬಂಧಿಸಲಾಗಿದೆ. ಶನಿವಾರ ನಡೆದ ಮೂರನೇ ಪ್ರಕರಣದಲ್ಲಿ ಮತ್ತೊಬ್ಬ ಪ್ರಯಾಣಿಕನಿಂದ 5.70 ಕೆ.ಜಿ. ಹೈಡ್ರೋಪೋನಿಕ್ ಗಾಂಜಾ ವಶಕ್ಕೆ ಪಡೆಯಲಾಗಿದೆ. ಇದರ ಮೌಲ್ಯ ₹1.99 ಕೋಟಿ ಎಂದು ತಿಳಿದುಬಂದಿದೆ. 6 ಮಂದಿ ವಿರುದ್ಧ ಮಾದಕ ವಸ್ತುಗಳ ನಿಯಂತ್ರಣ ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ನೋಟಿಸ್ ನೀಡದೆ ಗಡಿ ಗುರುತು: ಗುತ್ತಿಗೆದಾರ ಆಕ್ರೋಶ

ಕೆ.ಆರ್.ಪುರ: ಕೆ.ಆರ್.ಪುರ ಮಾರುಕಟ್ಟೆಯಲ್ಲಿ ಸುಂಕ ವಸೂಲಾತಿ ಸಂಬಂಧ ಪೂರ್ವ ನಗರ ಕೆ.ಆರ್.ಪುರ ಜಿಬಿಎ ಜಂಟಿ ಆಯುಕ್ತೆ ಸುಧಾ ಅವರ ನೇತೃತ್ವದಲ್ಲಿ ಗಡಿ ಗುರುತಿಸುವ ಕಾರ್ಯ ಅಧಿಕಾರಿಗಳ ಸಮ್ಮುಖದಲ್ಲಿ ನಡೆಯಿತು.

ವೆಂಗಯ್ಯನಕೆರೆಯಿಂದ ಐಟಿಐವರೆಗಿನ ರಸ್ತೆ ಅಳತೆ ಕಾರ್ಯ ಕೈಗೊಳ್ಳಲು ಅಧಿಕಾರಿಗಳು ಬಂದಿದ್ದರು. ಈ ವೇಳೆ ಗುತ್ತಿಗೆದಾರ ಅಂಜನಮೂರ್ತಿ ಅವರು, 'ನೋಟಿಸ್ ನೀಡದೆ ಖಾಸಗಿ ವ್ಯಕ್ತಿಗಳಿಂದ ಅಳತೆ ಕಾರ್ಯ ಮಾಡಿಸುತ್ತಿದ್ದೀರಿ. ವೆಂಗಯ್ಯನಕೆರೆಯಿಂದ ಐಟಿಐವರೆಗೆ ಸುಂಕ ವಸೂಲಿ ಮಾಡಲು ಕಾರ್ಯಾದೇಶ ಪತ್ರವನ್ನು ಜಿಬಿಎ ಅಧಿಕಾರಿಗಳು ನೀಡಿದ್ದಾರೆ. ಆದರೆ, ಮಾರುಕಟ್ಟೆಗೆ ಸಂಬಂಧವಿಲ್ಲದ ಎಲೆ ಶ್ರೀನಿವಾಸ್ ಎಂಬುವರ ಮೂಲಕ ಅಧಿಕಾರಿಗಳು ಗಡಿ ಗುರುತಿಸುವ ಕೆಲಸ ಮಾಡಿಸುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಂಟಿ ಆಯುಕ್ತೆ ಸುಧಾ ಮಾತನಾಡಿ, 'ಕೆ.ಆರ್.ಪುರ ಮಾರುಕಟ್ಟೆಗೆ ಎಲ್ಲಿಂದ ಎಲ್ಲಿಯವರೆಗೆ ಸುಂಕ ವಸೂಲಿ ನಡೆಸಬೇಕೆಂಬ ವಿಚಾರದಲ್ಲಿ ವಿವಾದ ಉಂಟಾಗಿತ್ತು. ವೆಂಗಯ್ಯನಕೆರೆಯಿಂದ ಐಟಿಐವರೆಗೆ ಅಳತೆ ಕಾರ್ಯ ಮಾಡಿದ್ದೇವೆ. ಸಂತೆಗೆ ಮೂಲಸೌಕರ್ಯ ಕಲ್ಪಿಸಲು ಆಯುಕ್ತರೊಂದಿಗೆ ಚರ್ಚಿಸಿ ಕೈಗೊಳ್ಳಲಾಗುವುದು' ಎಂದರು.

ಕೇಂದ್ರ ಸರ್ಕಾರಿ ನೌಕರರ ತುಟ್ಟಿಭತ್ಯೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರಿ ನೌಕರರಿಗೆ ಶೇ 2ರಷ್ಟು ತುಟ್ಟಿ ಭತ್ಯೆ (ಡಿಎ) ಮತ್ತು ಪಿಂಚಣಿದಾರರಿಗೆ ತುಟ್ಟಿ ಪರಿಹಾರ (ಡಿಆರ್) ನೀಡಲು ಕೇಂದ್ರ ಸಚಿವ ಸಂಪುಟ ಶನಿವಾರ ಅನುಮೋದನೆ ನೀಡಿದೆ.

ಈ ಹೆಚ್ಚಳವು 2026ರ ಜನವರಿ 1 ರಿಂದ ಅನ್ವಯ-ವಾಗಲಿದ್ದು, ಮೂಲ ವೇತನ/ಪಿಂಚಣಿಯ ಪ್ರಸ್ತುತದ ಶೇ 58 ದರಕ್ಕೆ ಹೆಚ್ಚುವರಿಯಾಗಿ ಸಿಗಲಿದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ತುಟ್ಟಿ ಭತ್ಯೆ ಮತ್ತು ತುಟ್ಟಿ ಪರಿಹಾರ ಹೆಚ್ಚಳದಿಂದಾಗಿ ಬೊಕ್ಕಸದ ಮೇಲೆ ಒಟ್ಟಾರೆಯಾಗಿ ವಾರ್ಷಿಕವಾಗಿ ₹6,791.24 ಕೋಟಿ ಹೊರೆ ಬೀಳಲಿದೆ. ಇದರಿಂದ 50.46 ಲಕ್ಷ ನೌಕರರು ಮತ್ತು 68.27 ಲಕ್ಷ ಪಿಂಚಣಿದಾರರಿಗೆ ಅನುಕೂಲವಾಗಲಿದೆ ಎಂದು ಹೇಳಿದರು.

ನೆಲಮಂಗಲ ನಗರಸಭೆ ವ್ಯಾಪ್ತಿಯ ಜಕ್ಕಸಂದ್ರ ಗ್ರಾಮಸ್ಥರು ಮೂಲಸೌಕರ್ಯ ಕಲ್ಪಿಸುವಂತೆ ಆಗ್ರಹಿಸಿ ನಗರಸಭೆ ಕಚೇರಿ ಎದುರು ಖಾಲಿ ಕೊಡ ಹಾಗೂ ಪೊರಕೆ ಹಿಡಿದು ಪ್ರತಿಭಟನೆ ನಡೆಸಿದರು

ಜಕ್ಕಸಂದ್ರ ಗ್ರಾಮಸ್ಥರ ಪ್ರತಿಭಟನೆ

ನೆಲಮಂಗಲ: ಮೂಲಸೌಕರ್ಯ ಕಲ್ಪಿಸುವಂತೆ ಆಗ್ರಹಿಸಿ ನಗರಸಭೆ ಕಚೇರಿ ಎದುರು ಖಾಲಿ ಕೊಡ ಹಾಗೂ ಪೊರಕೆ ಹಿಡಿದು ಜಕ್ಕಸಂದ್ರ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಜಕ್ಕಸಂದ್ರ ಗ್ರಾಮವನ್ನು ನಗರಸಭೆ ವ್ಯಾಪ್ತಿಗೆ ಸೇರಿಸಲಾಗಿದೆ. ಸಂಗ್ರಹಿಸಿದ ತೆರಿಗೆಗೆ ತಕ್ಕಂತೆ ಮೂಲಸೌಕರ್ಯ ಕಲ್ಪಿಸಿಲ್ಲ ಗ್ರಾಮಸ್ಥರು ದೂರಿದರು.

ಎರಡು ತಿಂಗಳಿಂದ ಕುಡಿಯುವ ನೀರು ಸಮರ್ಪವಾಗಿ ಪೂರೈಕೆ ಆಗುತ್ತಿಲ್ಲ. ಕಸ ವಿಲೇವಾರಿ ಆಗುತ್ತಿಲ್ಲ, ಕಸ ಸಂಗ್ರಹಿಸುವ ಗಾಡಿಗಳು ಸರಿಯಾಗಿ ಬರುತ್ತಿಲ್ಲ. ವಿದ್ಯುತ್ ದೀಪಗಳನ್ನು ಬದಲಿಸಿಲ್ಲ, ರಸ್ತೆಗಳು ಹಾಳಾಗಿವೆ, ಚರಂಡಿಗಳು ಕಟ್ಟಿಕೊಂಡಿವೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ನಗರಸಭೆ ಆಯುಕ್ತ ಎಚ್. ಗಂಗಾಧರ್ ಮಾತನಾಡಿ, ಶೀಘ್ರ ವಾರ್ಡ್ ಸಭೆ ನಡೆಸಿ ಸಮಸ್ಯೆಗಳನ್ನು ಪರಿಹರಿಸ ಲಾಗುವುದು. ನೀರಿನ ಸಮಸ್ಯೆ ನಿವಾರಣೆಗೆ ಕೊಳವೆಬಾವಿಗಳನ್ನು ಕೊರೆಸಲಾಗುವುದು ಅಲ್ಲಿಯವರೆಗೂ ಉಚಿತವಾಗಿ ಟ್ಯಾಂಕರ್ ನೀರು ಒದಗಿಸ ಲಾಗುವುದು ಎಂದು ಭರವಸೆ ನೀಡಿದರು.

ಗ್ರಾಮಸ್ಥರಾದ ಗೋವಿಂದರಾಜು, ಜಯರಾಮಯ್ಯ, ರಾಮಣ್ಣ, ಚಿಕ್ಕಣ್ಣ, ಗಂಗಣ್ಣ, ಮಂಗಳಮ್ಮ, ನೀಲಮ್ಮ, ಲಕ್ಷ್ಮಮ್ಮ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

31 ಬಾಲ ಗರ್ಭಿಣಿಯರಿಗೆ ಸ್ಕ್ಯಾನಿಂಗ್

ಭ್ರೂಣ ಪತ್ತೆಗೆ ಅಕ್ರಮ: ಲೋಕಾಯುಕ್ತದಲ್ಲಿ ಪ್ರಕರಣ

• ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: ಜಿಲ್ಲೆಯ ಕೆ.ಆರ್. ಪೇಟೆ ಪಟ್ಟಣದ ಎರಡು ಖಾಸಗಿ ಡಯಾಗ್ನಾಸ್ಟಿಕ್ ಸೆಂಟರ್‌ಗಳಲ್ಲಿ ನಿಯಮಗಳನ್ನು ಉಲ್ಲಂಘಿಸಿ 31 ಬಾಲಗರ್ಭಿಣಿಯರಿಗೆ ಭ್ರೂಣಲಿಂಗ ಪತ್ತೆಗಾಗಿ ಸ್ಕ್ಯಾನಿಂಗ್ ಮಾಡಿರುವುದನ್ನು ಲೋಕಾಯುಕ್ತ ಪೊಲೀಸರು ಪತ್ತೆ ಹಚ್ಚಿದ್ದಾರೆ.

'ನಾವಿ ಡಯಾಗ್ನಾಸ್ಟಿಕ್ ಸೆಂಟರ್'ನಲ್ಲಿ 2024ನೇ ಸಾಲಿನಲ್ಲಿ 19 ಮತ್ತು 2025ನೇ ಸಾಲಿನಲ್ಲಿ 5 ಸೇರಿದಂತೆ ಒಟ್ಟು 24 ಬಾಲ ಗರ್ಭಿಣಿಯರಿಗೆ ನಿಯಮಬಾಹಿರವಾಗಿ ಸ್ಕ್ಯಾನಿಂಗ್ ಮಾಡಲಾಗಿದೆ. 'ಕುಶಾಲ್ ಡಯಾಗ್ನಾಸ್ಟಿಕ್ ಸೆಂಟರ್'ನಲ್ಲೂ 7 ಬಾಲ ಗರ್ಭಿಣಿಯರಿಗೆ ಸ್ಕ್ಯಾನಿಂಗ್ ಮಾಡಿದ ಆರೋಪ ಕೇಳಿಬಂದಿದೆ.

18 ವರ್ಷದೊಳಗಿನ (ಅಪ್ರಾಪ್ತ ವಯಸ್ಸಿನ) ಹೆಣ್ಣುಮಕ್ಕಳು ಸ್ಕ್ಯಾನಿಂಗ್‌ಗೆ ಬಂದ ಸಮಯದಲ್ಲಿ 'ಪೋಕ್ಸೊ ಕಾಯ್ದೆ' ಪ್ರಕಾರ ಸ್ಥಳೀಯ ಪೊಲೀಸ್ ಠಾಣೆ ಮತ್ತು ಸಂಬಂಧಪಟ್ಟ ಪ್ರಾಧಿಕಾರಕ್ಕೆ ವರದಿ ಮಾಡದೇ ಕಾನೂನು ಉಲ್ಲಂಘನೆ ಮಾಡಲಾಗಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಸ್ಕ್ಯಾನಿಂಗ್ ವಿವರಗಳೇ ಇಲ್ಲ: ಕುಶಾಲ್ ಡಯಾಗ್ನಾಸ್ಟಿಕ್ ಸೆಂಟರ್‌ನಲ್ಲಿ 2018ನೇ ಸಾಲಿನಿಂದ ಈವರೆಗೆ ಗರ್ಭಿಣಿಯರಿಗೆ ಒಟ್ಟು 10,101 ಸ್ಕ್ಯಾನಿಂಗ್ ಮಾಡಿದ್ದು, ಈ ಪೈಕಿ ರಿಜಿಸ್ಟರ್‌ನಲ್ಲಿ ಕೇವಲ 3,629 ಪ್ರಕರಣಗಳ ಮಾಹಿತಿಯನ್ನು ನಮೂದಿಸಲಾಗಿದೆ. ಉಳಿದ 6,472 ಸ್ಕ್ಯಾನಿಂಗ್ ವಿವರಗಳನ್ನು ನಮೂದಿಸಿಲ್ಲ.

ಅಷ್ಟೇ ಅಲ್ಲ, 18 ವರ್ಷ ಮೇಲ್ಪಟ್ಟ 20 ವರ್ಷದೊಳಗಿನ ಮಹಿಳೆಯರಿಗೆ ವಯಸ್ಸಿನ ದೃಢೀಕರಣ ದಾಖಲಾತಿಯನ್ನು ಪಡೆಯದೇ 64 ಗರ್ಭಿಣಿಯರಿಗೆ ಸ್ಕ್ಯಾನಿಂಗ್‌ಗಳನ್ನು ಮಾಡಿ ನಿಯಮ ಉಲ್ಲಂಘಿಸಿರುವುದು ಕಂಡುಬಂದಿದೆ ಎಂದು ಮೂಲಗಳು ಮಾಹಿತಿ ನೀಡಿವೆ.

ಲೋಕಾಯುಕ್ತಕ್ಕೆ ದೂರು: ಮಂಜುನಾಥ ಎಂಬುವರು, 'ಕೆ.ಆರ್. ಪೇಟೆಯ ಖಾಸಗಿ ಸ್ಕ್ಯಾನಿಂಗ್ ಸೆಂಟರ್‌ನಲ್ಲಿ ಅಕ್ರಮವಾಗಿ ಭ್ರೂಣಲಿಂಗ ಪತ್ತೆ ಮಾಡಲಾಗುತ್ತಿದೆ' ಎಂದು ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು. ದೂರಿನ ಮೇರೆಗೆ, ಶೋಧ ನಡೆಸಿ, ವರದಿ ನೀಡುವಂತೆ ಉಪಲೋಕಾಯುಕ್ತ ಬಿ. ವೀರಪ್ಪ ಅವರು ಆದೇಶಿಸಿದ್ದರು. ಆದೇಶದ ಮೇರೆಗೆ ಮಂಡ್ಯ, ಮೈಸೂರು ಮತ್ತು ರಾಮನಗರ ಜಿಲ್ಲೆಯ ಲೋಕಾಯುಕ್ತ ಪೊಲೀಸರು 9 ತಂಡಗಳನ್ನು ರಚಿಸಿಕೊಂಡು ಏ.17ರಂದು ಏಕಕಾಲಕ್ಕೆ 9 ಕಡೆ ದಾಳಿ ನಡೆಸಿದಾಗ ಪ್ರಕರಣಗಳು ಪತ್ತೆಯಾಗಿವೆ.

'ಡೆಕಾಯ್' ಕಾರ್ಯಾಚರಣೆ: ಕೆಲವು ವರ್ಷಗಳಿಂದ ನಡೆದ 'ಹೆಣ್ಣುಭ್ರೂಣ ಲಿಂಗ ಪತ್ತೆ ಮತ್ತು ಹತ್ಯೆ' ಪ್ರಕರಣಗಳು 'ಸಕ್ಕರೆ ನಾಡು' ಮಂಡ್ಯಕ್ಕೆ ಕಳಂಕ ತಂದಿದ್ದವು. ಆರೋಗ್ಯ ಇಲಾಖೆಯ ವಿಶೇಷ ತಂಡ 'ಡೆಕಾಯ್ ಕಾರ್ಯಾಚರಣೆ' (ಭ್ರೂಣ ಲಿಂಗ ಪತ್ತೆ ಜಾಲ ಭೇದಿಸಲು ಆರೋಗ್ಯ ಇಲಾಖೆಯಿಂದ ತರಬೇತುಗೊಂಡ ಗರ್ಭಿಣಿಯನ್ನು ಕಳುಹಿಸಿ ನಡೆಸಿದ ಕಾರ್ಯಾಚರಣೆ) ನಡೆಸಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿತ್ತು.

ಬಳಕೆಯಾಗದ ಸ್ಕ್ಯಾನಿಂಗ್ ಯಂತ್ರ

'ಮಂಡ್ಯ ಜಿಲ್ಲೆಯ ತಾಲ್ಲೂಕು ಆಸ್ಪತ್ರೆಗಳಲ್ಲಿ 'ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್ ಯಂತ್ರ'ಗಳು ಇದ್ದರೂ ಅವುಗಳನ್ನು ಬಳಕೆ ಮಾಡಲು ರೇಡಿಯಾಲಜಿಸ್ಟ್ ಹುದ್ದೆಗಳನ್ನು ಭರ್ತಿ ಮಾಡಲು ಯಾವುದೇ ಕ್ರಮ ಕೈಗೊಂಡಿಲ್ಲ. ಖಾಸಗಿ ಡಯಾಗ್ನಾಸ್ಟಿಕ್ ಸೆಂಟರ್‌ಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಸರ್ಕಾರಿ ಆಸ್ಪತ್ರೆಯ ವೈದ್ಯರು ಸ್ಕ್ಯಾನಿಂಗ್ ಮಾಡಿಸಲು ಖಾಸಗಿ ಸೆಂಟರ್‌ಗಳಿಗೆ ಶಿಫಾರಸು ಮಾಡಿದ್ದಾರೆ' ಎಂಬ ಲೋಪವನ್ನು ಮಂಡ್ಯ ಲೋಕಾಯುಕ್ತ ಪೊಲೀಸರು ದಾಖಲಿಸಿದ್ದಾರೆ.

MYSORE EDUCATION SOCIETY (MES)

"Brahmi", #62, 10th Main, 15th Cross, Malleswaram, Bengaluru-560003. www.mesinstitutions.in

Hearty Congratulations to the State Rank Holders for their Exemplary Performance in II PUC Board Examination March 2026

Registration for Admissions (2026-27) is open at all the four PU Colleges of MES

"MES is proud to announce that 70 students have achieved top 20 ranks across the state, marking an exceptional academic milestone"

MES PU COLLEGE OF ARTS, COMMERCE & SCIENCE

15th Cross, Malleswaram, Bengaluru - 560 003. Ph: 080-23562536 / 8147521258
E-mail: mespumain@gmail.com website: https://mesacspuc.in/

COURSES OFFERED

SCIENCE COMBINATIONS
PCMC (Physics, Chemistry, Mathematics, Computer Science)
PCMB (Physics, Chemistry, Mathematics, Biology)
PCME (Physics, Chemistry, Mathematics, Electronics)

COMMERCE COMBINATIONS
MEBA (Basic Maths, Economics, Business Studies, Accountancy)
MSBA (Basic Maths, Statistics, Business Studies, Accountancy)
BASCs (Business Studies, Accountancy, Statistics, Computer Science)

ARTS COMBINATIONS: HELS (History, Economics, Logic, Sociology) | HESPsy (History, Economics, Psychology Sociology)

COMMERCE
7th RANK SOUMYA P M 594 - 99.00%
8th RANK ADITHYA NARAYAN 593 - 98.83%
9th RANK THANUSHREE N 592 - 98.67%
10th RANK VIJAY ADITYA K R 591 - 98.50%
11th RANK SUPRITI MAITI 590 - 98.33%
12th RANK RINKU KUMARI A 589 - 98.17%
13th RANK JNANASHREE L 588 - 98.00%
13th RANK TANMAI L 588 - 98.00%
14th RANK HINDUJA K R 587 - 97.83%
14th RANK VEENA N 587 - 97.83%
15th RANK KEERTHANA J 586 - 97.67%
15th RANK PARAS S CHOPDA 586 - 97.67%
15th RANK TAMANNA N 586 - 97.67%

ARTS
7th RANK DHAATRI GUPTA 590 - 98.33%
9th RANK TEJESHWAR K 588 - 98.00%
12th RANK R BHAVATHARINI 585 - 97.50%
12th RANK SUPRIYA C R 585 - 97.50%

SCIENCE
8th RANK VIJETHA P 592 - 98.67%
10th RANK ANKITA ANAND ANDEWADIKAR 590 - 98.33%
11th RANK ADHYA MADHUGIRI 589 - 98.17%
11th RANK YASHASWINI V 589 - 98.17%
12th RANK KARISHMAA G 588 - 98.00%
12th RANK VISHRUTH M GOWDA 588 - 98.00%
13th RANK ABHISHEK RATHOD 587 - 97.83%
13th RANK JEEVAN A 587 - 97.83%

MES KISHORA KENDRA PU COLLEGE

15th Cross, Malleswaram, Bengaluru - 560 003. Ph: 080-23347266 / 7204434138
E-mail: kishorakendra@gmail.com website: https://meskkpuc.in/

COURSES OFFERED

SCIENCE COMBINATIONS
PCMC (Physics, Chemistry, Mathematics, Computer Science)
PCMB (Physics, Chemistry, Mathematics, Biology)

COMMERCE COMBINATIONS
BASE (Business, Accountancy, Statistics, Economics)
BASCs (Business, Accountancy, Statistics, Computer Science)

SCIENCE
11th RANK RAMKUMAR P DIKSHIT 589 - 98.17%
12th RANK KRISHNAKUMAR P DIKSHIT 588 - 98.00%
13th RANK APOORVA N 587 - 97.83%
14th RANK SUMERU S M 586 - 97.67%

COMMERCE
13th RANK A PREM KUMAR 588 - 98.00%

MES PROF. MPL SASTRY PU COLLEGE

Vidyavihara, 25/1, 17th Main Rd, 2nd Block, Rajajinagar, Bengaluru - 560010. Ph: 080-23131468 / 23122466, 8904256529. E-mail: mesmplpu2002@gmail.com website: https://mesmplpuc.in/

COURSES OFFERED

SCIENCE COMBINATIONS
PCMC (Physics, Chemistry, Mathematics and Computer Science)
PCMB (Physics, Chemistry, Mathematics and Biology)

COMMERCE COMBINATIONS
EBACS (Economics, Business Studies, Accountancy and Computer Science)

COMMERCE
9th RANK KEERTHANA R S 592 - 98.67
10th RANK SINCHANA 591 - 98.5%

MES PROF. B.R. SUBBA RAO PU COLLEGE

Vidyaranyapura, Bengaluru - 560 097. Ph: 080-23646446 / 8861126840, 8861126826
E-mail: mesbrs@gmail.com website: https://mesbrspuc.in/

COURSES OFFERED

SCIENCE COMBINATIONS
PCMC (Physics, Chemistry, Mathematics and Computer Science)
PCMB (Physics, Chemistry, Mathematics and Biology)

COMMERCE COMBINATIONS
BASE (Business Studies, Accountancy, Statistics, Economics)
EBACS (Economics, Business Studies, Accountancy, Computer Science)

COMMERCE
7th RANK MAHATI SHASTRY 594 - 99.00%

SCIENCE
13th RANK REHAM SALAM 587 - 97.83%
13th RANK YASH Y 587 - 97.83%

Admissions (2026-27) are open in both the Degree Colleges

MES COLLEGE OF ARTS, COMMERCE & SCIENCE

Prof. M.P.L.Sastry Road, 15th Cross, 10th Main Rd, Malleswaram, Bengaluru – 560003.
Contact No. 080-23341225 / 080-23347045. Email: mesdegreecollege@gmail.com website: https://www.mesacs.in/

COURSES OFFERED

B.C.A.
B.Com (Regular)
B.Com (Accounts & Finance)
B.Com (Business Data Analytics)
B.Com (Fintech)

B.A. - History, Economics, Political Science (HEP))
Psychology, Journalism, Optional English (PsyJOE)

B.Sc. - Chemistry, Zoology, Biotechnology (CZBt)
Botany, Zoology, Psychology (BZPsy)
Physics, Mathematics, Computer Science (PMCs)
Forensic Science & Criminology, Chemistry, Zoology

MES INSTITUTE OF MANAGEMENT (IOM)

Vidyavihara, 25/1, 17th Main Rd, 2nd Block, Rajajinagar, Bengaluru - 560010,
Contact: 080-23128321 / 23128338. E-mail: mesiom9@gmail.com Website: https://mesiom.in/

COURSES OFFERED

B.Com (Regular) | B.Com (Business Data Analytics) | B.B.A.

ಭಾನುವಾರ, ಏಪ್ರಿಲ್ 19, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 108 | ಪುಟ 26

www.prajavani.net | prajavani.net | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ

ಸ್ಕ್ಯಾನ್ ಮಾಡಿ

ಮೋದಿ ಮಾತು

ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ರಾತ್ರಿ ದೇಶವನ್ನುದ್ದೇಶಿಸಿ ಮಾತನಾಡಿದರು

7

ಬಿಜೆಪಿ- ವಿಪಕ್ಷಗಳ ನಡುವೆ ವಾಕ್ಸಮರ 7

ಭಾರತದ ನೌಕೆ ಮೇಲೆ ದಾಳಿ

ಮತ್ತೆ ಹೊರ್ಮುಜ್ ಮುಚ್ಚಿದ ಇರಾನ್

● 14 ಹಡಗುಗಳಿಗೆ ಐಆರ್‌ಜಿಸಿ ತಡೆ



ಕೈರೊ (ಎಪಿ/ ಪಿಟಿಐ): ಹೊರ್ಮುಜ್ ಜಲಸಂಧಿಯನ್ನು ಶುಕ್ರವಾರವಷ್ಟೇ ಎಲ್ಲ ಹಡಗುಗಳ ಸಂಚಾರಕ್ಕೆ ಮುಕ್ತಗೊಳಿಸಿದ್ದ ಇರಾನ್, ಶನಿವಾರದಿಂದ ಮತ್ತೆ ಈ ಮಾರ್ಗದಲ್ಲಿ ಹಡಗುಗಳ ಸಂಚಾರ ನಿರ್ಬಂಧಿಸಿದೆ.

ಜಲಸಂಧಿ ದಾಟಲು ಯತ್ನಿಸಿದ ಒಟ್ಟು 14 ಹಡಗುಗಳನ್ನು ಇರಾನ್ ಸೇನೆ ಶನಿವಾರ ತಡೆದಿದೆ. ಇದರಲ್ಲಿ ಭಾರತದ ಧ್ವಜ ಹೊಂದಿದ್ದ ಏಳು ಹಡಗುಗಳು ಸೇರಿವೆ. ಭಾರತದ ಎರಡು ಹಡಗುಗಳ ಮೇಲೆ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕೋರ್ (ಐಆರ್‌ಜಿಸಿ) ಗುಂಡಿನ ದಾಳಿ ನಡೆಸಿದೆ. ಒಂದು ಹಡಗಿನ ಕಿಟಕಿ ಗಾಜು ಒಡೆದಿದೆ. ಇನ್ನೊಂದು ಹಡಗಿಗೆ ಆಗಿರುವ ಹಾನಿಯ ಬಗ್ಗೆ ನಿಖರ ಮಾಹಿತಿ ತಿಳಿದುಬಂದಿಲ್ಲ.

‘ಯಾವುದೇ ಮುನ್ನೆಚ್ಚರಿಕೆ ನೀಡದೆ ಗುಂಡಿನ ದಾಳಿ ನಡೆಯಿತು. ಹಡಗು ಮತ್ತು ಹಡಗಿನಲ್ಲಿದ್ದ ಸಿಬ್ಬಂದಿ ಸುರಕ್ಷಿತರಾಗಿದ್ದಾರೆ’ ಎಂದು ಬ್ರಿಟನ್‌ನ ಸಾಗರ ವ್ಯವಹಾರ ಕಾರ್ಯಾಚರಣೆ ಕೇಂದ್ರ ಹೇಳಿದೆ. ಭಾರತದ ಧ್ವಜ ಹೊಂದಿದ್ದ ಎರಡು ಹಡಗುಗಳು ಗುಂಡಿನ ದಾಳಿ ನಡೆದ ನಂತರ ಬಲವಂತವಾಗಿ ಹೊರ್ಮುಜ್‌ನಿಂದ ಹಿಂತಿರುಗಬೇಕಾಯಿತು ಎಂದು ಜಾಗತಿಕ ಕಚ್ಚಾ ತೈಲ ಸಾಗಾಟದ ಮೇಲೆ ನಿಗಾವಹಿಸುವ ಟ್ಯಾಂಕರ್ ಟ್ರ್ಯಾಕರ್ಸ್ ಡಾಟ್ ಕಾಂ ವರದಿ ಮಾಡಿದೆ.

ಗುಂಡಿನ ದಾಳಿ ಬಳಿಕ 13 ಹಡಗುಗಳು ವಾಪಸ್ ಪರ್ಷಿಯನ್ ಕೊಲ್ಲಿಯ ವಿವಿಧ ಸ್ಥಳಗಳಿಗೆ ಮರಳಿವೆ. ಭಾರತ ಧ್ವಜ ಹೊಂದಿರುವ ಒಂದು ಹಡಗು ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್‌ಗೆ (ಎಚ್‌ಪಿ) ಸೇರಿದ ಕಚ್ಚಾ ತೈಲದೊಂದಿಗೆ ಹೊರ್ಮುಜ್ ಜಲಸಂಧಿ ದಾಟಿಕೊಂಡು ಭಾರತದತ್ತ ಸಾಗುತ್ತಿದೆ ಎಂದು ಮೂಲಗಳು ಹೇಳಿವೆ.

‘ಇರಾನ್ ಬಂದರಿನ ಮೇಲೆ ಅಮೆರಿಕ ಹೇರಿರುವ ದಿಗ್ಬಂಧನ ತೆರವುಗೊಳಿಸುವವರೆಗೆ ಹೊರ್ಮುಜ್‌ನಲ್ಲಿ ನಿರ್ಬಂಧ ಮುಂದುವರಿಯಲಿದೆ’ ಎಂದು ಇರಾನ್ ಸೇನಾ ಮುಖ್ಯಸ್ಥರು ಎಚ್ಚರಿಕೆ ನೀಡಿದ್ದಾರೆ.

9

ಪ್ರತಿಭಟನೆ ದಾಖಲಿಸಿದ ಭಾರತ

ನವದೆಹಲಿ: ಇರಾನ್ ಸೇನೆ ಗುಂಡಿನ ದಾಳಿ ನಡೆಸಿದ ಹಡಗುಗಳಲ್ಲಿ ಒಂದು ಇರಾಕ್‌ನಿಂದ ಭಾರತಕ್ಕೆ ಕಚ್ಚಾ ತೈಲದೊಂದಿಗೆ ಬರುತ್ತಿದ್ದ ಬೃಹತ್ (ವಿಎಲ್‌ಸಿಸಿ) ನೌಕೆಯಾಗಿದೆ.

ಒಟ್ಟು 14 ಹಡಗುಗಳಲ್ಲಿ ಅರ್ಧದಷ್ಟು ಹಡಗುಗಳು ಭಾರತದ ಧ್ವಜ ಹೊಂದಿದ್ದರೆ, ನಾಲ್ಕರಲ್ಲಿ ಲೈಬೀರಿಯಾ ಹಾಗೂ ಎರಡು ಹಡಗುಗಳು ಮಾರ್ಷಲ್ ಐಲ್ಯಾಂಡ್‌ನ ಧ್ವಜವನ್ನು ಹೊಂದಿದ್ದವು. ಇನ್ನೊಂದರಲ್ಲಿ ವಿಯೆಟ್ನಾಂ ಧ್ವಜ ಇತ್ತು.

ಭಾರತದ ಹಡಗುಗಳ ಮೇಲೆ ನಡೆದ ದಾಳಿಗೆ ಸಂಬಂಧಿಸಿದಂತೆ ವಿದೇಶಾಂಗ ವ್ಯವಹಾರಗಳ ಸಚಿವಾಲಯ, ತಕ್ಷಣವೇ ಭಾರತದಲ್ಲಿನ ಇರಾನ್ ರಾಯಭಾರಿಯನ್ನು ಕರೆಸಿಕೊಂಡು ಪ್ರತಿಭಟನೆ ಸಲ್ಲಿಸಿದೆ.

ವಿಶ್ವದ ಐದನೆಯ ಒಂದು ಭಾಗದಷ್ಟು ತೈಲ ಹೊರ್ಮುಜ್ ಜಲಸಂಧಿ ಮೂಲಕ ಸಾಗಾಟ ಆಗುತ್ತದೆ. ಆದರೆ, ಇರಾನ್ ಸೇನೆ ಹಡಗುಗಳ ಮೇಲೆ ಗುಂಡಿನ ದಾಳಿ ಆರಂಭಿಸಿರುವುದರಿಂದ ಪರಿಸ್ಥಿತಿ ಉಲ್ಬಣಿಸಿದ್ದು, ಇಂಧನ ಬಿಕ್ಕಟ್ಟು ಮುಂದುವರಿಯುವ ಸಾಧ್ಯತೆಗಳು ಗೋಚರಿಸಿವೆ.

ಸೋಲುಣಿಸಲು ಸಿದ್ಧ: ಮೊಜ್ತಬಾ

ಕೈರೊ (ಎಪಿ): ‘ಇರಾನ್‌ನ ಕೆಚ್ಚೆದೆಯ ನೌಕಾಪಡೆ’ಯು ಶತ್ರುಗಳಿಗೆ ಹೊಸ ಸೋಲುಗಳ ಕಹಿ ಉಣಿಸಲು ಸಿದ್ಧವಾಗಿದೆ’ ಎಂದು ಇರಾನ್ ಪರಮೋಚ್ಚ ನಾಯಕ ಮೊಜ್ತಬಾ ಖಮೇನಿ ಹೇಳಿದ್ದಾರೆ.

9

ಹೊರ್ಮುಜ್ ಜಲಸಂಧಿ ಮುಚ್ಚುವ ಮೂಲಕ ಇರಾನ್ ಅಮೆರಿಕವನ್ನು ಬ್ಲ್ಯಾಕ್‌ಮೇಲ್ ಮಾಡಲು ಸಾಧ್ಯವಿಲ್ಲ. ನಿಲುವು ಬದಲಿಸಿದರೆ ಕಠಿಣ ಕ್ರಮ ಕೈಗೊಳ್ಳಬೇಕಾಗುತ್ತದೆ

ಡೊನಾಲ್ಡ್ ಟ್ರಂಪ್, ಅಮೆರಿಕದ ಅಧ್ಯಕ್ಷ

ಚಿನ್ನ: ಪರ್ಯಾಯ ಆಯ್ಕೆಗಳಿಗೂ ಬಲ

ನವದೆಹಲಿ (ಪಿಟಿಐ): ಅಕ್ಷಯ ತೃತೀಯಾ ಸಂದರ್ಭದಲ್ಲಿ ಚಿನ್ನದ ಮೇಲಿನ ಹೂಡಿಕೆಗೆ ಸಾಂಪ್ರದಾಯಿಕ ಭೌತಿಕ ಚಿನ್ನದ ಜೊತೆಯಲ್ಲೇ, ಪರ್ಯಾಯ ಹೂಡಿಕೆ ಆಯ್ಕೆಗಳು ಈ ವರ್ಷದಲ್ಲಿಯೂ ಜನಪ್ರಿಯತೆ ಉಳಿಸಿಕೊಳ್ಳಲಿವೆ ಎಂದು ತಜ್ಞರು ಹೇಳಿದ್ದಾರೆ.

ವಿವರ 9

ಚಿನಕುರುಳಿ ಪ್ರಕಾಶ್ ಶೆಟ್ಟಿ

ಮೃಗಾಲಯದಲ್ಲಿ ಮೂಕರೋದನ

ಒಳನೋಟ

● ಕೆ.ಎಂ.ಸತೀಶ್ ಬೆಳ್ಳಕ್ಕಿ

ಮೃಗಾಲಯಗಳ ಈಗಿನ ಅಧ್ವಾನ ಸ್ಥಿತಿಗೆ ರಾಜಕಾರಣಿಗಳೇ ಕಾರಣ. ಸಚಿವರಾದವರು ತಮ್ಮೂರಲ್ಲೂ ಒಂದು ಮೃಗಾಲಯ ಇರಲಿ ಎಂದು ಬಯಸುತ್ತಾರೆ. ಇದರಿಂದ ಸಮುದಾಯಕ್ಕೆ ನಷ್ಟ

ಕೃಪಾಕರ, ವನ್ಯಜೀವಿ ತಜ್ಞ

ಮೃಗಾಲಯಗಳಿಗೆ ಪಶುವೈದ್ಯರ ನೇಮಕ ಪ್ರಕ್ರಿಯೆ ಪ್ರಗತಿಯಲ್ಲಿದೆ. 15 ಪಶುವೈದ್ಯರ ಕಾಯಂ ನೇಮಕಾತಿಗೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಕೆಯಾಗಿದೆ. ಆರೋಗ್ಯ ಸಲಹಾ ಸಮಿತಿ ಸಭೆ ನಡೆದಿವೆ. ಪ್ರಾಣಿಗಳತ್ತ ನಿರ್ಲಕ್ಷ್ಯ ತೋರುವುದಿಲ್ಲ

ಈಶ್ವರ ಖಂಡ್ರೆ, ಅರಣ್ಯ ಸಚಿವ

ಗದಗ: ‘ಮೃಗಾಲಯದಲ್ಲಿನ ಪ್ರಾಣಿ, ಪಕ್ಷಿಗಳ ಬಗ್ಗೆ ಅಧ್ಯಯನ ಮಾಡುವುದಿರಲಿ, ಅವು ಹೇಗಿವೆ? ಏನಾದರೂ ಸಮಸ್ಯೆ ಆಗಿದೆಯೇ ಎಂದು ತಿಳಿದುಕೊಳ್ಳುವ ಕಾಳಜಿಯೂ ಇಲ್ಲ. ಕುತೂಹಲವಂತೂ ಮೊದಲೇ ಇಲ್ಲ. ಕಾಡುಪ್ರಾಣಿಗಳನ್ನು ನೋಡಿಕೊಳ್ಳುವುದೆಂದರೆ, ಬರೀ ದೈಹಿಕ ಚಿಕಿತ್ಸೆ ನೀಡುವುದಷ್ಟೇ ಅಲ್ಲ. ಅವುಗಳ ಮಾನಸಿಕ ಸ್ಥಿತಿ, ವರ್ತನೆ, ಸ್ವಭಾವ ಅರಿಯುವ ತಜ್ಞರು ಮತ್ತು ಪಶುವೈದ್ಯರು ಬೇಕು. ಆದರೆ, ಅಂಥವರು ನಿರೀಕ್ಷಿತ ಪ್ರಮಾಣದಲ್ಲಿ ಇಲ್ಲ’.

ವನ್ಯಜೀವಿ ತಜ್ಞ ಕೃಪಾಕರ ಹೀಗೆ ಹೇಳುವಾಗ, ಅವರ ಧ್ವನಿಯಲ್ಲಿ ನೋವಿತ್ತು. ‘ಪ್ರಾಣಿಗಳನ್ನು ಸೆರೆ ಹಿಡಿದು ಪಂಜರದಲ್ಲಿ ಇಟ್ಟರೆ, ಕೆಲಸ ಮುಗಿಯಿತು ಎಂಬ ಮನಸ್ಥಿತಿ ವ್ಯವಸ್ಥೆಯಲ್ಲಿ ಬೇರೂರಿದೆ’ ಎಂಬ ಬೇಸರ ಅವರ ಮಾತುಗಳಲ್ಲಿ ಇತ್ತು.

4

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ

ಮಹಿಳೆಯರಿಗೆ ಕಾಂಗ್ರೆಸ್ ಅವಮಾನ: ಬಸವರಾಜ ಬೊಮ್ಮಾಯಿ

ಬೆಂಗಳೂರು: 'ಮಹಿಳಾ ಮೀಸಲಾತಿ ಮಸೂದೆಯನ್ನು ಸೋಲಿಸುವ ಮೂಲಕ ದೇಶದ ಸಮಸ್ತ ಮಹಿಳೆಯರಿಗೆ ಕಾಂಗ್ರೆಸ್ ಅಪಮಾನ ಮಾಡಿದೆ. ಮಹಿಳೆಯರಿಗೆ ಮೀಸಲಾತಿ ನೀಡುವ ಬದ್ಧತೆ ಆ ಪಕ್ಷಕ್ಕೆ ಯಾವತ್ತೂ ಇರಲಿಲ್ಲ' ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಟೀಕಿಸಿದ್ದಾರೆ.

'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, 'ಮಹಿಳೆಯರಿಗೆ ಮೀಸಲಾತಿ ಕೊಡಬಾರದು ಎಂಬ ಅವರ ನಿಲುವು ಈಗ ಎಲ್ಲರಿಗೂ ಗೊತ್ತಾಗಿದೆ. ಅವರಿಗೆ ಮಹಿಳೆಯರ ಶಾಪ ತಟ್ಟುತ್ತದೆ' ಎಂದಿದ್ದಾರೆ. '2034ರ ಹೊತ್ತಿಗೆ ಲೋಕಸಭಾ ಕ್ಷೇತ್ರಗಳ ಸಂಖ್ಯೆಯನ್ನು ಶೇ 50ರಷ್ಟು ಹೆಚ್ಚಿಸಬೇಕು ಎಂದು 2023ರಲ್ಲೇ ನಿರ್ಧಾರವಾಗಿತ್ತು. ಅದನ್ನು 2029ಕ್ಕೆ ಜಾರಿ ಮಾಡುವ ಮತ್ತು ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡುವ ಉದ್ದೇಶಗಳಿಂದ ಈ ಮಸೂದೆ ಮಂಡಿಸಲಾಗಿತ್ತು. ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರು ಭಾಗಿಯಾಗುವುದು ಕಾಂಗ್ರೆಸ್‌ಗೆ ಬೇಡವಾಗಿದೆ. ಹೀಗಾಗಿ ಆ ಪಕ್ಷವು ಮಸೂದೆ ವಿರುದ್ಧ ಮತ ಚಲಾಯಿಸಿದೆ' ಎಂದಿದ್ದಾರೆ.

IN THE SUPREME COURT OF INDIA
EXTRA-ORDINARY APPELLATE JURISDICTION
Petition for Special Leave to Appeal (Civil) [REDACTED]
WITH PRAYER FOR INTERIM RELIEF

SRI DURGAMBA EDUCATIONAL TRUST (R) AND OTHERS ...Petitioner(s)
VERSUS
THE STATE OF KARNATAKA AND OTHERS ... Respondent(s)

To,

1 B. RAMACHANDRAPPA S/O LATE H. BYLAPPA, R/O SUBEDHARPALYA JARAKABANDE KAVAL YELAHANKA HOBLI BENGALURU NORTH TALUK BENGALURU - 560 064, DISTRICT- BANGALORE, KARNATAKA	PID: 102034/2026 FOR R[13] IN SLP(C) NO.21747/2024(SEC IV-A)
2 B. SHESHAMMA D/O H. BYLAPPA, R/O NO. 348, 7TH CROSS ATTUR LAYOUT, BENGALURU - 560 064, DISTRICT- BANGALORE,KARNATAKA	PID: 102035/2026 FOR R[14] IN SLP(C) NO.21747/2024(SEC IV-A)
3 VASANTHA D/O LATE BYLAPPA, R/O T. DASARAHALLI YESHWANTHPURA HOBLI BENGALURU - 560058, DISTRICT- BANGALORE, KARNATAKA	PID:102036/2026 FOR R[15] IN SLP(C) NO.21747/2024(SEC IV-A)
4 S.B. BALAJI S/O LATE H. BYLAPPA, R/O SUBEDHARPALYA JARAKABANDEKAVAL YELAHANKA HOBLI, BENGALURU NORTH TALUK BENGALURU - 560 064, DISTRICT- BANGALORE, KARNATAKA	PID:102037/2026 FOR R[16] IN SLP(C) NO.21747/2024(SEC IV-A)
5 S.B. HANUMANTHARAYAPPA S/O LATE H. BYLAPPA, R/O SUBEDHARPALYA JARAKABANDEKAVAL, YELAHANKA HOBLI, BENGALURU, NORTH TALUK, BENGALURU - 560.064, DISTRICT- BANGALORE, KARNATAKA	PID:102038/2026 FOR R[17] IN SLP(C) NO.21747/2024(SEC IV-A)

WHEREAS the Petition for SPECIAL LEAVE PETITION (CIVIL) to Appeal with application for **CONDONATION OF DELAY IN REFILING / CURING THE DEFECTS, EXEMPTION FROM FILING O.T., PERMISSION TO FILE ADDITIONAL DOCUMENTS/FACTS/ANNEXURES, APPLICATION UNDER ORDER V RULE 20 CPCFOR EFFECTING SERVICE THROUGH PUBLICATION, STAY APPLICATION, EXEMPTION FROM FILING O.T.** above mentioned (copy enclosed) filed in the Registry by M/S. S-LEGAL ASSOCIATES, Advocate on behalf of the Petitioner above named was listed for hearing before this Court on 13th September, 2024, when the Court was pleased to pass the following order:-

"Delay condoned.
Issue notice, returnable in four weeks."

WHEREAS, the matter was listed for hearing before this Court on 13th April, 2026, when the Court was pleased to pass the following order:-

"SLP(C)_No.21747 of 2024
LA. No.79882/2025
1. Application for effecting service upon respondent Nos.13-17 through publication is allowed.
2. List on 11.05.2026. "

NOW, THEREFORE, TAKE NOTICE that the above petition will be posted for hearing before this Court on **11th May, 2026 at 10.30 O' Clock in the forenoon** or so soon thereafter as may be convenient to the Court when you may appear before the court either in person or through Counsel and show cause to the Court as to why Special Leave and interim relief as prayed for be not granted and the resultant appeal be not allowed.

You may file your affidavit in opposition to the petition as provided under Rule 14(1) of Order XXI, S.C.R.2013 immediately from the date of receipt of notice or not later than 2 weeks before the date appointed for hearing, whichever be earlier, but shall do so only by setting out the grounds in opposition to the questions of law or grounds set out in the SLPs and may produce such pleadings and documents filed before the Court/Tribunal against whose order the SLP is filed and shall also set out the grounds for not granting interim order or for vacating interim order if already granted.

TAKE FURTHER NOTICE that if you fail to enter appearance as aforesaid, no further notice shall be given to you even after the grant of special leave for hearing of the resultant appeal and the matter above mentioned shall be disposed of in your absence.

Dated :**17th April, 2026** **ASSISTAT REGISTRAR**

Copy to:-
1 M/s. S-legal Associates (adv.)
2 Mr. E. C. Vidya Sagar (adv.)
3 Mr. Sanchit Garga (adv.)
4 M/s. Dharmaprabhas Law Associates (adv.)
5 Ms. Charulata Chaudhary (adv.)

ASSISTAT REGISTRAR

Important Notice
LEGAL AID

(1) Legal Services of an advocate is provided by the Supreme Court Legal Services Committee and the Supreme Court Middle Income Group Legal Aid Society to eligible litigants.

For further information, please contact the Secretary, Supreme Court Legal Services Committee or the Member Secretary, Supreme Court Middle Income Group Legal Aid Society, 107-108, Lawyers' Chambers, R.K. Jain Block - Near Post Office, Supreme Court Compound, Tilak Marg, New Delhi-110001 (Tel Nos. 011-23116353,23116354 (Additional Building Complex) and 011-23381257 (Front Office)

MEDIATION

(2) The facility of amicable settlement of disputes by trained mediators in cases pending in the Supreme Court is now available in the Supreme Court.

For further information, please contact the Coordinator, Supreme Court Mediation Centre, 109, Lawyers' Chambers, R.K. Jain Block - Near Post Office, Supreme Court Compound, Tilak Marg, New Delhi-110001 (Tel No. 011-23071432)

'ಚಿತ್ರರಂಗದಲ್ಲಿ ನಟಿಯರಿಗೆ ಆಯಸ್ಸು ಕಡಿಮೆ'

'ಮನೆಯಂಗಳದಲ್ಲಿ ಮಾತುಕತೆ' ಕಾರ್ಯಕ್ರಮದಲ್ಲಿ ಜಯಮಾಲಾ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿತ್ರರಂಗದಲ್ಲಿ ನಾಯಕರಿಗೆ ಇರುವಷ್ಟು ಆಯಸ್ಸು ನಾಯಕಿಯರಿಗಿಲ್ಲ. ಅದರಲ್ಲೂ ಮದುವೆಯಾದರೆ ನಾಯಕಿಯರ ಚಿತ್ರರಂಗದ ಪಯಣವೇ ಅಂತ್ಯವಾಗುತ್ತಿತ್ತು. ಇತ್ತೀಚೆಗೆ ಪರಿಸ್ಥಿತಿ ಬದಲಾಗುತ್ತಿದೆ' ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷೆಯೂ ಆಗಿರುವ ನಟಿ ಜಯಮಾಲಾ ಅಭಿಪ್ರಾಯಪಟ್ಟರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ಮನೆಯಂಗಳದಲ್ಲಿ ಮಾತುಕತೆ' ಕಾರ್ಯಕ್ರಮದಲ್ಲಿ ತಿಂಗಳ ಅತಿಥಿಯಾಗಿ ಭಾಗವಹಿಸಿ, ಮಾತನಾಡಿದರು.

ಮುಖ್ಯಾಂಶಗಳು
- ಎಸ್ಸೆಸ್ಸೆಲ್ಸಿ ಮುಗಿಸುವ ಹೊತ್ತಿಗೇ ನಾಲ್ಕು ತುಳು ಸಿನಿಮಾಗಳಲ್ಲಿ ಅಭಿನಯ
- ರಾಜ್‌ಕುಮಾರ್ ಜೊತೆಗೆ 7 ಸಿನಿಮಾದಲ್ಲಿ ನಟನೆ
- ಜಯಮಾಲಾ ನೆನಪು

'ಚಲನಚಿತ್ರ ಕ್ಷೇತ್ರದಲ್ಲಿ ನಾಯಕಿಯರಿಗೆ ಆಯಸ್ಸು ಸ್ವಲ್ಪ ಕಡಿಮೆ. ಒಂದು ಕಾಲದಲ್ಲಿ ನಟಿಯರಿಗೆ ಮದುವೆ ಆಯಿತೆಂದರೆ ಜನರೇ ಅವರನ್ನು ನಿರಾಕರಿಸುತ್ತಿದ್ದರು. ಚಿತ್ರರಂಗದಲ್ಲಿ ಬದಲಾದ ಇವತ್ತಿನ ಸ್ಥಿತಿ ಇದ್ದಿದ್ದರೆ, ಮಂಜುಳಾ ಅಂತಹ ಶ್ರೇಷ್ಠ ನಟಿ ಇನ್ನೊಂದಿಷ್ಟು ವರ್ಷಗಳು ಬದುಕಿರುತ್ತಿದ್ದರು. ಆ ಕಾಲದಲ್ಲಿ ಕೆಲವರು ತಮ್ಮ ಮದುವೆ ಮುಚ್ಚಿಟ್ಟು, ಹೊರಗಿನ ಪ್ರಪಂಚಕ್ಕೆ ತಿಳಿಸಲಾಗದೆ ಪೇಚಿಗೆ ಸಿಲುಕಿಕೊಳ್ಳುತ್ತಿದ್ದರು. ಈಗ ನಟ–ನಟಿಯರಿಗೆ ಪ್ರೇಮವಾದರೆ, ಮದುವೆಯಾದರೆ ದೊಡ್ಡ ಸುದ್ದಿಯಾಗುತ್ತಿದೆ' ಎಂದರು.

'ಮನೆಯಂಗಳದಲ್ಲಿ ಮಾತುಕತೆ' ಕಾರ್ಯಕ್ರಮದಲ್ಲಿ ಜಯಮಾಲಾ ಮಾತನಾಡಿದರು ಪ್ರಜಾವಾಣಿ ಚಿತ್ರ

'ಹೆಣ್ಣುಮಕ್ಕಳಿಗೆ ಆಂತರಿಕ ಶಕ್ತಿ, ಆಲೋಚನಾ ಕ್ರಮ ಇರುತ್ತದೆ. ಆದರೆ, ಅವರಿಗೆ ಅವಕಾಶ ಇರುವುದಿಲ್ಲ. ಅವಕಾಶ ಸಿಕ್ಕರೆ ಅವಳಲ್ಲಿನ ಪ್ರತಿಭೆ ತಾನಾಗಿಯೇ ಹೊರಗೆ ಬರುತ್ತದೆ. ಎಲ್ಲ ಕ್ಷೇತ್ರಗಳಲ್ಲಿ ಅವರಿಗೆ ಅವಕಾಶ ನೀಡಿದರೆ, ಅವರು ತಮ್ಮ ಕ್ಷೇತ್ರದಲ್ಲಿ ನಿರಾಸೆಯನ್ನು ಉಂಟುಮಾಡುವುದಿಲ್ಲ. ತಾನಿರುವ ಕ್ಷೇತ್ರವನ್ನು ತನ್ನ ಸ್ವಂತ ಮನೆಯಂತೆ ನೋಡಿಕೊಳ್ಳುತ್ತಾರೆ. ಪುರುಷರ ಪ್ರೋತ್ಸಾಹವೂ ಇದ್ದಲ್ಲಿ ಮಹಿಳೆ ಬೆಳೆಯಲು ಸಾಧ್ಯ' ಎಂದು ಅಭಿಪ್ರಾಯಪಟ್ಟರು.

ಚಿತ್ರರಂಗದಲ್ಲಿ ತಮ್ಮ ಪಯಣವನ್ನು ಸ್ಮರಿಸಿಕೊಂಡ ಅವರು, 'ಎಸ್ಸೆಸ್ಸೆಲ್ಸಿ ಮುಗಿಸುವ ಹೊತ್ತಿಗೇ ನಾಲ್ಕು ತುಳು ಸಿನಿಮಾಗಳಲ್ಲಿ ಅಭಿನಯ ಮಾಡಿದೆ. 'ಬೂತಯ್ಯನ ಮಗ ಅಯ್ಯು' ಚಿತ್ರದಲ್ಲಿ ಪೋಷಕ ಪಾತ್ರದಲ್ಲಿ ಅಭಿನಯಿಸುವ ಅವಕಾಶ ದೊರೆಯಿತು. ಬಳಿಕ ವರದಪ್ಪ ಅವರು ನನ್ನನ್ನು ಪಾರ್ವತಮ್ಮ ರಾಜ್‌ಕುಮಾರ್ ಅವರಿಗೆ ಪರಿಚಯಿಸಿದರು. ಇದರಿಂದಾಗಿ 'ಪ್ರೇಮದ ಕಾಣಿಕೆ'ಯಲ್ಲಿ ರಾಜ್‌ಕುಮಾರ್ ಅವರಿಗೆ ನಾಯಕಿಯಾಗುವ ಅವಕಾಶ ಸಿಕ್ಕಿತು. ನಂತರ ಅವರ ಜತೆಗೆ ಏಳು ಸಿನಿಮಾ ಮಾಡಿದೆ' ಎಂದು ಹೇಳಿದರು.

'ನನಗೆ ಸಿನಿಮಾ ಕ್ಷೇತ್ರದಲ್ಲಿ ರಾಜ್‌ಕುಮಾರ್ ಅವರು ದೇವತಾ ಸ್ವರೂಪಿಯಾದರೆ, ರಾಜಕೀಯ ಕ್ಷೇತ್ರದಲ್ಲಿ 'ಅನ್ನ ಭಾಗ್ಯ' ಯೋಜನೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪೂಜನೀಯ' ಎಂದು ಬಣ್ಣಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಮಂಜುನಾಥ್ ಸ್ವಾಮಿ ಉಪಸ್ಥಿತರಿದ್ದರು.

'ಮಹಿಳೆಯರಿಗೆ ಕಾಂಗ್ರೆಸ್‌ನಿಂದ ಅನ್ಯಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಿಳೆಯರಿಗೆ ರಾಜಕೀಯದ ಎಲ್ಲ ಹಂತಗಳಲ್ಲೂ ಶೇ 33ರಷ್ಟು ಮೀಸಲಾತಿ ನೀಡುವ ಕೇಂದ್ರ ಸರ್ಕಾರದ ಒಳ್ಳೆಯ ಯತ್ನವನ್ನು ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ವಿಫಲಗೊಳಿಸಿವೆ. ಈ ಮೂಲಕ ಮಹಿಳೆಯರಿಗೆ ಅನ್ಯಾಯ ಮಾಡಿವೆ' ಎಂದು ವಿಧಾನ ಪರಿಷತ್ತಿನಲ್ಲಿ ಜೆಡಿಎಸ್ ಸದಸ್ಯ ಟಿ.ಎ.ಶರವಣ ಆರೋಪಿಸಿದರು.

ಶಾಸನಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವ ಮಸೂದೆಯ ವಿರುದ್ಧ ಲೋಕಸಭೆಯಲ್ಲಿ ಇಂಡಿಯಾ ಒಕ್ಕೂಟದ ಪಕ್ಷಗಳು ಮತಹಾಕಿದ್ದವು. ಇದನ್ನು ಖಂಡಿಸಿ ಜೆಡಿಎಸ್ ವತಿಯಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಆಯೋಜಿಸಲಾಗಿದ್ದ ಪ್ರತಿಭಟನೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಮಹಿಳಾ ಮೀಸಲಾತಿ ಮಸೂದೆ ವಿರುದ್ಧ ಮತಚಲಾಯಿಸಿದ ಕಾಂಗ್ರೆಸ್ ವಿರುದ್ಧ ವಿಧಾನಪರಿಷತ್ತಿನ ಸದಸ್ಯ ಟಿ.ಎ. ಶರವಣ ನೇತೃತ್ವದಲ್ಲಿ ಜೆಡಿಎಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು

'ಮಹಿಳೆಯರಿಗೆ ಮೀಸಲಾತಿ ಸಿಕ್ಕರೆ ಎಲ್ಲಿ ತಮ್ಮ ಅಸ್ತಿತ್ವಕ್ಕೆ ಧಕ್ಕೆ ಬರುತ್ತದೆಯೋ ಎಂಬ ಭೀತಿಯಿಂದ ಈ ಮಸೂದೆಯ ವಿರುದ್ಧ ಅವರು ಮತ ಚಲಾಯಿಸಿದ್ದಾರೆ. ಈ ಮೂಲಕ ಕಾಂಗ್ರೆಸ್‌ನ ನಿಜಬಣ್ಣ ಬಯಲಾಗಿದೆ. ಅವರ ವಿರುದ್ಧ ಮಹಿಳೆಯರು ಬೀದಿಗಿಳಿಯುವ ಕಾಲ ಬಂದಿದೆ. ಈಗ ನಡೆಯಲಿರುವ ನಾಲ್ಕು ರಾಜ್ಯಗಳ ಚುನಾವಣೆಗಳಲ್ಲಿ ಮಹಿಳೆಯರು ಇಂಡಿಯಾ ಮಿತ್ರಪಕ್ಷಗಳಿಗೆ ಮಣ್ಣುಮುಕ್ಕಿಸಲಿದ್ದಾರೆ' ಎಂದರು.

'ರಾಜಕೀಯದಲ್ಲಿ ಮಹಿಳಾ ಮೀಸಲಾತಿ ತಂದ ಹೆಗ್ಗಳಿಕೆ ಎಚ್.ಡಿ.ದೇವೇಗೌಡ ಮತ್ತು ಜೆಡಿಎಸ್ ಪಕ್ಷದ್ದು. ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿ ಜಾರಿಗೆ ತಂದು, ಅಂತಹದ್ದೊಂದು ಪರಿಕಲ್ಪನೆಯನ್ನು ಪರಿಚಯಿಸಿದ್ದೇ ದೇವೇಗೌಡರು. ಅದನ್ನು ಈಗ ಪ್ರಧಾನಿ ನರೇಂದ್ರ ಮೋದಿ ಅವರು ದೇಶದಾದ್ಯಂತ ಜಾರಿಗೆ ತರಲು ಹೊರಟಿದ್ದರು. ಕಾಂಗ್ರೆಸ್ ತನ್ನ ಸ್ವಾರ್ಥಕ್ಕಾಗಿ ಆ ಮಸೂದೆಯನ್ನು ಸೋಲಿಸಿದೆ' ಎಂದು ಅವರು ಆಪಾದಿಸಿದರು.

ಜಕ್ಕೂರಿನಲ್ಲಿ ಅಂಬೇಡ್ಕರ್ ಜಯಂತಿ ಇಂದು

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಜಕ್ಕೂರಿನ ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ಟ್ರಸ್ಟ್ ಹಾಗೂ ಜಕ್ಕೂರು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಆಶ್ರಯದಲ್ಲಿ ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತ್ಯುತ್ಸವನ್ನು ಏಪ್ರಿಲ್ 19ರಂದು ಆಯೋಜಿಸಲಾಗಿದೆ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ರವಿಕುಮಾರ್ ತಿಳಿಸಿದರು.

ಕಾರ್ಯಕ್ರಮದ ಅಂಗವಾಗಿ ಸುಮಾರು 2 ಸಾವಿರ ಬಡ ಮಹಿಳೆಯರಿಗೆ ಸೀರೆ ಹಾಗೂ ಸರ್ಕಾರಿ ಕಾಲೇಜಿನ ವಿದ್ಯಾರ್ಥಿಗಳಿಗೆ ಬಟ್ಟೆ ವಿತರಿಸಲಾಗುವುದು ಎಂದು ಹೇಳಿದರು.

ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು, ಬೆಳಿಗ್ಗೆ 11 ಗಂಟೆಗೆ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ವಿಧಾನಪರಿಷತ್‌ನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ರಾಜ್ಯ ಕೊಳಚೆ ಪ್ರದೇಶ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಪ್ರಸಾದ್ ಅಬ್ಬಯ್ಯ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ, ಶಾಸಕ ಎಸ್.ಆರ್. ವಿಶ್ವನಾಥ್, ಕೆಪಿಸಿಸಿ ಎಸ್.ಸಿ. ವಿಭಾಗದ ಅಧ್ಯಕ್ಷ ಧರ್ಮಸೇನಾ, ಎಐಸಿಸಿ ಪರಿಶಿಷ್ಟ ವಿಭಾಗದ ರಾಷ್ಟ್ರೀಯ ಸಂಯೋಜಕ ಆನಂದ್‌ಕುಮಾರ್ ಭಾಗವಹಿಸಲಿದ್ದಾರೆ ಎಂದರು.

ಭಾವಪೂರ್ಣ ಶ್ರದ್ಧಾಂಜಲಿ



ಬಚ್ಚಣ್ಣನವರು

ಜೂಗನಹಳ್ಳಿ ರಾಜಾಜಿನಗರ 2ನೇ ಹಂತ
ದಿ ಸಿಟಿಜನ್ ಕೋ ಆಪರೇಟಿವ್ ಬ್ಯಾಂಕ್, ರಾಜಾಜಿನಗರ.
ಮಾಜಿ ಅಧ್ಯಕ್ಷರು ಹಾಗೂ ಜನತಾದಳ ಹಿರಿಯ ಉಪಾಧ್ಯಕ್ಷರು ಬೆಂಗಳೂರು ಮಹಾನಗರ ಪಾಲಿಕೆ

ಇವರ ಅಂತಿಮ ಸಂಸ್ಕಾರವನ್ನು, ರಾಜಾಜಿನಗರ ಹರಿಶ್ಚಂದ್ರ ಘಾಟ್‌ನಲ್ಲಿ ಅಂತಿಮ ಕಾರ್ಯಕ್ರಮವನ್ನು, ದಿ: 19–04–2026ರ ಮಧ್ಯಾಹ್ನ 2 ಗಂಟೆಗೆ ನೆರವೇರಲಿದೆ.

ಇಂದಿನಿಂದ ಬ್ಯಾಂಕ್ ನೌಕರರ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಭಾರತ ಬ್ಯಾಂಕ್ ನೌಕರರ ಸಂಘವು 30ನೇ ರಾಷ್ಟ್ರೀಯ ಸಮ್ಮೇಳನ ಹಾಗೂ 80ನೇ ವಾರ್ಷಿಕೋತ್ಸವವನ್ನು ಇದೇ 19ರಿಂದ 22ರವರೆಗೆ ಅರಮನೆ ಮೈದಾನದ (ಗೇಟ್ ಸಂಖ್ಯೆ-6) ರಾಯಲ್ ಸೆನೆಟ್‌ನಲ್ಲಿ ಹಮ್ಮಿಕೊಂಡಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಚ್. ವೆಂಕಟಾಚಲಂ, '19ರಂದು ಸಂಜೆ 4.30ಕ್ಕೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಹಾಗೂ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಅಮರ್ಜಿತ್ ಕೌರ್ ಅವರು ಸಮ್ಮೇಳನ ಉದ್ಘಾಟಿಸುತ್ತಾರೆ. ಕರ್ನಾಟಕ, ಕಾಶ್ಮೀರ, ನಾಗಾಲ್ಯಾಂಡ್, ಮಣಿಪುರ ಸೇರಿದಂತೆ ವಿವಿಧ ರಾಜ್ಯಗಳಿಂದ 3 ಸಾವಿರಕ್ಕೂ ಅಧಿಕ ಪ್ರತಿನಿಧಿಗಳು ಹಾಗೂ ಮಹಿಳಾ ಬ್ಯಾಂಕ್ ನೌಕರರು ಭಾಗವಹಿಸಲಿದ್ದಾರೆ' ಎಂದು ಹೇಳಿದರು.

'ದೇಶದ ಅಭಿವೃದ್ಧಿಯಲ್ಲಿ ಬ್ಯಾಂಕ್‌ಗಳು ಮಹತ್ವದ ಪಾತ್ರ ವಹಿಸುತ್ತಿವೆ. ರಾಷ್ಟ್ರೀಕರಣಗೊಂಡ ಬಳಿಕ ದೇಶದ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಅತಿ ಹೆಚ್ಚು ಠೇವಣಿ ಮೊತ್ತ ಹಾಗೂ ಠೇವಣಿದಾರರನ್ನು ಹೊಂದಿ, ಆರ್ಥಿಕ ಬೆಳವಣಿಗೆಗೆ ಕೊಡುಗೆ ನೀಡುತ್ತಿವೆ. ಇಂತಹ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳನ್ನು ಕೇಂದ್ರ ಸರ್ಕಾರ ಖಾಸಗೀಕರಣಗೊಳಿಸಲು ಮುಂದಾಗಿರುವುದು ಖಂಡನೀಯ' ಎಂದರು.

ಸಂಘದ ಪದಾಧಿಕಾರಿಗಳಾದ ರಾಮ್ ಬಾಬು, ಎ.ಎಂ. ಫೆರೇರಾ, ನವೀನ್ ಮೋದಿ, ಜಯನಾಥ, ಲಲಿತಾ ಜೋಶಿ ಉಪಸ್ಥಿತರಿದ್ದರು.

ಆಟೊ ಚಾಲಕರಿಗೆ ಸಹಾಯಧನ ವಿತರಣೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟೊ ಎಲ್‌ಪಿಜಿ ಸಮಸ್ಯೆಯಿಂದ ಸಂಕಷ್ಟಕ್ಕೆ ಒಳಗಾಗಿರುವ ಆಟೊ ಕುಟುಂಬಗಳಿಗೆ ಸಹಾಯಧನ ವಿತರಣೆ ಮಾಡುವಂತೆ ಆಗ್ರಹಿಸಿ, ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಶನಿವಾರ ಪ್ರತಿಭಟನೆ ನಡೆಸಿದರು.

ಪಕ್ಷದ ಆಟೊ ಘಟಕದ ಅಧ್ಯಕ್ಷ ಆಯೂಬ್ ಖಾನ್ ಮಾತನಾಡಿ, 'ಅಮೆರಿಕ–ಇಸ್ರೇಲ್ ಹಾಗೂ ಇರಾನ್ ನಡುವಿನ ಯುದ್ಧದ ಪರಿಣಾಮದಿಂದ ಎಲ್‌ಪಿಜಿ ಬಂಕ್‌ಗಳಲ್ಲಿ ಅನಿಲ ಕೊರತೆ ಉಂಟಾಗಿದೆ. ಆಟೊ ಚಾಲಕರ ದುಡಿಮೆಗೆ ಪೆಟ್ಟು ಬಿದ್ದಿದೆ. ಚಾಲಕರು ಸಂಸಾರ ನಡೆಸಲು ಸಾಧ್ಯವಾಗದೇ ಬೀದಿಗೆ ಬೀಳುತ್ತಿದ್ದಾರೆ' ಎಂದು ನೋವು ತೋಡಿಕೊಂಡರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಆಮ್ ಆದ್ಮಿ ಪಕ್ಷದ ನೇತೃತ್ವದಲ್ಲಿ ಆಟೊ ಚಾಲಕರು ಶನಿವಾರ ಪ್ರತಿಭಟನೆ ನಡೆಸಿದರು

'ರಾಜ್ಯ ಸರ್ಕಾರವು ಉಪ ಚುನಾವಣೆ ಹಾಗೂ ಮುಖ್ಯಮಂತ್ರಿ ಬದಲಾವಣೆಯ ರಾಜಕೀಯದಲ್ಲಿ ಆಟೊ ಚಾಲಕರ ಸಂಕಷ್ಟ ಅರಿಯದೇ ಕಣ್ಮುಚ್ಚಿ ಕುಳಿತಿರುವುದು ಬೇಸರದ ಸಂಗತಿ. ಸಮಾಜ ಸೇವಕರು, ಚಿತ್ರನಟರು ಮುಂದೆ ಬಂದು ತಮ್ಮ ಕೈಲಾದಷ್ಟು ನೆರವು ನೀಡುತ್ತಿದ್ದಾರೆ. ಆದರೆ, ರಾಜ್ಯ ಸರ್ಕಾರ ಮಾತ್ರ ಗಮನಹರಿಸುತ್ತಿಲ್ಲ' ಎಂದು ವಿಷಾದಿಸಿದರು.

'ಸಂಕಷ್ಟದಲ್ಲಿ ಇರುವ ಚಾಲಕರಿಗೆ ತಕ್ಷಣವೇ ₹15 ಸಾವಿರ ಸಹಾಯಧನ ವಿತರಣೆ ಮಾಡಬೇಕು' ಎಂದು ಒತ್ತಾಯಿಸಿದರು.

ಪಕ್ಷದ ಕಾರ್ಯಾಧ್ಯಕ್ಷ ಸೀತಾರಾಮ್ ಗುಂಡಪ್ಪ ಮಾತನಾಡಿ, 'ಮುಖ್ಯಮಂತ್ರಿಗೆ ಮನವಿ ತಲುಪಿಸಿದ್ದೇವೆ. ಆದರೂ, ಸರ್ಕಾರ ಗಮನಹರಿಸುತ್ತಿಲ್ಲ' ಎಂದು ಆಪಾದಿಸಿದರು.

ಮುಖಂಡರಾದ ಜಗದೀಶ್ ಚಂದ್ರ, ಲಕ್ಷ್ಮೀಕಾಂತ್ ರಾವ್, ಜಗದೀಶ್ ವಿ. ಸದಂ, ಸಂಚಿತ್ ಸೆಹ್ವಾನಿ, ಉಷಾ ಮೋಹನ್, ಪುಟ್ಟಣ್ಣಗೌಡ, ಶಶಿಧರ್ ಆರಾಧ್ಯ, ಮುನೇಶ್ ಕುಮಾರ್, ಚನ್ನಪ್ಪಗೌಡ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ವೆಂಕಟೇಶ್, ಯಮುನಾಗೆ ಪ್ರಕಾಶಕರ ಸಂಘದ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪ್ರಕಾಶಕರ ಸಂಘ ನೀಡುವ 2025–26ನೇ ಸಾಲಿನ 'ಎಂ. ಗೋಪಾಲಕೃಷ್ಣ ಅಡಿಗ ಪುಸ್ತಕ ಪರಿಚಾರಕ ಪ್ರಶಸ್ತಿ'ಗೆ ಪಲ್ಲವ ಪ್ರಕಾಶನದ ಕೆ. ವೆಂಕಟೇಶ್ ಹಾಗೂ 'ಶ್ರೀಮತಿ ನಂಜನಗೂಡು ತಿರುಮಲಾಂಬ ಮಹಿಳಾ ಪ್ರಕಾಶನ ಪ್ರಶಸ್ತಿ'ಗೆ ಬಂಡಾಯ ಪ್ರಕಾಶನದ ಯಮುನಾ ಗಾಂವ್ಕರ್ ಆಯ್ಕೆಯಾಗಿದ್ದಾರೆ.

ಸಂಘದ ಅಧ್ಯಕ್ಷೆ ಡಾ.ವಸುಂಧರಾ ಭೂಪತಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಪ್ರಶಸ್ತಿಯು ತಲಾ ₹15 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ.

'ಮುದ್ರಣ ಗೌರವ'ಕ್ಕೆ ಬೆಂಗಳೂರಿನ ರೀಗಲ್ ಪ್ರಿಂಟ್ಸ್‌ನ ವೆಂಕಟೇಶ್, 'ಪುಸ್ತಕ ವಿನ್ಯಾಸ ಗೌರವ'ಕ್ಕೆ ಜಿ. ಅರುಣ್ ಕುಮಾರ್, 'ಪುಸ್ತಕ ಪರಿಚಾರಿಕೆ ಗೌರವ'ಕ್ಕೆ ಕೋಲಾರದ ಪುರುಷೋತ್ತಮ ರಾವ್, ವಿಜಯಪುರದ ಬೆರಗು ಪ್ರಕಾಶನದ ವಿಜಯಲಕ್ಷ್ಮೀ ಕಟ್ಟಿ, 'ಪುಸ್ತಕ ಅರಿವಿನ ಗೌರವ'ಕ್ಕೆ ಕಾನೂನು ಪರಿಣಿತ ವೈ.ಜಿ. ಮುರಳೀಧರನ್ ಅವರು ಆಯ್ಕೆಯಾಗಿದ್ದಾರೆ.

ಕೆ. ವೆಂಕಟೇಶ್

ಯಮುನಾ ಗಾಂವ್ಕರ್

ವಿಶ್ವ ಪುಸ್ತಕ ದಿನಾಚರಣೆಯ ಪ್ರಯುಕ್ತ ಇದೇ 22ರಂದು ಸಂಜೆ 5 ಗಂಟೆಗೆ ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಸಮಾರಂಭ ನಡೆಯಲಿದೆ. ನಿವೃತ್ತ ಐಎಎಸ್ ಅಧಿಕಾರಿ ಐ.ಎಂ. ವಿಠ್ಠಲಮೂರ್ತಿ ಪ್ರಶಸ್ತಿ ಪ್ರದಾನ ಮಾಡುತ್ತಾರೆ. ವಸುಂಧರಾ ಭೂಪತಿ ಅಧ್ಯಕ್ಷತೆ ವಹಿಸುತ್ತಾರೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ನ. ರವಿಕುಮಾರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೋರ್ಟ್ ಆದೇಶ ನೋಡಿಕೊಂಡು ಮುಂದಿನ ನಿರ್ಧಾರ: ಮಧು ಬಂಗಾರಪ್ಪ

ಹಿಂದಿಗೆ ಅಂಕ: ಮರುಪರಿಶೀಲನೆಗೆ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದಿ ಸೇರಿದಂತೆ ಎಸ್‌ಎಸ್‌ಎಲ್‌ಸಿ ತೃತೀಯ ಭಾಷೆಯ ಉತ್ತರ ಪತ್ರಿಕೆಗಳನ್ನು ಹಿಂದಿನ ವರ್ಷಗಳಂತೆಯೇ ಮೌಲ್ಯಮಾಪನ ಮಾಡಬೇಕು. ಅಂಕಗಳನ್ನು ನೀಡಬೇಕು ಎಂಬ ಹೈಕೋರ್ಟ್ ನಿರ್ದೇಶನ ಪ್ರಶ್ನಿಸಿ ರಾಜ್ಯ ಸರ್ಕಾರ ಮರುಪರಿಶೀಲನಾ ಅರ್ಜಿ ಸಲ್ಲಿಸಿದೆ.

ಈ ಕುರಿತು ಸುದ್ದಿಗಾರರಿಗೆ ಮಾಹಿತಿ ನೀಡಿದ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಮರುಪರಿಶೀಲನಾ ಅರ್ಜಿ ವಿಚಾರಣೆ ಏ.21ರಂದು ವಿಚಾರಣೆಗೆ ಬರಬಹುದು. ಕೋರ್ಟ್ ಆದೇಶ ನೋಡಿಕೊಂಡು ಮುಂದಿನ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದರು.

ತೃತೀಯ ಭಾಷೆಗೆ ಅಂಕಗಳ ಬದಲು ಗ್ರೇಡ್ ನೀಡುವ ರಾಜ್ಯ ಸರ್ಕಾರದ ನಿರ್ಧಾರ ಪ್ರಶ್ನಿಸಿ ಕೆಲವರು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಕೋರ್ಟ್ ಸರ್ಕಾರದ ನಿರ್ಧಾರವನ್ನು ಮರುಪರಿಶೀಲಿಸಲು ಹೇಳಿಲ್ಲ. 2025ರ ಪರೀಕ್ಷೆ ವೇಳೆ ಜಾರಿಯಲ್ಲಿದ್ದ ನಿಯಮವನ್ನು ಅನುಸರಿಸಲು ಸೂಚಿಸಿದೆ. ಈಗ ಮರುಪರಿಶೀಲನಾ ಅರ್ಜಿ ಸಲ್ಲಿಸಲಾಗಿದೆ.

ಈ ಪ್ರಕ್ರಿಯೆ ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟಣೆ ಮೇಲೆ ಪರಿಣಾಮ ಬೀರದು. ಫಲಿತಾಂಶ ವಿಳಂಬವಾಗುವುದಿಲ್ಲ. ಪೋಷಕರು ಮತ್ತು ವಿದ್ಯಾರ್ಥಿಗಳು ಆತಂಕಪಡುವ ಅಗತ್ಯವಿಲ್ಲ ಎಂದು ಹೇಳಿದರು.

ಕೃಪಾಂಕ ನೀಡಲು ಒತ್ತಾಯ

ತೃತೀಯ ಭಾಷಾ ಪರೀಕ್ಷೆಗೆ ನಾಲ್ಕು ದಿನಗಳಿರುವಾಗ ಶಾಲಾ ಶಿಕ್ಷಣ ಇಲಾಖೆ ಗ್ರೇಡ್ ನೀಡುವ ನಿರ್ಧಾರ ತೆಗೆದುಕೊಂಡಿತ್ತು. ಇದರಿಂದಾಗಿ ವಿದ್ಯಾರ್ಥಿಗಳಲ್ಲಿ ಗೊಂದಲವಾಗಿ, ಕೆಲವರು ಪರೀಕ್ಷೆಯನ್ನು ಗಂಭೀರವಾಗಿ ತೆಗೆದುಕೊಂಡಿಲ್ಲ. ಕೋರ್ಟ್ ನಿರ್ದೇಶನದಂತೆ ಅಂಕಗಳನ್ನು ನೀಡುವುದಾದರೆ ಕನಿಷ್ಠ 8 ಅಂಕಗಳನ್ನು ಕೃಪಾಂಕವಾಗಿ ನೀಡಬೇಕು ಎಂದು ಕರ್ನಾಟಕದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಘ ಒತ್ತಾಯಿಸಿದೆ.

ಈಗಾಗಲೇ ಕರಡು ಅಧಿಸೂಚನೆ ಹೊರಡಿಸಲಾಗಿದ್ದು, ಫಲಿತಾಂಶ ಪ್ರಕಟಣೆಗೂ ಮೊದಲು ಸರ್ಕಾರದ ಆದೇಶ ಹೊರಬರುತ್ತದೆ ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Commerical

Rajajinagar

RAJAJINAGAR BDA Commercial Property 70x110 West Facing Gayathri Nagar Main Road Contact: 7899570235

Joint Development

Out-Station

MUMBAI SOUTH OCEANFRONT PROPERTIES JOINT DEVELOPMENT/SALE . PANVEL INDUSTRIAL LAND. GOA 5STAR CASINO HOTEL. 9702932709

Villas/Bunglows

Out-Station

LUXURY 5 BHK Villa For Sale in Goa, Pvt Swimming Pool, Fully furnished Rs.14 Cr. Call 9881931111. Broker Excuse

Yelahanka

40X60, 7 BHK, Triplex Bungalow, corner house north facing near GKVK Mango Garden, Judicial Layout Yelahanka. Contact: 9845042454.

REAL ESTATE BUYING

Agricultural Land

Hoskote

WANTED LANDS 10 Acres in Hoskote Taluk Off Main Roads. Contact:- Contact:- 8147775920. Email:- wintreat@gmail.com

Multiple Locations

REQUIRE 100 Acres Agricultural Land Off Bangalore Hubli Highway in Tumkur District near Shira Taluk. Contact:- 8147775920. Email:- wintreat@gmail.com

Hassan

WANTED 50 Acres Agricultural land off Bangalore Hassan Highway up to Kunigal in Tumkur District. Contact:- 8147775920. Email:- wintreat@gmail.com

Sites

Banashankari

"URGENTLY REQUIRED Residential 40x60`& 50x80 Sites Banashankari 2nd Stage, 3rd-Stage, Jayanagar Good Locations Genuine Owners Call: 9019533999/ 9900275599"

Kanakapura Road

WANT-SITE 40x60/ 30x40 Narayana Nagar, BCCHS, BSK 6th Stage, Anjanapura/ BMRDA Site around Kaggalipura. Dr.Roopak 9880299011.

Nagarabhavi

WANTED BDA SITE 30x40, 40x60, 50x80 Nagarabhavi, RHCS Layout, MPM, Vishweswaraiah Layout, Kempegowda Layout 9008418631

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

'WE-FIX' LEAKING ROOF, SUMP, SKYLIGHT, BATHROOM, TILING, HOUSE PAINTING, ROOF COOL EPOXY COATING. MACBOND. 9448572697

RENTAL PROPERTIES

Accommodation Available

Flats

3 BHK Flat- Lease, Sahakarnagar. 3 years 32 Lakhs- Car Parking + Terrace Garden, Lift. No Agents. 9880916998.

APARTMENT FOR Rent. Two bedroom, Noris Road. Richmond Town. Contact:- 9844126689/ 9844313881.

House

RENT: 2BHK Ist Floor, Girinagar, 1BHK, Ist Floor, Hanumanthnagar, Amenities, Semi furnished. Owner: 78925-30410/ 9448809902

MATRIMONIAL

Matrimonial Bureaus

PRE-MARRIAGE/MARITAL COUNSELING by Relationship Coach Call Acharya VedPrakash at 8920935582

MORE Classifieds IN SUPPLEMENT

AUTOMOTIVE

Four Wheelers Selling

Others

SCHOOL BUS for Sale. Brand New Rorce Luxury 55 Seater with Latest Facilities. Reasonably Priced. 9845042249.

Honda

FOR SALE: Honda Jazz Hatchback (Petrol) Well-maintained Honda Jazz 1.2L i- VTEC Manual for sale. Model: Honda Jazz Hatchback Engine: 1.2L i- VTEC Petrol Transmission: Manual Registration: November 2015 Condition: Well maintained, smooth engine, reliable Honda performance Type: Hatchback Ownership: Personal vehicle Ideal for city driving with Honda's trusted reliability, spacious cabin, and excellent fuel efficiency. Serious buyers may please contact. Contact: Sumanth Narayan Phone: 9606353036

Maruti

SALE- SINGLE owner Vitara Breeza 2016 ZDI (Diesel) 1.07 lakh kms, immaculate condition. Owner: 9845033035.

ಅನಿವಾರ್ಯ ಕಾರಣದಿಂದ ಇಂಗ್ಲಿಷ್ ಬಳಕೆ: ಜೋಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ಕನ್ನಡದ ಅಭಿಮಾನಿಯಾಗಿದ್ದು, ನ್ಯಾಯಾಲಯದ ವ್ಯವಹಾರಗಳು ಕಡ್ಡಾಯವಾಗಿ ಇಂಗ್ಲಿಷ್‌ನಲ್ಲಿ ಇರಬೇಕಾದ ಕಾರಣ ಅನಿವಾರ್ಯವಾಗಿ ಆಂಗ್ಲ ಭಾಷೆ ಬಳಸಿದ್ದೇನೆ' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಸ್ಥಾನದಿಂದ ವಜಾಗೊಂಡಿರುವ ಮಹೇಶ ಜೋಶಿ ತಿಳಿಸಿದ್ದಾರೆ.

'ಕನ್ನಡದಲ್ಲಿ ವ್ಯವಹರಿಸುವಂತೆ'ಬರೆದಿದ್ದ ಕಸಾಪ ಆಡಳಿತಾಧಿಕಾರಿ ಕೆ.ಎ. ದಯಾನಂದ ಅವರು ಮನವಿಪತ್ರಕ್ಕೆ ಸ್ಪಷ್ಟನೆ ನೀಡಿರುವ ಅವರು, 'ನಾನು ಪರಿಷತ್ತಿಗೆ ಮಾಹಿತಿ ಹಕ್ಕಿನಡಿ ಕೇಳಿರುವ ವಿವರಗಳು ಹೈಕೋರ್ಟ್‌ಗೆ ಸಲ್ಲಿಸಲು ಅಗತ್ಯವಾಗಿವೆ. ಸಂವಿಧಾನದ ಅನುಚ್ಛೇದ 348ರಲ್ಲಿ ತಿಳಿಸಿರುವಂತೆ, ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್ ತೀರ್ಪುಗಳೂ ಸೇರಿದಂತೆ ಎಲ್ಲ ವ್ಯವಹಾರಗಳು ಕಡ್ಡಾಯವಾಗಿ ಇಂಗ್ಲಿಷ್‌ನಲ್ಲಿ ಇರಬೇಕಾಗಿದೆ. ಮಾಹಿತಿ ಹಕ್ಕು ಕಾಯ್ದೆಯಡಿ ಕೇಳಿರುವ ಅರ್ಜಿ ಇಂಗ್ಲಿಷ್‌ನಲ್ಲಿ ಇರುವುದರಿಂದ, ಈ ಅರ್ಜಿಯ ಪ್ರತಿಯನ್ನು ಹೈಕೋರ್ಟ್‌ಗೆ ಸಲ್ಲಿಸಿ, 'ಕಸಾಪದಿಂದ ಬರುವ ಉತ್ತರಕ್ಕಾಗಿ ಕಾಯುತ್ತಿರುವೆ' ಎಂಬ ವಿಷಯವನ್ನು ನ್ಯಾಯಾಲಯದ ಗಮನಕ್ಕೆ ತರುವ ಉದ್ದೇಶದಿಂದ ಅನಿವಾರ್ಯವಾಗಿ ಇಂಗ್ಲಿಷ್ ಭಾಷೆ ಬಳಸಿದ್ದೇನೆ' ಎಂದಿದ್ದಾರೆ.

'ಪ್ರಾಥಮಿಕ ಶಾಲೆಯಿಂದ ಪ್ರೌಢ ಶಿಕ್ಷಣದವರೆಗೆ ಕನ್ನಡ ಭಾಷೆಯಲ್ಲಿಯೇ ಅಧ್ಯಯನ ಮಾಡಿದ್ದೇನೆ. ಪದವಿಯಲ್ಲಿ ಐಚ್ಛಿಕ ಕನ್ನಡ ವಿಷಯದೊಂದಿಗೆ ಅಧ್ಯಯನ ಮಾಡಿದ್ದು, ಮುಂದೆ ಕೇಂದ್ರ ನಾಗರೀಕ ಸೇವಾ ಸ್ಪರ್ಧೆಗಳಲ್ಲಿ ಕನ್ನಡದಲ್ಲಿಯೇ ಬರೆದು ಉತ್ತೀರ್ಣನಾಗಿದ್ದೇನೆ. ನನ್ನ ಸಹಿ, ರಹದಾರಿ ಸೇರಿದಂತೆ ಎಲ್ಲ ದಾಖಲೆಗಳಲ್ಲಿಯೂ ಕನ್ನಡ ಇರುತ್ತದೆ. ಇದುವೇ ನನ್ನ ಕನ್ನಡದ ಅಭಿಮಾನಕ್ಕೆ ಸಾಕ್ಷಿ' ಎಂದು ಹೇಳಿದ್ದಾರೆ.

ಅಪಹರಣ, ಹಲ್ಲೆ: ಅಕ್ಕ, ಭಾವ ಸೇರಿ ಮೂವರ ಸೆರೆ

ಬೆಂಗಳೂರು: ಸಾಲದ ಹಣ ವಾಪಸ್ ನೀಡದ ವಿಚಾರಕ್ಕೆ ಗಲಾಟೆ ನಡೆದು, ತಂಗಿ ಮತ್ತು ಅವರ ಪತಿಯನ್ನು ಅಪಹರಿಸಿ ಹಲ್ಲೆ ನಡೆಸಿದ್ದ ಅಕ್ಕ-ಭಾವ ಸೇರಿದಂತೆ ಮೂವರನ್ನು ಹೆಬ್ಬಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಾಗರಬಾವಿ ನಿವಾಸಿ ಪ್ರಫುಲ್ಲಾ (45), ಅವರ ಪತಿ ಶೇಖ್ ಸಲೀಂ(34) ಸ್ನೇಹಿತ ಬೀರೇಶ್(26) ಬಂಧಿತರು.

'ಶೇಖ್ ಸಲೀಂ ಅವರು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಶೇಖ್ ಸಲೀಂ-ಪ್ರಫುಲ್ಲಾ ಪ್ರೀತಿಸಿ ಮದುವೆ ಆಗಿದ್ದರು. ಬೀರೇಶ್ ಆಟೊ ಚಾಲಕರಾಗಿ ಕೆಲಸ ಮಾಡುತ್ತಿದ್ದಾರೆ' ಎಂದು ಪೊಲೀಸರು ಮಾಹಿತಿ ನೀಡಿದರು.

ಎಲೆಕ್ಟ್ರಾನಿಕ್ ಸಿಟಿಯ ಅನಂತನಗರ ನಿವಾಸಿ ಪೃಥ್ವಿ ಹಾಗೂ ಅವರ ಪತಿ ಅಭಿತೇಜ್ ಅವರನ್ನು ಆರೋಪಿಗಳು ಏಪ್ರಿಲ್ 14ರಂದು ಅಪಹರಿಸಿ ಹಲ್ಲೆ ನಡೆಸಿದ್ದರು. ಪೃಥ್ವಿ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ.

ಪೃಥ್ವಿ ಅವರು ಕೆಲವು ವರ್ಷಗಳ ಹಿಂದೆ ಅಕ್ಕ ಪ್ರಫುಲ್ಲಾ ಅವರ ಬಳಿ ₹9.50 ಲಕ್ಷ ಸಾಲ ಪಡೆದುಕೊಂಡಿದ್ದರು. ಅದರಂತೆ ಆರು ತಿಂಗಳು ₹2.75 ಲಕ್ಷ ಬಡ್ಡಿ ಪಾವತಿಸಿದ್ದರು. ಬಳಿಕ ಆರ್ಥಿಕ ಸಮಸ್ಯೆಯಿಂದ ಬಡ್ಡಿ ಕಟ್ಟಲು ಸಾಧ್ಯವಿಲ್ಲ. ಅಸಲು ಕೊಡಲು ಗಡುವು ಕೇಳಿದ್ದರು. ಆದರೂ ಆರೋಪಿಗಳು, 2025ರ ಜೂನ್‌ನಲ್ಲಿ ತಡರಾತ್ರಿ ಮನೆಗೆ ನುಗ್ಗಿ ದೂರುದಾರೆ ಮತ್ತು ಅವರ ಪತಿ ಮೇಲೆ ಹಲ್ಲೆ ನಡೆಸಿದ್ದರು. ಈ ಸಂಬಂಧ ಇದೇ ಹೆಬ್ಬಗೋಡಿ ಠಾಣೆಯಲ್ಲಿ ದೂರು ದಾಖಲಾಗಿತ್ತು. ಬಳಿಕ ಹಣ ನೀಡಲು ಒಂದು ತಿಂಗಳ ಗಡುವು ಪಡೆದುಕೊಂಡಿದ್ದರು ಎಂದು ಮೂಲಗಳು ಹೇಳಿವೆ.

'ಠಾಣೆಗೆ ದೂರು ನೀಡಿದ ಮೇಲೆ ₹2.5 ಲಕ್ಷ ನೀಡಿದ್ದೆ. ಬಾಕಿ ಹಣಕ್ಕೆ ನೀಡಲು 2026ರ ಜೂನ್ ವರೆಗೆ ಸಮಯ ಪಡೆದುಕೊಳ್ಳಲಾಗಿತ್ತು. ಆದರೂ ಆರೋಪಿಗಳು ಏ.14ರಂದು ಮನೆಗೆ ನುಗ್ಗಿ ಹಲ್ಲೆ ನಡೆಸಿದಲ್ಲದೆ, ಕಾರಿನಲ್ಲಿ ಅಪಹರಿಸಿ ಹಲ್ಲೆ ನಡೆಸಿದ್ದಾರೆ' ಎಂದು ಪೃಥ್ವಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಜಾಹೀರಾತು

CBSE ತರಗತಿ X 2026ರಲ್ಲಿ ನಾರಾಯಣ ಶಾಲೆಗಳ ಭರ್ಜರಿ ಪ್ರಾಬಲ್ಯ – ಮತ್ತೊಂದು ಬಾರಿ ಅಪ್ರತಿಹತ ಸಾಧನೆ



CBSE ತರಗತಿ 10 ಬೋರ್ಡ್ ಪರೀಕ್ಷೆ 2026ರಲ್ಲಿ ನಾರಾಯಣ ಶಾಲೆಗಳು ಮತ್ತೆ ತನ್ನ ಅಸಾಧಾರಣ ಸಾಮರ್ಥ್ಯವನ್ನು ಸಾಬೀತುಪಡಿಸಿದೆ. ಬೆಂಗಳೂರಿನಾದ್ಯಂತ ನಾರಾಯಣ ವಿದ್ಯಾರ್ಥಿಗಳು ಸಮೀಪಪೂರ್ಣ ಅಂಕಗಳನ್ನು ಗಳಿಸಿ, ಸ್ಪರ್ಧಾತ್ಮಕ ಶಿಕ್ಷಣ ಕ್ಷೇತ್ರದಲ್ಲಿ ತನ್ನ ನಿರ್ವಿವಾದ ನಾಯಕತ್ವವನ್ನು ಮತ್ತೊಮ್ಮೆ ಸ್ಥಾಪಿಸಿದೆ.

ಈ ವರ್ಷದ ಫಲಿತಾಂಶಗಳಲ್ಲಿ ಅಹಾನ್ ಸಜೀವನ್ (498/500) ಮತ್ತು ಸಂಜನಾ ರೆಡ್ಡಿ (498/500) ಶ್ರೇಷ್ಠ ಸ್ಥಾನದಲ್ಲಿದ್ದರೆ, ಭುವಿ ವೀರೇಂದ್ರ ಸುತಾರ್, ಶೌರ್ಯ ಮನೋಜ್ ವಟ್ಟಮ್ಮಾರ್ ಮತ್ತು ನಿತೀಶ್ ರಾಜ್ – ಈ ಮೂವರು ಕೂಡ (497/500) ಅಂಕಗಳನ್ನು ಗಳಿಸಿ ಭರ್ಜರಿ ಸಾಧನೆ ಮಾಡಿದ್ದಾರೆ.

ಈ ಫಲಿತಾಂಶಗಳು ಯಾದೃಚ್ಛಿಕವಲ್ಲ. ಇದು ನಾರಾಯಣದ ವಿಜ್ಞಾನಾಧಾರಿತ, ಫಲಿತಾಂಶ ಕೇಂದ್ರೀಕೃತ ಮತ್ತು ಕಟ್ಟುನಿಟ್ಟಾದ ಶೈಕ್ಷಣಿಕ ವ್ಯವಸ್ಥೆಯ ನೇರ ಫಲಿತಾಂಶ.

ನಾರಾಯಣದ ಶಿಕ್ಷಣ ವಿಧಾನವು ಸ್ಪಷ್ಟ – Conceptual Clarity, Relentless Practice, Continuous Evaluation ಮತ್ತು Personalised Mentorship.

ಇಲ್ಲಿ ಪ್ರತಿಯೊಂದು ತಪ್ಪು ಒಂದು ಅವಕಾಶ. ಪ್ರತಿಯೊಂದು ಪರೀಕ್ಷೆ ಒಂದು ಕಲಿಕೆ. ಪ್ರತಿಯೊಬ್ಬ ವಿದ್ಯಾರ್ಥಿ ಒಂದು ಸಾಧಕ.

"Mistake to Mastery" ಎಂಬ ನಾರಾಯಣದ ವಿಶಿಷ್ಟ ವಿಧಾನವು ವಿದ್ಯಾರ್ಥಿಗಳನ್ನು ಕೇವಲ ಅಂಕಗಳಿಗಾಗಿ ಅಲ್ಲ, ಆಳವಾದ ಅರಿವು ಮತ್ತು ಆತ್ಮವಿಶ್ವಾಸದೊಂದಿಗೆ ಯಶಸ್ಸಿನತ್ತ ಕೊಂಡೊಯ್ಯುತ್ತದೆ.

Scan to know more

ವಿದ್ಯಾರ್ಥಿಗಳೇ ಇದರ ಸಾಕ್ಷಿ:

"ನನ್ನ ಫಲಿತಾಂಶ ಅವಾಸ್ತವಿಕವೆನಿಸುತ್ತದೆ, ಆದರೆ ಇದು ಸ್ಥಿರವಾದ ಪ್ರಯತ್ನ ಮತ್ತು ನಾರಾಯಣ ಅವರ ವ್ಯವಸ್ಥೆಯ ಮೇಲೆ ನಿರ್ಮಿಸಲ್ಪಟ್ಟಿದೆ. ಇಟೆಕ್ನೋ ಕಾರ್ಯಕ್ರಮದ ಕಠಿಣ ಪರೀಕ್ಷೆಗಳು ಮತ್ತು ವಿವರವಾದ ಪ್ರತಿಕ್ರಿಯೆಯು ದೌರ್ಬಲ್ಯಗಳನ್ನು ಶಕ್ತಿಗಳಾಗಿ ಪರಿವರ್ತಿಸಿತು. ಶಿಕ್ಷಕರ ಮಾರ್ಗದರ್ಶನ ಮತ್ತು ನನ್ನ ಪೋಷಕರ ಬೆಂಬಲವು ನನ್ನ ಉದ್ದಕ್ಕೂ ಆತ್ಮವಿಶ್ವಾಸವನ್ನು ಉಳಿಸಿಕೊಂಡಿತು". -**ಅಹಾನ್ ಸಜೀವನ್**

ನಿತೀಶ್ ರಾಜ್: ನಿರಂತರ ಅಭ್ಯಾಸ ಮತ್ತು ಶಿಕ್ಷಕರ ಬೆಂಬಲವು ತನ್ನನ್ನು ಶಿಸ್ತಿನ ಮತ್ತು ಆತ್ಮವಿಶ್ವಾಸದ ವಿದ್ಯಾರ್ಥಿಯನ್ನಾಗಿ ರೂಪಿಸಿದೆ.

ಭುವಿ ವೀರೇಂದ್ರ ಸುತಾರ್: ದೋಷ ವಿಶ್ಲೇಷಣೆ ಮತ್ತು ಸಂರಚಿತ ಮಾರ್ಗದರ್ಶನವೇ ತನ್ನ ನಿರಂತರ ಪ್ರಗತಿಯ ಹೃದಯವಾಗಿದೆ.

ಶೌರ್ಯ ಮನೋಜ್ ವಟ್ಟಮ್ಮಾರ್: ಕಂಠಪಾಠದಿಂದ ದೂರವಿಟ್ಟು, ಕಲ್ಪನಾತ್ಮಕ ಅರಿವಿನ ಮೂಲಕ ಆತ್ಮವಿಶ್ವಾಸವನ್ನು ಬೆಳೆಸಿದ ವ್ಯವಸ್ಥೆ.

ಸಂಜನಾ ರೆಡ್ಡಿ: ದಿನನಿತ್ಯದ ಅಭ್ಯಾಸ ಪರೀಕ್ಷೆಗಳು ಮತ್ತು ಶಿಸ್ತುಬದ್ಧ ಪರಿಸರವೇ ತನ್ನ ನಿಖರತೆಯ ಗುಟ್ಟು.

ಅಹಾನ್ ಸಜೀವನ್: ಕಟ್ಟುನಿಟ್ಟಾದ ಪರೀಕ್ಷೆಗಳು ಮತ್ತು ಮಾರ್ಗದರ್ಶನವು ದುರ್ಬಲತೆಗಳನ್ನು ಶಕ್ತಿಗಳಾಗಿ ಪರಿವರ್ತಿಸಿತು.

ನಾರಾಯಣದಲ್ಲಿ ಯಶಸ್ಸು ಒಂದು ಘಟನೆ ಅಲ್ಲ – ಅದು ಒಂದು ವ್ಯವಸ್ಥೆ.

ಈ ನಿರಂತರ ಸಾಧನೆಗಳು ಸ್ಪಷ್ಟಪಡಿಸುತ್ತವೆ:

ನಾರಾಯಣ – ಅಂಕಗಳಲ್ಲಿ ಮಾತ್ರವಲ್ಲ, ಶಿಕ್ಷಣದಲ್ಲೂ ಮುಂಚೂಣಿ.

ನಾರಾಯಣ ಎಜುಕೇಶನಲ್ ಇನ್‌ಸ್ಟಿಟ್ಯೂಷನ್‌ನ ನಿರ್ದೇಶಕಿ ಡಾ. ಸಿಂಧುರಾ ನಾರಾಯಣ ಅವರು ಹೇಳಿದರು:

"ಈ ಫಲಿತಾಂಶಗಳು ಕೇವಲ ಸಾಧನೆಗಳಲ್ಲ – ಇದು ನಮ್ಮ ಶೈಕ್ಷಣಿಕ ಶಕ್ತಿಯ ಪ್ರತಿಬಿಂಬ. ನಾವು ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಮಾತ್ರವಲ್ಲ, ಭವಿಷ್ಯವನ್ನು ಗೆಲ್ಲಲು ಸಿದ್ಧಗೊಳಿಸುತ್ತಿದ್ದೇವೆ."

NARAYANA SCHOOLS

ಅಂಕಿ ಅಂಶಗಳು

398	44	354	21	12	22	11	135	20	220	1
ಕರ್ನಾಟಕ ಮೃಗಾಲಯ ಪ್ರಾಧಿಕಾರಕ್ಕೆ ಮಂಜೂರಾದ ಒಟ್ಟು ಹುದ್ದೆಗಳು	ಪ್ರಸ್ತುತ ಭರ್ತಿಯಾಗಿರುವ ಹುದ್ದೆಗಳು	ಪ್ರಸ್ತುತ ಖಾಲಿ ಇರುವ ಹುದ್ದೆಗಳು	ಮಂಜೂರಾಗಿರುವ 'ಎ' ಗ್ರೂಪ್ ಹುದ್ದೆಗಳು	ಭರ್ತಿಯಾಗಿರುವ 'ಎ' ಗ್ರೂಪ್ ಹುದ್ದೆಗಳು	ಮಂಜೂರಾದ 'ಬಿ' ಗ್ರೂಪ್ ಹುದ್ದೆಗಳು	ಭರ್ತಿಯಾಗಿರುವ 'ಬಿ' ಗ್ರೂಪ್ ಹುದ್ದೆಗಳು	ಮಂಜೂರಾಗಿರುವ 'ಸಿ' ಗ್ರೂಪ್ ಹುದ್ದೆಗಳು	ಭರ್ತಿಯಾಗಿರುವ 'ಸಿ' ಗ್ರೂಪ್ ಹುದ್ದೆಗಳು	ಮಂಜೂರಾಗಿರುವ 'ಡಿ' ಗ್ರೂಪ್ ಹುದ್ದೆಗಳು	ಭರ್ತಿಯಾಗಿರುವ 'ಡಿ' ಗ್ರೂಪ್ ಹುದ್ದೆ

ಮಾಹಿತಿ: ಕರ್ನಾಟಕ ಮೃಗಾಲಯ ಪ್ರಾಧಿಕಾರ

ನಿರ್ಲಕ್ಷ್ಯಕ್ಕೆ ಪಶುವೈದ್ಯೆ ಸಾವು • ವಿಶ್ವ ದರ್ಜೆಗೆ ಏರದ ಪ್ರಾಣಿ ಸಂಗ್ರಹಾಲಯಗಳು

ಮೃಗಾಲಯದಲ್ಲಿ ಮೂಕರೋದನ

ಗಳಲೆ ರೋಗದ ಸೋಂಕು ತಗುಲಿದ್ದಾಗ ರಾಣಿಚನ್ನಮ್ಮ ಕಿರು ಮೃಗಾಲಯದಲ್ಲಿ ಕೃಷ್ಣಮೃಗಗಳಿದ್ದ ಸ್ಥಳದ ಪ್ರವೇಶವನ್ನು ಸಾರ್ವಜನಿಕರಿಗೆ ಮುಚ್ಚಲಾಗಿತ್ತು.

ಒಂದನೇ ಪುಟದಿಂದ...

ಮೃಗಾಲಯದಲ್ಲಿನ ಸೌಲಭ್ಯ ಕೊರತೆ ಮತ್ತು ಅರಣ್ಯ ಇಲಾಖೆಯಲ್ಲಿನ ಅವ್ಯವಸ್ಥೆ ಬಗ್ಗೆ ಅವರಲ್ಲಿ ಆಕ್ರೋಶ ಇತ್ತು. ಈ ಎಲ್ಲದಕ್ಕೂ ಪೂರಕವಾಗಿ, ಶಿವಮೊಗ್ಗದ ತ್ಯಾವರೆಕೊಪ್ಪದ ಹುಲಿ–ಸಿಂಹಧಾಮದಲ್ಲಿ ನೀರಾನೆ ದಾಳಿಯಿಂದ ಟ್ರೈನಿ ಪಶುವೈದ್ಯೆ ಡಾ.ಸಮೀಕ್ಷಾ ರೆಡ್ಡಿ ಸಾವಿಗೀಡದಾರು. ಈ ಘಟನೆಗೆ ಈವರೆಗೆ ಯಾರೂ ಹೊಣೆ ಹೊತ್ತಿಲ್ಲ.

ನಾಲ್ಕು ದಿನಗಳಿಂದ ಸರಿಯಾಗಿ ಊಟ ಮಾಡದ ಗರ್ಭಿಣಿ ನೀರಾನೆ 'ಹಂಸಿಣಿ'ಯ ಆರೋಗ್ಯ ಹೇಗಿದೆ ಎಂದು ತಿಳಿಯಲು ಸಮೀಕ್ಷಾ ರೆಡ್ಡಿ ರಾತ್ರಿ 11 ಗಂಟೆ ಸುಮಾರಿಗೆ ಹೋಗಿದ್ದರು. ಅವರೊಂದಿಗೆ ವಾಹನ ಚಾಲಕ ಹೊರತುಪಡಿಸಿದರೆ, ಹಿರಿಯ ಪಶುವೈದ್ಯರು ಅಥವಾ ತಜ್ಞ ವೈದ್ಯರು ಜೊತೆಯಲ್ಲಿ ಇರಲಿಲ್ಲ. ರಾತ್ರಿ ಹೆಚ್ಚು ಜಾಗರೂಕ ಆಗಿರುವ ನೀರಾನೆ ದಾಳಿಗೆ ಅವರು ಪ್ರಾಣ ಕಳೆದುಕೊಂಡರು. ಅವರಿಗೆ ಬಾಲ್ಯದಿಂದಲೂ ಪ್ರಾಣಿಪಕ್ಷಿಗಳ ಬಗ್ಗೆ ಕಾಳಜಿ ಇತ್ತು. ಆದರೆ, ಅವರಿಗೆ ಬದುಕಿನ ಗುರಿ ತಲುಪಲು ಆಗಲಿಲ್ಲ.

ಇದು ಮೃಗಾಲಯಗಳಲ್ಲಿನ ಸುರಕ್ಷತಾ ಕಾರ್ಯಾಚರಣೆ ವಿಧಾನಗಳನ್ನೇ (ಎಸ್‌ಒಪಿ) ಪ್ರಶ್ನಿಸುವಂತೆ ಮಾಡಿತು. ಪ್ರಾಣಿಗಳಿಗೆ ಆಹಾರ ಕೊಡುವಾಗ ಇಲ್ಲವೇ ಅವುಗಳಿಗೆ ಚಿಕಿತ್ಸೆ ನೀಡುವಾಗ ವೈದ್ಯರು ಮತ್ತು ಸಿಬ್ಬಂದಿ ರಕ್ಷಣೆಗೆ ಕೆಲ ನಿಯಮಗಳಿವೆ. ಪ್ರಾಣಿಗಳ ಚಿಕಿತ್ಸೆ ವೇಳೆ ಪ್ರಾಣಿಪಾಲಕರು ಇರಬೇಕು. ಅರಿವಳಿಕೆ ಮದ್ದು ಕೊಡುವ ಬಂದೂಕು, ಆರ್‌ಎಫ್‌ಒ ಇಲ್ಲವೇ ಡಿಆರ್‌ಎಫ್‌ಒ ಮಟ್ಟದ ಅಧಿಕಾರಿಗಳು ಇರಬೇಕು. ತುರ್ತು ಪರಿಸ್ಥಿತಿ ಹೊರತುಪಡಿಸಿ ರಾತ್ರಿ ವೇಳೆ ಪ್ರಾಣಿಗೆ ಚಿಕಿತ್ಸೆ ನೀಡಲು ತೆರಳುವಂತಿಲ್ಲ. ಪ್ರಾಣಿಗಳ ಜೊತೆ ಸುರಕ್ಷಿತ ಅಂತರ ಕಾಯ್ದುಕೊಳ್ಳಬೇಕು ಎಂಬ ನಿಯಮವಿದೆ. ಆದರೆ, ಸಮೀಕ್ಷಾ ರೆಡ್ಡಿ ಪ್ರಕರಣದಲ್ಲಿ ಇದು ಯಾವುದೂ ಪಾಲನೆ ಆಗಿಲ್ಲ ಎಂಬುದು ಪ್ರಾಥಮಿಕ ತನಿಖೆಯಿಂದ ಬಯಲಾಗಿದೆ.

'ಸಮೀಕ್ಷಾ ರೆಡ್ಡಿ ಸಾವಿಗೆ ಮೃಗಾಲಯ ಪ್ರಾಧಿಕಾರದ ನಿರ್ಲಕ್ಷ್ಯವೇ ಕಾರಣ. ಆಕೆಗೆ ಕಾನೂನು ಎಲ್ಲವೂ ಗೊತ್ತಿತ್ತು. ಸಂಜೆ 6 ಗಂಟೆ ಬಳಿಕ ಕೆಲಸ ಮಾಡುವಂತಿಲ್ಲ ಎಂಬುದು ಒಪ್ಪಂದ ಪತ್ರದಲ್ಲೂ ಇತ್ತು. ನಿಯಮದ ಪ್ರಕಾರ, ಆಕೆ ರಾತ್ರಿ ಪ್ರಾಣಿಗಳತ್ತ ಹೋಗುವಂತಿರಲಿಲ್ಲ. ಆದರೆ, ಹೋಗುವಂತೆ ಆಕೆಗೆ ಒತ್ತಾಯಿಸಲಾಗಿದೆ. ಇಷ್ಟೆಲ್ಲಾ ನಡೆದರೂ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗಿಲ್ಲ' ಎಂದು ಸಮೀಕ್ಷಾ ರೆಡ್ಡಿ ಅವರ ಸೋದರಮಾವ ರಾಜಶೇಖರ್ ಆರೋಪಿಸುತ್ತಾರೆ.

ಸಂಜೆ 6ರ ನಂತರ ಪ್ರಾಣಿಗಳ ಬಳಿ ಹೋಗುವಂತಿಲ್ಲ. ಆದರೆ ತುರ್ತು ಸಂದರ್ಭದಲ್ಲಿ ಇಂತಹ ನಿಯಮ ಪಾಲನೆ ಮಾಡಲಾಗಲ್ಲ. ಪ್ರಾಣಿಗಳ ಆರೋಗ್ಯವೇ ಮುಖ್ಯ ಆಗಿರುವಾಗ ಎಲ್ಲಾ ನಿಯಮ ಪಾಲನೆ ಮಾಡುವುದು ಕಷ್ಟ ಎನ್ನುತ್ತಾರೆ ಹೆಸರು ಹೇಳಲು ಬಯಸದ ಪ್ರಾಧಿಕಾರದ ಹಿರಿಯ ಅಧಿಕಾರಿ. 'ಆದರೆ ಸುರಕ್ಷತೆಗಾಗಿ ಎಚ್ಚರ ವಹಿಸಬೇಕಿತ್ತು. ಟ್ರೈನಿ ವೈದ್ಯರನ್ನು ಕಳುಹಿಸುವ ಬದಲು ಹಿರಿಯ ವೈದ್ಯರು ಸ್ಥಳಕ್ಕೆ ಹೋಗಬೇಕಿತ್ತು. ಸ್ಥಳೀಯ ಆಡಳಿತದಲ್ಲಿರುವ ತಿಕ್ಕಾಟವೂ ಈ ಅವಘಡಕ್ಕೆ ಕಾರಣ' ಎನ್ನುತ್ತಾರೆ.

ಪ್ರಾಣಿಗಳನ್ನೇ ಕೊಂದರು: ಮೈಸೂರಿನ ಚಾಮರಾಜೇಂದ್ರ ಮೃಗಾಲಯದಲ್ಲಿ 2004–05ರ ಅವಧಿಯಲ್ಲಿ ಮೃಗಾಲಯದ ಸಿಬ್ಬಂದಿಯೇ ವಿಷಪ್ರಾಶನ ಮಾಡಿ, ಪ್ರಾಣಿಗಳನ್ನು ಕೊಂದಿದ್ದರು. ಅಧಿಕಾರಿಗಳು ಮತ್ತು ಸಿಬ್ಬಂದಿ ನಡುವಿನ ವೈಮನಸ್ಸಿಗೆ ಪ್ರಾಣಿಗಳು ಬಲಿಯಾದವು. ಭದ್ರತಾ ಸಿಬ್ಬಂದಿ ಮತ್ತು ಅರೆಕಾಲಿಕ ಸಿಬ್ಬಂದಿಯೇ ಜೊತೆಗೂಡಿ, ಭ್ರಷ್ಟಾಚಾರ ಮಾಡಲು ಯತ್ನಿಸಿ, ಹಿರಿಯ ಅಧಿಕಾರಿಗಳನ್ನು ಬ್ಲ್ಯಾಕ್‌ಮೇಲ್ ಮಾಡಲು ಪ್ರಾಣಿಗಳ ಸಾವನ್ನು ದಾಳವಾಗಿ ಬಳಸಿಕೊಂಡರು. ಇವರು ಆಹಾರ ಪೂರೈಕೆಯನ್ನು ಕಡಿಮೆ ಮಾಡಿ, ದಾಸ್ತಾನಿನಲ್ಲಿನ ಆಹಾರ ಕಳವು ಮಾಡುತ್ತಿದ್ದರು. ಮಧ್ಯಾಹ್ನದ ವೇಳೆ ಪ್ರಾಣಿ ವೀಕ್ಷಣೆಗೆ ಬರುತ್ತಿದ್ದವರಿಂದ ಹಣ ಪಡೆದು ಟಿಕೆಟ್ ನೀಡದೆ ಜೇಬಿಗೆ ಹಣ ಇಳಿಸುತ್ತಿದ್ದರು. ಈ ಎಲ್ಲಾ ಅಕ್ರಮಗಳಿಗೆ ತಡೆ ಹಾಕಲು ಅಂದಿನ ಮೃಗಾಲಯದ ನಿರ್ದೇಶಕರು ಪ್ರಯತ್ನ ಮಾಡಿದಾಗ ವಿಷಪ್ರಾಶನ ಪ್ರಕರಣಗಳು ನಿರಂತರವಾದವು. ಜೊತೆಗೆ ನಿಯಮಿತವಾಗಿ ಆಹಾರ ಸಿಗದ ಕಾರಣ ಅಪೌಷ್ಟಿಕತೆಯಿಂದ ಬಡಕಲಾಗಿದ್ದ ಪ್ರಾಣಿಗಳು ಕಾಯಿಲೆಗಳಿಗೆ ತುತ್ತಾದವು. ಸತ್ತ ಪ್ರಾಣಿಗಳ ಚರ್ಮ, ಕೂದಲು, ಉಗುರು ಕಾಳಸಂತೆಕೋರರಿಗೆ ರವಾನೆಯಾದವು.

'ಸತ್ತ ಆನೆ ಮತ್ತು ಕರಡಿಗಳ ಕೂದಲು, ಹುಲಿ ಉಗುರು, ಜಿಂಕೆಯ ಚರ್ಮವನ್ನು ಮೃಗಾಲಯದ ಸಿಬ್ಬಂದಿಯೇ ಮಾರಿಕೊಳ್ಳುತ್ತಿದ್ದರು. ಬಸ್ ಚೀಟಿಯ ಹಿಂಭಾಗದಲ್ಲಿ ಆನೆ, ಕರಡಿಯ ಕೂದಲು ಬೇಕು ಎಂದು ಬರೆದು ಆವರಣದಲ್ಲಿ ಬಿಸಾಡುತ್ತಿದ್ದರು. ಅದನ್ನು ನೋಡಿಕೊಂಡು ಜೀವಂತ ಪ್ರಾಣಿಗಳ ಕೂದಲು, ಉಗುರು ಕತ್ತರಿಸಿ ಕೊಡುತ್ತಿದ್ದರು' ಎಂದು ಮೃಗಾಲಯದ ಸಿಬ್ಬಂದಿ ನೆನಪಿಸಿಕೊಳ್ಳುತ್ತಾರೆ.

2004ರ ಸೆಪ್ಟೆಂಬರ್‌ನಲ್ಲಿ ಚಿಂಪಾಂಜಿ, ಎಮು ಮತ್ತು 'ಸ್ಮಿತಾ' ಎಂಬ ಹೆಣ್ಣು ಹುಲಿ ಅನುಮಾನಾಸ್ಪದವಾಗಿ ಮೃತಪಟ್ಟರೆ, ಕೆಲವೇ ದಿನಗಳಲ್ಲಿ ರೂಪಾ ಮತ್ತು ಗಣೇಶ ಎಂಬ ಎರಡು ಆನೆಗಳಿಗೆ ವಿಷ ಹಾಕಿ ಕೊಲ್ಲಲಾಗಿತ್ತು. ಆರು ಸಿಬ್ಬಂದಿಯನ್ನು ಅಮಾನತು ಮಾಡಿ, ವನ್ಯಜೀವಿ ಕಾಯ್ದೆ 51 ಮತ್ತು ಐಪಿಸಿ 429ರ ಅಡಿ ಪ್ರಕರಣ ದಾಖಲಿಸಲಾಗಿತ್ತು.

ಇಲಿಗಳನ್ನು ಕೊಲ್ಲಲು ಬಳಸುತ್ತಿದ್ದ 'ಸತುವಿನ ಫಾಸ್ಫೇಟ್' ರಾಸಾಯನಿಕ ಅಂಶವಿರುವ ಪಾಷಾಣವನ್ನು ಈ ಪ್ರಾಣಿಗಳಿಗೆ ತಿನ್ನಿಸಲಾಗಿತ್ತು. ಸಿಂಗಳೀಕವನ್ನೂ ಹತ್ಯೆ ಮಾಡಲಾಗಿತ್ತು. 2003ರಲ್ಲಿ 'ಮೀನ' ಎಂಬ ಚಿಂಪಾಂಜಿಯು ಪಂಜರಕ್ಕೆ ಮೈಯೊಡ್ಡಿ ಕುಳಿತಿದ್ದಾಗ ಜಾರುವ ಲೋಹದ ಬಾಗಿಲನ್ನು ಒಮ್ಮೆಗೆ ಹಾಕಿ ಅದರದ್ದೇ ಪಾಲಕ ಬರ್ಬರ ಹತ್ಯೆ ಮಾಡಿದ್ದ. ಗರ್ಭಿಣಿ ಹುಲಿಯ ಆವರಣಕ್ಕೆ ಮತ್ತೊಂದು ಹುಲಿಯನ್ನು ಕರೆದೊಯ್ದು ಕೊಲ್ಲಲಾಗಿತ್ತು. ಎಮು ಪಕ್ಷಿಗೆ ಸಲಾಕೆಯಿಂದ ಚುಚ್ಚಿ ಹತ್ಯೆ ಮಾಡಲಾಗಿತ್ತು.

ಗದಗ ತಾಲ್ಲೂಕಿನ ಬಿಂಕದಕಟ್ಟಿ ಮೃಗಾಲಯ

2015ರ ಜೂನ್ 1ರಂದು ಹೆಣ್ಣು ಚಿಂಪಾಜಿ 'ಮಿರೆಲ್ಲಾ' ವಿಷಪ್ರಾಶನದಿಂದ ಮೃತಪಟ್ಟಿತು. ಪ್ರಯೋಗಾಲಯದ ವರದಿಯಲ್ಲಿ ಈ ಮೊದಲು ಬಳಸುತ್ತಿದ್ದ ಇಲಿಪಾಷಾಣದ ಬದಲು ಮನುಷ್ಯರು ಆತ್ಮಹತ್ಯೆಗೆ ಬಳಸುವ ರಾಸಾಯನಿಕವು ಚಿಂಪಾಂಜಿಯ ಹೊಟ್ಟೆಯಲ್ಲಿ ಪತ್ತೆಯಾಗಿತ್ತು. ಅದರ ಸಾವಿಗೆ ಹೃದಯಾಘಾತ ಎಂದು ಹೇಳಲಾಗಿತ್ತು. ವಿಷಪ್ರಾಶನಕ್ಕೆ ಸಂಬಂಧಿಸಿ ಐದು ಪ್ರಕರಣಗಳು ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದವು. ನ್ಯಾಯಾಲಯದಲ್ಲಿ ನಾಲ್ಕು ಪ್ರಕರಣಗಳ ವಿಚಾರಣೆ ನಡೆದು ಪೂರಕ ಸಾಕ್ಷ್ಯ ಕೊರತೆ ಕಾರಣದಿಂದ ಆರೋಪಿಗಳು ಖುಲಾಸೆಗೊಂಡಿದ್ದಾರೆ.

ನಿರ್ವಹಣೆ ಕೊರತೆ: ಮೃಗಾಲಯಗಳ ಸ್ಥಿತಿಗತಿ ಆಯಾ ಕಾಲಘಟ್ಟ ತಕ್ಕಂತೆ ಬದಲಾಗಬೇಕು. ಆದರೆ, ರಾಜ್ಯದ ಬಹುತೇಕ ಮೃಗಾಲಯಗಳಲ್ಲಿ ಅದು ಕಂಡು ಬರುತ್ತಿಲ್ಲ. ಕಾಡುಪ್ರಾಣಿಗಳ ಮೂಲ ಆವಾಸಸ್ಥಾನದ ವಾತಾವರಣ ಕಲ್ಪಿಸಲು ಇನ್ನೂ ಸಾಧ್ಯವಾಗಿಲ್ಲ. ಹೊಸ ಯೋಜನೆಗಳು ಸಹ ಕಾರ್ಯರೂಪಕ್ಕೆ ಬರುತ್ತಿಲ್ಲ. ಪ್ರಾಣಿಸ್ನೇಹಿ ವಾತಾವರಣ ಕಾಣಸಿಗುತ್ತಿಲ್ಲ.

ಥಾಯ್ಲೆಂಡ್‌ನ ಪಟ್ಟಾಯ ಬಳಿಯ ಕಾವ್ ಕಾವ್‌ನಲ್ಲಿ ಎರಡು ಸಾವಿರ ಎಕರೆ ಪ್ರದೇಶದ ಮುಕ್ತ ವಾತಾವರಣದಲ್ಲಿ ಸುಮಾರು 8 ಸಾವಿರಕ್ಕೂ ಹೆಚ್ಚು ಪ್ರಾಣಿಗಳನ್ನು ವೀಕ್ಷಣೆ ಮಾಡಬಹುದು. ಇಲ್ಲಿ ಪ್ರಾಣಿಗಳು ಸ್ವಂತ ವಾಸಸ್ಥಳದಲ್ಲಿ ಇದ್ದಂತೆ ಮೃಗಾಲಯದಲ್ಲೂ ಇವೆ. ಇದೇ ರೀತಿ ಸಿಂಗಾಪುರದ ಮಂಡೈ ವನ್ಯಜೀವಿ ತಾಣಕ್ಕೆ ಹೊಂದಿಕೊಂಡಿರುವ ಮೃಗಾಲಯವು ವಿಶ್ವದರ್ಜೆಯದಾಗಿದೆ. ಇಂತಹ ಒಂದೇ ಒಂದು ಮೃಗಾಲಯ ಅಭಿವೃದ್ಧಿಗೆ ಕರ್ನಾಟಕ ಮೃಗಾಲಯ ಪ್ರಾಧಿಕಾರ ಪ್ರಯತ್ನಿಸಿಲ್ಲ. ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಮೈಸೂರು ಮತ್ತು ಬನ್ನೇರುಘಟ್ಟದ ಮೃಗಾಲಯಗಳು ಉತ್ತಮ ಸ್ಥಿತಿಯಲ್ಲಿವೆ. ಆದರೆ ವಿಶ್ವದರ್ಜೆಗೆ ಏರಲು ಇನ್ನೂ ಪ್ರಯತ್ನ ಆಗಬೇಕಿದೆ.

ದಾವಣಗೆರೆ ತಾಲ್ಲೂಕಿನ ಇಂದಿರಾ ಪ್ರಿಯದರ್ಶಿನಿ ಕಿರು ಮೃಗಾಲಯ ಆನಗೋಡು ಮೀಸಲು ಅರಣ್ಯಕ್ಕೆ ಹೊಂದಿಕೊಂಡಿದೆ. ಈ ಕಿರು ಮೃಗಾಲಯ ಕೇಂದ್ರೀಯ ಮೃಗಾಲಯ ಪ್ರಾಧಿಕಾರ ರೂಪಿಸಿದ ಮಾರ್ಗಸೂಚಿಗೆ ಅನುಗುಣವಾಗಿ ಇಲ್ಲ. ಇದರಿಂದ ನಿರ್ವಹಣೆಯಲ್ಲಿ ಸಾಕಷ್ಟು ತೊಂದರೆಗಳು ಎದುರಾಗುತ್ತಿವೆ. ಈ ಕಿರುಮೃಗಾಲಯವನ್ನು ಸಮೀಪದ 45 ಎಕರೆ ಪ್ರದೇಶಕ್ಕೆ ಸ್ಥಳಾಂತರಿಸುವ ಪ್ರಯತ್ನ ನಡೆಯುತ್ತಿದೆ. ಇದಕ್ಕೆ ಕರ್ನಾಟಕ ಮೃಗಾಲಯ ಪ್ರಾಧಿಕಾರದಿಂದ ಇನ್ನೂ ಅನುಮತಿ ಸಿಕ್ಕಿಲ್ಲ.

'ಕಲಬುರಗಿ ನಗರದ ಹೃದಯಭಾಗದ ಆರೂವರೆ ಎಕರೆಯಲ್ಲಿ ವ್ಯಾಪಿಸಿರುವ ಕಿರು ಮೃಗಾಲಯ ಸ್ಥಿತ್ಯಂತರ ಹಂತದಲ್ಲಿದೆ. ಅದನ್ನು ಜಿಲ್ಲೆಯ ಕಾಳಗಿ ತಾಲ್ಲೂಕಿನ ಮಾಡಬೂಳದಲ್ಲಿ 43 ಎಕರೆ ಪ್ರದೇಶಕ್ಕೆ ಸ್ಥಳಾಂತರಿಸಲಾಗುತ್ತಿದೆ. ಹಾಗಾಗಿ, ಕಿರು ಮೃಗಾಲಯವನ್ನು ಜನವರಿಯಿಂದಲೇ ಮುಚ್ಚಿದ್ದು, ಪ್ರಾಣಿಗಳನ್ನು ನಿಯಮಬದ್ಧವಾಗಿ ಕ್ವಾರಂಟೈನ್ ಮಾಡಲಾಗಿದೆ. ₹40 ಕೋಟಿ ವೆಚ್ಚದಲ್ಲಿ ಮೃಗಾಲಯ ಸ್ಥಾಪನೆಗೆ ಅಂತಿಮ ಹಂತದ ಸಿದ್ಧತೆಗಳು ಭರದಿಂದ ಸಾಗಿವೆ' ಎಂದು ಕಲಬುರಗಿ ಕಿರು ಮೃಗಾಲಯ ಮತ್ತು ಮಕ್ಕಳ ಉದ್ಯಾನದ ಆರ್‌ಎಫ್‌ಒ ನಾಗೇಶ ಹಡಪದ ಹೇಳುತ್ತಾರೆ.

ಚಿತ್ರದುರ್ಗ ಜಿಲ್ಲೆಯ ಜೋಗಿಮಟ್ಟಿ ವನ್ಯಜೀವಿಧಾಮದ ಗುಡ್ಡಗಳ ನಡುವೆ ಇರುವ ಆಡುಮಲ್ಲೇಶ್ವರ ಕಿರು ಮೃಗಾಲಯವು ಆಕರ್ಷಣೆ ಕಳೆದುಕೊಂಡಿದೆ. ಅದರ ಅಭಿವೃದ್ಧಿಗೆ ಖಾಸಗಿ ಗಣಿ ಕಂಪನಿಗಳು ಕೋಟ್ಯಂತರ ರೂಪಾಯಿ ಹಣ ಕೊಟ್ಟರೂ ಅಧಿಕಾರಿಗಳ ಇಚ್ಛಾಶಕ್ತಿ ಕೊರತೆಯಿಂದ ನಿರೀಕ್ಷಿತ ಬದಲಾವಣೆ ಆಗಿಲ್ಲ ಎಂಬ ಆರೋಪವಿದೆ.

ಮೃಗಾಲಯದ ಆವರಣದಲ್ಲಿ ಪ್ರಾಣಿಗಳಿಗಾಗಿ ಹೊಸ ವಿನ್ಯಾಸದ ಗಾಜಿನ ಮನೆಗಳನ್ನು ನಿರ್ಮಿಸಲಾಗಿದೆ. ಆದರೆ ಅವುಗಳಿಗೆ ಸಮರ್ಪಕ ರೀತಿಯಲ್ಲಿ ಪ್ರಾಣಿಗಳನ್ನು ಬಿಡದ ಕಾರಣ ಗಾಜಿನಮನೆಗಳು ಇದ್ದೂ ಇಲ್ಲದಂತಿವೆ. ಬೇಸಿಗೆ ಆರಂಭವಾದ ಕೂಡಲೇ ವಾತಾವರಣ ತಣ್ಣಗಾಗಿಸಲು ನೀರು ಸಿಂಪಡಣಾ ವ್ಯವಸ್ಥೆ (ಸ್ಪ್ರಿಂಕ್ಲರ್) ಇತ್ತು. ಅದು ಈಗಿಲ್ಲ ಎಂದು ಪ್ರವಾಸಿಗರು ಹೇಳುತ್ತಾರೆ.

ಮನರಂಜನೆಗೆ ಸೀಮಿತ: 'ನಮ್ಮಲ್ಲಿ ಮೃಗಾಲಯಗಳೆಂದರೆ ಮನರಂಜನೆಗಷ್ಟೇ ಸೀಮಿತ. ಅದರಾಚೆಗೆ ಏನಿಲ್ಲ. ಬೇರೆ ದೇಶಗಳಲ್ಲಿ ಇರುವಂತೆ ವಿನಾಶದ ಅಂಚಿನಲ್ಲಿರುವ ಪ್ರಾಣಿಗಳ ಸಂತಾನೋತ್ಪತ್ತಿ ಜಾಸ್ತಿ ಮಾಡಿ, ಅದನ್ನು ಮತ್ತೇ ಅದೇ ಪರಿಸರಕ್ಕೆ ಸೇರ್ಪಡೆ ಮಾಡುವ ದಿಕ್ಕಿನಲ್ಲಿ ಇಲ್ಲಿ ವೈಜ್ಞಾನಿಕ ಸಂಶೋಧನೆಗಳು ನಡೆದಿಲ್ಲ' ಎಂದು ವನ್ಯಜೀವಿ ಛಾಯಾಗ್ರಾಹಕರೂ ಆದ ಕೃಪಾಕರ ಹೇಳುತ್ತಾರೆ.

'ಮುಂದುವರಿದ ದೇಶಗಳಲ್ಲಿ ಮೃಗಾಲಯದ ಪ್ರಾಣಿಗಳ ರಕ್ಷಣೆಗೆ ಸಂಬಂಧಪಟ್ಟಂತೆ ಪ್ರತ್ಯೇಕ ಸಂಶೋಧನೆಗಳು ನಡೆದಿವೆ. ನಮ್ಮಲ್ಲಿ ಅಂತಹ ಪ್ರಯತ್ನ ಹೆಚ್ಚಾಗಿ ನಡೆದಿಲ್ಲ. ಪ್ರಾಣಿಗಳು ಆರೋಗ್ಯಯುತವಾಗಿ ಬದುಕಲು ಸೂಕ್ತ ಜಾಗ ಬೇಕು. ಮೃಗಾಲಯ ನಿರ್ಮಿಸುವುದಕ್ಕೂ ಮುನ್ನ ಆ ಜಾಗದಲ್ಲಿನ ಹವಾಮಾನದ ಅಧ್ಯಯನ ಆಗಬೇಕು. ಬೇಟೆ ಆಡಿ ತಿನ್ನುವ ಪ್ರಾಣಿಗಳನ್ನು ಪಂಜರದಲ್ಲಿ ಕೂಡಿ ಹಾಕಿ, ಅವುಗಳಿಗೆ ಕೋಳಿ ಮತ್ತು ಮಾಂಸ ಕೊಟ್ಟರೆ ಸಾಕಾಗದು. ಅದಕ್ಕೆ ಉತ್ತಮ ಪರಿಸರವೂ ಬೇಕು. ಇದು ಹೆಚ್ಚಿನ ಕಡೆಗಳಲ್ಲಿ ಇಲ್ಲ. ಕೊರತೆಗಳು ಇಂದಿಗೂ ನೀಗಿಲ್ಲವಾದ್ದರಿಂದ ನಮ್ಮಲ್ಲಿ ಮೃಗಾಲಯದ ಪರಿಕಲ್ಪನೆ ಇನ್ನೂ ವಿಸ್ತಾರಗೊಂಡಿಲ್ಲ' ಎಂದು ವಿಶ್ಲೇಷಿಸುತ್ತಾರೆ.

'ಮೃಗಾಲಯದಲ್ಲಿನ ಪ್ರಾಣಿಗಳನ್ನು ಚೆನ್ನಾಗಿ ನೋಡಿಕೊಂಡರಷ್ಟೇ ಸಾಲದು. ಪ್ರಾಣಿಗಳಿಗೆ ಏನು ಬೇಕು, ಬೇಡ ಎಂಬುದರ ತಿಳಿವಳಿಕೆ ಇರಬೇಕು. ಒಂದು ಪ್ರಾಣಿಯ ವರ್ತನೆ, ಆಹಾರಪದ್ಧತಿ, ಅವು ಏನನ್ನು ಇಷ್ಟಪಡುತ್ತವೆ ಎಂಬುದು ಸಿಬ್ಬಂದಿಗೆ ಗೊತ್ತಿರಬೇಕು. ಆದರೆ, ಬಹುತೇಕ ಮೃಗಾಲಯಗಳನ್ನು ಈ ಕೊರತೆ ಬಾಧಿಸುತ್ತಿದೆ' ಎನ್ನುತ್ತಾರೆ.

ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ

ಪೂರಕ ಮಾಹಿತಿ: ಎಂ.ಜಿ.ಬಾಲಕೃಷ್ಣ, ವೆಂಕಟೇಶ್ ಜಿ.ಎಚ್., ಎಂ.ಎನ್.ಯೋಗೇಶ್, ಜಿ.ಬಿ.ನಾಗರಾಜ್, ಇಮಾಮ್‌ಹುಸೇನ್ ಗೂಡುನವರ, ಬಷೀರಅಹ್ಮದ್ ನಗಾರಿ, ಮೋಹನ್ ಕುಮಾರ ಸಿ.

ದಾವಣಗೆರೆ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ 4ರ ಆನಗೋಡಿನ ಬಳಿಯಿರುವ ಇಂದಿರಾ ಪ್ರಿಯದರ್ಶಿನಿ ಕಿರು ಮೃಗಾಲಯ

ತ್ಯಾವರೆಕೊಪ್ಪ: ವಂಶಾಭಿವೃದ್ಧಿಗೆ ಒತ್ತು

ಬೆಂಗಳೂರಿನ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಹಾಗೂ ಮೈಸೂರಿನ ಮೃಗಾಲಯ ಬಿಟ್ಟರೆ ಅತಿಹೆಚ್ಚು ವನ್ಯಜೀವಿಪ್ರಿಯರ ಸೆಳೆಯುವ ಶ್ರೇಯ ಶಿವಮೊಗ್ಗದ ತ್ಯಾವರೆಕೊಪ್ಪದ ಹುಲಿ–ಸಿಂಹಧಾಮಕ್ಕೆ ಸಲ್ಲುತ್ತದೆ.

ಶಿವಮೊಗ್ಗದ ವಾತಾವರಣ ಹುಲಿ, ಸಿಂಹಗಳ ವಂಶಾಭಿವೃದ್ಧಿಗೆ ಹೆಚ್ಚು ಪೂರಕವಾಗಿರುವುದರಿಂದ ತ್ಯಾವರೆಕೊಪ್ಪದಲ್ಲಿ ಅದಕ್ಕೂ ಒತ್ತು ನೀಡಲಾಗಿದೆ. ಅದಕ್ಕಾಗಿ ಪ್ರಾಣಿ ವಿನಿಮಯ ಕಾರ್ಯಕ್ರಮದಡಿ ಕರ್ನಾಟಕ ಮಾತ್ರವಲ್ಲದೇ ದೇಶದ ಬೇರೆ ಬೇರೆ ಮೃಗಾಲಯಗಳಿಂದ ಪ್ರಾಣಿಗಳನ್ನು ತರಲಾಗುತ್ತಿದೆ. ಮೃಗಾಲಯದಲ್ಲಿರುವ ಸಸ್ಯಾಹಾರಿ ಪ್ರಾಣಿಗಳ ನೆರವಿಗೆ ಹುಲಿ–ಸಿಂಹಧಾಮದ ವ್ಯಾಪ್ತಿಯಲ್ಲಿನ 25 ಎಕರೆ ಪ್ರದೇಶದಲ್ಲಿ ಹಸಿರು ಮೇವು ಬೆಳೆಯಲಾಗುತ್ತಿದೆ. ಹೆಬ್ಬಾವುಗಳ ಹೊಟ್ಟೆ ತುಂಬಿಸಲು ಇಲಿಗಳನ್ನು ಬೆಳೆಸಲೂ ಕೃತಕ ವ್ಯವಸ್ಥೆ ಮಾಡಲಾಗಿದೆ.

'ಮೃಗಾಲಯ ಪ್ರಾಧಿಕಾರದ ಶಿಷ್ಟಾಚಾರ ಪಾಲನೆಯ ಜೊತೆಗೆ ಪ್ರಾಣಿಗಳಿಗೆ ಅಗತ್ಯವಿರುವ ಪೌಷ್ಟಿಕ ಆಹಾರ, ಸಪ್ಲಿಮೆಂಟ್ಸ್, ಲಸಿಕೆ, ಡೀ ವರ್ಮಿಂಗ್ ನಂತರ ಕೆಲಸಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತೇವೆ' ಎನ್ನುತ್ತಾರೆ ಅಲ್ಲಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಕೆ. ವಿ.ಅಮರಾಕ್ಷರ.

ಸಿಬ್ಬಂದಿ ಕೊರತೆಯಿಂದ ಸಮಸ್ಯೆ

ಮೃಗಾಲಯದಲ್ಲಿ ಅವ್ಯವಸ್ಥೆ ಮತ್ತು ಸಿಬ್ಬಂದಿ ಕೊರತೆಯೂ ಸಾಕಷ್ಟು ಇದೆ. ಬಹುತೇಕ ಕಡೆ ಅಗತ್ಯ ಪ್ರಮಾಣದಲ್ಲಿ ಪಶುವೈದ್ಯರಿಲ್ಲ ಮತ್ತು ಸಿಬ್ಬಂದಿ ಇಲ್ಲ. ಮೃಗಾಲಯದ ನಿರ್ವಹಣೆ ಸಮರ್ಪಕವಾಗಿ ಇಲ್ಲ. ಕರ್ನಾಟಕ ಮೃಗಾಲಯ ಪ್ರಾಧಿಕಾರದ ಆಡಳಿತ ವ್ಯಾಪ್ತಿಗೆ ಮೈಸೂರು, ಕಲಬುರಗಿ, ದಾವಣಗೆರೆ, ಬೆಳಗಾವಿ, ಗದಗ, ಚಿತ್ರದುರ್ಗ ಜಿಲ್ಲೆಯಲ್ಲಿ ಆರು ಮೃಗಾಲಯಗಳು ಮತ್ತು ಬೆಂಗಳೂರಿನ ಬನ್ನೇರುಘಟ್ಟ ಜೈವಿಕ ಉದ್ಯಾನ, ಶಿವಮೊಗ್ಗದ ತ್ಯಾವರೆಕೊಪ್ಪ ಹುಲಿ ಮತ್ತು ಸಿಂಹಧಾಮ ಹಾಗೂ ವಿಜಯನಗರ ಜಿಲ್ಲೆಯ ಕಮಲಾಪುರದ ಅಟಲ್‌ಬಿಹಾರಿ ವಾಜಪೇಯಿ ಸಫಾರಿ ಪಾರ್ಕ್‌ಗಳಿವೆ.

2025ರ ನವೆಂಬರ್‌ನಲ್ಲಿ ಬೆಳಗಾವಿ ತಾಲ್ಲೂಕಿನ ಭೂತರಾಮನಹಟ್ಟಿಯ ರಾಣಿಚನ್ನಮ್ಮ ಕಿರು ಮೃಗಾಲಯದಲ್ಲಿನ 31 ಕೃಷ್ಣಮೃಗಗಳು ಗಳಲೆ ರೋಗದಿಂದ ಏಕಾಏಕಿ ಮೃತಪಟ್ಟವು. ಬಳಿಕ ದಾವಣಗೆರೆ ತಾಲ್ಲೂಕಿನ ಇಂದಿರಾ ಪ್ರಿಯದರ್ಶಿನಿ ಕಿರು ಮೃಗಾಲಯದಲ್ಲಿ ಆರು ಚುಕ್ಕೆಜಿಂಕೆಗಳು ಹಾಗೂ ಗದಗ ತಾಲ್ಲೂಕಿನ ಬಿಂಕದಕಟ್ಟಿ ಕಿರು ಮೃಗಾಲಯದಲ್ಲಿ ಒಂದು ನೀಲ್‌ಗಾಯ್ ಸಾವನ್ನಪ್ಪಿದವು. ಇವು ಮೃಗಾಲಯಗಳಲ್ಲಿನ ಪ್ರಾಣಿಗಳ ಸುರಕ್ಷತೆ, ಪೋಷಣೆ ಮತ್ತು ವೈದ್ಯಕೀಯ ಸೌಲಭ್ಯಕ್ಕೆ ಸಂಬಂಧಿಸಿದ ಕೊರತೆಗಳನ್ನು ತೆರೆದಿಟ್ಟವು.

'ಬಹುತೇಕ ಕಡೆ ವನ್ಯಜೀವಿ ತಜ್ಞ ಚಿಕಿತ್ಸಕರು ಇಲ್ಲ. ಸಾಮಾನ್ಯ ಪಶುವೈದ್ಯರೇ ಕಾರ್ಯನಿರ್ವಹಿಸುತ್ತಾರೆ. ಕಿರು ಮೃಗಾಲಯಗಳಲ್ಲಿರುವ ಪ್ರಾಣಿಗಳ ಆರೋಗ್ಯದಲ್ಲಿ ಗಂಭೀರ ಏರುಪೇರುಗಳಾದರೆ ಬನ್ನೇರುಘಟ್ಟದಿಂದ ತಜ್ಞರು ಬರುವವರೆಗೆ ಕಾಯಬೇಕು. ಇದರಿಂದ ಪ್ರಾಣಿಗಳ ಸಾವಿನ ಸಂಖ್ಯೆ ಹೆಚ್ಚಾಗುತ್ತಿದೆ. ಮೃಗಾಲಯದ ಪ್ರಾಣಿಗಳ ಆರೋಗ್ಯ ಕಾಳಜಿ, ಆಹಾರ, ಹವಾಮಾನ ವೈಪರೀತ್ಯ ನಿರ್ವಹಣೆ ಸೇರಿ ಅಗತ್ಯವಿರುವ ವಿಷಯಗಳ ಬಗ್ಗೆ ಮಾರ್ಗದರ್ಶನ ಮಾಡಬೇಕಾದ ಆರೋಗ್ಯ ಸಲಹಾ ಸಮಿತಿಗಳು ಸಕ್ರಿಯವಾಗಿಲ್ಲ' ಎಂಬುದು ಪರಿಸರವಾದಿಗಳ ಆರೋಪ.

'ರೋಗಬಾಧೆ, ಕಾದಾಟ ಹಾಗೂ ವಯೋಸಹಜತೆ ಹೀಗೆ ಬೇರೆ ಬೇರೆ ಕಾರಣಗಳಿಂದ ಮೂರು ವರ್ಷಗಳಲ್ಲಿ ಒಂಬತ್ತು ಮೃಗಾಲಯಗಳಲ್ಲಿ ವಿವಿಧ ಬಗೆಯ 697 ಪ್ರಾಣಿಗಳು ಪ್ರಾಣ ಕಳೆದುಕೊಂಡಿವೆ. ಮನರಂಜನೆ ಹೆಸರಿನಲ್ಲಿ ಕಾಡುಪ್ರಾಣಿಗಳ ಸ್ವಾತಂತ್ರ್ಯಹರಣ ಹಿಂದಿನಿಂದಲೂ ನಡೆದಿದೆ. ಅದರ ಜತೆಗೆ ಈಗ ಉತ್ತಮ ವೈದ್ಯಕೀಯ ಸೌಲಭ್ಯಗಳು ಇಲ್ಲದೇ ಪ್ರಾಣಿಗಳು ಸಾಯುತ್ತಿವೆ' ಎಂಬ ಬೇಸರ ಅವರದ್ದು.

'ಮೈಸೂರು ಮೃಗಾಲಯದಲ್ಲಿ ಪ್ರಾಣಿಗಳನ್ನು ಆರೈಕೆ ಮಾಡಲು ಮೂವರು ಪಶುವೈದ್ಯರಿದ್ದಾರೆ. ಶಸ್ತ್ರ ಚಿಕಿತ್ಸಾ ಕೊಠಡಿಸಹಿತ ಪಶು ಆರೈಕೆ ಕೇಂದ್ರವೂ ಅಂಗಳದಲ್ಲಿದೆ. ಗದಗ ಕಿರು ಮೃಗಾಲಯದಲ್ಲಿ ಸುಸಜ್ಜಿತ ಪಶು ಆಸ್ಪತ್ರೆ, ಶಸ್ತ್ರ ಚಿಕಿತ್ಸಾ ಕೊಠಡಿ, ಪ್ರಯೋಗಾಲಯ ಇದೆ. ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುವ ಪಶುವೈದ್ಯ ಇದ್ದಾರೆ. ವಿಜಯನಗರ ಜಿಲ್ಲೆ ಹೊಸಪೇಟೆ ತಾಲ್ಲೂಕಿನ ಕಮಲಾಪುರ ಸಮೀಪದ ಅಟಲ್ ಬಿಹಾರಿ ವಾಜಪೇಯಿ ಜುವಾಲಾಜಿಕಲ್ ಪಾರ್ಕ್‌ನಲ್ಲಿರುವ ಪ್ರಾಣಿಗಳ ಆರೋಗ್ಯ ರಕ್ಷಣೆಗೆ ವ್ಯವಸ್ಥೆ ಇದೆ.

ಆದರೆ, ದಾವಣಗೆರೆ ಇಂದಿರಾ ಪ್ರಿಯದರ್ಶಿನಿ ಕಿರುಮೃಗಾಲಯಕ್ಕೆ ಪಶುವೈದ್ಯರ ಹುದ್ದೆ ಸೃಜನೆ ಆಗಿಲ್ಲ. ಹೀಗಾಗಿ, ಶಸ್ತ್ರ ಚಿಕಿತ್ಸಾ ಕೊಠಡಿ, ಕ್ವಾರಂಟೈನ್ ಘಟಕ, ಪ್ರಯೋಗಾಲಯ ಸೇರಿ ಯಾವ ವೈದ್ಯಕೀಯ ಸೌಲಭ್ಯವೂ ಇಲ್ಲ. ಪಶುವೈದ್ಯಕೀಯ ಮತ್ತು ಪಶುಪಾಲನಾ ಇಲಾಖೆಯ ಪಶುವೈದ್ಯರು ವಾರಕ್ಕೆ ಎರಡು ಬಾರಿ ಮಾತ್ರ ಮೃಗಾಲಯಕ್ಕೆ ಭೇಟಿ ನೀಡುತ್ತಾರೆ.

ಕಲಬುರಗಿ ಕಿರು ಮೃಗಾಲಯಕ್ಕೆ ಇಂದಿಗೂ ಪೂರ್ಣಾವಧಿ ಪಶುವೈದ್ಯರಿಲ್ಲ. ಕೆಲ ವರ್ಷಗಳ ಕಾಲ ನಿವೃತ್ತ ಪಶುವೈದ್ಯರೊಬ್ಬರು ಗೌರವಧನದ ಆಧಾರದಲ್ಲಿ ಪ್ರಾಣಿಗಳ ಆರೈಕೆ ಮಾಡುತ್ತಿದ್ದರು. ಇದೀಗ ಸರ್ಕಾರಿ ಪಶುವೈದ್ಯರೊಬ್ಬರನ್ನು ಪ್ರಭಾರವಾಗಿ ನಿಯೋಜಿಸಲಾಗಿದೆ. ಚಿತ್ರದುರ್ಗ ಜಿಲ್ಲೆಯ ಆಡುಮಲ್ಲೇಶ್ವರ ಕಿರು ಮೃಗಾಲಯ ಕೂಡ ಇದೇ ಕೊರತೆ ಅನುಭವಿಸುತ್ತಿದೆ.

ಆರೋಗ್ಯ ಸಲಹಾ ಸಮಿತಿಗಳು ಕ್ರಿಯಾಶೀಲ: ಪನ್ವಾರ್

'ಬೆಳಗಾವಿ ನಂತರ, ದಾವಣಗೆರೆ ಮತ್ತು ಗದುಗಿನ ಮೃಗಾಲಯಗಳಲ್ಲೂ ಇಂಡೀಡ್ ಹೆಮರೈಜಿಕ್ ಸೆಪ್ಟೀಸಿಮಿಯಾ ಕಾಯಿಲೆ ಕಂಡುಬಂದಿತ್ತು. ಆದರೆ, ಬೆಳಗಾವಿಯಲ್ಲಿನ ಅನುಭವ ಆಧರಿಸಿ ತಕ್ಷಣವೇ ನಿಯಂತ್ರಣಕ್ಕೆ ತಂದೆವು. ಈಗ ರಾಜ್ಯದ ಎಲ್ಲ ಮೃಗಾಲಯಗಳಲ್ಲಿ ಪ್ರಾಣಿಗಳ ಆರೋಗ್ಯದ ಮೇಲೆ ನಿಗಾ ವಹಿಸಿದ್ದು, ಆರೋಗ್ಯ ಸಲಹಾ ಸಮಿತಿಗಳನ್ನು ಕ್ರಿಯಾಶೀಲಗೊಳಿಸಿ ನಿರಂತರ ಸಭೆಗಳನ್ನು ಮಾಡಲಾಗುತ್ತಿದೆ' ಎಂದು ಕರ್ನಾಟಕ ಮೃಗಾಲಯದ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸುನೀಲ್ ಪನ್ವಾರ್ ಹೇಳಿದರು.

'ಈಗ ಚಳಿಗಾಲದಿಂದ ಬೇಸಿಗೆಯತ್ತ ಹೊರಳಿದ್ದೇವೆ. ಹವಾಮಾನ ಬದಲಾವಣೆಯಿಂದ ಪ್ರಾಣಿಗಳು ನಿಶ್ಶಕ್ತಿ ಹೊಂದದಿರಲಿ ಮತ್ತು ಯಾವುದೇ ರೋಗ ಬಾಧಿಸದಿರಲೆಂದು ಇಮ್ಯೂನಿಟಿ ಬೂಸ್ಟ್ ಕೊಡುತ್ತಿದ್ದೇವೆ. ಆರೋಗ್ಯ ಸಲಹಾ ಸಮಿತಿ ಈಚೆಗೆ ಮೂರು ಬಾರಿ ಸಭೆ ನಡೆಸಿ, ಪ್ರಾಣಿಗಳ ಆರೋಗ್ಯ ಕಾಪಾಡುವ ಕುರಿತು ನಿರ್ದೇಶನ ಕೊಟ್ಟಿದೆ' ಎಂದು ಬೆಳಗಾವಿಯ ವಲಯ ಅರಣ್ಯ ಅಧಿಕಾರಿ ಪವನ ಕುರನಿಂಗ ಪ್ರತಿಕ್ರಿಯಿಸಿದರು.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 19-04-2001

● ಬಾಂಗ್ಲಾ ಸೈನಿಕರಿಂದ 16 ಭಾರತೀಯ ಯೋಧರ ಹತ್ಯೆ

ಢಾಕಾ ಏ.18 (ಎಎಫ್‌ಪಿ)– ಪೂರ್ವಾಂಚಲದ ಗಡಿ ಜಿಲ್ಲೆ ಕುರಿಗ್ರಾಮದಲ್ಲಿ ಉಂಟಾದ ಗಲಭೆಗಳಲ್ಲಿ ಇಂದು 16 ಭಾರತೀಯ ಸೈನಿಕರು ಹಾಗೂ ಒಬ್ಬ ಬಾಂಗ್ಲಾದೇಶದ ಸೈನಿಕ ಮೃತಪಟ್ಟಿದ್ದು, ಇತರ ಹಲವರಿಗೆ ಗಾಯಗಳಾಗಿವೆ ಎಂದು ಬಾಂಗ್ಲಾ ದೇಶದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಗಾಯಗೊಂಡ ಇಬ್ಬರು ಭಾರತೀಯ ಸೈನಿಕರು ಶರಣಾಗತರಾಗಿದ್ದಾರೆ' ಎಂದು ಬಾಂಗ್ಲಾದೇಶ್ ರೈಫಲ್ಸ್ (ಬಿಡಿಆರ್) ಗಡಿ ಕಾವಲು ಮುಖ್ಯಸ್ಥ ಮೇಜರ್ ಜನರಲ್ ಫಜ್ಲುರ್ ರೆಹ್ಮಾನ್ ಹೇಳಿದ್ದಾರೆ.

75 ವರ್ಷಗಳ ಹಿಂದೆ

ಗುರುವಾರ, 19-04-1951

● ಕಲ್ಲಿದ್ದಿಲು ಗಣಿ ರಕ್ಷಣಾ ಶಾಸನ ತಿದ್ದುಪಡಿ ಮಸೂದೆ ಅಂಗೀಕಾರ

ದೆಹಲಿ, ಏ.18– ಕಲ್ಲಿದ್ದಿಲಿನ ಮೇಲಿನ ಸುಂಕವನ್ನು ಟನ್ ಒಂದಕ್ಕೆ ಮೂರು ಆಣೆಯಿಂದ ಒಂಭತ್ತು ಆಣೆಗೆ ಹೆಚ್ಚಿಸುವಂತಹ ಕಲ್ಲಿದ್ದಿಲು ರಕ್ಷಣಾ ಶಾಸನದ ತಿದ್ದುಪಡಿ ಮಸೂದೆಯೊಂದನ್ನು ಭಾರತ ಪಾರ್ಲಿಮೆಂಟಿನಲ್ಲಿ ಇಂದು ಅಂಗೀಕರಿಸಲಾಯಿತು.

ಈ ಬಗ್ಗೆ ನಡೆದ ಚರ್ಚೆ ಕಾಲದಲ್ಲಿ ಸದಸ್ಯರುಗಳು ಕಲ್ಲಿದ್ದಿಲು ಬೋರ್ಡಿನ ರಚನೆಯ ಬಗ್ಗೆ ಆಕ್ಷೇಪಣೆಯನ್ನೆತ್ತಿದ್ದಲ್ಲದೆ, ಗಣಿಗಳಲ್ಲಿ ಕಲ್ಲಿದ್ದಿಲು ದಾಸ್ತಾನಿನ ಬಗ್ಗೆ ಸೂಕ್ತ ವ್ಯವಸ್ಥೆ ಏರ್ಪಡಿಸಬೇಕೆಂದು ಒತ್ತಾಯ ಮಾಡಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

19 ಏಪ್ರಿಲ್ 2026 ಭಾನುವಾರ ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ದ್ವಿತೀಯ ಗಂ. 10-50 **ನಕ್ಷತ್ರ:** ಭರಣಿ ಗಂ. 7-10 ನಂತರ ಕೃತ್ತಿಕಾ ಗಂ 28-35 **ಯೋಗ:** ಆಯುಷ್ಮಾನ್ ಗಂ. 20-02 ಕರಣ: ಕೌಲವ ಗಂ 10-50 ಮೇಷ ಮಾಸದ 06 ನೇ ದಿನ. **ಮಳೆ ನಕ್ಷತ್ರ:** ಅಶ್ವಿನಿ 2 ನೇ ಪಾದ.
ರಾಹುಕಾಲ: ಸಾಯಂಕಾಲ 04-30 - 06-00 **ಸೂರ್ಯೋದಯ:** 06-19 **ಸೂರ್ಯಾಸ್ತ:** 06-40 **ಮುಸ್ಲಿಂ ದಿನಾಂಕ:** 30 ಶವ್ವಾಲ್ **ಅದೃಷ್ಟ ಸಂಖ್ಯೆ:** 9, 1

ಮೇಷ: ಪ್ರಭಾವಿ ವ್ಯಕ್ತಿಗಳ ಜೊತೆಯಲ್ಲಿನ ಓಡಾಟ ನಿಮಗೆ ಹೆಚ್ಚಿನ ಸ್ಥಾನಮಾನ ಜೊತೆಯಲ್ಲಿ ಸಮವಾದ ಆಯಾಸವನ್ನು ತಂದು ಕೊಡಲಿದೆ. ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ನಿಮ್ಮ ಗುಣ ಎಲ್ಲರ ಮೆಚ್ಚುಗೆಗೆ ಪಾತ್ರವಾಗುವುದು.

ವೃಷಭ: ನಿಮ್ಮ ಯಶಸ್ಸಿನ ಮೆಟ್ಟಿಲಿಗೆ ಶತ್ರು ಬಾಧೆ ಉಂಟಾಗಲಿದ್ದು ಇದರಿಂದಾಗಿ ಮಾನಸಿಕವಾಗಿ ಅಸಮತೋಲನದ ಅನುಭವ ಆಗಲಿದೆ. ಶ್ರಮಜೀವಿಗಳಿಗೆ ಉತ್ತಮ ಆದಾಯವಿರುವುದು. ಆರೋಗ್ಯದ ಬಗ್ಗೆ ಗಮನವಿರಲಿ.

ಮಿಥುನ: ಈ ದಿನ ನೀವು ಮಾಡುವ ಕೆಲಸಗಳಲ್ಲಿ ನಿಮ್ಮ ಅದೃಷ್ಟವನ್ನು ಪರೀಕ್ಷಿಸಿಕೊಳ್ಳುವಂತಾಗುವುದು. ಹಿರಿಯರ ಆಶೀರ್ವಾದವು ಎಲ್ಲಾ ಕಾರ್ಯಗಳಲ್ಲೂ ಜಯವನ್ನು ತಂದುಕೊಡಲಿದೆ. ಹಣದ ವಿಷಯದಲ್ಲಿ ಜಾಗೃತರಾಗಿರಿ.

ಕರ್ಕಾಟಕ: ವಿದ್ಯಾರ್ಥಿಗಳಿಗೆ ಅತಿ ಹೆಚ್ಚಿನ ಓದಿನಿಂದಾಗಿ ಬೇಸರಗೊಂಡು ಬದಲಾವಣೆಯನ್ನು ಬಯಸುವಂತಾಗಲಿದೆ. ಸೇವಕ ವರ್ಗದವರಿಂದ ಹೊಸದೊಂದು ಪಾಠ ಕಲಿಯುವ ಕಾಲ ಬರಲಿದೆ.

ಸಿಂಹ: ನಿಮ್ಮ ಮನಸ್ಸಿನಲ್ಲಿ ಯಾವುದೇ ರೀತಿಯ ಗೊಂದಲಗಳಿರುವುದಿಲ್ಲ. ಸ್ಪರ್ಧಾತ್ಮಕ ಭಾವನೆಯಲ್ಲಿರುವ ನಿಮಗೆ ಗೆಲುವಿನ ಸಿಹಿ ಸಿಗಲಿದೆ. ಇದು ನಿಮಗೇ ಅಚ್ಚರಿ ಮೂಡಿಸುತ್ತದೆ.

ಕನ್ಯಾ: ಮಾನಸಿಕ ಧೈರ್ಯ, ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಧ್ಯಾನ ಮಾರ್ಗದಲ್ಲಿ ಸಂಚರಿಸಿ. ಮನೆ ಕಟ್ಟುವ ಕೆಲಸಗಳು ನಿರ್ವಿಘ್ನವಾಗಿ ಮುಂದುವರೆಯುವ ಬಗ್ಗೆ ಮಹಾಗಣಪತಿಯಲ್ಲಿ ಪ್ರಾರ್ಥನೆ ಮಾಡಿ. ಸಂತಾನದ ಸುದ್ದಿ ಆನಂದ ತರಲಿದೆ.

ತುಲಾ: ಕೌಟುಂಬಿಕವಾದ ಗೌಪ್ಯತೆಯ ವಿಚಾರ ನಿಮ್ಮಿಂದ ಇನ್ನೊಬ್ಬರಿಗೆ ತಿಳಿಯದಂತೆ ಜಾಗ್ರತೆವಹಿಸಿ. ಹಳೆಯ ಸ್ನೇಹಿತರೊಂದಿಗೆ ಸಂಪರ್ಕದಲ್ಲಿರಿ. ಅವರುಗಳೇ ನಿಮ್ಮ ಕಷ್ಟಕಾಲದಲ್ಲಿ ಸಹಾಯಕ್ಕೆ ಬರುವ ವ್ಯಕ್ತಿಗಳಾಗಿರುತ್ತಾರೆ.

ವೃಶ್ಚಿಕ: ಸಾಲಗಾರರ ಕಿರುಕುಳ ಅಧಿಕವಾಗುವ ಲಕ್ಷಣಗಳಿವೆ. ಕೆಲವು ಆಕಸ್ಮಿಕ ಪ್ರಯಾಣವನ್ನು ಮಾಡಬೇಕಾಗಬಹುದು. ಬಹಳ ದಿನದ ನಂತರ ಕಾರ್ಯದೊತ್ತಡ ಸದ್ಯಕ್ಕೆ ಕಡಿಮೆಯಾಗಿ ಮನಸ್ಸು ನಿರಾಳವಾಗುವುದು.

ಧನು: ಇನ್ನೊಬ್ಬರಿಗೆ ಹಿತ ಬಯಸುವುದು ನಿಮ್ಮ ಏಳಿಗೆಗೆ ಪೂರಕ ಎಂದು ಮರೆಯದಿರಿ. ಕಿಂಚಿತ್ ಕಾರ್ಯಸಿದ್ಧಿಯಿಂದಲೂ ನೆಮ್ಮದಿ ಕಂಡು ಬರಲಿದೆ. ಖರ್ಚು ವೆಚ್ಚಗಳನ್ನು ಸಮತೋಲನದಲ್ಲಿ ಇರಿಸಿಕೊಳ್ಳುವ ಪ್ರಯತ್ನ ನಡೆಸಿ.

ಮಕರ: ಪ್ರಭಾವಿ ವ್ಯಕ್ತಿಗಳ ಸಂಪರ್ಕವು ನಿಮ್ಮ ವೈಯಕ್ತಿಕ ಬೆಳವಣಿಗೆಗೆ ಉಪಯೋಗವಾಗುವುದು. ದೂರ ಸಂಚಾರದಲ್ಲಿ ವಾಹನದ ಸಮಸ್ಯೆ ಎದುರಾಗಬಹುದು. ಮನೆಯಲ್ಲಿ ಶಾಂತ ವಾತಾವರಣವನ್ನು ಕಾಪಾಡಿಕೊಳ್ಳಿರಿ.

ಕುಂಭ: ವ್ಯಾಪಾರಸ್ಥರು ಉದ್ಯೋಗದಲ್ಲಿ ನಷ್ಟದಂತಹ ಸಮಸ್ಯೆ ಎದುರಾದರೂ ಸಹ ಧೃತಿಗೆಡುವ ಅಗತ್ಯವಿಲ್ಲ. ಅನಿವಾರ್ಯ ಕಾರಣದಿಂದ ಭೋಜನದ ಸಮಯ ವ್ಯತ್ಯಾಸವಾಗುವುದು. ಸಿಹಿ ತಿನಿಸು ತಯಾರಕರಿಗೆ ಬೇಡಿಕೆ ಹೆಚ್ಚಳ.

ಮೀನ: ಪ್ರಾಣಮಿತ್ರರ ಸಹಕಾರದಿಂದ ನಿಮ್ಮ ಜೀವನ ಮಟ್ಟದಲ್ಲಿ ಉನ್ನತ ಸ್ಥಾನವನ್ನು ಮುಟ್ಟುವುದಕ್ಕೆ ಸಹಾಯವಾಗುವುದು. ಗುರು ನಿಂದನೆಯಂತಹ ಪಾಪದ ಕೆಲಸ ಮಾಡಬೇಡಿ. ಕಳೆದುಕೊಂಡ ವಸ್ತು ಪುನಃ ನಿಮ್ಮ ಕೈ ಸೇರಲಿದೆ.

ಪದಬಂಧ 6378

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ನಾಡಿನಲ್ಲಿರುವ ಸಾಮಾನ್ಯ ವ್ಯಕ್ತಿ (3)
3.ಮುಂದೆ ಬರಲಿರುವ ಕಾಲ (3)
5.ಕುಶಲ ಎಂದು ಹೀಗೆ ಹೇಳಿ (2)
6.ಧಮಕಿ ಹಾಕುತ್ತಿರುವವನಲ್ಲಾ ಈ ನೀಚ ವ್ಯಕ್ತಿ! (3)
7.ವಿರಾಜಮಾನವಾಗಿರುವ ಸಾಮ್ರಾಟ (4)
8.ಸತಿ ಸಾವಿತ್ರಿಯ ಪತಿ (4)
10.ಕರಡಿಗಳ ಒಡೆಯನಿಲ್ಲಿ ತಿರುಗಿಹನಲ್ಲಾ? (4)
11.ಚಾವಡಿಯನ್ನೇರಿದಾಗ ಕಾಣಿಸಿದ ಪಿಸುಣ (4)
13.ಈ ತರ ಬಂದಿದ್ದಾನಿಲ್ಲಿ ಕಳ್ಳ! (3)
14.ಭಾರತದಲ್ಲಿನ ಒಜ್ಜೆ ಗೊತ್ತಾಯಿತೇ? (2)
15.ಆ ಗಸಗಸೆ ಚಲ್ಲಿದ್ದು ಈ ಹೆಬ್ಬಾಗಿಲ ಹತ್ತಿರ! (3)
17.ಭಾವನ ಗುಣ (3)

ಮೇಲಿಂದ ಕೆಳಕ್ಕೆ
1.ಖರ್ಚು ಕಳೆದು ಉಳಿದುದು (2)
2.ನಾಮ ಧರಿಸಿದವನ ಹೆಸರು (2)
4.ಪ್ರೇಮಿಗಳ ಅಗಲಿಕೆಯ ನೋವು ದೀರ್ಘವಾಗಿದೆ (3)
5.ಚಾರ ತಿಳಿಸಿರುವ ಸುಖದ ಸುದ್ದಿ (6)
6.ಆನೆಗೂ ಆಡಿಗೂ ಇರುವ ವ್ಯತ್ಯಾಸ (6)
7.ಚನ್ನಾಗಿ ಕಡೆಯಲ್ಪಟ್ಟದ್ದು (3)
9.ಶಾಶ್ವತವಿರದೆ ನಾಶವಾಗುವಂಥದ್ದು (3)
12.ಕೋತಿ ಇಲ್ಲಿಗೆ ಬಂದಿದೆ (3)
14.ಅಭಾವ ಕಾಲದಲ್ಲಿ ಆಗಮಿಸಿದ ಅಕ್ಕನ ಗಂಡ (2)
16.ನೀರು ಒಸರುವ ಜಾಗ (2)



6377ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಪರೂಪ 3.ಸನಾತನ
5.ವಿಪುಲ 7.ದಟ್ಟಿ
8.ಮಳೆ 9.ಗುರಿ
10.ಉತ್ತರಾಯಣ 12.ಭಾಷೆ
13.ಶವ 14.ಜಾಗ
15.ಮೃತ್ತಿಕೆ 17.ಅಂತರಂಗ
18.ಸನ್ನಿಧಾನ

ಮೇಲಿಂದ ಕೆಳಕ್ಕೆ:
1.ಅಪಧಮನಿ 2.ಪಲ್ಲವಿ
3.ಸಕಾಲ 4.ತಲೋದರಿ
6.ಪುನರಾವೃತ್ತಿ 9.ಗುಣ 10.ಉಷೆ
11.ಅವಲೋಕನ 12.ಭಾಗವತ
15.ಮೃದಂಗ 16.ಕೆಲಸ

ಸುಡೊಕು 6761

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

			4		3		6	
	9							5
			5		8	7	2	
		9		3				7
	3				6		5	
8		6		4		2		3
		5		2				4
3						5		2
	8	2		5			7	

6760 ಸುಡೊಕು

5	7	2	9	3	4	1	8	6
4	6	9	8	5	1	7	3	2
3	1	8	7	6	2	9	5	4
7	2	3	5	8	6	4	9	1
8	4	1	3	2	9	5	6	7
6	9	5	1	4	7	3	2	8
1	8	7	6	9	5	2	4	3
2	5	6	4	1	3	8	7	9
9	3	4	2	7	8	6	1	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್: ಯಾರಿಗೆ ಮುಳುವು?

• ಬಿ.ಎಸ್. ಅರುಣ್

ವಿಶ್ಲೇಷಣೆ

ಪಶ್ಚಿಮ ಬಂಗಾಳದಲ್ಲಿ ಭಾರಿ ವಿವಾದ ಉಂಟು ಮಾಡಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಏಪ್ರಿಲ್ 23 ಮತ್ತು 29ರಂದು ನಡೆಯಲಿರುವ ಚುನಾವಣೆಯಲ್ಲಿ ಯಾರಿಗೆ ಮುಳುವಾಗುತ್ತದೆ? ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರಿಗೋ ಅಥವಾ ಬಿಜೆಪಿಗೋ?

ಎಸ್‌ಐಆರ್‌ನಿಂದ ಲಕ್ಷಾಂತರ ಜನರನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗಿರುವ ಚುನಾವಣಾ ಆಯೋಗ ನಡೆಸುತ್ತಿರುವ ಈ ಪ್ರಯೋಗ ಗಂಭೀರ ರೂಪದಲ್ಲಿ ಬಂಗಾಳದ ಮತದಾನದ ಮೇಲೆ ಪರಿಣಾಮ ಬೀರಲಿದೆ ಎನ್ನಲಾಗಿದೆ. ಈ ಕಾರಣದಿಂದ, ರಾಜ್ಯದಲ್ಲಿರುವ ಅನೇಕ ಜ್ವಲಂತ ಸಮಸ್ಯೆಗಳಾಗಲಿ, ಮಮತಾರ ತೃಣಮೂಲ ಕಾಂಗ್ರೆಸ್ ಮೇಲೆ ಇದ್ದ ಎನ್ನಲಾದ ಆಡಳಿತ ವಿರೋಧಿ ಅಲೆಯಾಗಲೀ, ಇವೆಲ್ಲವೂ ಹಿಂದೆ ಸರಿದಿದ್ದು ಎಸ್‌ಐಆರ್‌ನಿಂದ ಆಗಿರುವ ದುಷ್ಪರಿಣಾಮಗಳು ಮಾತ್ರ ಮುನ್ನೆಲೆಗೆ ಬಂದಿವೆ.

ಆಯೋಗದ ಪ್ರಕಾರ ಎಸ್‌ಐಆರ್ ಉದ್ದೇಶ ನೈಜ ಮತದಾರರನ್ನು ಮಾತ್ರ ಪಟ್ಟಿಯಲ್ಲಿ ಉಳಿಸಿ ಗೈರು ಹಾಜರಾದವರು, ಸ್ಥಳಾಂತರಗೊಂಡವರು, ನಕಲಿ ದಾಖಲೆ ಇರುವ ಮತ್ತು ನಿಧನ ಹೊಂದಿದ ಮತದಾರರನ್ನು ಪಟ್ಟಿಯಿಂದ ಕೈಬಿಡುವುದಾಗಿದೆ.

ಆದರೆ, ಮಮತಾರವರು 'ಎಸ್‌ಐಆರ್ ಉದ್ದೇಶ ಮುಸ್ಲಿಮರನ್ನು ಪಟ್ಟಿಯಿಂದ ಹೊರಗಿಡುವಂತೆ ಮಾಡುವುದು' ಎಂದು ಆರೋಪಿಸುತ್ತಾ ಬಂದಿದ್ದಾರೆ. ಈ ಪ್ರಕ್ರಿಯೆಯನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿಯೂ ಇದ್ದು, ಪ್ರಾರಂಭವಾದಾಗಿನಿಂದ ಇಂದಿನವರೆಗೂ ನ್ಯಾಯಾಲಯ ಮಧ್ಯ ಪ್ರವೇಶಿಸಿ ಅನೇಕ ಆದೇಶಗಳನ್ನೂ ತೀರ್ಪುಗಳನ್ನು ಕೊಡುತ್ತಾ ಬಂದಿದೆ. ಒಟ್ಟಿನಲ್ಲಿ ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ಅವ್ಯವಸ್ಥೆಯ ಆಗರವಾಗಿದೆ. ಇದು ಎಷ್ಟರ ಮಟ್ಟಿಗೆಂದರೆ, ಬಂಗಾಳದಲ್ಲಿ ಚುನಾವಣೆಯನ್ನು ಮುಂದೂಡಬೇಕಾದೀತೇನೋ ಎನ್ನುವಂತಾಗಿತ್ತು.

ಈ ರಾಜ್ಯದಲ್ಲಿ ಬಾಂಗ್ಲಾದೇಶದಿಂದ ಬಂದು ಅಕ್ರಮ ನುಸುಳುಕೋರರು ಎನ್ನಿಸಿಕೊಂಡಿರುವ ಮುಸ್ಲಿಮರನ್ನು ಹೆಚ್ಚಿನ ಸಂಖ್ಯೆಯಲ್ಲಿ ಮತದಾರರ ಪಟ್ಟಿಯಿಂದ ತೆಗೆಯುವುದರಿಂದ ಅದು ಬಿಜೆಪಿಗೆ ವರದಾನ ಪರಿಣಮಿಸುತ್ತದೆ ಎಂದು ಹೇಳಲಾಗುತ್ತಿತ್ತು. ಆಗಬಹುದು ಕೂಡ. ಆದರೆ, ಈ ಪ್ರಯೋಗದಿಂದ ಲಕ್ಷಾಂತರ ಹಿಂದೂಗಳೂ ಪಟ್ಟಿಯಿಂದ ಹೊರಗುಳಿದಿದ್ದಾರೆ. ಇದಕ್ಕೆ ಪಟ್ಟಿಯಿಂದ ತೆಗೆದುಹಾಕಲಾದ ಹಿಂದೂಗಳು ಕೇಸರಿ ಪಕ್ಷವನ್ನು ಹೊಣೆಯಾಗಿಸುತ್ತಿದ್ದಾರೆ. ಇದು ಬಿಜೆಪಿಗೆ ಹಿನ್ನಡೆಯಾಗುತ್ತದೆ ಎಂದೂ ಹೇಳಲಾಗುತ್ತಿದೆ. ಎಸ್‌ಐಆರ್ ಟಿಎಂಸಿಗೆ ಭಾರಿ ಹೊಡೆತ ನೀಡುವ ಬದಲಾಗಿ ಮಮತಾ ವಿರುದ್ಧ ಇರುವ ಜನರ ಅಸಮಾಧಾನದ ಶಮನಕ್ಕೆ ಕಾರಣ

ವಾಗಬಲ್ಲದು. ಎಸ್‌ಐಆರ್ ಪ್ರಕ್ರಿಯೆ ಪ್ರಾರಂಭವಾದಾಗಿನಿಂದಲೂ ಚುನಾವಣಾ ಆಯೋಗ ಹಾಗೂ ಬಿಜೆಪಿಯ ಮೇಲೆ ಭಾರಿ ಮಟ್ಟದ ಟೀಕಾಪ್ರಹಾರದಲ್ಲಿರುವ ಮಮತಾ ಸುಪ್ರೀಂ ಕೋರ್ಟ್‌ನಲ್ಲಿ ಖುದ್ದಾಗಿ ಈ ವಿಷಯದಲ್ಲಿ ತಮ್ಮ ವಾದವನ್ನೂ ಮಂಡಿಸಿದ್ದರು.

2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಪರ ಇದ್ದ ಮತುವಾ ಸಮುದಾಯ ಈ ಪ್ರಕ್ರಿಯೆಯಿಂದ ಬಹುಮಟ್ಟಿಗೆ ತೊಂದರೆಗೆ ಒಳಗಾಗಿದೆ ಎನ್ನಲಾಗಿದೆ. ಹಿಂದೂ ಸಮುದಾಯದ ಮತುವಾ ಬಾಂಗ್ಲಾದೇಶದಿಂದ 18ನೇ ಶತಮಾನದಲ್ಲಿ ಬಂದು ಬಂಗಾಳದಲ್ಲಿ ನೆಲೆಸಿರುವ, ಆರ್ಥಿಕವಾಗಿ ಅಷ್ಟೇನೂ ಸಬಲರಲ್ಲದ ಗುರುತಿಸುವಿಕೆ ಇರುವ ದಲಿತ ಪಂಗಡ. ರಾಜ್ಯದ ಸುಮಾರು 11 ಕೋಟಿ ಜನಸಂಖ್ಯೆಯ ಪೈಕಿ ಶೇ 17ರಷ್ಟಿರುವ ಇವರು ಹೆಚ್ಚಾಗಿ ಬಾಂಗ್ಲಾದೇಶಕ್ಕೆ ಹೊಂದಿಕೊಂಡಿರುವ ಉತ್ತರ 24 ಪರಗಣ, ನಾಡಿಯಾ, ಮುರ್ಷಿದಾಬಾದ್, ಮಾಲ್ಡ ಜಿಲ್ಲೆಗಳಲ್ಲಿ ನೆಲೆಸಿರುತ್ತಾರೆ. ರಾಜ್ಯದ ಸುಮಾರು 40-45 ಸೀಟ್‌ಗಳಲ್ಲಿ ಮತುವಾ ಮತದಾರರು ನಿರ್ಣಾಯಕರಾಗುತ್ತಾರೆ ಎನ್ನಲಾಗಿದೆ. ಹಾಗಾಗಿ ಮಮತಾ ಹಾಗೂ ಬಿಜೆಪಿಯಿಂದ ಇವರ ಓಲೈಕೆಗಾಗಿ ಪೈಪೋಟಿ.

ಎಸ್‌ಐಆರ್‌ನಿಂದ ಮತದಾರರ ಪಟ್ಟಿಯಿಂದ ಹೊರಗುಳಿದವರಲ್ಲಿ ಮುಸ್ಲಿಮರೇ ಹೆಚ್ಚಾಗಿರುವುದರಿಂದ ಅವರಲ್ಲಿ ತಮ್ಮ ಭವಿಷ್ಯದ ಬಗ್ಗೆ ಭಯ ಜಾಸ್ತಿಯಾದಂತಿದೆ. ರಾಜ್ಯದ ಶೇ 27ರಷ್ಟು ಇರುವ ಇವರು ಮಮತಾ ಕಟ್ಟಾ ಬೆಂಬಲಿಗರು. ಅನೇಕ ಸ್ಥಾನಗಳಲ್ಲಿ ಮುಸ್ಲಿಮರೇ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಈ ಸಮುದಾಯ ಕೂಡ ಬಾಂಗ್ಲಾದೇಶದ ಗಡಿಭಾಗದ ಜಿಲ್ಲೆಗಳಲ್ಲಿ ಹೆಚ್ಚು. ಈ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಮರನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಭಾರತ ಬಾಂಗ್ಲಾದೇಶದ ಜೊತೆ 4,096 ಕಿ.ಮೀ ಗಡಿಯನ್ನು ಹಂಚಿಕೊಂಡಿದೆ. ಇದರಲ್ಲಿ ಹೆಚ್ಚಿನ ಭಾಗ ಬಂಗಾಳವನ್ನು ಹೊಂದಿದೆ. ಪಶ್ಚಿಮ ಬಂಗಾಳ ಭಾರತದಲ್ಲಿ ಅತಿ ಹೆಚ್ಚು ಮುಸ್ಲಿಂ ಜನಸಂಖ್ಯೆಯನ್ನು ಹೊಂದಿರುವ ಎರಡನೇ ರಾಜ್ಯವಾಗಿದೆ. 2011ನೇ ಜನಗಣತಿಯ ಪ್ರಕಾರ, ದೇಶದ ಸುಮಾರು 17.2 ಕೋಟಿ ಮುಸ್ಲಿಮರ ಪೈಕಿ ಶೇ. 14 ಈ ರಾಜ್ಯದಲ್ಲಿದ್ದಾರೆ. ಬೇರೆ ರಾಜ್ಯಗಳಲ್ಲಿರುವಂತೆ ಜಾತಿ ಬಂಗಾಳದಲ್ಲಿ ಪ್ರಮುಖ ಅಲ್ಲ.

ಬಂಗಾಳದ ಜನರಿಗೆ ಅದರಲ್ಲೂ ವಿಶೇಷವಾಗಿ ಮಹಿಳೆಯರಿಗೆ ಅನೇಕ ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿ ಮಾಡಿರುವ ಟಿಎಂಸಿ ಸರಕಾರ ಅಧಿಕಾರದಲ್ಲಿ 15 ವರ್ಷ ಪೂರೈಸಿ 4ನೇ ಬಾರಿ ಗದ್ದುಗೆಗೇರುವ ವಿಶ್ವಾಸದಲ್ಲಿದೆ. ಮಮತಾರ ಯೋಜನೆಗಳಾದ ಲಕ್ಷ್ಮೀರ್ ಭಂಡಾರ್, ಕನ್ಯಾಶ್ರೀ ಮತ್ತು ಸ್ವಾಸ್ಥ್ಯ ಸಾಥಿ - ಇವುಗಳು ವಿಸ್ತಾರವಾದ ಫಲಾನುಭವಿಗಳನ್ನು ರಾಜ್ಯಾದ್ಯಂತ ಹೊಂದಿವೆ ಮತ್ತು ಇವರಲ್ಲಿ ಹೆಚ್ಚಿನವರು ಮಮತಾ ಬೆಂಬಲಿಗರು. ಇದರ ಜೊತೆಗೆ ಮಮತಾರ ಜನಪ್ರಿಯತೆ, ಬಲವಾದ, ಯಾರಿಗೂ ಅಂಜದ ನಾಯಕತ್ವ ಅವರನ್ನು ಜನರ ಹತ್ತಿರಕ್ಕೆ ಕೊಂಡೊಯ್ದಿದೆ. ಆದರೆ, ಉದ್ಯೋಗ ಮತ್ತು ಅಭಿವೃದ್ಧಿ ಅಷ್ಟಾಗಿ ಕಾಣದ ಈ ರಾಜ್ಯದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ, ಮಹಿಳಾ ಸುರಕ್ಷತೆ ಮುಂತಾದ ವಿಷಯಗಳು ಟಿಎಂಸಿಗೆ ಹಿನ್ನಡೆಯುಂಟು ಮಾಡಬಹುದು. ಪಕ್ಷಕ್ಕೆ ಸಮಾಧಾನಕರ ವಿಷಯವೆಂದರೆ ಸರಕಾರದ ಬಗ್ಗೆ ಅಸಮಾಧಾನ ವ್ಯಾಪಕವಾಗಿ ಆಡಳಿತ ವಿರೋಧಿ ಅಲೆಯಾಗಿ ಮಾರ್ಪಟ್ಟಿಲ್ಲದಿರುವುದು.

2016ರಿಂದ ಬಂಗಾಳವನ್ನು ವಶಪಡಿಸಿಕೊಳ್ಳಲು ಶತಾಯ ಗತಾಯ ಪ್ರಯತ್ನಿಸುತ್ತಿರುವ ಬಿಜೆಪಿ ಈ ಬಾರಿಯೂ ಮಮತಾರ ಭದ್ರಕೋಟೆ ಒಡೆಯಲು ಯತ್ನ ಮುಂದುವರಿಸಿದೆ. ತನ್ನ ಪ್ರಭಾವವಿರುವ ಬಂಗಾಳದ ಉತ್ತರ ಭಾಗದಲ್ಲಿ ಪಕ್ಷ ಉತ್ತಮ ಪ್ರದರ್ಶನ ನೀಡುವ ಸಾಧ್ಯತೆ ಇದೆ. 2021ರ ಅಸೆಂಬ್ಲಿ ಚುನಾವಣೆಯಲ್ಲಿ ಇಲ್ಲಿನ 54 ಸ್ಥಾನಗಳಲ್ಲಿ ಬಿಜೆಪಿ 30ರಲ್ಲಿ ಜಯಗಳಿಸಿತ್ತು. ದಕ್ಷಿಣ ಬಂಗಾಳದ 242 ಕ್ಷೇತ್ರಗಳ ಅನೇಕ ಸ್ಥಾನಗಳಲ್ಲಿ ಕೂಡ ಬಿಜೆಪಿ ಉತ್ತಮ ಸ್ಥಿತಿಯಲ್ಲಿದೆ. ಆದರೆ ಇಲ್ಲಿ ಟಿಎಂಸಿಯದೇ ಯಾವಾಗಲೂ ಮೇಲುಗೈ. ಅನೇಕ ವರ್ಷಗಳಿಂದ ಪಕ್ಷದಲ್ಲಿನ ಆಂತರಿಕ ಕಲಹದಿಂದ ನಲುಗಿರುವ ಬಿಜೆಪಿಯ ದೊಡ್ಡ ಮೈನಸ್ ಪಾಯಿಂಟ್ ಎಂದರೆ ರಾಜ್ಯದಲ್ಲಿ ಜನಪ್ರಿಯ ನಾಯಕ ಇಲ್ಲದಿರುವುದು. ಒಂದು ರೀತಿಯಲ್ಲಿ ಬಿಜೆಪಿಗೆ, ಮಮತಾ ಅನೇಕ ಬಾರಿ ಹೇಳಿರುವ 'ಬಿಜೆಪಿ ಹೊರಗಿನ (ಔಟ್ ಸೈಡರ್) ಪಕ್ಷ, ಅದಕ್ಕೆ ಬಂಗಾಳಿ ಭಾಷೆ, ಬಂಗಾಳಿ ಸಂಸ್ಕೃತಿ ಯಾವುದೂ ಗೊತ್ತಿಲ್ಲ' ಹೇಳಿಕೆಯನ್ನು ತೊಡೆದುಹಾಕಲು ಕೇಸರಿ ಪಕ್ಷಕ್ಕೆ ಇದುವರೆಗೂ ಸಾಧ್ಯವಾಗಿಲ್ಲ.

ಕಾಂಗ್ರೆಸ್ ಮತ್ತು ಎಡ ಪಕ್ಷಗಳೂ ಕಣದಲ್ಲಿದ್ದು ಕೆಲವೊಂದು ಸ್ಥಾನಗಳಲ್ಲಿ ಮಾತ್ರ ಸ್ಪರ್ಧೆಯಲ್ಲಿವೆ. ಅಸದುದ್ದೀನ್ ಓವೈಸಿಯವರ ಎಐಎಂಐಎಂ ಪಕ್ಷ ಹಿಂದೆ ಮಮತಾ ಸರಕಾರದಲ್ಲಿ ಮಂತ್ರಿಯಾಗಿದ್ದ ಹುಮಾಯೂನ್ ಕಬೀರ್ ಅವರ ಪಕ್ಷದ ಜೊತೆ ಮೈತ್ರಿ ಮಾಡಿಕೊಂಡಿದ್ದು ಇದು ಟಿಎಂಸಿ ಮುಸ್ಲಿಂ ಮತಗಳನ್ನು ಕೆಲವು ಕ್ಷೇತ್ರಗಳಲ್ಲಿ ಕಸಿಯುವ ಸಾಧ್ಯತೆಯೂ ಇದೆ.

2021ರ ವಿಧಾನಸಭಾ ಕದನದಲ್ಲಿ 296 ಸೀಟ್‌ಗಳ ಪೈಕಿ ಟಿಎಂಸಿ 215ರಲ್ಲಿ ಗೆದ್ದು ಜಯಭೇರಿ ಹೊಡೆದಿತ್ತು. ಬಿಜೆಪಿ 77 ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು. ಮತ ಹಂಚಿಕೆಯಲ್ಲಿ ಟಿಎಂಸಿ ಶೇ. 48.02 ಮತ್ತು ಬಿಜೆಪಿ ಶೇ. 38.15 ಮತಗಳಿಸಿದ್ದವು. 2024ರ ಲೋಕಸಭಾ ಚುನಾವಣೆಯಲ್ಲಿ ಟಿಎಂಸಿ 29, ಬಿಜೆಪಿ 12 ಮತ್ತು ಕಾಂಗ್ರೆಸ್ 1 ಸೀಟ್ ಗಳಿಸಿದ್ದವು. ಬಿಜೆಪಿಗೆ 2021ರ ಗಳಿಕೆಯಾದ 77 ಸೀಟ್‌ನಿಂದ ಈಗ ಬಹುಮತಕ್ಕೆ ಬೇಕಾದ 149 ಸೀಟ್‌ಗಳನ್ನು ಪಡೆಯುವುದು ಸುಲಭದ ಮಾತೇನಲ್ಲ.

ಲೇಖಕ: ಪತ್ರಕರ್ತ

ಜನ ಗಣತಿಗೆ ಆರಂಭದಲ್ಲೇ ವಿಘ್ನ

ಆ್ಯಪ್, ಸರ್ವರ್ ಸೇರಿ ತಾಂತ್ರಿಕ ಸಮಸ್ಯೆ; ಗಣತಿದಾರರು ಹೈರಾಣು

• ಮೈಲಾರಿ ಲಿಂಗಪ್ಪ

ತುಮಕೂರು: ಜನಗಣತಿ ಕಾರ್ಯಕ್ಕೆ ಆರಂಭದಲ್ಲಿಯೇ ವಿಘ್ನ ಎದುರಾಗಿದ್ದು ಮೊಬೈಲ್ ಫೋನ್‌ನಲ್ಲಿ 'ಹೌಸ್ ಲಿಸ್ಟಿಂಗ್ ಆಪರೇಟಿಂಗ್ ಆ್ಯಪ್' (ಎಚ್‌ಎಲ್‌ಒ) ಇನ್‌ಸ್ಟಾಲ್ ಆಗದೆ ಗಣತಿದಾರರು ಪರದಾಡುತ್ತಿದ್ದಾರೆ.

ಏ.16ರಿಂದ ಮನೆ ಗಣತಿ ಕಾರ್ಯ ಆರಂಭವಾಗಿದೆ. ಗಣತಿಗೆ ನೇಮಿಸಿದ ಶಿಕ್ಷಕರಲ್ಲಿ ಹಲವರು ಹಳೆಯ ಆವೃತ್ತಿಯ ಮೊಬೈಲ್ ಬಳಸುತ್ತಿದ್ದಾರೆ. ಇದರಲ್ಲಿ ಎಚ್‌ಎಲ್‌ಒ ಆ್ಯಪ್ ತೆರೆದುಕೊಳ್ಳುತ್ತಿಲ್ಲ. ಕನಿಷ್ಠ ಆಂಡ್ರಾಯ್ಡ್ 10ರ ವರ್ಷನ್ (ಆವೃತ್ತಿ) ಇದ್ದರೆ ಮಾತ್ರ ಆ್ಯಪ್ ಡೌನ್‌ಲೋಡ್ ಆಗುತ್ತದೆ.

ಈ ಮಾಹಿತಿ ಇಲ್ಲದ, ಹೊಸ ಮಾದರಿಯ ಮೊಬೈಲ್ ಹೊಂದಿರದ ಸಾಕಷ್ಟು ಶಿಕ್ಷಕರು ಸಮೀಕ್ಷೆಗೆ ಮುಂದಾಗಿಲ್ಲ. ಗಣತಿಗೆ ನಿಯೋಜನೆಗೊಂಡ ಶಿಕ್ಷಕರು ಹಲವೆಡೆ ಸಮೀಕ್ಷೆಯನ್ನೇ ಆರಂಭಿಸಿಲ್ಲ. ತಾಂತ್ರಿಕ ಸಮಸ್ಯೆ ಪರಿಹರಿಸಿಕೊಳ್ಳಲು ಹೆಣಗಾಡುತ್ತಿದ್ದಾರೆ.

ಜನ ಗಣತಿ ಸಮೀಕ್ಷೆಗಾಗಿ ಹಲವರು ಸಂಬಂಧಿಕರು, ಸ್ನೇಹಿತರು, ಪತಿಯ ಮೊಬೈಲ್ ಪಡೆದಿದ್ದರೆ, ಆ್ಯಪ್ ಡೌನ್‌ಲೋಡ್ ಆಗದವರು ₹15 ಸಾವಿರದಿಂದ ₹20 ಸಾವಿರ ಕೊಟ್ಟು ಹೊಸ ಮೊಬೈಲ್ ಖರೀದಿಸುತ್ತಿದ್ದಾರೆ. ಆದರೆ ಸಮೀಕ್ಷೆ ಕೆಲಸ ಮುಗಿಸಿದರೆ ಅವರಿಗೆ ಸಿಗುವುದು ₹25 ಸಾವಿರ!

'ಸರ್ಕಾರ ಸಮೀಕ್ಷೆಗೆ ಪೂರಕವಾಗಿ ಅಗತ್ಯ ಪರಿಕರ ವಿತರಿಸಿಲ್ಲ. ಈ ಕೆಲಸ ಹೊರೆಯಾಗಿ ಪರಿಣಮಿಸಿದೆ. ಹಿರಿಯ ಶಿಕ್ಷಕರಿಗೆ ಸಮೀಕ್ಷೆ ಪೂರ್ಣಗೊಳಿಸಲು ಆಗುತ್ತಿಲ್ಲ. ಸುಧಾರಿತ ತಂತ್ರಜ್ಞಾನ ಬಳಸಲು ಬಾರದವರು ಪೇಚಿಗೆ ಸಿಲುಕುತ್ತಿದ್ದಾರೆ' ಎಂದು ಶಿಕ್ಷಕರೊಬ್ಬರು ಬೇಸರ ವ್ಯಕ್ತಪಡಿಸಿದರು.

ಆ್ಯಪ್ ಸಮಸ್ಯೆ ಒಂದೆಡೆಯಾದರೆ ಮತ್ತೊಂದು ಕಡೆ ಲಾಗಿನ್ ತೊಂದರೆಯಾಗುತ್ತಿದೆ. ಸಮೀಕ್ಷೆ ಆರಂಭದಿಂದ ಇದೇ ರೀತಿಯಾಗುತ್ತಿದೆ. ತರಬೇತಿಗೆ ಹಾಜರಾಗಿ, ಎಲ್ಲ ಮಾಹಿತಿ ಪಡೆದು ಲಾಗಿನ್ ಕುರಿತು ಪರಿಶೀಲನೆ ನಡೆಸಿ, ಗಣತಿಗೆ ಹೋದರೆ ಸರ್ವರ್ ಸಮಸ್ಯೆ ಕಾಡುತ್ತಿದೆ. ಲಾಗಿನ್ ಆಗಲು ಗಂಟೆಗಟ್ಟಲೇ ಕಾಯುತ್ತಾ ಕಳಿತುಕೊಳ್ಳಬೇಕಾದ ಸ್ಥಿತಿ ಇದೆ. ಕೆಲವರಿಗೆ ಲಾಗಿನ್ ಆದ ನಂತರ ಮೊಬೈಲ್‌ಗೆ ಒಟಿಪಿ ಬರುತ್ತಿಲ್ಲ. ಇಂತಹ ಒಂದಿಲ್ಲೊಂದು ಸಮಸ್ಯೆ ಕಾಡಲಾರಂಭಿಸಿದೆ.

ಸಮೀಕ್ಷೆಗೆ ತೆರಳಿದಾಗ ವಾಸ್ತವದ ಅರಿವು

ಅಪ್‌ಡೇಟ್ ಆವೃತ್ತಿಯ ಮೊಬೈಲ್ ಬಳಕೆ ಕುರಿತು ತರಬೇತಿ ಕಾರ್ಯಾಗಾರದಲ್ಲಿ ಮಾಹಿತಿ ನೀಡಲಾಗಿತ್ತು. ಹಿರಿಯ ಶಿಕ್ಷಕರಿಗೆ, ತರಬೇತಿಗೆ ಗೈರಾದವರಿಗೆ ಇದು ತಿಳಿದಿಲ್ಲ. ಸಮೀಕ್ಷೆಗೆ ತೆರಳಿದಾಗ ವಾಸ್ತವ ಅರಿವಾಗಿದೆ. ಪ್ರತಿ ಸಮೀಕ್ಷೆ ಸಮಯದಲ್ಲಿ ಸರ್ವರ್, ಲಾಗಿನ್ ಸಮಸ್ಯೆ ಸಾಮಾನ್ಯವಾಗಿದೆ ಎಂದು ತುಮಕೂರು ತಾಲ್ಲೂಕಿನ ಶಿಕ್ಷಕರೊಬ್ಬರು ಪ್ರತಿಕ್ರಿಯಿಸಿದರು.

ಬಾರದ ಗಣತಿ ಕಿಟ್: ಪರದಾಟ

ಮುಳಗುಂದ (ಗದಗ ಜಿಲ್ಲೆ): ಮೊದಲ ಹಂತದ ಮನೆ ಪಟ್ಟಿ ಮತ್ತು ವಸತಿ ಗಣತಿ ಪ್ರಕ್ರಿಯೆಗೆ ಪಟ್ಟಣದಲ್ಲಿ ಗಣತಿಗೆ ಬೇಕಾದ ಕಿಟ್ ಲಭ್ಯವಾಗದೇ ಶಿಕ್ಷಕರು ಅಸಮಾಧಾನಗೊಂಡಿದ್ದಾರೆ.

'ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಒಟ್ಟು 32 ಮಂದಿ ಗಣತಿ ಸಿಬ್ಬಂದಿ, ಐವರು ಕಾಯ್ದಿರಿಸಿದ ಸಿಬ್ಬಂದಿ, ಆರು ಮಂದಿ ಗಣತಿ ಮೇಲ್ವಿಚಾರಕರ ನೇಮಕವಾಗಿದೆ. ಆದರೆ, ಮನೆ ಪಟ್ಟಿಗೆ ಬೇಕಾದ ಚಕ್‌ಬಂದಿ ನಕ್ಷೆ, ಮಾರ್ಕರ್ ಪೆನ್, ಟೋಪಿ, ಬ್ಯಾಗ್ ನೀಡಿಲ್ಲ' ಎಂದು ಕೆಲ ಶಿಕ್ಷಕರು ತಿಳಿಸಿದರು.

'ಕೆಲ ಶಿಕ್ಷಕರಿಗೆ 200 ಮನೆ, ಕೆಲವರಿಗೆ 250 ಮನೆ, ಇನ್ನೂ ಕೆಲವರಿಗೆ 50ರಿಂದ 60 ಮನೆಗಳನ್ನು ಗಣತಿಗೆ ಹಂಚಿಕೆ ಮಾಡಲಾಗಿದೆ. ಸಕಾಲಕ್ಕೆ ಕಿಟ್, ಮಾಹಿತಿನೀಡದೆ ನಿರ್ಲಕ್ಷಿಸುತ್ತಾರೆ. ಗಣತಿ ಕಾರ್ಯದಲ್ಲಿ ಒಂದು ದಿನ ವಿಳಂಬವಾದರೂ ಮೇಲಧಿಕಾರಿಗಳು ಒತ್ತಡ ಹೇರುತ್ತಾರೆ' ಎಂದೂ ಆರೋಪಿಸಿದರು.

'ಎಲ್ಲರಿಗೂ ಶೀಘ್ರದಲ್ಲೇ ಕಿಟ್ ವಿತರಣೆ'

'ಪಟ್ಟಣ ಪಂಚಾಯಿತಿಗೆ ಒಟ್ಟು 11 ಗಣತಿ ಕಿಟ್‌ಗಳು ಬಂದಿದ್ದು, ಮಾರ್ಕರ್ ಪೆನ್ನು, ಕಾರ್ಡ್ ಶೀಟ್, ಪೇಪರ್, ಪೆನ್, ಸೀಸ, ರಬ್ಬರ, ಬ್ಯಾಗ್ ಒಳಗೊಂಡಿದೆ. ಅವುಗಳನ್ನು ಈಗಾಗಲೇ ಆರು ಮಂದಿ ಮೇಲ್ವಿಚಾರಕರು ಹಾಗೂ ಐವರು ಗಣತಿದಾರರಿಗೆ ನೀಡಲಾಗಿದೆ. ಉಳಿದ ಗಣತಿದಾರರಿಗೆ ಶೀಘ್ರದಲ್ಲೇ ವಿತರಿಸಲಾಗುವುದು' ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಮಂಜುನಾಥ ಗುಳೇದ ತಿಳಿಸಿದರು.

ಕೊಲೆ ಪ್ರಕರಣ ಬಂಧಿತರ ಸಂಖ್ಯೆ 12ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಧಾರವಾಡ: ಕಾಂಗ್ರೆಸ್ ಯುವ ಘಟಕದ ಮುಖಂಡ ಫೈರೋಜ್ ಖಾನ್ ಕೊಲೆ ಪ್ರಕರಣದಲ್ಲಿ ಮತ್ತೆ ಮೂವರ ಬಂಧನವಾಗಿದೆ. ಬಂಧಿತರ ಸಂಖ್ಯೆ 12ಕ್ಕೆ ಏರಿಕೆಯಾಗಿದೆ.

'ಈಗಾಗಲೇ ಬಂಧಿಸಲಾದ ಒಂಬತ್ತು ಜನರನ್ನು ಪೊಲೀಸ್ ಕಸ್ಟಡಿಗೆ ತೆಗೆದುಕೊಳ್ಳಲಾಗಿದೆ. ಸದ್ಯಕ್ಕೆ ಅವರ ಹೆಸರು ಮತ್ತು ವಿವರ ಬಹಿರಂಗಪಡಿಸಲು ಆಗದು' ಎಂದು ಹುಬ್ಬಳ್ಳಿ ಧಾರವಾಡ ಪೊಲೀಸ್ ಕಮಿಷನರ್ ಶಶಿಕುಮಾರ್ ತಿಳಿಸಿದರು.

'ಫೈರೋಜ್ ಮತ್ತು ಪ್ರಮುಖ ಆರೋಪಿ ನಡುವಿನ ವೈಯುಕ್ತಿಕ ದ್ವೇಷ, ರಾಜಕೀಯ ಬೆಳವಣಿಗೆಯಿಂದ ಕೃತ್ಯ ನಡೆದಿದೆ. ಪ್ರಕರಣದ ಇನ್ನಷ್ಟು ಕೆಲ ಆರೋಪಿಗಳು ತಲೆ ಮರೆಸಿಕೊಂಡಿದ್ದಾರೆ. ಪತ್ತೆಗಾಗಿ ಶೋಧ ಮುಂದುವರಿದಿದೆ' ಎಂದರು.

ಒಂಟಿ ಕೋರೆ ಕಾಡಾನೆ ಸೆರೆ

ಹಾಸನ: ಕಾರ್ಯಾಚರಣೆಗೆ ಮೊದಲ ಬಾರಿಗೆ ಶ್ವಾನ ಬಳಕೆ

ಪ್ರಜಾವಾಣಿ ವಾರ್ತೆ

ಬೇಲೂರು: ತಾಲ್ಲೂಕಿನ ಕಾನಳ್ಳಿ ಅರಣ್ಯ ಪ್ರದೇಶದಲ್ಲಿದ್ದ ಒಂಟಿ ಕೋರೆ ಕಾಡಾನೆಯನ್ನು ಶನಿವಾರ ಸೆರೆ ಹಿಡಿಯಲಾಯಿತು. ಜಿಲ್ಲೆಯಲ್ಲಿ ಇದೇ ಮೊದಲಿಗೆ ಕಾರ್ಯಾಚರಣೆಗೆ ಶ್ವಾನದಳ ಬಳಕೆ ಮಾಡಲಾಗಿದೆ.

ಏ.12ರಂದು ಕಣಗುಪ್ಪೆಯಲ್ಲಿ ರಾಜಶೆಟ್ಟಿ ಅವರನ್ನು ಬಲಿ ಪಡೆದಿದ್ದ ಕಾಡಾನೆ, ಏ.15ರಂದು ಸೆರೆ ಸಿಕ್ಕಿತ್ತಾದರೂ, ಮತ್ತೆ ಪರಾರಿಯಾಗಿತ್ತು. ಶುಕ್ರವಾರ ಕಾರ್ಯಾಚರಣೆ ನಡೆಸಿದರೂ ಪತ್ತೆ ಆಗಿರಲಿಲ್ಲ.

ಅರಣ್ಯ ಇಲಾಖೆ ಸಿಬ್ಬಂದಿ ಕಾಡಾನೆ ಪತ್ತೆಗೆ, ವಿಶೇಷ ತರಬೇತಿ ಪಡೆದಿದ್ದ ಬಂಡಿಪುರ 'ಈಶ' ಹೆಸರಿನ ಶ್ವಾನದ ನೆರವು ಪಡೆದರು. ಶನಿವಾರ ಬೆಳಿಗ್ಗೆ ಕಾಡಾನೆ ನೆಲೆಯನ್ನು ಶ್ವಾನದ ಸಹಾಯದಿಂದ ಪತ್ತೆ ಮಾಡಿದರು.

ಒಂಟಿ ಕೋರೆ ಆನೆ, ಇನ್ನೊಂದು ದೈತ್ಯ ಕಾಡಾನೆ 'ಕ್ಯಾಪ್ಟನ್' ಜೊತೆಯಲ್ಲಿಯೇ ಇತ್ತು. ಕುಮ್ಕಿ ಆನೆಗಳೊಂದಿಗೆ ತೆರಳಿದ ಪಶು ವೈದ್ಯರು ಅರಿವಳಿಕೆ ಚುಚ್ಚುಮದ್ದು ನೀಡಿದರು.

ನಂತರ ಎರಡೂ ಕಾಡಾನೆಗಳನ್ನು ಬೇರೆ ಮಾಡಲಾಯಿತು. ಒಂಟಿ ಕೋರೆ ಕಾಡಾನೆ ಸ್ವಲ್ಪ ದೂರ ಓಡಿ, ಪ್ರಜ್ಞೆ ತಪ್ಪಿತ್ತು. ಕುಮ್ಕಿ ಆನೆಗಳು ಕಾಡಾನೆಯನ್ನು ಸುತ್ತುವರಿದವು. ಇಟಿಎಫ್ ಹಾಗೂ ಅರಣ್ಯ ಸಿಬ್ಬಂದಿ ಬಳಿಕ ಸೆರೆ ಹಿಡಿದ ಕಾಡಾನೆಯನ್ನು ಲಾರಿ ಮೂಲಕ ಸ್ಥಳಾಂತರಿಸಿದರು.

'ಡಿಸಿಎಫ್ ಸೌರಭ್‌ಕುಮಾರ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು ಭಾನುವಾರ ಎರಡು ಆನೆಗಳಿಗೆ ರೇಡಿಯೊ ಕಾಲರ್ ಅಳವಡಿಸಲಾಗುವುದು' ಎಂದು ಆರ್‌ಎಫ್‌ಒ ಯತೀಶ್ ಅವರು ತಿಳಿಸಿದ್ದಾರೆ.

ಬೇಲೂರು ತಾಲ್ಲೂಕಿನ ಕಾನಳ್ಳಿ ಅರಣ್ಯ ಪ್ರದೇಶದಲ್ಲಿದ್ದ ನರಹಂತಕ ಒಂಟಿ ಕೋರೆ ಕಾಡಾನೆಯನ್ನು ಶನಿವಾರ ಸೆರೆ ಹಿಡಿಯಲಾಯಿತು

ಪಿ ಎಂ ಶ್ರೀ ಶಾಲೆ, ಜವಾಹರ ನವೋದಯ ವಿದ್ಯಾಲಯ,
ಬಾಗಲೂರು, ಬೆಂಗಳೂರು ನಗರ ಜಿಲ್ಲೆ, ಕರ್ನಾಟಕ– 562149
ನವೋದಯ ವಿದ್ಯಾಲಯ ಸಮಿತಿಯ ಒಂದು ಘಟಕ
ಭಾರತ ಸರ್ಕಾರ
PH-080-29900456, Email ID-jnvbengaluruurban@gmail.com

ಟೆಂಡರು ಪ್ರಕಟಣೆ

ನಮ್ಮ ವಿದ್ಯಾಲಯಕ್ಕೆ 2026–27ನೇ ಸಾಲಿಗಾಗಿ ಈ ಕೆಳಕಂಡ ಕೆಲಸ/ ಸಾಮಾನುಗಳ ಸರಬರಾಜಿಗಾಗಿ ಟೆಂಡರುಗಳನ್ನು ಆಹ್ವಾನಿಸಲಾಗಿದೆ.
(i) ಅಕ್ಕಿ (ii) ದಿನಸಿ ವಸ್ತುಗಳು (iii) ಮೊಟ್ಟೆ ಮತ್ತು ಕೋಳಿ (iv) ತರಕಾರಿ ಮತ್ತು ಹಣ್ಣುಗಳು (v) ಬೇಕರಿ ವಸ್ತುಗಳು (vi) ನೈರ್ಮಲ್ಯ ವಸ್ತುಗಳು (ಶೌಚಾಲಯ) (vii) ಸಮವಸ್ತ್ರಗಳನ್ನು ಒಗೆಯುವುದು ಮತ್ತು ಇಸ್ತ್ರಿ ಮಾಡುವುದು (viii) ಅನುಪಯುಕ್ತ ವಸ್ತುಗಳ ವಿಲೇವಾರಿ (ix) ಹೊರಗುತ್ತಿಗೆ ಸೇವೆಗಳು (x) ಟಕ್ ಶಾಪ್ ನಡೆಸುವುದು.
ಇದಕ್ಕೆ ಸಂಬಂಧಿಸಿದ ಟೆಂಡರು ಫಾರಂಗಳನ್ನು ದಿನಾಂಕ 20.04.2026 ರಿಂದ 11.05.2026 ರವರೆಗೆ ಜವಾಹರ್ ನವೋದಯ ವಿದ್ಯಾಲಯ, ಬಾಗಲೂರು, ಕಛೇರಿಯ ಎಲ್ಲಾ ಕೆಲಸದ ದಿನಗಳಲ್ಲಿ ಬೆಳಿಗ್ಗೆ 9.00 ಘಂಟೆಯಿಂದ ಸಾಯಂಕಾಲ 4.00 ಗಂಟೆಯವರೆಗೆ ವಿತರಿಸಲಾಗುವುದು. ಸದರಿ ಫಾರಂಗಳ ಬೆಲೆ ರೂಪಾಯಿ 200/–ರೂ ಆಗಿದ್ದು ಇದನ್ನು ವಿದ್ಯಾಲಯಕ್ಕೆ ಪಾವತಿಸುವುದರ ಮೂಲಕ ಪಡೆಯಬಹುದು. ಈ ಹಣವನ್ನು ವಿದ್ಯಾಲಯವು ಮರುಪಾವತಿಸುವುದಿಲ್ಲ. ಭರ್ತಿ ಮಾಡಿದ ಟೆಂಡರ್ ಲಕೋಟೆಗಳನ್ನು ದಿನಾಂಕ **11.05.2026**ರ ಸಂಜೆ 04.00 ಘಂಟೆಯವರೆಗೆ ಸ್ವೀಕರಿಸಲಾಗುವುದು. ಸೀಲು ಮಾಡಿದ ಲಕೋಟೆಗಳನ್ನು ನಿಗದಿ ಪಡಿಸಿದ ದಿನಾಂಕದೊಳಗಾಗಿ ಖುದ್ದಾಗಿ ಅಥವಾ ಅಂಚೆ (ತ್ವರಿತ ಅಂಚೆ ಅಥವಾ ರಿಜಿಸ್ಟರ್ ಪೋಸ್ಟ್) ಮೂಲಕ ವಿದ್ಯಾಲಯಕ್ಕೆ ಕಳುಹಿಸತಕ್ಕದ್ದು.
ಸೀಲು ಮಾಡಿದ ಲಕೋಟೆಗಳನ್ನು ದಿನಾಂಕ 12.05.2026 ರಂದು ಬೆಳಿಗ್ಗೆ 11.00 ಗಂಟೆಗೆ ಬೆಂಗಳೂರು ನಗರ ಜಿಲ್ಲೆಯ ಬಾಗಲೂರು, ಜವಾಹರ ನವೋದಯ ವಿದ್ಯಾಲಯದ ಪ್ರಾಂಶುಪಾಲರ ಕಚೇರಿಯಲ್ಲಿ ಹಾಜರಿದ್ದ ಟೆಂಡರ್‌ದಾರರ ಸಮ್ಮುಖದಲ್ಲಿ ತೆರೆಯಲಾಗುವುದು.
ಪ್ರಾಂಶುಪಾಲರು

ಪುರಸಭೆ ಕಾರ್ಯಾಲಯ, ಗಜೇಂದ್ರಗಡ
ತಾ॥ ಗಜೇಂದ್ರಗಡ, ಜಿ॥ ಗದಗ
Tel: 08381-262222 Email- itstaff_ulb_gajendragad@yahoo.in
ಕ್ರಸಂ:ಪುಸಗ/ಕಾವಿ/ಸಿಎಂಐಡಿಪಿ/ವಹಿ/2026–27 ದಿನಾಂಕ: 17–04–2026
(ಅಲ್ಪಾವಧಿ ಟೆಂಡರ್ ಪ್ರಕಟಣೆ–ಕೆಪಿಪಿಪಿ ಪೋರ್ಟಲ್ ಮೂಲಕ)
ಕರ್ನಾಟಕ ಪಾರದರ್ಶಕತೆ ಅಧಿನಿಯಮ–2000ರ ಪ್ರಕಾರ "ಇ–ಪ್ರೊಕ್ಯೂರ್‌ಮೆಂಟ್" ಪದ್ಧತಿಯಲ್ಲಿ ಸರ್ಕಾರದಿಂದ ಗಜೇಂದ್ರಗಡ ಪಟ್ಟಣಕ್ಕೆ ಸನ್ 2025–26ನೇ ಸಾಲಿನ ಮಾನ್ಯ ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ (ಸಿ.ಎಂ.ಐ.ಡಿ.ಪಿ) ಅಡಿಯಲ್ಲಿ ಬಿಡುಗಡೆಯಾದ ಅನುದಾನಕ್ಕೆ ಕೈಕೊಳ್ಳುವ ಕಾಮಗಾರಿ **ಇಂಡೆಂಟ್ ಸಂಖ್ಯೆ:DMA/2025-26/OW/WORK_INDENT56587 ರೂ. 304.00** ಲಕ್ಷಗಳ ಕಾಮಗಾರಿ ಅನುಷ್ಠಾನಕ್ಕಾಗಿ ಕೆ.ಡಬ್ಲ್ಯು–4, ಹಾಗೂ ಸನ್ **2024–25ನೇ** ಸಾಲಿನ 15ನೇ ಹಣಕಾಸು ಯೋಜನೆ ಅಡಿಯಲ್ಲಿ ಉಳಿಕೆ ಅನುದಾನಕ್ಕೆ ಕೈಕೊಳ್ಳುವ ಕಾಮಗಾರಿ **ಇಂಡೆಂಟ್ ಸಂಖ್ಯೆ: DMA/2026-27/OW/WORK_INDENT57499 ರೂ. 2.08** ಲಕ್ಷಗಳ ಕಾಮಗಾರಿ ಅನುಷ್ಠಾನಕ್ಕಾಗಿ ಕೆ.ಡಬ್ಲ್ಯು–1, ದಸ್ತಾವೇಜ್‌ನಲ್ಲಿ **https://kppp.karnataka.gov.in/** ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. ಕೆಪಿಪಿಪಿ ಪೋರ್ಟಲ್ ದಾಖಲೆಗಳಿಗಾಗಿ **https://kppp.karnataka.gov.in/** ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕವೇ ಟೆಂಡರ್ ಸಲ್ಲಿಸುವುದು.
ಕೆಪಿಪಿಪಿ ಪೋರ್ಟಲ್ ಪದ್ಧತಿಯಲ್ಲಿ ಟೆಂಡರ ಸಲ್ಲಿಸುವ ಕೊನೆಯ **ದಿನಾಂಕ: 30–04–2026** ಸಾಯಂಕಾಲ **4.00 ಗಂಟೆಯ ವರೆಗೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 02–05–2026,** ಸಾಯಂಕಾಲ **4.00 ಗಂಟೆಗೆ,** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 04–05–2026** ಮುಂಜಾನೆ **11:30 ಗಂಟೆಗೆ.** ನಿಗಧಿಪಡಿಸಿದ ದಿನಾಂಕಗಳು ಒಂದು ವೇಳೆ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು. ಈ ಕಚೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲಾ. ಕಾಮಗಾರಿ ಇ.ಎಮ್.ಡಿ ಪೂರ್ಣಗೊಳಿಸುವ ಅವಧಿ, ಗುತ್ತಿಗೆದಾರರ ದರ್ಜೆ ಹಾಗೂ ಇನ್ನಿತರ ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ **https://kppp.karnataka.gov.in/** ಹಾಗೂ ಕಛೇರಿ ವೇಳೆಯಲ್ಲಿ ಸಂಬಂಧಿಸಿದ ಶಾಖೆಯಲ್ಲಿ ಮಾಹಿತಿಯನ್ನು ಪಡೆಯಬಹುದು. ಇ–ಪೋರ್ಟಲ್‌ನ ಎಲ್ಲ ಷರತ್ತುಗಳು ಅನ್ವಯಿಸುತ್ತವೆ. ಹಾಗೂ ಟೆಂಡರ್ ಮಂಜೂರು ವ ನಾಮಂಜೂರ ಮಾಡುವ ಅಧಿಕಾರವನ್ನು ಪುರಸಭೆಯು ಕಾಯ್ದಿರಿಸಿಕೊಂಡಿದೆ.
ಸಹಿ/– ಮುಖ್ಯಾಧಿಕಾರಿ ಪುರಸಭೆ ಗಜೇಂದ್ರಗಡ
ವಾ.ಸಾ.ಸಂ.ಇ/ಗದಗ/29/ ದೇಶಪಾಂಡೆಪಬ್ಲಿಸಿಟಿ/2026–27
ಸಹಿ/– ಆಡಳಿತಾಧಿಕಾರಿಗಳು ಪುರಸಭೆ ಗಜೇಂದ್ರಗಡ

ಕರ್ನಾಟಕ ಸರ್ಕಾರ – ಜಿಲ್ಲಾ ಪಂಚಾಯತ್ ಶಿವಮೊಗ್ಗ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಶಿವಮೊಗ್ಗ
ನಂ.ಕಾಇಂ/ಪಂರಾಇಂ/ವಿಶಿ/ಕಿ.ಇಂ–1/2026–27/86 ದಿ: 18.04.2026
ಟೆಂಡರ್ ಪ್ರಕಟಣೆ ("ಕೆ.ಪಿ.ಪಿ.ಪಿ" ಮೂಲಕ)
ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಶಿವಮೊಗ್ಗ ಇವರು KW-2 & KW-3 (Standard Tender Document) ನಿಬಂಧನೆಗೊಳಪಟ್ಟಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ "ಕೆ.ಪಿ.ಪಿ.ಪಿ" ಸಂಸ್ಥೆಯಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2025–26ನೇ ಸಾಲಿನ ರಾಜ್ಯ ಉಪಶಮನ ನಿಧಿ (ಎಸ್.ಡಿ.ಎಂ.ಎಫ್) ಯೋಜನೆ.
1. ಟೆಂಡರ್ ಫಾರಂ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 18/04/2026 ರಿಂದ 27/04/2026 ರವರೆಗೆ 2. ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ: 27/04/2026 ಸಮಯ 16:30:00 3. ಬಿಡ್ ತರೆಯುವ ದಿನಾಂಕ: 28/04/2026 ಸಮಯ 16:31:00
1. General Works: 25885 CALL-1/41.33, 25883 CALL-1/61.87.
2. SC Works: - 3. Category II A Works: 25887 CALL-1/80.91
4. Category-1 Works: -
ಕೆ.ಪಿ.ಪಿ.ಪಿ ವೆಬ್‌ಸೈಟ್ ಟೆಂಡರಿನ ವಿವರಗಳನ್ನು ಈ ಕಛೇರಿಯ ಕಾರ್ಯನಿರ್ವಾಹಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಶಿವಮೊಗ್ಗ ಇವರ ಕಛೇರಿಯನ್ನು ಸಂಪರ್ಕಿಸುವುದು ಮತ್ತು ಕೆ.ಪಿ.ಪಿ.ಪಿ ವೆಬ್ ಸೈಟ್ (www.kppp.karnataka.gov.in) ನಲ್ಲಿ ನೋಡಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 08182/222936 ಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರಿಂದ ಪಡೆಯಬಹುದು ಅಥವಾ helpdesk ದೂರವಾಣಿ ಸಂಖ್ಯೆ: 080–25501216, 25501227 ಇವರನ್ನು ಸಂಪರ್ಕಿಸುವುದು.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/26–27/98/04/113

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.
ಐ.ಎಫ್.ಟಿ.ಸಂ: ಕಾ.ನಿ.ಇಂ./ಲೋ.ಇ/ಬಿ.ಜೆ.ಪಿ/ಪಿ.ಬಿ/ವಿವಿಧ ಲೆಕ್ಕ–ಶಿರ್ಷಿಕೆ/2026–27/132 ದಿನಾಂಕ:17.04.2026
ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)
ಐಟಂವಾರು ಗುತ್ತಿಗೆಗಳನ್ನು ಇ–ಪ್ರೋಕ್ಯೂರಮೆಂಟನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲೂ– 3 & 4 ರಲ್ಲಿ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಒಟ್ಟು 08 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು, ಅದರಲ್ಲಿ ಗರಿಷ್ಠ ಹಾಗೂ ಕನಿಷ್ಠ ಅಂದಾಜು ಮೊತ್ತ ಅನುಕ್ರಮವಾಗಿ ರೂ. 186.00 ಲಕ್ಷಗಳು ಹಾಗೂ 112.00 ಲಕ್ಷಗಳು ಮತ್ತು ಗರಿಷ್ಠ ಹಾಗೂ ಕನಿಷ್ಠ ಮುಂಗಡ ಠೇವಣಿ ಮೊತ್ತ ಅನುಕ್ರಮವಾಗಿ 2,79,000/– ರೂಗಳು ಹಾಗೂ 1,68,000/–ರೂಗಳು ರೂ.ಗಳು. ವಿಸ್ತ್ರತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಭದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಾಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು. 1) ಪೂರ್ವ ಭಾವಿ ಸಭೆ ದಿನಾಂಕ: 27.04.2026 ರ ಮುಂಜಾನೆ 11.00 ಗಂಟೆಗೆ, 2) ಟೆಂಡರಗಳನ್ನು ಸ್ವೀಕರಿಸುವ ದಿನಾಂಕ:– 04.05.2026 ರ ಅಪರಾಹ್ನ 1.30 ಗಂಟೆಯವರೆಗೆ, 3) ಟೆಂಡರಗಳ ತಾಂತ್ರಿಕ ಬೀಡ್‌ಗಳನ್ನು ತೆರೆಯುವ ದಿನಾಂಕ: 05.05.2026 ರ ಅಪರಾಹ್ನ 1:31 ಘಂಟೆಯ ನಂತರ ಮತ್ತು. 4) ಟೆಂಡರಗಳ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 06.05.2026 ರ ಮುಂಜಾನೆ 11.00 ಘಂಟೆಯ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ
ವಾಸಾಸಂಇ/ವಿಜಯಪುರ/44/ಕೆಎಸ್‌ಎಂಸಿಎ/2026–27

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು 560041
registrar@rguhs.ac.in ದೂರವಾಣಿ: +91–80–29601928
No. RGUHSB/PROC/GEN/144/2025-(116447) Date: 18/04/2026
ಇ–ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ)
The Registrar Rajiv Gandhi University of Health Sciences invites tender for PROCUREMENT OF I-PADS TO RGUHS. More details on the Service are provided in the attached Terms of Reference.
Tender No. RGUHSK/2026-27/IND0026

1	ಡೌನ್‌ಲೋಡ್‌ಗಾಗಿ ಟೆಂಡರ್ ಡಾಕ್ಯೂಮೆಂಟ್‌ಗಳ ಲಭ್ಯತೆ	18–04–2026 13:12 ಗಂಟೆ
2	ಬಿಡ್ ಪೂರ್ವ–ಭಾವಿ ಸಭೆ	22–04–2026 11:31 ಗಂಟೆ
3	ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ	02–05–2026 17:30 ಗಂಟೆ
4	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	04–05–2026 12:00 ಗಂಟೆ
5	ಆರ್ಥಿಕ ಬಿಡ್ ತೆರೆಯುವ ದಿನಾಂಕ	06–05–2026 11:30 ಗಂಟೆ
6	ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ವಿವರಗಳನ್ನು **https://kppp.karnataka.gov.in** ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.
ಸಹಿ/– ಕುಲಸಚಿವರು
ವಾ.ಸಾ.ಸಂ.ಇ/ವಾಪ್ರ/261/ಆಕಾರ್/2026–27

ಮೈಸೂರು ಸಕ್ಕರೆ ಕಂಪನಿ ನಿಯಮಿತ, ಮಂಡ್ಯ.
(ಕರ್ನಾಟಕ ಸರ್ಕಾರ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಕ್ಕರೆ ನಗರ ಮಂಡ್ಯ–571402
ಸಂಖ್ಯೆ: ಎಂ.ಎಸ್.ಕೋ/ಎಮ್.ಎಮ್/ 32/2026–27
ದಿನಾಂಕ: 18–04–2026
ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
ಮೈಸೂರು ಸಕ್ಕರೆ ಕಂಪನಿ ನಿಯಮಿತ ಮಂಡ್ಯ ಇಲ್ಲಿ ಅನುಪಯುಕ್ತ (ಸ್ಕ್ರ್ಯಾಪ್) ವಸ್ತುಗಳನ್ನು (ಕಾರ್ಖಾನೆಗೆ ಬಳಕೆಯಾಗದೆ ಉಳಿದಿರುವ ವಸ್ತುಗಳು) as is where is ಆಧಾರದ ಮೇಲೆ ಮಾರಾಟ ಮಾಡಲು ಮತ್ತು ಜೆ.ಸಿ.ರಸ್ತೆ ಬೆಂಗಳೂರು ಇಲ್ಲಿರುವ ಮೈಷುಗರ್ ಕಛೇರಿ ಆವರಣದಲ್ಲಿ 4500 ಚದರ ಅಡಿ ಪ್ರದೇಶದಲ್ಲಿ ವಾಹನ ನಿಲುಗಡೆಗೆ ಕಂಪನಿಯು ಮಾಸಿಕ ಬಾಡಿಗೆ ಆಧಾರದ ಮೇಲೆ ವಾಹನಗಳ ಪಾರ್ಕಿಂಗ್ (ಭಾರಿ ವಾಹನಗಳನ್ನು ಹೊರತುಪಡಿಸಿ) ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾರಾಟ ಮಾಡಲು ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ.
ಟೆಂಡರ್ ಸಂಖ್ಯೆ : (1) Scarp : MSCO/2026-27/SE0015
(2) Parking : MSCO/2026-27/SE0013

ಕ್ರ ಸಂ	ಸಾಮಾಗ್ರಿಗಳ ವಿವರ	ಇ.ಎಂ.ಡಿ ಹಣ
1	ಅನುಪಯುಕ್ತ (ಸ್ಕ್ರ್ಯಾಪ್) ವಸ್ತುಗಳು (ಕಾರ್ಖಾನೆಗೆ ಬಳಕೆಯಾಗದೆ ಉಳಿದಿರುವ ವಸ್ತುಗಳು)	ರೂ. 10,00,000.00
2	4500 ಚದರ ಅಡಿ ಪ್ರದೇಶದಲ್ಲಿ ವಾಹನ ನಿಲುಗಡೆಗೆ ಕಂಪನಿಯು ಮಾಸಿಕ ಬಾಡಿಗೆ ಆಧಾರದ ಮೇಲೆ ವಾಹನಗಳ ಪಾರ್ಕಿಂಗ್	ರೂ. 50,000.00

ಇ–ಪ್ರಕ್ಯೂರ್‌ಮೆಂಟ್ ಮರು ಟೆಂಡರನ್ನು www.kppp.karnataka.gov.in ಮುಖಾಂತರ ತುಂಬುವುದು. (1) ಟೆಂಡರನ್ನು ತುಂಬಲು ಕೊನೆಯ ದಿನಾಂಕ: 18.04.2026 ಸಂಜೆ: 05.30 ರ ವರೆಗೆ (2). ಪ್ರೀ–ಬಿಡ್ ದಿನಾಂಕ: 23.04.2026 ಬೆಳಿಗ್ಗೆ 11.00 ಗಂಟೆಯ ನಂತರ (3). ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 30.04.2026 ರ ಬೆಳಿಗ್ಗೆ 11.00 ಗಂಟೆಗೆ (4). ವಾಣಿಜ್ಯ ಬಿಡ್ ತೆರೆಯುವ ದಿನಾಂಕ:30.04.2026 ರ ಮಧ್ಯಾಹ್ನ 12.00 ಗಂಟೆಯ ನಂತರ. ಟೆಂಡರನ್ನು ಸ್ವೀಕರಿಸುವ/ ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಸೆಲ್ 080–25501216/ 25501227 ಅಥವಾ 9964390489 ರವರನ್ನು ಸಂಪರ್ಕಿಸುವುದು.
ಸಹಿ/–ಪ್ರಧಾನ ವ್ಯವಸ್ಥಾಪಕರು
ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿ&ಎ/059/2026–27

ಕರ್ನಾಟಕ ಸರ್ಕಾರ
ನಗರ ಭೂ ಸಾರಿಗೆ ನಿರ್ದೇಶನಾಲಯ, ನಗರಾಭಿವೃದ್ಧಿ ಇಲಾಖೆ
ಆಯುಕ್ತರ ಕಾರ್ಯಾಲಯ ನಗರ ಭೂ ಸಾರಿಗೆ
ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್ (ಬಸ್ ಸ್ಟ್ಯಾಂಡ್ ಮೇಲ್ಭಾಗ), 4ನೇ ಮಹಡಿ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560027, ದೂರವಾಣಿ : 080–22226627/6628, ಫ್ಯಾಕ್ಸ್ : 080–22226630, ಇಮೇಲ್ : dultbangalore@gmail.com, dult@karnataka.gov.in
ಸಂಖ್ಯೆ: DULT/4/2026 ದಿನಾಂಕ: 18.04.2026
ಟೆಂಡರ್ ಪ್ರಕಟಣೆ
ನಗರ ಭೂ ಸಾರಿಗೆ ನಿರ್ದೇಶನಾಲಯ **(DULT)** ಕರ್ನಾಟಕದ ನಾಲ್ಕು ನಗರಗಳಾದ ಬೆಳಗಾವಿ, ಬೆಂಗಳೂರು, ಕಲಬುರಗಿ ಮತ್ತು ಮೈಸೂರು ವಿಭಾಗದ ಅಡಿಯಲ್ಲಿ ಆಯ್ದ ನಗರ ಪುರಸಭೆಗಳಿಗೆ ರಸ್ತೆ ದಾಸ್ತಾನು ಮತ್ತು ಮೊಬಿಲಿಟಿ ಯೋಜನೆಗಳನ್ನು ಸಿದ್ಧಪಡಿಸುವ ಸೇವೆಗಳಿಗಾಗಿ ಅರ್ಹ ಸಲಹಾ ಸಂಸ್ಥೆಗಳಿಂದ ಪ್ರತ್ಯೇಕ ಇ–ಬಿಡ್‌ಗಳನ್ನು ಆಹ್ವಾನಿಸಲಾಗಿರುತ್ತದೆ. ಕೆಪಿಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 15.05.2026, ಸಂಜೆ 5.30 ಆಗಿರುತ್ತದೆ. ಬಿಡ್ಡರ್‌ಗಳು **https://kppp.karnataka.gov.in** ವೆಬ್ ಪೋರ್ಟಲ್ ನಿಂದ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. **ಟೆಂಡರ್ ಸಂಖ್ಯೆ ಈ ಕೆಳಕಂಡಂತಿವೆ:** ಬೆಳಗಾವಿ ವಿಭಾಗ – DULT/2026-27/SE0045, ಬೆಂಗಳೂರು ವಿಭಾಗ – DULT/2026-27/SE0046, ಕಲಬುರಗಿ ವಿಭಾಗ – DULT/2026-27/SE0047, ಮೈಸೂರು ವಿಭಾಗ –DULT/2026-27/SE0048.
ಸಹಿ/–ಆಡಳಿತಾಧಿಕಾರಿ ನಗರ ಭೂ ಸಾರಿಗೆ ನಿರ್ದೇಶನಾಲಯ ನಗರಾಭಿವೃದ್ಧಿ ಇಲಾಖೆ.
ವಾಸಾಸಂಇ/ವಾಪ್ರ/264/ಶಿರಡಿ ಸಾಯಿ/2026–27

ಬೆಂಗಳೂರು ಉತ್ತರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ದಾಸರಹಳ್ಳಿ ವಿಭಾಗ, ಎಂಇಐ ಲೇಔಟ್, ಬಾಗಲಗುಂಟೆ, ಬೆಂಗಳೂರು – 560 073.
ನಂ. ಬೆಂಉನಪಾ/ಕಾಅ/ಟೆಂಡರ್/02/2026–27 ದಿನಾಂಕ : 18.04.2026
ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ)
(ಎರಡು ಲಕೋಟೆ ಪದ್ಧತಿ)(ಅಲ್ಪಾವಧಿ ಟೆಂಡರ್ ಪ್ರಕಟಣೆ)
(ಇ–ಪ್ರಕ್ಯೂರ್‌ಮೆಂಟ್ https://kppp.karnataka.gov.in ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬೆಂಗಳೂರು ಉತ್ತರ ನಗರ ಪಾಲಿಕೆ, ಬೆಂಗಳೂರು ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೋಂದಾಯಿಸಲಾದ ಅರ್ಹ ಗುತ್ತಿಗೆದಾರರಿಂದ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸುತ್ತಾರೆ.
ಸಾಮಾನ್ಯ ವರ್ಗದವರಿಗೆ
(1) ಸಿಎಂಐಡಿಪಿ 2025–26 ಅಡಿಯಲ್ಲಿ ದಾಸರಹಳ್ಳಿ ಉಪ ವಿಭಾಗ ಮತ್ತು ಶೆಟ್ಟಿಹಳ್ಳಿ ಉಪ ವಿಭಾಗದಲ್ಲಿನ ವಾರ್ಡ್ ರಸ್ತೆಗಳು ಮತ್ತು ಚರಂಡಿಗಳ ಅಭಿವೃದ್ಧಿ ಮತ್ತು ಸುಧಾರಣೆಗಳು ಮತ್ತು ಬೆಂಗಳೂರು ಉತ್ತರ ನಗರ ಪಾಲಿಕೆಯ ದಾಸರಹಳ್ಳಿ ವಿಭಾಗದ ಬಾಗಲಗುಂಟೆ ವಾರ್ಡ್ ಸಂಖ್ಯೆ 14 ರಲ್ಲಿ ಉಪ ವಿಭಾಗೀಯ ಕಚೇರಿ ಕಟ್ಟಡದ ನಿರ್ಮಾಣ, ಟೆಂಡರ್‌ನ ಅಂದಾಜು ಮೊತ್ತ : **ರೂ. 1,300.00 ಲಕ್ಷಗಳು,** ಇಎಂಡಿ ಮೊತ್ತ : **ರೂ. 15,00,000/–** (ಇ–ಪಾವತಿ (ಎನ್‌ಇಎಫ್‌ಟಿ) ಮೂಲಕ 1.00 ಲಕ್ಷ ಬಾಕಿ ರೂ.14.00 ಲಕ್ಷ ಬಿಜಿ/ಎಫ್‌ಡಿಆರ್ ಮೂಲಕ, ಬಿಜಿ/ಎಫ್‌ಡಿಆರ್ ಅನ್ನು ತಾಂತ್ರಿಕ ಬಿಡ್ ತೆರೆಯುವ ಮೊದಲು ಸಲ್ಲಿಸಬೇಕು).
(2) ಸಿಎಸ್‌ಎಸ್‌ಐಪಿ 2025–26 ಪ್ಯಾಕೇಜ್–1 ಅಡಿಯಲ್ಲಿ ಬೆಂಗಳೂರು ಉತ್ತರ ನಗರ ಪಾಲಿಕೆಯ ದಾಸರಹಳ್ಳಿ ವಿಭಾಗದಲ್ಲಿ ಆಯ್ದ ಅಪಧಮನಿ, ಉಪ ಅಪಧಮನಿ, ಸಂಪರ್ಕ ರಸ್ತೆಗಳು ಮತ್ತು ಇತರ ರಸ್ತೆಗಳಿಗೆ ಸುಧಾರಣೆಗಳು ಮತ್ತು ಡಾಂಬರೀಕರಣ. ಟೆಂಡರ್‌ನ ಅಂದಾಜು ಮೊತ್ತ : **ರೂ. 1,150.00 ಲಕ್ಷಗಳು,** ಇಎಂಡಿ ಮೊತ್ತ : **ರೂ. 15,00,000/–** (ಇ–ಪಾವತಿ (ಎನ್‌ಇಎಫ್‌ಟಿ) ಮೂಲಕ 1.00 ಲಕ್ಷ ಬಾಕಿ ರೂ.14.00 ಲಕ್ಷ ಬಿಜಿ/ಎಫ್‌ಡಿಆರ್ ಮೂಲಕ, ಬಿಜಿ/ಎಫ್‌ಡಿಆರ್ ಅನ್ನು ತಾಂತ್ರಿಕ ಬಿಡ್ ತೆರೆಯುವ ಮೊದಲು ಸಲ್ಲಿಸಬೇಕು).
(3) ಸಿಎಸ್‌ಎಸ್‌ಐಪಿ 2025–26 ಪ್ಯಾಕೇಜ್–2 ಅಡಿಯಲ್ಲಿ ಬೆಂಗಳೂರು ಉತ್ತರ ನಗರ ಪಾಲಿಕೆಯ ದಾಸರಹಳ್ಳಿ ವಿಭಾಗದಲ್ಲಿ ಆಯ್ದ ಅಪಧಮನಿ, ಉಪ ಅಪಧಮನಿ, ಸಂಪರ್ಕ ರಸ್ತೆಗಳು ಮತ್ತು ಇತರ ರಸ್ತೆಗಳಿಗೆ ಸುಧಾರಣೆಗಳು ಮತ್ತು ಡಾಂಬರೀಕರಣ. ಟೆಂಡರ್‌ನ ಅಂದಾಜು ಮೊತ್ತ : **ರೂ. 1,090.00 ಲಕ್ಷಗಳು,** ಇಎಂಡಿ ಮೊತ್ತ : **ರೂ. 15,00,000/–** (ಇ–ಪಾವತಿ (ಎನ್‌ಇಎಫ್‌ಟಿ) ಮೂಲಕ 1.00 ಲಕ್ಷ ಬಾಕಿ ರೂ.14.00 ಲಕ್ಷ ಬಿಜಿ/ಎಫ್‌ಡಿಆರ್ ಮೂಲಕ, ಬಿಜಿ/ಎಫ್‌ಡಿಆರ್ ಅನ್ನು ತಾಂತ್ರಿಕ ಬಿಡ್ ತೆರೆಯುವ ಮೊದಲು ಸಲ್ಲಿಸಬೇಕು).
(4) ಸಿಎಸ್‌ಎಸ್‌ಐಪಿ 2025–26 ಪ್ಯಾಕೇಜ್–3 ಅಡಿಯಲ್ಲಿ ಬೆಂಗಳೂರು ಉತ್ತರ ನಗರ ಪಾಲಿಕೆಯ ಆರ್‌ಆರ್ ನಗರ ಕ್ಷೇತ್ರದ ಯಶವಂತಪುರ ಉಪವಿಭಾಗದಲ್ಲಿ ಆಯ್ದ ಅಪಧಮನಿ, ಉಪ ಅಪಧಮನಿ, ಸಂಪರ್ಕ ರಸ್ತೆಗಳು ಮತ್ತು ಇತರ ರಸ್ತೆಗಳ ಸುಧಾರಣೆ ಮತ್ತು ಡಾಂಬರೀಕರಣ, ಟೆಂಡರ್‌ನ ಅಂದಾಜು ಮೊತ್ತ : **ರೂ. 1,200.00 ಲಕ್ಷಗಳು,** ಇಎಂಡಿ ಮೊತ್ತ : **ರೂ. 15,00,000/–** (ಇ–ಪಾವತಿ (ಎನ್‌ಇಎಫ್‌ಟಿ) ಮೂಲಕ 1.00 ಲಕ್ಷ ಬಾಕಿ ರೂ.14.00 ಲಕ್ಷ ಬಿಜಿ/ಎಫ್‌ಡಿಆರ್ ಮೂಲಕ, ಬಿಜಿ/ಎಫ್‌ಡಿಆರ್ ಅನ್ನು ತಾಂತ್ರಿಕ ಬಿಡ್ ತೆರೆಯುವ ಮೊದಲು ಸಲ್ಲಿಸಬೇಕು).
ಟೆಂಡರ್ ದಿನಾಂಕಗಳು : (1) ಬಿಡ್ ಪೂರ್ವ ಸಭೆಯು **ದಿನಾಂಕ 30.04.2026 ರಂದು ಮಧ್ಯಾಹ್ನ 15:00 ಗಂಟೆಗೆ** ಮುಖ್ಯ ಅಭಿಯಂತರರು, ವಲಯ–2, ಬೆಂಉನಪಾ, ಬೆಂಗಳೂರು ಇಲ್ಲಿ ನಡೆಯುವುದು (2) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ 21.05.2026 ರಿಂದ 4:00 ಗಂಟೆಗಳವರೆಗೆ** (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ 25.05.2026 ರಂದು ಸಂಜೆ 4:30 ರ ನಂತರ** (4) ತಾಂತ್ರಿಕ ಬಿಡ್ ಅನುಮೋದನೆಯ ನಂತರ ಹಣಕಾಸು ಬಿಡ್ ತೆರೆಯುವ ದಿನಾಂಕ.
ಸಹಿ/– ಕಾರ್ಯಪಾಲಕ ಅಭಿಯಂತರರು ದಾಸರಹಳ್ಳಿ ವಿಭಾಗ, ಬೆಂಉನಪಾ

ಚಟಿಕೆ ಸುದ್ದಿ

ಎರಡು ಬಾಲ್ಯ ವಿವಾಹ ತಡೆದ ಅಧಿಕಾರಿಗಳು

ಕೊಪ್ಪಳ: ಮೊಬೈಲ್ ಫೋನ್ ಬಳಕೆಯಿಂದ ಮಕ್ಕಳು ಹಾಳಾಗುತ್ತಾರೆ ಎನ್ನುವ ನೆಪದಲ್ಲಿ ಪೋಷಕರೇ ಮಗಳ ಬಾಲ್ಯವಿವಾಹಕ್ಕೆ ಮುಂದಾಗಿದ್ದ ಘಟನೆ ಜಿಲ್ಲೆಯಲ್ಲಿ ನಡೆದಿದ್ದು, ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ಮದುವೆ ತಡೆದು ಬಾಲಕಿಯನ್ನು ರಕ್ಷಿಸಿದ್ದಾರೆ.

ಯಲಬುರ್ಗಾ ತಾಲ್ಲೂಕಿನ ಬೇವೂರು ಠಾಣಾ ವ್ಯಾಪ್ತಿಯಲ್ಲಿ ಬಾಲಕಿಗೆ ಮದುವೆ ನಿಶ್ಚಯಿಸಿ, ಬಸವ ಜಯಂತಿ ದಿನ (ಏ.20) ಮದುವೆ ನಿಗದಿ ಮಾಡಲಾಗಿತ್ತು. ನಾಲ್ಕನೇ ತರಗತಿ ಓದಿ ಶಾಲೆ ಬಿಟ್ಟಿರುವ ಬಾಲಕಿಯ ವಿವಾಹದ ಬಗ್ಗೆ ಮಾಹಿತಿ ಪಡೆದ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ವರನ ಕುಟುಂಬದವರು ಆರ್ಥಿಕವಾಗಿ ಸಬಲರು ಎಂದು ಎಂಟನೇ ತರಗತಿ ಓದಿ ಶಾಲೆ ಬಿಟ್ಟಿರುವ ಬಾಲಕಿಯ ಮದುವೆಗೆ ಪೋಷಕರು ಮುಂದಾಗಿದ್ದರು. ಮಕ್ಕಳ ಸಹಾಯವಾಣಿ 1098ಗೆ ಬಂದ ಕರೆ ಆಧರಿಸಿ ಸ್ಥಳಕ್ಕೆ ಭೇಟಿ ನೀಡಿದ ಅಧಿಕಾರಿಗಳು ದಾಖಲೆಗಳನ್ನು ಪರಿಶೀಲಿಸಿದಾಗ ಬಾಲಕಿಗೆ 16 ವರ್ಷವಷ್ಟೇ ಆಗಿರುವುದು ದೃಢಪಟ್ಟಿದೆ. ಕಾರ್ಯಾಚರಣೆ ನಡೆಸಿ ಎರಡೂ ಬಾಲ್ಯವಿವಾಹಗಳನ್ನು ತಡೆಯಲಾಗಿದೆ.

‘ಮಹಿಳಾ ಮೀಸಲಾತಿ: ಕೇಂದ್ರಕ್ಕೆ ಮುಖಭಂಗ’

ಮಂಗಳೂರು: ‘ಮಹಿಳಾ ಮೀಸಲಾತಿ ಹೆಸರಿನಲ್ಲಿ ವಿಶೇಷ ಅಧಿವೇಶನ ಕರೆದು ವಂಚಿಸಲು ಹುನ್ನಾರ ನಡೆಸಿದ್ದ ಕೇಂದ್ರ ಸರ್ಕಾರ ಮುಖಭಂಗ ಎದುರಿಸಿದೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ದಿನೇಶ್ ಗುಂಡೂರಾವ್

ಪತ್ರಕರ್ತರ ಜೊತೆ ಶನಿವಾರ ಮಾತನಾಡಿದ ಅವರು, ‘ಮಹಿಳಾ ಮೀಸಲಾತಿಗೆ ಯಾರ ವಿರೋಧವೂ ಇಲ್ಲ. ಬಿಜೆಪಿ ಹಿಂದೆಯೇ ಜಾರಿಗೊಳಿಸಿದ್ದರೆ ಈಗ ಚುನಾವಣೆ ನಡೆದ 5 ರಾಜ್ಯಗಳಿಗೂ ಅನ್ವಯ ಆಗುತ್ತಿತ್ತು’ ಎಂದರು.

ಜಮೀರ್ ವಿರುದ್ಧ ಕ್ರಮ ಇಲ್ಲ: ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆ ಸಂಬಂಧ ಸಚಿವ ಜಮೀರ್ ಅಹಮ್ಮದ್ ಖಾನ್ ಅವರನ್ನು ಸಂಪುಟದಿಂದ ಕೈಬಿಡಲಾಗುತ್ತದೆ ಎಂಬುದು ಊಹಾಪೋಹ. ಕೆಲ ವಿಚಾರಗಳು ಪಕ್ಷದ ಚೌಕಟ್ಟಿನಲ್ಲಿ ಮಾತ್ರ ಚರ್ಚೆ ಆಗುತ್ತವೆ ಎಂದು ಸಚಿವ ದಿನೇಶ್ ಹೇಳಿದರು.

ಸುಜಾತಾಗೆ ರಾಣಿ ಚೆನ್ನಮ್ಮ ಪ್ರಶಸ್ತಿಯ ಭರವಸೆ

ಬೆಂಗಳೂರು: ‘ಮೈಸೂರಿನ ಸಿದ್ಧಾರ್ಥ-ನಗರದ ಮನೆಯೊಂದರಲ್ಲಿ ಮಂಚದಡಿ ಚಿರತೆ ಅಡಗಿದ್ದ ವೇಳೆ ಪ್ರಾಣದ ಹಂಗು ತೊರೆದು ವೃದ್ಧ ಅತ್ತೆಯನ್ನು ಸುರಕ್ಷಿತವಾಗಿ ಹೊರಗೆ ಕರೆತಂದ ಸುಜಾತಾ ಅವರಿಗೆ ಮುಂದಿನ ವರ್ಷದ ಕಿತ್ತೂರು ರಾಣಿ ಚೆನ್ನಮ್ಮ ಸಾಹಸ ಪ್ರಶಸ್ತಿ ನೀಡಲಾಗುವುದು’ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಭರವಸೆ ನೀಡಿದ್ದಾರೆ.

‘ಈ ಘಟನೆ ಆಕಸ್ಮಿಕವಾದರೂ, ಅದು ಮಹಿಳೆಯೊಬ್ಬರ ಅಪ್ರತಿಮ ಧೈರ್ಯ ಮತ್ತು ಅತ್ತೆ-ಸೊಸೆಯ ಪವಿತ್ರ ಬಾಂಧವ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ತಮ್ಮ ಮನೆಯ ಮಂಚದಡಿ ಚಿರತೆ ಅಡಗಿರುವುದು ತಿಳಿಯುತ್ತಿದ್ದಂತೆಯೇ, ಪ್ರಾಣದ ಹಂಗು ತೊರೆದು ಕೊಠಡಿಗೆ ನುಗ್ಗಿ, ವಯಸ್ಸಾದ ಅತ್ತೆಯನ್ನು ಸುರಕ್ಷಿತವಾಗಿ ಹೊರಗೆ ಕರೆತಂದ ಸುಜಾತಾ ಅವರ ಸಾಹಸ ನಿಜಕ್ಕೂ ರೋಮಾಂಚನಕಾರಿಯಾಗಿದೆ. ಅತ್ತೆಯನ್ನು ರಕ್ಷಿಸಿದ ಅವರ ಸಮಯಪ್ರಜ್ಞೆ ಇಡೀ ಮಹಿಳಾ ಕುಲಕ್ಕೆ ಹೆಮ್ಮೆಯ ವಿಷಯವಾಗಿದೆ’ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಡುಕೋಣ ತಿವಿದು ಕಾರ್ಮಿಕ ಸಾವು

ಕಳಸ (ಚಿಕ್ಕಮಗಳೂರು): ಮರಸಣಿಗೆ ಸಮೀಪದ ಯಮಗೊಂಡ ಎಸ್ಟೇಟ್‌ನಲ್ಲಿ ಕಾಡುಕೋಣ ತಿವಿದು ಹೊರನಾಡು ಗ್ರಾಮದ ಕವನಳ್ಳಯ ಕೃಷಿ ಕಾರ್ಮಿಕ ಚೇತನ್ (30) ಶನಿವಾರ ಮೃತಪಟ್ಟಿದ್ದಾರೆ.

ಚೇತನ್

ಚೇತನ್ ಅವರು ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದಾಗ ಕಾಡುಕೋಣ ದಾಳಿ ಮಾಡಿತ್ತು. ಚೇತನ್ ಎದೆಗೆ ಮತ್ತು ಹೊಟ್ಟೆಗೆ ತೀವ್ರ ಗಾಯಗಳಾಗಿತ್ತು. ಕಳಸ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಅವರಿಗೆ ಚಿಕಿತ್ಸೆ ನೀಡಲಾಯಿತು. ದಾನಿಗಳ ನೆರವಿನಿಂದ ರಕ್ತ ಪೂರೈಸಿದರೂ ಚಿಕಿತ್ಸೆಗೆ ಸ್ಪಂದಿಸಲಿಲ್ಲ. ಚೇತನ್ ಅವರಿಗೆ ಚಿಕ್ಕ ಮಗು, ಗರ್ಭಿಣಿ ಪತ್ನಿ ಇದ್ದಾರೆ. ಕಳಸ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಅರಣ್ಯ ಇಲಾಖೆಯಿಂದ ₹20 ಲಕ್ಷ ಪರಿಹಾರ ನೀಡಲಾಯಿತು. ತೋಟದ ಮಾಲೀಕರ ಪರ ಸಿಬ್ಬಂದಿ ಮೇಯಪ್ಪನ್ ₹2 ಲಕ್ಷ ಪರಿಹಾರ ನೀಡಿದರು.

ತಾಯಿ ಮರಣ ಪ್ರಮಾಣ ಇಳಿಕೆ

ಹೆರಿಗೆ: ಕೋಲಾರದಲ್ಲಿ ಯಶಸ್ವಿಯಾದ ‘ಆರ್‌ಆರ್‌ಆರ್’ ಮಾದರಿ

• ಕೆ.ಓಂಕಾರ ಮೂರ್ತಿ

ಕೋಲಾರ: ಜಿಲ್ಲೆಯಲ್ಲಿ ಪ್ರಸವಪೂರ್ವ ಹಾಗೂ ಪ್ರಸವ ನಂತರದಲ್ಲಿ ತಾಯಿ ಮರಣ ಪ್ರಮಾಣ ಗಣನೀಯವಾಗಿ ತಗ್ಗಿದೆ. ಜಿಲ್ಲಾಡಳಿತ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕೈಗೊಂಡ ‘ಆರ್‌ಆರ್‌ಆರ್ ಮಾದರಿ’ ವಿನೂತನ ಕ್ರಮ ಇದಕ್ಕೆ ಕಾರಣವಾಗಿದೆ.

2023–24ನೇ ಸಾಲಿನಲ್ಲಿ ಶೇ 50ರಷ್ಟಿದ್ದ ತಾಯಿ ಮರಣ ಪ್ರಮಾಣ ಈಗ ಶೇ 23ಕ್ಕೆ ತಗ್ಗಿದೆ. ಕೆಲ ನಿಮಿಷ ತಡವಾಗಿದ್ದರೂ ಜೀವಹಾನಿ ಸಾಧ್ಯತೆ-ಯಾಗುವಂತಹ ಪ್ರಕರಣಗಳಲ್ಲಿಯೂ ಜೀವ ಉಳಿಸಲಾಗಿದೆ.

ಪ್ರಸವಪೂರ್ವ, ನಂತರದ ಅವಧಿಯಲ್ಲಿ ತಾಯಂದಿರ ಮರಣ ಪ್ರಮಾಣ (ಪ್ರತಿ ಲಕ್ಷ ಜೀವಂತ ಜನನಗಳಿಗೆ) ರಾಷ್ಟ್ರ ಮಟ್ಟದಲ್ಲಿ ಶೇ 97ರಷ್ಟಿದ್ದು, ರಾಜ್ಯ ಮಟ್ಟದಲ್ಲಿ ಶೇ 68ರಷ್ಟಿದೆ.

ಏನಿದು ತ್ರಿಬಲ್ ಆರ್?: ಜಿಲ್ಲೆಯಲ್ಲಿ ಮರಣಪ್ರಮಾಣ ತಗ್ಗಿಸಲು ಜಿಲ್ಲಾಧಿಕಾರಿ ಎಂ.ಆರ್.ರವಿ ನೇತೃತ್ವದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ‘ಆರ್‌ಆರ್‌ಆರ್ ಮಾದರಿ’ ಜಾರಿಗೊಳಿಸಿದೆ.

ಗರ್ಭಿಣಿಯ ಸಮಸ್ಯೆಗಳ ಪುನರ್ ಪರಿಶೀಲನೆ (ಆರ್1–ರಿಅಸೆಸ್‌ಮೆಂಟ್ ಆಫ್ ರಿಸ್ಕ್), ವಿಳಂಬ ತಗ್ಗಿಸುವುದು (ಆರ್2–ರೆಡ್ಯೂಸ್ ದಿ ಡಿಲೇ), ತ್ವರಿತಗತಿಯ ಸ್ಪಂದನೆ (ಆರ್3–ರೆಸ್ಪಾಂಡ್ ಸ್ವಿಫ್ಟ್ಲಿ) ವಿಧಾನದ ಮೂಲಕ ತಾಯಿ ಮರಣ ಪ್ರಮಾಣ ತಗ್ಗಿಸಲು ಪ್ರಯತ್ನ ನಡೆಯುತ್ತಿದೆ.

2023–24ರಲ್ಲಿ 9 ಹಾಗೂ 2024–25ರಲ್ಲಿ 8 ತಾಯಂದಿರು ಮೃತಪಟ್ಟಿದ್ದರು. ಆರ್‌ಆರ್‌ಆರ್ ಮಾದರಿ ಜಾರಿಯ ನಂತರ 2025–26ನೇ ಸಾಲಿನಲ್ಲಿ ಕೇವಲ ನಾಲ್ವರು ಮೃತಪಟ್ಟಿದ್ದಾರೆ.

ಈ ಹಿಂದೆ ಹೆರಿಗೆ ವೇಳೆ ಸಂಭವಿಸಿದ ತಾಯಿ ಮರಣ ಪ್ರಕರಣಗಳ ‘ಡೆತ್ ಆಡಿಟ್’ ಕೂಡ ಮಾಡಲಾಗಿದೆ. ಕೆಲ ಪ್ರಕರಣಗಳಲ್ಲಿ ತಾಯಿಯ ಪ್ರಾಣ ಉಳಿಸಿ-ಕೊಳ್ಳಬಹುದಿತ್ತು ಎಂಬುದು ಗೊತ್ತಾಗಿದೆ.

ಕಾರ್ಯಾಚರಣೆ ಹೇಗೆ?: ಮೊದಲ ಹಂತದಲ್ಲಿ (ಆರ್1) ಹೆರಿಗೆಗೆ ಮೂರು ತಿಂಗಳಿರುವ ಸಮಸ್ಯೆಯಾತ್ಮಕ ಗರ್ಭಿಣಿಯರನ್ನು ಗುರುತಿಸಲಾಗುತ್ತದೆ. ವೈದ್ಯಾಧಿಕಾರಿ ಅಂಥವರನ್ನು ನಿಯಮಿತವಾಗಿ ಪರೀಕ್ಷಿಸುವರು. ಹೆರಿಗೆಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯ ಕಡತ ಸಿದ್ಧಪಡಿಸುತ್ತಾರೆ.

ಎರಡನೇ ಹಂತದಲ್ಲಿ (ಆರ್2) ಹೆರಿಗೆ ಸಮಯದಲ್ಲಿ ಸಮಸ್ಯೆ ಉಂಟಾಗದಂತೆ ನೋಡಿಕೊಳ್ಳಲು ಕಾಲವಿಳಂಬ ಮಾಡದೆ ತಕ್ಷಣವೇ ಉನ್ನತ ಮಟ್ಟದ ಆಸ್ಪತ್ರೆಗೆ ಶಿಫಾರಸು ಮಾಡಲಾಗುತ್ತದೆ.

ಮೂರನೇ ಹಂತದಲ್ಲಿ (ಆರ್3) ತಜ್ಞ ವೈದ್ಯರು ಗರ್ಭಿಣಿ ಪರಿಶೀಲಿಸಿ ಅಗತ್ಯವಿರುವ ಚಿಕಿತ್ಸೆ ಬಗ್ಗೆ ತ್ವರಿತಗತಿಯಲ್ಲಿ ನಿರ್ಧಾರ ಕೈಗೊಳ್ಳುತ್ತಾರೆ. ಅಗತ್ಯವಿದ್ದರೆ ಮೇಲ್ದರ್ಜೆ ಆಸ್ಪತ್ರೆ ಅಥವಾ ಖಾಸಗಿ ಆಸ್ಪತ್ರೆಗೆ ಶಿಫಾರಸು ಮಾಡುತ್ತಾರೆ.

ಡಿಂಕ್ ಸಂಪರ್ಕ ವ್ಯವಸ್ಥೆ: ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿಯ ಆವರಣದಲ್ಲಿ ಟಾಟಾ ಸಮೂಹದ ಸಹಯೋಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಿಂಕ್ (ಡಿಜಿಟಲ್ ನರ್ವ್ ಸೆಂಟರ್) ಮೂಲಕ ಜಿಲ್ಲೆಯಲ್ಲಿನ ಗರ್ಭಿಣಿಯರ ಗುರುತಿಸುವಿಕೆ ಹಾಗೂ ಸಂಪರ್ಕಿಸುವ ವ್ಯವಸ್ಥೆ ನಡೆಯುತ್ತಿದೆ.

‘ತಾಯಿ ಮರಣ ಪ್ರಮಾಣ ತಗ್ಗಿಸಲು ಮುಖ್ಯಮಂತ್ರಿ ನಿರ್ದೇಶನ ನೀಡಿದ್ದಾರೆ. ಅದರಂತೆ ನಾವು ಆರ್‌ಆರ್‌ಆರ್ ಪ್ರಯೋಗದಿಂದ ಪ್ರಮಾಣ ತಗ್ಗಿಸುವ ಪ್ರಯತ್ನ ನಡೆಸಿ, ಯಶಸ್ವಿಯೂ ಆಗಿದ್ದೇವೆ. 24 ತಾಸು ನಿಗಾ, ಪರಸ್ಪರ ಸಂವಹನ, ಗರ್ಭಿಣಿ ಮತ್ತು ಆಕೆಯ ಕುಟುಂಬದ ಜೊತೆ ಸಂಪರ್ಕ, ಹಿಂದಿನ ಹೆರಿಗೆಯ ಮಾಹಿತಿ ಹಾಗೂ ಪ್ರಕರಣದ ಫಾಲೋ ಅಪ್ ಮಾಡುತ್ತಿದ್ದೇವೆ’ ಎಂದು ಜಿಲ್ಲಾಧಿಕಾರಿ ಎಂ.ಆರ್.ರವಿ ‘ಪ್ರಜಾವಾಣಿ’ಗೆ ತಿಳಿಸಿದರು.

ನಿಗಾ ಇಡಲು ಆ್ಯಪ್



ಪ್ರಸವಪೂರ್ವ ಗರ್ಭಿಣಿಯರು ಮತ್ತು ನಂತರದಲ್ಲಿ ಬಾಣಂತಿಯರ ಆರೋಗ್ಯದ ಮೇಲೆ ನಿಗಾ ಇಡಲು ಟಾಟಾ ಎಲೆಕ್ಟ್ರಾನಿಕ್ಸ್ ಸಂಸ್ಥೆ ಸಿಎಸ್‌ಆರ್ ಅನುದಾನದ ಅಡಿ ಮೊಬೈಲ್ ಅಪ್ಲಿಕೇಷನ್ ರೂಪಿ-ಸಲಾಗುತ್ತಿದೆ.

‘ಸದ್ಯ ಅಧಿಕಾರಿಗಳು, ತಜ್ಞ ವೈದ್ಯರಿರುವ ವಾಟ್ಸ್‌ಆ್ಯಪ್ ಗ್ರೂಪ್ ರಚಿಸಿ ನಿಗಾವಹಿಸಲಾಗುತ್ತಿದೆ. ಕ್ರಮಬ-ದ್ಧವಾಗಿ, ತ್ವರಿತವಾಗಿ ಸ್ಪಂದಿಸಲು ಹೊಸ ಆ್ಯಪ್ ನೆರವಾಗಲಿದೆ’ ಎಂದು ಜಿಲ್ಲಾಧಿಕಾರಿ ರವಿ ತಿಳಿಸಿದರು.

ವಾಟ್ಸ್ ಆ್ಯಪ್ ಗ್ರೂಪ್‌ನಲ್ಲಿ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಸಿಇಒ, ಜಿಲ್ಲಾ ಆರೋಗ್ಯಾಧಿಕಾರಿ, ಜಿಲ್ಲಾ ಆರ್‌ಸಿಎಚ್ ಅಧಿಕಾರಿ, ತಾಲ್ಲೂಕುಗಳ ನೋಡಲ್ ಅಧಿಕಾರಿಗಳು, ತಾಲ್ಲೂಕು ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿಗಳು, ಮಹಿಳಾ ತಜ್ಞರು, ಮಕ್ಕಳ ತಜ್ಞರು, ಜಿಲ್ಲಾ ಆಸ್ಪತ್ರೆ ವೈದ್ಯರು, ಆಂಬುಲೆನ್ಸ್ ಚಾಲಕರು, ರಕ್ತ ನಿಧಿ, ನರ್ಸ್‌ಗಳು, ಶ್ರೀ ದೇವರಾಜ ಅರಸು ವೈದ್ಯಕೀಯ ಕಾಲೇಜಿನ ತಜ್ಞ ವೈದ್ಯರು ಇದ್ದಾರೆ.

ಸಮಸ್ಯೆಯಾತ್ಮಕ ಗರ್ಭಿಣಿಯರ ಗುರುತಿಸುವಿಕೆ ಹಾಗೂ ನಿತ್ಯ ಮೇಲ್ವಿಚಾರಣೆ ನಡೆಯುತ್ತಿರುತ್ತದೆ. ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದಲ್ಲಿ ಖಾಸಗಿ ಆಸ್ಪತ್ರೆಗಳ ಜೊತೆ ಸಂಪರ್ಕ ಸಾಧಿಸಲಾಗುತ್ತದೆ. ಹೆರಿಗೆಯ ನಂತರ 48 ತಾಸು ತಾಯಿ ಆರೈಕೆ ಮಾಡಲಿದ್ದು, ಸಮಸ್ಯೆಯಾತ್ಮಕ ಪ್ರಕರಣಗಳ ನಿಯಮಿತ ಫಾಲೋ ಅಪ್ ನಡೆಯುತ್ತದೆ ಎಂದು ತಿಳಿಸಿದರು.

ಆರ್‌ಆರ್‌ಆರ್ ಮಾದರಿ ಅನುಷ್ಠಾನದ ಮೂಲಕ ತಾಯಿ ಮರಣ ಗಣನೀಯವಾಗಿ ತಗ್ಗಿದೆ. ಭವಿಷ್ಯದಲ್ಲಿ ಇನ್ನಷ್ಟು ಕ್ರಮಗಳಿಂದ ಶೂನ್ಯಕ್ಕೆ ತಗ್ಗಿಸಲು ಪ್ರಯತ್ನ ಮಾಡುತ್ತಿದ್ದೇವೆ

ಎಂ.ಆರ್.ರವಿ, ಜಿಲ್ಲಾಧಿಕಾರಿ

ಆರ್‌ಸಿಎಚ್ ಪೋರ್ಟಲ್ ಮಾಹಿತಿ ಆಧರಿಸಿ ಸಮಸ್ಯೆ ಇರುವ ಗರ್ಭಿಣಿಯರನ್ನು ಗುರುತಿಸಲಾಗುತ್ತದೆ. ಪ್ರಸವಪೂರ್ವದಲ್ಲಿ ಮೂರು ತಿಂಗಳು ನಿಗಾ ಇಟ್ಟು ಚಿಕಿತ್ಸೆಗೆ ಕ್ರಮವಹಿಸಲಾಗುತ್ತದೆ

ಡಾ.ಜಿ.ಶ್ರೀನಿವಾಸ್, ಜಿಲ್ಲಾ ಆರೋಗ್ಯಾಧಿಕಾರಿ, ಕೋಲಾರ

ಬಿಟುಮಿನ್ ದರದಲ್ಲಿ ಹೆಚ್ಚಳ ಪಿಡಬ್ಲ್ಯುಡಿ ದರಪಟ್ಟಿ ಪರಿಷ್ಕರಣೆ

ಬೆಂಗಳೂರು: ಪಶ್ಚಿಮ ಏಷ್ಯಾದಲ್ಲಿ ಯುದ್ಧದಿಂದಾಗಿ ಬಿಟುಮಿನ್ ದರದಲ್ಲಿ ಹೆಚ್ಚಳವಾಗಿರುವುದರಿಂದ, ದರಪಟ್ಟಿ-ಯನ್ನು ಪರಿಷ್ಕರಿಸಿ ಲೋಕೋಪಯೋಗಿ ಇಲಾಖೆ ಆದೇಶ ಹೊರಡಿಸಿದೆ.

‘ಬಿಟುಮಿನ್ ಕೊರತೆಯಿಂದಾಗಿ ಅದರ ದರ ಬಹಳಷ್ಟು ಹೆಚ್ಚಾಗಿದೆ. ಕಾಮಗಾರಿ ನಡೆಸುವ ಸಂದರ್ಭದಲ್ಲಿ ಯಾವುದಾದರೂ ಪ್ರಮುಖ ಸಾಮಗ್ರಿಯ ದರ ಅತಿಹೆಚ್ಚಾದರೆ ಅದಕ್ಕೆ ಅನುಗುಣವಾಗಿ ‘ಸ್ಟಾರ್ ರೇಟ್’ ನೀಡುವ ಪದ್ಧತಿ ಇದೆ. ರಸ್ತೆ ಕಾಮಗಾರಿಯಲ್ಲಿ ಮುಖ್ಯವಾಗಿರುವ ಬಿಟುಮಿನ್ ದರದಿಂದ ರಾಜ್ಯದಾದ್ಯಂತ ಗುತ್ತಿಗೆದಾರರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಅವರಿಗೆ ‘ಸ್ಟಾರ್ ರೇಟ್’ ನೀಡಬೇಕು’ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್. ಮಂಜುನಾಥ್ ಅವರು ಎಲ್ಲ ಇಲಾಖೆಗಳಿಗೆ ಮನವಿ ಪತ್ರ ಸಲ್ಲಿಸಿದ್ದರು.

ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಅವರು ಮನವಿಗೆ ಸ್ಪಂದಿಸಿದ್ದು, ಅಧಿಕಾರಿಗಳಿಗೆ ಸೂಚನೆ ನೀಡಿದ್ದರು. ಈ ಬಗ್ಗೆ ಪರಿಶೀಲನೆ ನಡೆಸಿದ ಇಲಾಖೆ, ಪರಿಷ್ಕೃತ ಬಿಟುಮಿನ್ ದರಗಳನ್ನು ಆಧರಿಸಿ ದರ ಪಟ್ಟಿಯಲ್ಲಿ ಐಟಂಗಳ ದರಗಳನ್ನು ಪರಿಷ್ಕರಿಸಿ ಏಪ್ರಿಲ್ 4ರಿಂದ ಅನ್ವಯವಾಗುವಂತೆ ಜಾರಿ ಮಾಡಲು ಆದೇಶಿಸಿದೆ.

₹300 ಕೋಟಿ ಬಿಡುಗಡೆ: ‘ರಾಜ್ಯದ ಗುತ್ತಿಗೆದಾರರ ಸಂಘದ ಹೋರಾಟದ ಫಲವಾಗಿ, ಲೋಕೋಪಯೋಗಿ ಇಲಾಖೆ ₹300 ಕೋಟಿ ಬಾಕಿ ಬಿಲ್ ಅನ್ನು ಬಿಡುಗಡೆ ಮಾಡಿದೆ. ಇದರಿಂದ ಸುಮಾರು 5 ಸಾವಿರ ಸಣ್ಣ ಮತ್ತು ಮಧ್ಯಮ ಗುತ್ತಿಗೆದಾರರಿಗೆ ಅನುಕೂಲವಾಗಲಿದೆ. ₹10 ಲಕ್ಷದವರೆಗಿನ ಬಿಲ್ ಪಾವತಿ ಮಾಡಲಾಗುತ್ತಿದೆ’ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ನಂದಕುಮಾರ್ ತಿಳಿಸಿದರು.

ಪಲ್ಲಕ್ಕಿ ಉತ್ಸವ ಸಂಭ್ರಮ

ಪ್ರಜಾವಾಣಿ ಚಿತ್ರ

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಉಗರಗೋಳ ಗ್ರಾಮದಲ್ಲಿ ಶನಿವಾರ ಬೀರಲಿಂಗೇಶ್ವರ ಜಾತ್ರೆ ಪ್ರಯುಕ್ತ ಪಲ್ಲಕ್ಕಿ ಉತ್ಸವ ಅದ್ದೂರಿಯಾಗಿ ನಡೆಯಿತು

ಸುದ್ದಿ 2 ನಿಮಿಷ

ವಿನಯಗೆ ಕೈದಿ ಸಂಖ್ಯೆ 16,110

ಬೆಂಗಳೂರು: ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣದ ಅಪರಾಧಿ, ಧಾರವಾಡ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿಗೆ ಕೈದಿ ಸಂಖ್ಯೆ 16,110 ನೀಡಲಾಗಿದೆ. ಉಳಿದ 16 ಅಪರಾಧಿಗಳಿಗೂ ಶನಿವಾರ ಮಧ್ಯಾಹ್ನ ಕೈದಿ ಸಂಖ್ಯೆ ನೀಡಲಾಗಿದೆ.

17 ಅಪರಾಧಿಗಳನ್ನು ಕಾರಾಗೃಹದ ಕ್ವಾರಂಟೈನ್ ಬ್ಯಾರಕ್‌ನಲ್ಲಿ ಇಡಲಾಗಿದೆ. ಹತ್ತು ದಿನ ಕಳೆದ ಬಳಿಕ ಪ್ರತ್ಯೇಕ ಬ್ಯಾರಕ್‌ಗಳಿಗೆ ಸ್ಥಳಾಂತರ ಮಾಡಲಾಗುವುದು ಎಂದು ಜೈಲಿನ ಮೂಲಗಳು ತಿಳಿಸಿವೆ.

‘ಸದ್ಯ ಯಾರಿಗೂ ಕೆಲಸ ಹಂಚಿಕೆ ಮಾಡಿಲ್ಲ. ಸದ್ಯದಲ್ಲೇ ಕೆಲಸ ಹಂಚಿಕೆ ಮಾಡಿ, ಕೂಲಿ ನಿಗದಿಪಡಿಸಲಾಗುವುದು’ ಎಂದು ಹೇಳಿವೆ.

ವಿನಯ ಕುಲಕರ್ಣಿ ಸೇರಿದಂತೆ 17 ಅಪರಾಧಿಗಳಿಗೆ ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯವು ಶುಕ್ರವಾರ ಜೀವಾವಧಿ ಶಿಕ್ಷೆ ವಿಧಿಸಿತ್ತು. ಶುಕ್ರವಾರ ರಾತ್ರಿಯೇ ಎಲ್ಲರನ್ನೂ ಪರಪ್ಪನ ಅಗ್ರಹಾರ ಜೈಲಿಗೆ ಸ್ಥಳಾಂತರ ಮಾಡಲಾಗಿತ್ತು.

ಕುವೆಂಪು ವಿ.ವಿ ಹಗರಣ: ತನಿಖೆಗೆ ಸಮಿತಿ

ಬೆಂಗಳೂರು: ಕುವೆಂಪು ವಿಶ್ವವಿದ್ಯಾಲಯದಲ್ಲಿ ಸ್ಮಾರ್ಟ್‌ಕ್ಲಾಸ್‌ಗಳ ನಿರ್ಮಾಣಕ್ಕಾಗಿ ನೀಡಿದ್ದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಯ (ಎಸ್‌ಸಿಎಸ್‌ಪಿ, ಟಿಎಸ್‌ಪಿ) ಹಣ ದುರುಪಯೋಗ ಕುರಿತು ತನಿಖೆ ನಡೆಸಲು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಗುರುರಾಜನ್ ಅವರನ್ನು ನೇಮಿಸಲಾಗಿದೆ.

ಹಣ ದುರುಪಯೋಗ ಕುರಿತು ನೇಮಕವಾದ ಏಕಸದಸ್ಯ ತನಿಖಾ ಸಮಿತಿಯು ಸೂಕ್ತ ತನಿಖೆ ನಡೆಸಿ, ಒಂದು ತಿಂಗಳ ಒಳಗೆ ವರದಿ ನೀಡುವಂತೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಆದೇಶ ಹೊರಡಿಸಿದ್ದಾರೆ. ಸಮಿತಿಗೆ ನೆರವು ನೀಡುವ ಜವಾಬ್ದಾರಿಯನ್ನು ಲೋಕಭವನದ ವಕೀಲ ಅಭಿಷೇಕ್ ಕುಮಾರ್ ಅವರಿಗೆ ವಹಿಸಲಾಗಿದೆ.

ವಿಶ್ವವಿದ್ಯಾಲಯದಲ್ಲಿ ಸ್ಮಾರ್ಟ್‌ಕ್ಲಾಸ್ ಸೌಲಭ್ಯ ಒದಗಿಸಲು 2022ನೇ ಜನವರಿಯಲ್ಲಿ ರಾಜ್ಯ ಸರ್ಕಾರ ₹5 ಕೋಟಿ ಅನುದಾನ ಒದಗಿಸಿತ್ತು. ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ‘ಸ್ಮಾರ್ಟ್‌ಕ್ಲಾಸ್’ಗಳನ್ನು ಸಿದ್ಧಪಡಿಸಲಾಗಿತ್ತು. ಆದರೆ, ಮಾರುಕಟ್ಟೆ ಬೆಲೆಗಿಂತ ಅಧಿಕ ದರದಲ್ಲಿ ಸಾಮಗ್ರಿಗಳನ್ನು ಖರೀದಿಸಿ ವಂಚಿಸಲಾಗಿದೆ. ಭೌತಿಕ ಪರಿಶೀಲನೆ ನಡೆಸದೆ, ನಗದು ರಸೀದಿ ಪಡೆಯದೆ ಗುತ್ತಿಗೆ ಕಂಪನಿಯೊಂದಕ್ಕೆ ₹2.99 ಕೋಟಿ ಪಾವತಿಸಲಾಗಿದೆ ಎಂದು ಕೆಲವರು ಉನ್ನತ ಶಿಕ್ಷಣ ಇಲಾಖೆಗೆ ದೂರು ನೀಡಿದ್ದರು.

ಈ ಕುರಿತು ಈಗಾಗಲೇ ಶಿವಮೊಗ್ಗ ಜಿಲ್ಲಾ ನ್ಯಾಯಾಧೀಶ ಎಚ್.ಬಿ.ರವೀಂದ್ರನಾಥ್ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿತ್ತು. ಸಮಿತಿಯು ಅಂದಿನ ಕುಲಪತಿ ಪ್ರೊ.ಬಿ.ಪಿ.ವೀರಭದ್ರಪ್ಪ ಸೇರಿದಂತೆ ಹಲವು ಅಧಿಕಾರಿಗಳು ಲೋಪ ಎಸಗಿದ್ದಾರೆ ಎಂದು ವರದಿ ನೀಡಿತ್ತು. ರಾಜ್ಯ ಸರ್ಕಾರ ಸಲ್ಲಿಸಿದ ಈ ವರದಿಯ ಆಧಾರದಲ್ಲಿ ದೂರುಗಳ ಸತ್ಯಾಸತ್ಯತೆ ಪರಿಶೀಲಿಸಲು ಹೊಸ ಸಮಿತಿ ರಚಿಸಲಾಗಿದೆ.

‘ಮುಂದಿನ ವರ್ಷ ಜಿ–20 ಉಪಗ್ರಹ ಉಡ್ಡಯನ’

ಹೈದರಾಬಾದ್ (ಪಿಟಿಐ): ಜಿ–20 ರಾಷ್ಟ್ರಗಳ ಉಪಗ್ರಹವೊಂದನ್ನು ಉಡ್ಡಯನ ಮಾಡಲು ಇಸ್ರೊ ಸಜ್ಜಾಗಿದೆ.

‘ಹವಾಮಾನ, ವಾಯು ಮಾಲಿನ್ಯ ಹಾಗೂ ವಾತಾವರಣದಲ್ಲಿನ ಬದಲಾವಣೆಗಳ ಮೇಲೆ ನಿಗಾ ಇರಿಸುವ ಉದ್ದೇಶದ ಜಿ–20 ಉಪಗ್ರಹವನ್ನು ಮುಂದಿನ ವರ್ಷ ಉಡ್ಡಯನ ಮಾಡುವ ನಿರೀಕ್ಷೆ ಇದೆ’ ಎಂದು ಇಸ್ರೊ ಮುಖ್ಯಸ್ಥ ವಿ.ನಾರಾಯಣನ್ ಶನಿವಾರ ಹೇಳಿದ್ದಾರೆ. ‘ಜಿ–20 ರಾಷ್ಟ್ರಗಳಿಗಾಗಿ ಈ ಉಪಗ್ರಹದ ಅಭಿವೃದ್ಧಿ ಹಾಗೂ ಉಡ್ಡಯನಕ್ಕೆ ಭಾರತವೇ ಮುಂದಾಳತ್ವ ವಹಿಸಲಿದೆ’ ಎಂದರು.

‘ಬಾನುಲಿ ಸುದ್ದಿ ವಿಭಾಗ: ಧಾರವಾಡದಲ್ಲೇ ಉಳಿಸಿ’

• ಬಿ.ಜೆ.ಧನ್ಯಪ್ರಸಾದ್

ಧಾರವಾಡ: ನಗರದ ಆಕಾಶವಾಣಿ ಕೇಂದ್ರದ ಪ್ರಾದೇಶಿಕ ಸುದ್ದಿ ವಿಭಾಗದ ಕಾರ್ಯಭಾರವನ್ನು ತಾತ್ಕಾಲಿಕವಾಗಿ ಬೆಂಗಳೂರು ಆಕಾಶವಾಣಿ ಕೇಂದ್ರಕ್ಕೆ ವರ್ಗಾಯಿಸಲು ಆಕಾಶವಾಣಿ ನಿರ್ದೇಶನಾಲಯ ಆದೇಶ ಹೊರಡಿಸಿದೆ.

ಈ ಪ್ರಕಾರ, ನಿಲಯದಿಂದ ಸಿದ್ಧವಾ-ಗುತ್ತಿದ್ದ ‘ಪ್ರದೇಶ ಸಮಾಚಾರ’ ಸೇರಿ ಸುದ್ದಿ ಕಾರ್ಯಕ್ರಮಗಳು ಬೆಂಗಳೂರು ಕೇಂದ್ರದಲ್ಲಿಯೇ ಸಿದ್ಧವಾಗುವ ಸಾಧ್ಯತೆಗಳಿವೆ. ‘ಏಪ್ರಿಲ್ 17ರಂದು ಆದೇಶ ಹೊರ-ಡಿಸಲಾಗಿದ್ದು, ಮೇ 15ರಿಂದ ವರ್ಗಾಯಿಸಲು ಸೂಚಿಸಲಾಗಿದೆ. ಆದರೆ, ಪ್ರಾದೇಶಿಕ ಸುದ್ದಿ ವಿಭಾಗವನ್ನು ಧಾರವಾಡದಲ್ಲೇ ಉಳಿಸಬೇಕು’ ಎಂಬುದು ಈ ಭಾಗದವರ ಆಗ್ರಹವಾಗಿದೆ. ಧಾರವಾಡ ಕೇಂದ್ರ ಕಳೆದ ವರ್ಷ ಅಮೃತ ಮಹೋತ್ಸವ ಆಚರಿಸಿದೆ. ಸುದ್ದಿ ವಿಭಾಗಕ್ಕೆ 45 ವರ್ಷಗಳ ಇತಿಹಾಸ ಇದೆ. ಬೆಳಿಗ್ಗೆ 7.05ಕ್ಕೆ ಮತ್ತು ಮಧ್ಯಾಹ್ನ 12ಕ್ಕೆ ಪ್ರದೇಶ ಸಮಾಚಾರ ವನ್ನು ಇಲ್ಲಿಂದ ಪ್ರಸಾರ ಮಾಡಲಾಗುತ್ತಿದೆ.

‘ಪ್ರದೇಶ ಸಮಾಚಾರ ಧಾರವಾಡ ಆಕಾಶವಾಣಿ ಕೇಂದ್ರದ ಹಿರಿಮೆ ಮತ್ತು ಹೆಮ್ಮೆ. ಈ ಕೇಂದ್ರದಿಂಧ ಪ್ರಾದೇಶಿಕ ಸುದ್ದಿ ವಿಭಾಗವನ್ನು ಸ್ಥಳಾಂತರಿಸುವ ಆದೇಶ ಕೈಬಿಡಬೇಕು. ಇಲ್ಲೇ ಉಳಿಸಲು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಕ್ರಮವಹಿಸಬೇಕು’ ಎಂದು ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಲಿಂಗರಾಜ ಅಂಗಡಿ ಒತ್ತಾಯಿಸಿದರು.

‘ಪ್ರಾದೇಶಿಕ ಸುದ್ದಿ ವಿಭಾಗವನ್ನು ಬೆಂಗಳೂರಿಗೆ ಸ್ಥಳಾಂತರಿಸಿದರೆ ಉತ್ತರ ಕರ್ನಾಟಕ ಭಾಗದವರಿಗೆ ಅನ್ಯಾಯ ಆಗುತ್ತದೆ. ಉತ್ತರ ಕರ್ನಾಟಕದ ಸುದ್ದಿಗಳು ಪ್ರಸಾರ ಆಗುವುದಿಲ್ಲ. ಅದನ್ನು ವರ್ಗಾಯಿಸಲು ಬಿಡಬಾರದು’ ಎಂದು ಧಾರವಾಡದ ಆಕಾಶವಾಣಿಯ ನಿವೃತ್ತ ಅಧಿಕಾರಿ ಶರಣಬಸವ ಚೋಳಿನ ಅಭಿಪ್ರಾಯಪಟ್ಟರು.

ಧಾರವಾಡ ಕೇಂದ್ರದಿಂದ ಪ್ರಸಾರವಾಗುವ ಪ್ರದೇಶ ಸಮಾಚಾರವನ್ನು ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ. ಪ್ರಾದೇಶಿಕ ಸುದ್ದಿ ವಿಭಾಗವನ್ನು ಸ್ಥಳಾಂತರಿಸಿದರೆ ಹೋರಾಟ ನಡೆಸುತ್ತೇವೆ.

ಶಂಕರ ಹಲಗತ್ತಿ, ಪ್ರಧಾನ ಕಾರ್ಯದರ್ಶಿ, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

ಪ್ರಾದೇಶಿಕ ಸುದ್ದಿ ವಿಭಾಗ ಸ್ಥಳಾಂತರಿಸುವ ವಿಷಯ ಗಮನದಲ್ಲಿದೆ. ವಾರ್ತಾ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಜತೆ ಚರ್ಚಿಸಿದ್ದೇನೆ. ವಿಭಾಗವನ್ನು ಧಾರವಾಡದಲ್ಲೇ ಉಳಿಸಲು ಪ್ರಯತ್ನಿಸಲಾಗುವುದು.

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಕೃಷಿ ಹೊಂಡಗಳಿಗೆ ಬೇಲಿ ಹಾಕಿಸಿ: ಖಾದರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಈಚೆಗೆ ಕೃಷಿ ಹೊಂಡಗಳಲ್ಲಿ ಮಕ್ಕಳು ಮುಳುಗಿ ಮೃತಪಡುತ್ತಿರುವ ಘಟನೆಗಳು ನಡೆದಿವೆ. ಕೃಷಿ ಹೊಂಡಗಳಿಗೆ ಬೇಲಿ ಹಾಕಿಸಿ’ ಎಂದು ವಿಧಾನಸಭೆ ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರಿಗೆ ಪತ್ರ ಬರೆದಿದ್ದಾರೆ.

‘ಕೃಷಿ ಹೊಂಡಗಳಲ್ಲಿ ಈಚಿನ ವರ್ಷಗಳಲ್ಲಿ ಹಲವು ದುರಂತಗಳು ನಡೆದಿವೆ. ಇದೇ ವರ್ಷದಲ್ಲಿ ಯಾದಗಿರಿ ಜಿಲ್ಲೆಯ ಸುರಪುರದ ನಗನೂರು ಗ್ರಾಮ ಮತ್ತು ಚಿಕ್ಕೋಡಿಯಲ್ಲಿ ಮಕ್ಕಳು ಮುಳುಗಿ, ಮೃತಪಟ್ಟಿದ್ದಾರೆ. ಇದು ಆತಂಕಕ್ಕೆ ಕಾರಣವಾಗಿದೆ’ ಎಂದು ಪತ್ರದಲ್ಲಿ ಕಳವಳ ವ್ಯಕ್ತಪಡಿಸಿದ್ದಾರೆ.

‘ಕೃಷಿ ಹೊಂಡಗಳ ಬಳಿ ಮಕ್ಕಳು, ಸಾರ್ವಜನಿಕರು ಮತ್ತು ಜಾನುವಾರುಗಳ ಸುರಕ್ಷತೆಗಾಗಿ ಜಾರಿಯಲ್ಲಿರುವ ಪ್ರಮಾಣಿತ ಕಾರ್ಯಾಚರಣೆ ವಿಧಾನವನ್ನು (ಎಸ್‌ಒಪಿ) ಯಾರೂ ಪಾಲಿಸುತ್ತಿಲ್ಲ. ಎಸ್‌ಒಪಿಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತನ್ನಿ’ ಎಂದು ಸೂಚಿಸಿದ್ದಾರೆ.

‘ಎಲ್ಲ ಕೃಷಿ ಹೊಂಡಗಳಿಗೆ ಬೇಲಿ ನಿರ್ಮಿಸಿ, ಎಚ್ಚರಿಕೆ ಫಲಕ ಅಳವಡಿಸಬೇಕು. ಸುಸ್ಥಿತಿಯಲ್ಲಿ ಇಲ್ಲದ ಕೃಷಿಹೊಂಡಗಳನ್ನು ಮುಚ್ಚಿಸಬೇಕು. ಸಾರ್ವಜನಿಕರಲ್ಲೂ ಜಾಗೃತಿ ಮೂಡಿಸಿ’ ಎಂದು ಸಲಹೆ ನೀಡಿದ್ದಾರೆ.

ಸಯ್ಯದ್ ಕೆರೆಕಟ್ಟೆ ಸೈಫುಲ್ಲಾ ನಿಧನ

ದಾವಣಗೆರೆ: ಕಾಂಗ್ರೆಸ್‌ನ ಹಿರಿಯ ಮುಖಂಡ, ರಾಜ್ಯ ಅಲ್ಪಸಂಖ್ಯಾತ ಆಯೋಗದ ಮಾಜಿ ಅಧ್ಯಕ್ಷ ಹಾಗೂ ಇಲ್ಲಿನ ಮಿಲ್ಲತ್ ಎಜುಕೇಶನ್ ಆ್ಯಂಡ್ ವೆಲ್‌ಫೇರ್ ಸೊಸೈಟಿಯ ಸಂಸ್ಥಾಪಕ ಕಾರ್ಯದರ್ಶಿ ಸಯ್ಯದ್ ಕೆರೆಕಟ್ಟೆ ಸೈಫುಲ್ಲಾ (76) ಅವರು ಶನಿವಾರ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. . ಇವರಿಗೆ ಪತ್ನಿ, ಪುತ್ರ ಯುವ ಕಾಂಗ್ರೆಸ್ ಘಟಕದ ಕಾರ್ಯದರ್ಶಿ ಖಾಲಿದ್ ಸೈಫುಲ್ಲಾ ಹಾಗೂ ಐವರು ಪುತ್ರಿಯರಿದ್ದಾರೆ. ಭಾನುವಾರ ಬೆಳಿಗ್ಗೆ ನಗರದ ಪಿ.ಬಿ. ರಸ್ತೆಯಲ್ಲಿರುವ ಹಳೇ ಖಬರಸ್ತಾನದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

2008ರಲ್ಲಿ ದಾವಣಗೆರೆ ದಕ್ಷಿಣ ಕ್ಷೇತ್ರದಿಂದ ಶಾಮನೂರು ಶಿವಶಂಕರಪ್ಪ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಲಾಗಿತ್ತು. ಇದರಿಂದ ಮುಸ್ಲಿಂ ಸಮುದಾಯದ ಕೆಲ ನಾಯಕರಲ್ಲಿ ಅಸಮಾಧಾನ ಭುಗಿಲೆದ್ದಿತ್ತು.

ಇದರಿಂದಾಗಿ ಕೊನೆಯ ಕ್ಷಣದಲ್ಲಿ ಸಯ್ಯದ್ ಸೈಫುಲ್ಲಾ ಅವರಿಗೆ ದಾವಣಗೆರೆ ಉತ್ತರ ವಿಧಾನಸಭೆ ಕ್ಷೇತ್ರದಿಂದ ಸ್ಪರ್ಧಿಸಲು ಕಾಂಗ್ರೆಸ್ ‘ಬಿ’ ಫಾರ್ಮ್ ನೀಡಿತ್ತು. ನಾಮಪತ್ರ ಸಲ್ಲಿಸುವ ಕೊನೆಯ ದಿನ ಕಾಂಗ್ರೆಸ್ ಮುಖಂಡ ಮಂಜುನಾಥ್ ಭಂಡಾರಿ ಅವರು ಬೆಂಗಳೂರಿನಿಂದ ಹೆಲಿಕಾಪ್ಟರ್‌ನಲ್ಲಿ ದಾವಣಗೆರೆಗೆ ಬಂದು ‘ಬಿ’ ಫಾರ್ಮ್ ಹಸ್ತಾಂತರಿಸಿದ್ದರು. ಈ ವೇಳೆ ಶಾಮನೂರು ಶಿವಶಂಕರಪ್ಪ ಅವರ ಪುತ್ರ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಬೆಂಬಲಿಗರು ಸೈಫುಲ್ಲಾ ಅವರಿಗೆ ಟಿಕೆಟ್ ನೀಡಿದ್ದನ್ನು ವಿರೋಧಿಸಿದ್ದರಿಂದ ಗೊಂದಲ ಉಂಟಾಗಿತ್ತು.

ಸಯ್ಯದ್ ಸೈಫುಲ್ಲಾ ಅವರು ತಮಗೆ ನೀಡಿದ್ದ ‘ಬಿ’ ಫಾರ್ಮ್‌ನಲ್ಲಿ ತಮ್ಮ ಹೆಸರು ಅಳಿಸಿ ಮಲ್ಲಿಕಾರ್ಜುನ್ ಅವರ ಹೆಸರು ಬರೆದು ಅವರಿಗೆ ನೀಡಿದ್ದರು. ತಿದ್ದುಪಡಿ ಮಾಡಿದ ‘ಬಿ’ ಫಾರ್ಮ್ ಸಲ್ಲಿಸಿದ ಕಾರಣಕ್ಕೆ ಮಲ್ಲಿಕಾರ್ಜುನ್ ಅವರ ನಾಮಪತ್ರ ತಿರಸ್ಕೃತಗೊಂಡಿತ್ತು. ಇದರಿಂದ ಕಾಂಗ್ರೆಸ್‌ನ ಅಭ್ಯರ್ಥಿಯಿಲ್ಲದೇ ಚುನಾವಣೆ ನಡೆದು, ಬಿಜೆಪಿ ಅಭ್ಯರ್ಥಿ ಗೆಲುವು ಸಾಧಿಸಿದ್ದರು.

ನಂತರ ಸೈಫುಲ್ಲಾ ಅವರು 2013ರಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ದಾವಣಗೆರೆ ದಕ್ಷಿಣ ಕ್ಷೇತ್ರದಿಂದ ಸ್ಪರ್ಧಿಸಿ, ಸೋಲನುಭವಿಸಿದರು. ಬಳಿಕ ಅವರು ಮತ್ತೆ ಕಾಂಗ್ರೆಸ್ ಸೇರ್ಪಡೆಯಾಗಿದ್ದರು.

ಹುದ್ದೆ ಮರಳಿಸಿ: ಕಾಂಗ್ರೆಸ್‌ಗೆ ಮುಸ್ಲಿಂ ಮುಖಂಡರ ಒತ್ತಾಯ

ಪ್ರಜಾವಾಣಿ ವಾರ್ತೆ

ಮೈಸೂರು: ‘ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆ ವಿಚಾರದಲ್ಲಿ ಮುಸ್ಲಿಂ ಮುಖಂಡರನ್ನು ಕಾಂಗ್ರೆಸ್ ಗುರಿಯಾಗಿಸಿರುವುದು ಸರಿಯಲ್ಲ. ರಾಜೀನಾಮೆ ಪಡೆದಿರುವ ನಾಯಕರಿಗೆ ಅವರ ಹುದ್ದೆಯಲ್ಲೆ ಮುಂದುವರಿಸಬೇಕು’ ಎಂದು ಮುಸ್ಲಿಂ ಮುಖಂಡರ ವೇದಿಕೆಯು ಆಗ್ರಹಿಸಿದೆ.

‘ಮುಸ್ಲಿಂ ಸಮುದಾಯ ಯಾವ ಪಕ್ಷದ ಪರ ಅಲ್ಲ, ವಿರುದ್ಧವೂ ಇಲ್ಲ. ಅನ್ಯಾಯ ಸರಿಪಡಿಸದಿದ್ದಲ್ಲಿ ನಾವು ಪರ್ಯಾಯವಾಗಿ ಚಿಂತಿಸಬೇಕಾಗುತ್ತದೆ’ ಎಂದು ಧಾರ್ಮಿಕ ಮುಖಂಡ ಮೌಲಾನ ಹರ್ಷದ್ ಇಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಅಸಮಾಧಾನ ವ್ಯಕ್ತಪಡಿಸಿದರು.

‘ಕಾಂಗ್ರೆಸ್ ಇವುಗಳನ್ನು ಆಂತರಿಕವಾಗಿ ಚರ್ಚಿಸಿ ಬಗೆಹರಿಸಿಕೊಳ್ಳಬೇಕಿತ್ತು. ಏಕಾಏಕಿ ವಜಾ ಮಾಡುವುದು, ರಾಜೀನಾಮೆ ಪಡೆಯುವುದು ಬೇಕಿರಲಿಲ್ಲ. ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿರುವಾಗ ನಾವಿದನ್ನು ನಿರೀಕ್ಷಿ-ಸಿರಲಿಲ್ಲ. ಕಾಂಗ್ರೆಸ್ ಹೈಕಮಾಂಡ್ ಈಗಾಲಾದರೂ ತಪ್ಪು ಸರಿಪಡಿಸಲಿ’ ಎಂದು ಒತ್ತಾಯಿಸಿದರು.

ನಿವೃತ್ತ ಪೊಲೀಸ್ ಅಧಿಕಾರಿ ಸುಹೈಲ್ ಅಹಮ್ಮದ್, ‘ದಾವಣಗೆರೆ ದಕ್ಷಿಣದಲ್ಲಿ 85ಸಾವಿರಕ್ಕೂ ಹೆಚ್ಚು ಮುಸ್ಲಿಂ ಮತದಾರರಿದ್ದಾರೆ. ಹೀಗಿದ್ದೂ ಸಮುದಾಯದವರಿಗೆ ಟಿಕೆಟ್ ನೀಡದೆ ವಂಚಿಸಲಾಯಿತು’ ಎಂದರು.

‘2023ರ ಚುನಾವಣೆಯಲ್ಲಿ ಶೇ 90ರಷ್ಟು ಮುಸ್ಲಿಂ ಮತದಾರರು ಕಾಂಗ್ರೆಸ್ ಪರ ನಿಂತಿದ್ದಾರೆ. ರಾಜ್ಯದ ಜನಸಂಖ್ಯೆಯಲ್ಲಿ ಶೇ 14ರಷ್ಟಿದ್ದು, ನಮಗೆ ಸಲ್ಲಬೇಕಾದ ಹುದ್ದೆ, ಅವಕಾಶ ನೀಡಬೇಕು’ ಎಂದು ಆಗ್ರಹಿಸಿದರು.

ಧಾರ್ಮಿಕ ಮುಖಂಡರಾದ ತಾಜುದ್ದೀನ್, ಜಕಾವುಲ್ಲಾ, ಸಯ್ಯದ್ ಅಹಮ್ಮದ್ ಇದ್ದರು.

ಮುಖ್ಯಾಂಶಗಳು

- ಅನ್ಯಾಯ ಸರಿಪಡಿಸಲು ಹೈಕಮಾಂಡ್‌ಗೆ ಮನವಿ
- ‘ಏಕಾಏಕಿ ವಜಾ ಕ್ರಮ ಸರಿಯಲ್ಲ’

ದಕ್ಷಿಣ ಆಫ್ರಿಕಾದಿಂದ ಸರಕು ವಿಮಾನದಲ್ಲಿ 16 ತಾಸು ಪ್ರಯಾಣ

ಬನ್ನೇರುಘಟ್ಟ ಉದ್ಯಾನಕ್ಕೆ ಬಂದ 4 ಚೀತಾ

ಪ್ರಜಾವಾಣಿ ವಾರ್ತೆ

ಆನೇಕಲ್: ಪ್ರಾಣಿ ವಿನಿಮಯ ಯೋಜನೆ ಅಡಿ ದಕ್ಷಿಣ ಆಫ್ರಿಕಾದ ಇಂಡುನಾ ಪ್ರೈಮೇಟ್ ಮತ್ತು ಪ್ಯಾರೆಟ್ ಪಾರ್ಕಿನಿಂದ ಎರಡು ಹೆಣ್ಣು ಸೇರಿ 4 ಚೀತಾಗಳನ್ನು ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ತರಲಾಗಿದೆ.

ಕಾರ್ಗೋ ವಿಮಾನದಲ್ಲಿ ದಕ್ಷಿಣ ಆಫ್ರಿಕಾದಿಂದ ಹೊರಟ ಈ ಚೀತಾಗಳು ಇಸ್ತಾಂಬುಲ್ ಮೂಲಕ 16 ತಾಸು ಪ್ರಯಾಣಿಸಿ, ಶನಿವಾರ ತಡರಾತ್ರಿ 1.15ಕ್ಕೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ತಲುಪಿದವು.

ನಾಲ್ಕೂ ಚೀತಾಗಳನ್ನು ಪ್ರತ್ಯೇಕ ಪೆಟ್ಟಿಗೆಗಳಲ್ಲಿ ತರಲಾಗಿತ್ತು. ಅವುಗಳ ಉಸಿರಾಟ, ಆಹಾರ ಮತ್ತು ಓಡಾಟಕ್ಕೆ ಅನುಕೂಲವಾಗುವಂತೆ ಪೆಟ್ಟಿಗೆಗಳನ್ನು ನಿರ್ಮಿಸಲಾಗಿತ್ತು. ಅರಣ್ಯ ಸಚಿವ ಈಶ್ವರ್ ಖಂಡ್ರೆ, ಬನ್ನೇರುಘಟ್ಟ ಜೈವಿಕ ಉದ್ಯಾನದ ಅಧಿಕಾರಿಗಳು ಮತ್ತು ಸಿಬ್ಬಂದಿ ನಾಲ್ಕೂ ಚೀತಾಗಳನ್ನು ಬರಮಾಡಿಕೊಂಡರು.

ಈ ನಾಲ್ಕು ಚೀತಾಗಳು ಬನ್ನೇರುಘಟ್ಟಕ್ಕೆ ಬಂದ ನಂತರ ಉದ್ಯಾನದಲ್ಲಿ ಹಬ್ಬದ ವಾತಾವರಣ ಮನೆ ಮಾಡಿದೆ. ಅಪರೂಪದ ವಿದೇಶಿ ಅತಿಥಿಗಳನ್ನು ಸಂಭ್ರಮದಿಂದ ಸ್ವಾಗತಿಸಲಾಯಿತು.



ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ದಕ್ಷಿಣ ಆಫ್ರಿಕಾದ ಚೀತಾಗಳು

ವಾತಾವರಣಕ್ಕೆ ಹೊಂದಿಕೊಳ್ಳುವ ಸವಾಲು

ದಕ್ಷಿಣ ಆಫ್ರಿಕಾದಿಂದ ತರಲಾಗಿರುವ ಚೀತಾಗಳು ಇಲ್ಲಿಯ ವಾತಾವರಣ ಮತ್ತು ಬೇಸಿಗೆಯ ಬಿಸಿಲಿಗೆ ಹೊಂದಿಕೊಳ್ಳುವುದು ಬಹು ದೊಡ್ಡ ಸವಾಲಾಗಿದೆ. ಬನ್ನೇರುಘಟ್ಟ ಜೈವಿಕ ಉದ್ಯಾನದ ಸಿಬ್ಬಂದಿ ವಿಶೇಷ ಕಾಳಜಿ ವಹಿಸಿ ಚಿರತೆಯ ಆರೋಗ್ಯ ನೋಡಿಕೊಳ್ಳುತ್ತಿದ್ದಾರೆ.

‘ಚೀತಾ ಸಂರಕ್ಷಣೆ ಮತ್ತು ಪ್ರಾಣಿ ಪ್ರಿಯರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಪ್ರಾಣಿ ವಿನಿಮಯ ಯೋಜನೆ ಅಡಿ ದಕ್ಷಿಣ ಆಫ್ರಿಕಾದಿಂದ ಚೀತಾಗಳನ್ನು ತರಿಸಲಾಗಿದೆ’ ಎಂದು ಉದ್ಯಾನದ ಅಧಿಕಾರಿಗಳು ತಿಳಿಸಿದರು.

‘30-45 ದಿನ ಕ್ವಾರಂಟೈನ್’

ಬನ್ನೇರುಘಟ್ಟ ಉದ್ಯಾನಕ್ಕೆ ಅಡಿ ತರಿಸಲಾದ ನಾಲ್ಕು ಚೀತಾಗಳ ಆರೋಗ್ಯದ ಮೇಲೆ ಪಶು ಸಂಗೋಪನಾ ಇಲಾಖೆಯ ಮಾರ್ಗಸೂಚಿಗಳಂತೆ ನಿಗಾ ಇಡಲಾಗಿದೆ. ಪ್ರಾಣಿಗಳನ್ನು ಆಮದು ಮಾಡಿಕೊಳ್ಳುವ ಮೊದಲು ಪ್ರಾಣಿಗಳ ಕ್ವಾರಂಟೈನ್ ಸೇವಾ ಇಲಾಖೆಯಿಂದ ನಿರಪೇಕ್ಷಣಾ ಪತ್ರ ಪಡೆಯಲಾಗಿದೆ. ಚೀತಾಗಳನ್ನು ಬನ್ನೇರುಘಟ್ಟ ಉದ್ಯಾನದಲ್ಲಿ 30-45 ದಿನ ಕ್ವಾರಂಟೈನ್ ಮಾಡಿ, ಆರೋಗ್ಯ ತಪಾಸಣೆ ನಂತರ ಸಾರ್ವಜನಿಕರ ವೀಕ್ಷಣೆಗೆ ಮೃಗಾಲಯಕ್ಕೆ ಸ್ಥಳಾಂತರಿಸಲಾಗುವುದು. ಚೀತಾಗೆ ಅನುಕೂಲವಾಗುವಂತೆ ಆಹಾರ ವ್ಯವಸ್ಥೆ ಮಾಡಲಾಗಿದೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸೂರ್ಯಸೇನ್ ‘ಪ್ರಜಾವಾಣಿ’ಗೆ ತಿಳಿಸಿದರು.

ಅಬ್ದುಲ್ ಕಲಾಂ ಶಾಲೆಗಳಿಗೆ ಶೇ 97 ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಶಾಲೆಗಳಿಗೆ ಸಿಬಿಎಸ್‌ಇ 10ನೇ ತರಗತಿಯ ಪರೀಕ್ಷೆಯಲ್ಲಿ ಶೇ 97ರಷ್ಟು ಫಲಿತಾಂಶ ಬಂದಿದೆ.

ಇಲಾಖೆ ನಡೆಸುತ್ತಿರುವ 29 ಶಾಲೆಗಳಲ್ಲಿ, 21 ಶಾಲೆಗಳು ಶೇ 100 ಫಲಿತಾಂಶ ಪಡೆದಿವೆ. ಬೆಂಗಳೂರು ಪ್ರದೇಶದಲ್ಲಿ 12ನೇ ಸ್ಥಾನ ಪಡೆದಿವೆ. ಪರೀಕ್ಷೆಗೆ ಕುಳಿತ 1,348 ವಿದ್ಯಾರ್ಥಿಗಳಲ್ಲಿ 1,304 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

‘ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಶಾಲೆಗಳು ಮಾತ್ರ ಸಿಬಿಎಸ್‌ಇ ಪಠ್ಯಕ್ರಮ ಅನುಸರಿಸುತ್ತಿದ್ದು, ಅಲ್ಲಿನ ಮಕ್ಕಳಿಗೆ ಖಾಸಗಿ ಶಾಲೆಗಳ ಜತೆ ಪೈಪೋಟಿ ನಡೆಸುವಷ್ಟು ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಅದರ ಫಲವಾಗಿ ಉತ್ತಮ ಫಲಿತಾಂಶ ಸಿಕ್ಕಿದೆ. ನೀಟ್, ಜೆಇಇ ಮೊದಲಾದ ಪರೀಕ್ಷೆಗಳಿಗೂ ವಸತಿ ಶಾಲೆಗಳಲ್ಲಿ ತರಬೇತಿ ನೀಡಲಾಗುತ್ತಿದೆ’ ಎಂದು ಅಲ್ಪಸಂಖ್ಯಾತರ ನಿರ್ದೇಶನಾಲಯದ ಸಹಾಯಕ ನಿರ್ದೇಶಕ ಸಿ.ಆರ್. ಶಿವಕುಮಾರ್ ಮಾಹಿತಿ ನೀಡಿದ್ದಾರೆ.

‘ಮಹಿಳೆಯರಿಂದ ತಕ್ಕ ಉತ್ತರ’

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ‘ಶಾಸನಸಭೆಗಳಲ್ಲಿ ಮಹಿಳೆಯರಿಗೆ ಶೇ33ರಷ್ಟು ಮೀಸಲಾತಿ ಕಲ್ಪಿಸುವ ಉದ್ದೇಶದ ಮಸೂದೆಯನ್ನು ಸೋಲಿಸುವ ಮೂಲಕ ವಿರೋಧ ಪಕ್ಷಗಳು ನಮ್ಮ ಸಂವಿಧಾನಕ್ಕೆ ಅವಮಾನ ಮಾಡಿವೆ. ಮಸೂದೆಗೆ ಸೋಲಾದ ಬಳಿಕ ಸಂಸತ್‌ನಲ್ಲಿ ಸಂಭ್ರಮಿಸಿದ ಕಾಂಗ್ರೆಸ್ ಹಾಗೂ ಅದರ ಮಿತ್ರಪಕ್ಷಗಳಿಗೆ ದೇಶದ ಮಹಿಳೆಯರು ತಕ್ಕ ಉತ್ತರ ಕೊಡುವರು’ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದ್ದಾರೆ.

ಮಹಿಳಾ ಮೀಸಲಾತಿ ಕಾಯ್ದೆಗೆ ತಿದ್ದುಪಡಿ, ಕ್ಷೇತ್ರಗಳ ಮರುವಿಂಗಡಣೆಗೆ ಸಂಬಂಧಿಸಿದ್ದು ಸೇರಿ ಒಟ್ಟು ಮೂರು ಮಸೂದೆಗಳಿಗೆ ಲೋಕಸಭೆಯಲ್ಲಿ ಅಂಗೀಕಾರ ಪಡೆಯುವ ಸರ್ಕಾರದ ಯತ್ನ ವಿಫಲಗೊಳಿಸಿದ ವಿರೋಧ ಪಕ್ಷಗಳ ವಿರುದ್ಧ ತೀವ್ರ ವಾಗ್ದಾಳಿ ನಡೆಸಿರುವ ಅವರು, ‘ವಿರೋಧ ಪಾಳಯ ಅವಕಾಶವಾದಿಗಳ ಗುಂಪು. ವಿಪಕ್ಷಗಳ ನಾಯಕರು ದೇಶದ ಮಹಿಳೆಯರ ಹಿತಾಸಕ್ತಿ ಬಲಿಕೊಟ್ಟು ತಮ್ಮ ಸ್ವಾರ್ಥ ಸಾಧನೆಗೆ ಕೆಲಸ ಮಾಡುತ್ತಾರೆ’ ಎಂದಿದ್ದಾರೆ.

ದೇಶವನ್ನುದ್ದೇಶಿಸಿ ಮಾತನಾಡಿದ ಅವರು, ಭಾಷಣದುದ್ದಕ್ಕೂ ವಿರೋಧ ಪಕ್ಷಗಳ ವಿರುದ್ಧ ಹರಿಹಾಯ್ದರಲ್ಲದೇ, ಮಹಿಳೆಯರಿಗೆ ಶೇ33ರಷ್ಟು ಮೀಸಲಾತಿ ಕಲ್ಪಿಸುವಲ್ಲಿ ಎದುರಾಗುವ ಎಲ್ಲ ಅಡೆತಡೆಗಳನ್ನು ತೊಡೆದು ಹಾಕುವುದಾಗಿ ಹೇಳಿದ್ದಾರೆ.

‘ಕಾಂಗ್ರೆಸ್, ಟಿಎಂಸಿ, ಸಮಾಜವಾದಿ ಪಕ್ಷ ಸೇರಿದಂತೆ ವಿರೋಧ ಪಕ್ಷಗಳ ಸ್ವಾರ್ಥ ರಾಜಕೀಯವು ಮಹಿಳೆಯರು ತಮ್ಮ ಹಕ್ಕುಗಳಿಂದ ವಂಚಿತವಾಗುವಂತೆ ಮಾಡಿದೆ’ ಎಂದಿದ್ದಾರೆ.

ದೇಶವು ಇಂದು ಎದುರಿಸುತ್ತಿರುವ ಪ್ರತಿಯೊಂದು ಸವಾಲಿಗೆ ಕಳೆದ ಹಲವು ವರ್ಷಗಳಿಂದ ಕಾಂಗ್ರೆಸ್ ಪಕ್ಷ ಅನುಸರಿಸಿಕೊಂಡು ಬರುತ್ತಿರುವ ನಕಾರಾತ್ಮಕ ನಡೆಗಳೇ ಕಾರಣ
ನರೇಂದ್ರ ಮೋದಿ, ಪ್ರಧಾನಿ

ಮೋದಿ ಮಾತು

‘ಮಹಿಳಾ ಮೀಸಲಾತಿ ಮಸೂದೆಗೆ ಲೋಕಸಭೆಯಲ್ಲಿ ಸೋಲುಂಟಾದ ವೇಳೆ ಕಾಂಗ್ರೆಸ್, ಡಿಎಂಕೆ, ಟಿಎಂಸಿ ಹಾಗೂ ಸಮಾಜವಾದಿ ಪಕ್ಷದ ಸಂಸದರು ಚಪ್ಪಾಳೆ ತಟ್ಟಿ, ಸಂಭ್ರಮಿಸಿದರು. ಇದು ದೇಶದ ಮಹಿಳೆಯರ ಆತ್ಮಗೌರವದ ಮೇಲೆ ಮಾಡಿದ ದಾಳಿ. ಅವರು ನ್ಯಾಯಯುತವಾಗಿ ಪಡೆಯಬೇಕಿದ್ದ ಹಕ್ಕನ್ನು ಕಸಿದುಕೊಂಡಿದ್ದಕ್ಕಾಗಿ ವಿರೋಧ ಪಕ್ಷಗಳ ಸಂಸದರು ಚಪ್ಪಾಳೆ ತಟ್ಟುತ್ತಿದ್ದರು’ ಎಂದಿದ್ದಾರೆ.

‘ಮಹಿಳೆ ಏನನ್ನಾದರೂ ಮರೆತುಬಿಡಬಹುದು, ಆದರೆ, ಆಕೆ ತನಗಾದ ಅನ್ಯಾಯವನ್ನು ಮಾತ್ರ ಎಂದಿಗೂ ಮರೆಯುವುದಿಲ್ಲ’ ಎನ್ನುವ ಮೂಲಕ ವಿರೋಧ ಪಕ್ಷಗಳ ನಾಯಕರಿಗೆ ಎಚ್ಚರಿಸಿದ್ದಾರೆ.

‘ಈ ಪಕ್ಷಗಳ ನಾಯಕರು ಎದುರಾದ ಇಲ್ಲವೇ ಅವರನ್ನು ಹತ್ತಿರದಿಂದ ನೋಡುವ ಸಂದರ್ಭಗಳು ಒದಗಿದಾಗ, ಸಂಸತ್‌ನಲ್ಲಿ ಈ ನಾಯಕರು ಸಂಭ್ರಮಿಸಿದ್ದನ್ನು, ಮೀಸಲಾತಿ ಸಿಗಲಿದೆ ಎಂದು ತಾವು ಹೊಂದಿದ್ದ ಆಶಾಭಾವವನ್ನು ಹೊಸಕಿ ಹಾಕಿದ್ದನ್ನು ದೇಶದ ಮಹಿಳೆಯರು ನೆನಪಿಸಿಕೊಳ್ಳುವರು’ ಎಂದು ಮೋದಿ ಹೇಳಿದ್ದಾರೆ.

‘21ನೇ ಶತಮಾನದ ಮಹಿಳೆ ವಿರೋಧ ಪಕ್ಷಗಳ ಪ್ರತಿಯೊಂದು ನಡೆಯನ್ನು ಗಮನಿಸುತ್ತಿದ್ದಾಳೆ, ಅವುಗಳ ನಿಜವಾದ ಉದ್ದೇಶಗಳನ್ನು ಗ್ರಹಿಸುವ ಶಕ್ತಿ ಹೊಂದಿದ್ದಾಳೆ ಹಾಗೂ ಈ ಪಕ್ಷಗಳ ಕಾರ್ಯವನ್ನು ಅರ್ಥ ಮಾಡಿಕೊಳ್ಳುತ್ತಾಳೆ ಎಂಬುದನ್ನು ಅರ್ಥ ಮಾಡಿಕೊಳ್ಳುವಲ್ಲಿ ವಿರೋಧ ಪಕ್ಷಗಳು ವಿಫಲವಾಗಿವೆ’ ಎಂದಿದ್ದಾರೆ

ಭಾಷಣದ ಪ್ರಮುಖ ಅಂಶಗಳು

- ವಿರೋಧ ಪಕ್ಷಗಳು ಮಹಿಳಾ ಮೀಸಲಾತಿ ಮಸೂದೆಗೆ ತಡೆ ಒಡ್ಡುವ ಮೂಲಕ ಮಹಿಳೆಯರನ್ನು ಮಾತ್ರವಲ್ಲ ನಮ್ಮ ಸಂವಿಧಾನ ನಿರ್ಮಾತೃಗಳನ್ನೂ ಅವಮಾನಿಸಿವೆ
- ಯಾರ ಹಕ್ಕನ್ನೂ ಕಸಿದುಕೊಳ್ಳುವ ಉದ್ದೇಶವನ್ನು ಮಸೂದೆ ಹೊಂದಿರಲಿಲ್ಲ. ಮಹಿಳೆಯರಿಗೆ ಕಳೆದ 40 ವರ್ಷಗಳಿಂದ ನಿರಾಕರಿಸುತ್ತಾ ಬರಲಾಗಿದ್ದ ಹಕ್ಕುಗಳನ್ನು ಅವರಿಗೇ ಕೊಡುವ ಪವಿತ್ರ ಪ್ರಯತ್ನವೇ ಈ ತಿದ್ದುಪಡಿಯಾಗಿತ್ತು
- ಉತ್ತರ, ದಕ್ಷಿಣ, ಪೂರ್ವ ಮತ್ತು ಪಶ್ಚಿಮ ಸೇರಿದಂತೆ ದೇಶದ ಪ್ರತಿಯೊಂದು ಭಾಗವನ್ನು ಸಶಕ್ತಗೊಳಿಸುವ ಪ್ರಯತ್ನದ ಭಾಗವಾಗಿ ಮಸೂದೆ ಮಂಡಿಸಲಾಗಿತ್ತು. ಗಾತ್ರ ಅಥವಾ ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳದೇ ದೇಶದ ಪ್ರತಿಯೊಂದು ರಾಜ್ಯವೂ ಸಂಸತ್‌ನಲ್ಲಿ ತನ್ನ ದನಿ ಎತ್ತುವುದಕ್ಕೆ ಅವಕಾಶ ಕಲ್ಪಿಸುವ ಉದ್ದೇಶ ಹೊಂದಿತ್ತು
- ಕಾಂಗ್ರೆಸ್ ಸುಧಾರಣೆಗಳ ವಿರೋಧಿ ಪಕ್ಷ. ಅದರ ನಕಾರಾತ್ಮಕ ಧೋರಣೆ ದೇಶಕ್ಕೆ ಬಹಳಷ್ಟು ಹಾನಿಯುಂಟು ಮಾಡಿದೆ

ಬಿಜೆಪಿ– ವಿಪಕ್ಷಗಳ ನಡುವೆ ವಾಕ್ಸಮರ

ಮಹಿಳಾ ಮೀಸಲಾತಿ ಮಸೂದೆಗೆ ಸೋಲು; ಸರ್ಕಾರದ ವೈಫಲ್ಯವಲ್ಲ: ಕಿರಣ್ ರಿಜಿಜು

ನವದೆಹಲಿ (ಪಿಟಿಐ): ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರವಾಗದಿರುವ ವಿಷಯಕ್ಕೆ ಸಂಬಂಧಿಸಿದಂತೆ ಆಡಳಿತಾರೂಢ ಬಿಜೆಪಿ ಮತ್ತು ವಿರೋಧ ಪಕ್ಷಗಳ ನಡುವೆ ಶನಿವಾರ ವಾಕ್ಸಮರ ನಡೆದಿದೆ.

ಮಹಿಳಾ ಮೀಸಲಾತಿ ಮಸೂದೆಗೆ ಸೋಲಾಗಿರುವ ಬೆಳವಣಿಗೆಯನ್ನು ‘ಕರಾಳ ದಿನ’ ಎಂದು ಕರೆದಿರುವ ಬಿಜೆಪಿಯು, ‘ಕಾಂಗ್ರೆಸ್ ಹಾಗೂ ಇತರ ವಿರೋಧ ಪಕ್ಷಗಳು ಮಹಿಳೆಯರಿಗೆ ದ್ರೋಹ ಬಗೆಯುತ್ತಿವೆ’ ಎಂದು ಆರೋಪಿಸಿದೆ.

ಮತ್ತೊಂದೆಡೆ, ‘2023ರಲ್ಲಿ ಅಂಗೀಕರಿಸಿದ್ದ ಮಹಿಳಾ ಮೀಸಲಾತಿ ಕಾನೂನನ್ನು ತಕ್ಷಣವೇ ಜಾರಿಗೆ ತರಬೇಕು’ ಎಂದು ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಒತ್ತಾಯಿಸಿವೆ. ‘ಈ ವಿಷಯದಲ್ಲಿ ಕೇಂದ್ರ ಸರ್ಕಾರವು ರಾಜಕೀಯ ಮಾಡುತ್ತಿದೆ’ ಎಂದು ಆರೋಪಿಸಿವೆ.

ಕಿರಣ್ ರಿಜಿಜು

‘ಕಾಂಗ್ರೆಸ್ ಪಕ್ಷವು ಮಹಿಳಾ ವಿರೋಧಿ ಎಂಬುದು ಸಾಬೀತಾಗಿದೆ. ದೇಶದ ಮಹಿಳೆಯರ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ’ ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಹೇಳಿದ್ದಾರೆ.

‘ಮಹಿಳಾ ಮೀಸಲಾತಿ ಮಸೂದೆಗೆ ಲೋಕಸಭೆಯ ಅನುಮೋದನೆ ಸಿಗದಿದ್ದಕ್ಕಾಗಿ ಸರ್ಕಾರ ಮತ್ತು ಮೈತ್ರಿಕೂಟಕ್ಕೆ ಬೇಸರವಿದೆ. ಆದರೂ ಇದು ಪಕ್ಷ ಹಾಗೂ ಸರ್ಕಾರದ ಸೋಲು ಎಂದು ಪರಿಗಣಿಸುವುದಿಲ್ಲ. ನಾವು ಮಹಿಳೆಯರಿಗೆ ಗೌರವ ನೀಡಲು ಮತ್ತು ಅವರನ್ನು ಸಬಲೀಕರಣಗೊಳಿಸಲು ಬಯಸಿದ್ದೆವು. ಅವರಿಗೆ ಸೂಕ್ತ ಸ್ಥಾನಮಾನ ನೀಡುವ ಪ್ರಯತ್ನವನ್ನು ಮುಂದುವರಿಸುತ್ತೇವೆ’ ಎಂದು ತಿಳಿಸಿದ್ದಾರೆ.

‘ವಿರೋಧ ಪಕ್ಷದವರು ದೇಶದ ಮಹಿಳೆಯರಿಗೆ ನೋವುಂಟು ಮಾಡಿದ್ದಾರೆ. ಮಹಿಳೆಯರ ಹಕ್ಕುಗಳನ್ನು ಕಸಿದುಕೊಂಡ ಬಳಿಕ ಸಂಭ್ರಮಾಚರಣೆ ಮಾಡುತ್ತಿದ್ದಾರೆ. ಮಹಿಳೆಯರು ಅವರಿಗೆ ತಕ್ಕ ಪಾಠ ಕಲಿಸುತ್ತಾರೆ’ ಎಂದಿದ್ದಾರೆ.

‘ಮಹಿಳಾ ಮೀಸಲಾತಿಗೆ ಬೆಂಬಲ’: ‘ವಿರೋಧ ಪಕ್ಷವು ಮಹಿಳಾ ಮೀಸಲಾತಿಯನ್ನು ವಿರೋಧಿಸುತ್ತಿಲ್ಲ. ಆದರೆ, ಅದನ್ನು ಕ್ಷೇತ್ರ ಪುನರ್‌ವಿಂಗಡಣೆಯೊಂದಿಗೆ ಸೇರಿಸುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದೆ. ನಾವು ಮಹಿಳಾ ಮೀಸಲಾತಿಯನ್ನು ಸಂಪೂರ್ಣವಾಗಿ ಬೆಂಬಲಿಸುತ್ತೇವೆ’ ಎಂದು ಕಾಂಗ್ರೆಸ್ ಸಂಸದ ಶಶಿ ತರೂರ್ ಹೇಳಿದ್ದಾರೆ.

‘ಇದು ಮಹಿಳೆಯರಿಗೆ ಸಂಬಂಧಿಸಿದ್ದಲ್ಲ. ಬದಲಿಗೆ ಇದು ರಾಜಕೀಯ ಆಟವಾಗಿತ್ತು. ರಾಜಕೀಯ ಹಿತಾಸಕ್ತಿಗಳನ್ನು ಪೂರೈಸಲು ಮಹಿಳೆಯರನ್ನು ಬಳಸಿಕೊಳ್ಳಲಾಗುತ್ತಿತ್ತು. ಕೇಂದ್ರ ಸರ್ಕಾರವು ಮಳೆಗಾಲದ ಅಧಿವೇಶನದಲ್ಲಿ ಹೊಸ ಮಸೂದೆಯನ್ನು ಮಂಡಿಸಲಿ. ಅದನ್ನು ಕ್ಷೇತ್ರ ಪುನರ್‌ವಿಂಗಡಣೆಯೊಂದಿಗೆ ಸೇರಿಸದಿದ್ದರೆ ನಾವು ಅದನ್ನು ಅಂಗೀಕರಿಸುತ್ತೇವೆ’ ಎಂದು ತಿಳಿಸಿದ್ದಾರೆ.

ಚರ್ಚೆ ಅಗತ್ಯ: ತರೂರ್

‘ಕ್ಷೇತ್ರ ಪುನರ್‌ವಿಂಗಡಣೆ ಮಸೂದೆಯು ದೇಶದ ಭವಿಷ್ಯದ ಬಗ್ಗೆ ಮೂಲಭೂತ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಈ ವಿಷಯದಲ್ಲಿ ಆತುರಪಡಲು ಸಾಧ್ಯವಿಲ್ಲ. ದೇಶದ ಏಕತೆ ಮತ್ತು ಪ್ರಜಾಪ್ರಭುತ್ವಕ್ಕೆ ಇದು ಬಹಳ ಮುಖ್ಯವಾದ ವಿಷಯವಾಗಿದೆ. ಹೀಗಾಗಿ, ಗಂಭೀರ ಹಾಗೂ ವ್ಯಾಪಕವಾದ ಚರ್ಚೆ ನಡೆಯುವ ಅಗತ್ಯವಿದೆ. ಎರಡು ದಿನಗಳ ಅಧಿವೇಶನದಲ್ಲಿ ಈ ಬಗ್ಗೆ ನಿರ್ಧರಿಸಲು ಸಾಧ್ಯವಿಲ್ಲ’ ಎಂದು ಶಶಿ ತರೂರ್ ಹೇಳಿದ್ದಾರೆ.

ಕ್ಷೇತ್ರ ಪುನರ್‌ವಿಂಗಡಣೆಯನ್ನು ಮಹಿಳಾ ಮೀಸಲಾತಿಯೊಂದಿಗೆ ಸೇರಿಸುವುದು ಕೇಂದ್ರ ಸರ್ಕಾರದ ಕಾರ್ಯಸೂಚಿಯಾಗಿತ್ತು. ಅದು ವಿಫಲವಾಗಿದೆ
ಕೆ.ಸಿ. ವೇಣುಗೋಪಾಲ್, ಕಾಂಗ್ರೆಸ್ ಸಂಸದ

ಮಹಿಳಾ ಮೀಸಲಾತಿ ಮಸೂದೆಯನ್ನು 2023ರಲ್ಲಿ ಅಂಗೀಕರಿಸಲಾಗಿದೆ. ಮತ್ತೆ ತಿದ್ದುಪಡಿ ತರುವ ಅಗತ್ಯ ಏನಿತ್ತು?
ರಾಮ್‌ಗೋಪಾಲ್‌ ಯಾದವ್, ಸಮಾಜವಾದಿ ಪಕ್ಷದ ನಾಯಕ

‘ಶಾಶ್ವತ ಅಧಿಕಾರ: ಯೋಜನೆಗೆ ಭಂಗ’

ನವದೆಹಲಿ: ‘ಮಹಿಳೆಯರ ಸಬಲೀಕರಣದ ಹೆಸರಿನಲ್ಲಿ ಶಾಶ್ವತವಾಗಿ ಅಧಿಕಾರದಲ್ಲಿ ಇರಬೇಕೆನ್ನುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಯೋಜನೆಯನ್ನು ವಿಪಕ್ಷ ಪಾಳಯ ವಿಫಲಗೊಳಿಸಿದೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಶನಿವಾರ ಹೇಳಿದರು.

ಸಂಸತ್ ಅಧಿವೇಶನ ಅನಿರ್ದಿಷ್ಟಾವಧಿಗೆ ಮುಂದೂಡಿದ ಬಳಿಕ ಸುದ್ದಿಗೋಷ್ಠಿ ನಡೆಸಿದ ಅವರು, ‘ಲೋಕಸಭೆಯಲ್ಲಿ ಸಂವಿಧಾನ (131ನೇ ತಿದ್ದುಪಡಿ) ಮಸೂದೆ–2026’ಕ್ಕೆ ಸೋಲುಂಟಾಗಿರುವುದು ಸಂವಿಧಾನ ಮತ್ತು ‘ಇಂಡಿಯಾ’ ಮೈತ್ರಿಕೂಟದ ಒಗ್ಗಟ್ಟಿಗೆ ಸಂದ ಜಯ’ ಎಂದು ಬಣ್ಣಿಸಿದರು.

‘ಮಹಿಳೆಯರಿಗೆ ಶಾಸನಸಭೆಗಳಲ್ಲಿ ಮೀಸಲಾತಿ ನೀಡುವ ಸಂಬಂಧ ಕೇಂದ್ರ ಸರ್ಕಾರ ಮುಂದಿಟ್ಟಿದ್ದ ಸೂತ್ರ ಒಪ್ಪುವಂತಿರಲಿಲ್ಲ’ ಎಂದ ಅವರು, ‘ಲೋಕಸಭೆಯ ಪ್ರಸಕ್ತ ಸಂಖ್ಯಾಬಲದ ಆಧಾರದಲ್ಲಿಯೇ ಮಹಿಳಾ ಮೀಸಲಾತಿ ಜಾರಿಗೊಳಿಸಬೇಕು ಎಂಬುದು ನಮ್ಮ ಬೇಡಿಕೆ. ಇದಕ್ಕೆ ಒಪ್ಪಿದಲ್ಲಿ ವಿಪಕ್ಷಗಳು ಸರ್ಕಾರಕ್ಕೆ ಬೆಂಬಲ ನೀಡಲಿವೆ’ ಎಂದು ಪುನರುಚ್ಚರಿಸಿದರು.

‘ಈ ವಿಚಾರವು ಕೇವಲ ಮಹಿಳಾ ಮೀಸಲಾತಿಗೆ ಸಂಬಂಧಿಸಿದ್ದಲ್ಲ, ಬದಲಾಗಿ ಕ್ಷೇತ್ರಗಳ ಮರುವಿಂಗಡಣೆಯನ್ನು ಒಳಗೊಂಡಿದೆ ಎಂಬುದು ಈ ಬೆಳವಣಿಗೆಗಳಿಂದ ಸ್ಪಷ್ಟವಾಗುತ್ತದೆ. ಈ ಉದ್ದೇಶಗಳು ಜಾತಿಗಳ ಕುರಿತ ದತ್ತಾಂಶವನ್ನು ಕಡೆಗಣಿಸಿರುವುದು ಮಾತ್ರವಲ್ಲ ಸ್ವೇಚ್ಛೆಯನ್ನು ಒಳಗೊಂಡಿವೆ’ ಎಂದು ಕೇಂದ್ರ ಸರ್ಕಾರದ ವಿರುದ್ಧ ಟೀಕಾಪ್ರಹಾರ ಮಾಡಿದರು.

‘ವಿರೋಧ ಪಕ್ಷಗಳು ಈ ಮಸೂದೆಗಳನ್ನು ಬೆಂಬಲಿಸುವುದು ಸಾಧ್ಯವೇ ಇರಲಿಲ್ಲ. ವಿರೋಧ ಪಕ್ಷಗಳಲ್ಲಿನ ಒಗ್ಗಟ್ಟು ಆಡಳಿತ ಪಕ್ಷದ ಹುನ್ನಾರವನ್ನು ಹೇಗೆ ಸೋಲಿಸಿತು ಎಂಬುದನ್ನು ಇಡೀ ದೇಶವೇ ಗಮನಿಸಿತು. ಇದು ನನಗೆ ಖುಷಿ ಕೊಟ್ಟಿದೆ’ ಎಂದೂ ಹೇಳಿದರು.

ಪ್ರಿಯಾಂಕಾ ಗಾಂಧಿ ಅವರಿಂದ ಸುದ್ದಿಗೋಷ್ಠಿ ಮಾಡಿಸುವ ಮೂಲಕ ಕಾಂಗ್ರೆಸ್ ಪಕ್ಷ ತನ್ನ ಕಾರ್ಯತಂತ್ರವನ್ನು ಸೂಚ್ಯವಾಗಿ ಹೇಳಿದೆ. ಮಹಿಳಾ ಮೀಸಲಾತಿ ಮಸೂದೆಗೆ ಲೋಕಸಭೆಯಲ್ಲಿ ಸೋಲಾಗಿರುವ ವಿಚಾರ ಮುಂದಿಟ್ಟುಕೊಂಡು ಬಿಜೆಪಿ ಸೃಷ್ಟಿಸುತ್ತಿರುವ ಸಂಕಥನದ ವಿರುದ್ಧದ ಹೋರಾಟದಲ್ಲಿ ಯಾವ ಅವಕಾಶವನ್ನು ಕಳೆದುಕೊಳ್ಳಲು ತಾನು ಸಿದ್ಧ ಇಲ್ಲ ಸಂದೇಶವನ್ನು ಕಾಂಗ್ರೆಸ್ ಈ ಮೂಲಕ ರವಾನಿಸಿದೆ. ಅಲ್ಲದೇ, ಇತರ ವಿರೋಧ ಪಕ್ಷಗಳು ಕೂಡ ಸುದ್ದಿಗೋಷ್ಠಿಗಳನ್ನು ಹಮ್ಮಿಕೊಳ್ಳುವ ಮೂಲಕ ಕೇಂದ್ರದ ವಿರುದ್ಧ ವಾಗ್ದಾಳಿ ಹರಿತಗೊಳಿಸಲಿವೆ.

ಮಸೂದೆಗೆ ಆಗಿರುವ ಸೋಲಿನ ವಿಚಾರದಲ್ಲಿ ಬಿಜೆಪಿ ನಡೆಸುತ್ತಿರುವ ಆಂದೋಲನ ಕುರಿತ ಪ್ರಶ್ನೆಗೆ, ‘ಈಗ ಕಾಲ ಬದಲಾಗಿದ್ದು, ಜನರು ಕೂಡ ಬುದ್ಧಿವಂತರಾಗಿದ್ದಾರೆ. ತಮ್ಮ ಯೋಜನೆಗಳ ಕುರಿತು ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರದಂತಹ ತಂತ್ರಗಳು ಈಗ ಫಲಿಸವು’ ಎಂದು ಪ್ರಿಯಾಂಕಾ ಪ್ರತಿಕ್ರಿಯಿಸಿದರು.

‘ಲೋಕಸಭೆಯಲ್ಲಿ ಗೃಹ ಸಚಿವ ಅಮಿತ್ ಶಾ ನೀಡಿರುವ ಆಶ್ವಾಸನೆಗಳನ್ನು ಯಾರೂ ನಂಬುವುದಿಲ್ಲ. ಜನರಿಗೂ ಸತ್ಯ ಏನೆಂಬುದು ಗೊತ್ತಿದೆ. ಜನರು ಅವರಲ್ಲಿ (ಬಿಜೆಪಿ) ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ’ ಎಂದೂ ಹೇಳಿದರು.

‘ಮಹಿಳೆಯರ ಬೆಂಬಲ ಹೇಗೆ ಪಡೆಯಬೇಕು ಹಾಗೂ ಯಾವಾಗಲೂ ಅಧಿಕಾರದಲ್ಲಿರುವುದು ಹೇಗೆ ಎಂಬ ಬಗ್ಗೆ ಬಿಜೆಪಿಯವರು ಯೋಜನೆ ರೂಪಿಸಿದ್ದರು. ಒಂದು ವೇಳೆ ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರಗೊಂಡಿದ್ದರೆ, 2011ರ ಜನಗಣತಿ ಆಧಾರದಲ್ಲಿ ಮರುವಿಂಗಡಣೆ ಮೂಲಕ ಕ್ಷೇತ್ರಗಳನ್ನು ತಮಗೆ ಬೇಕಾದಂತೆ ನಿಯಂತ್ರಿಸುವ ಸ್ವಾತಂತ್ರ್ಯ ಅವರಿಗೆ ಸಿಗಲಿತ್ತು’ ಎಂದರು.

ಪ್ರಮುಖ ಅಂಶಗಳು

- ನಿನ್ನೆ ದೇಶದ ಪ್ರಜಾತಂತ್ರಕ್ಕೆ ದೊಡ್ಡ ಗೆಲುವು ಸಿಕ್ಕಿದೆ. ದೇಶದ ಒಕ್ಕೂಟ ವ್ಯವಸ್ಥೆ ಬದಲಿಸುವ ಹಾಗೂ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ ಕೇಂದ್ರ ಸರ್ಕಾರದ ಪಿತೂರಿಯನ್ನು ಸೋಲಿಸಿದ್ದೇವೆ
- ಮಸೂದೆಗಳಿಗೆ ಬೆಂಬಲಿಸದಿದ್ದರೆ ವಿರೋಧ ಪಕ್ಷಗಳು ಇನ್ನೆಂದೂ ಅಧಿಕಾರಕ್ಕೇರಲು ಸಾಧ್ಯವಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಈ ಹಿಂದೆ ಎಚ್ಚರಿಸಿದ್ದರು. ಈ ಮಸೂದೆಗಳ ಮಂಡನೆಯ ಉದ್ದೇಶವೂ ಇದೇ ಆಗಿತ್ತು ಎಂಬುದು ಈಗ ಸ್ಪಷ್ಟವಾಗಿದೆ
- ಮಸೂದೆ ಅಂಗೀಕಾರವಾಗಿದ್ದರೆ ತಮ್ಮದೇ ಗೆಲುವು ಎಂದು ಬಿಂಬಿಸುವುದು, ಅದಾಗದಿದ್ದಾಗ ವಿರೋಧ ಪಕ್ಷಗಳು ಮಹಿಳಾ ವಿರೋಧಿಗಳು ಎಂಬ ಹಣೆಪಟ್ಟಿ ಹಚ್ಚುವುದು ಬಿಜೆಪಿ ಉದ್ದೇಶವಾಗಿತ್ತು. ಅದು ಈಗ ಈಡೇರಿಲ್ಲ
- 2023ರ ಕಾಯ್ದೆಯಲ್ಲಿಯೇ ಅಗತ್ಯ ಬದಲಾವಣೆಗಳನ್ನು ಮಾಡಬೇಕು ಹಾಗೂ ಈಗಿರುವ ಲೋಕಸಭಾ ಸ್ಥಾನಗಳ ಆಧಾರದಲ್ಲಿ ಮಹಿಳೆಯರಿಗೆ ಮೂರನೇ ಒಂದರಷ್ಟು ಮೀಸಲಾತಿ ಕಲ್ಪಿಸಬೇಕು. ಮಹಿಳೆಯರಿಗೆ ಮೀಸಲಾತಿ ಕಲ್ಪಿಸಿದಲ್ಲಿ, ಒಬಿಸಿಗಳಿಗೂ ಪ್ರಮಾಣಕ್ಕೆ ಅನುಗುಣವಾಗಿ ಮೀಸಲಾತಿ ನೀಡಬೇಕು

ತಾವು ಮಹಿಳೆಯರ ಉದ್ಧಾರಕರು ಎಂದು ಬಿಂಬಿಸಿಕೊಳ್ಳಲು ಬಿಜೆಪಿಯವರು ಯತ್ನಿಸುತ್ತಾರೆ. ಇದನ್ನು ಮಾತಿನಲ್ಲಿ ಅಲ್ಲ, ಕಾರ್ಯದಲ್ಲಿ ತೋರಿಸಬೇಕು. ಉನ್ನಾವೊ, ಹಾಥರಸ್ ಹಾಗೂ ಮಣಿಪುರದಲ್ಲಿನ ಘಟನೆಗಳು ಮಹಿಳೆಯರ ಕುರಿತು ಬಿಜೆಪಿಗೆ ಎಂಥ ಗೌರವ ಇದೆ ಎಂಬುದನ್ನು ತೋರಿಸುತ್ತವೆ
ಪ್ರಿಯಾಂಕಾ ಗಾಂಧಿ ವಾದ್ರಾ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ತಮಿಳುನಾಡಿನ ಪಡಿಯನಲ್ಲೂರಿನಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಕಾಂಗ್ರೆಸ್ ಕಾರ್ಯಕರ್ತರು ಸಂವಿಧಾನದ ಪ್ರತಿ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಯನ್ನು ಶನಿವಾರ ನೀಡಿದರು –ಪಿಟಿಐ ಚಿತ್ರ

‘ಮೋದಿ, ಶಾ ಸುಳ್ಳು ಹೇಳಿದರು’

ರಾಣಿಪೇಟ್ (ತಮಿಳುನಾಡು) (ಪಿಟಿಐ): ‘ಮಹಿಳೆಯರಿಗೆ ಮೀಸಲಾತಿ ನೀಡುವ ಮಸೂದೆಯನ್ನು ಮಂಡಿಸುತ್ತಿದ್ದೇವೆ ಎಂದು ಪ್ರಧಾನಿ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ದೇಶಕ್ಕೆ ಸುಳ್ಳು ಹೇಳಿದರು. ಇದರ ಹಿಂದೆ ದೇಶದ ಚುನಾವಣಾ ನಕ್ಷೆಯನ್ನೇ ಬದಲಿಸಿ ರಾಜ್ಯಗಳ ಶಕ್ತಿಯನ್ನು ಕುಂದಿಸುವ ‘ಪೈಶಾಚಿಕ ಯೋಜನೆ’ ಇತ್ತು’ ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪಿಸಿದರು.

ಇಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ರಾಹುಲ್, ‘ಕೇಂದ್ರ ಸರ್ಕಾರದ ಯತ್ನವು ದೇಶ ವಿರೋಧಿಯಾಗಿತ್ತು. ಇದು ನಮ್ಮ ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾಗಿತ್ತು. ಅಸ್ಸಾಂ ಮತ್ತು ಜಮ್ಮು ಮತ್ತು ಕಾಶ್ಮೀರದಲ್ಲಿ ಮಾಡಿದ್ದನ್ನೇ ಇಡೀ ದೇಶಕ್ಕೆ ವಿಸ್ತರಿಸುವ ಹುನ್ನಾರ ಕೇಂದ್ರ ಸರ್ಕಾರಕ್ಕಿತ್ತು’ ಎಂದರು.

‘ಎಲ್ಲ ವಿರೋಧ ಪಕ್ಷಗಳು ಬಂಡೆಕಲ್ಲಿನಂತೆ ನಿಂತು ಬಿಜೆಪಿಯ ‘ಪೈಶಾಚಿಕ ಯೋಜನೆ’ಯನ್ನು ಸೋಲಿಸಿದವು’ ಎಂದರು.

‘ಡೊನಾಲ್ಡ್ ಟ್ರಂಪ್ ನಿಯಂತ್ರಣದಲ್ಲಿ ಪ್ರಧಾನಿ ಮೋದಿ’

‘ಇವತ್ತು, ಡೊನಾಲ್ಡ್ ಟ್ರಂಪ್ ಅವರು ಮೋದಿಗೆ ಹಾರು ಎಂದು ಹೇಳಿದರೆ, ಮೋದಿ ಹಾರುತ್ತಾರೆ. ಟ್ರಂಪ್ ಅವರು ಮೋದಿ ಅವರಿಗೆ ಕುಳಿತುಕೊಳ್ಳು ಎಂದರೆ, ಮೋದಿ ಕುಳಿತುಕೊಳ್ಳುತ್ತಾರೆ. ಯಾಕೆಂದರೆ, ಟ್ರಂಪ್ ಅವರು ಮೋದಿ ಅವರನ್ನು ಸಂಪೂರ್ಣ ನಿಯಂತ್ರಣದಲ್ಲಿ ಇಟ್ಟು ಕೊಂಡಿದ್ದಾರೆ. ಹೇಗೆ ನಿಯಂತ್ರಿಸುತ್ತಾರೆ? ಹೇಗೆಂದರೆ, ಎಪ್‌ಸ್ಟೈನ್ ಫೈಲ್ಸ್ ಮೂಲಕ. ಟ್ರಂಪ್ ಅವರು ಮೋದಿ ಅವರ ಹಣಕಾಸಿಕ ವ್ಯವಸ್ಥೆಗಳ ಬಗ್ಗೆ ತಿಳಿದಿದೆ. ಅದಾನಿ ಜೊತೆ ಮೋದಿ ಅವರ ಸಂಪರ್ಕ ಕೂಡ ತಿಳಿದಿದೆ’ ಎಂದು ರಾಹುಲ್ ಹೇಳಿದರು.

ಮೀಸಲಾತಿಗೆ ವಿರೋಧವಿಲ್ಲ: ಸಿದ್ದರಾಮಯ್ಯ

ಬೆಂಗಳೂರು: ‘ಮಹಿಳಾ ಮೀಸಲಾತಿಗೆ ನಮ್ಮ ವಿರೋಧವಿಲ್ಲ. ಕ್ಷೇತ್ರ ಮರುವಿಂಗಡಣೆ ಮತ್ತು ಮಹಿಳಾ ಮೀಸಲಾತಿಯನ್ನು ಒಟ್ಟಿಗೆ ತಂದ ಪರಿಣಾಮವಾಗಿ ಮಸೂದೆಗೆ ಸೋಲುಂಟಾಯಿತು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿ, ‘2023ರಲ್ಲಿಯೇ ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರವಾಗಿದೆ. ಸಂವಿಧಾನಕ್ಕೆ ತಿದ್ದುಪಡಿ ತರಲು ಮುಂದಾಗಿದ್ದರಿಂದಾಗಿ ಅದು ವಿಫಲವಾಯಿತು’ ಎಂದರು

‘ಬಾಂಗ್ಲಾ ಮುಸ್ಲಿಮರು ಪ.ಬಂಗಾಳ ಕಸಿಯುತ್ತಾರೆ’

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಸಂಪನ್ಮೂಲವನ್ನು ಮಮತಾ ಬ್ಯಾನರ್ಜಿ ಸರ್ಕಾರವು ಬಾಂಗ್ಲಾದೇಶದ ಮುಸ್ಲಿಂ ನುಸುಳುಕೋರರಿಗೆ ಬಳಸುತ್ತಿದೆ. ಮಮತಾ ಅವರನ್ನು ಅಧಿಕಾರದಿಂದ ಇಳಿಸದಿದ್ದರೆ, ನಾವು ಪಶ್ಚಿಮ ಬಂಗಾಳವನ್ನು ಕಳೆದುಕೊಳ್ಳುತ್ತೇವೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಶನಿವಾರ ಹೇಳಿದರು.

ಹಿಮಂತ ಬಿಸ್ವಾ

ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ಮಮತಾ ಬ್ಯಾನರ್ಜಿ ಅವರು ಮತಕ್ಕಾಗಿ ಬಾಂಗ್ಲಾದೇಶದ ಮುಸ್ಲಿಮರಿಗೆ ಭೂಮಿಯನ್ನು ಮಾರುತ್ತಿದ್ದಾರೆ. ಅವರು ಮುಖ್ಯಮಂತ್ರಿಯಾದ ಬಳಿಕ ಇಡೀ ಬಂಗಾಳವನ್ನು ನಾಶ ಮಾಡುತ್ತಿದ್ದಾರೆ. ಅವರನ್ನು ಅಧಿಕಾರದಿಂದ ಇಳಿಸದಿದ್ದರೆ, ಮುಂದೊಂದು ದಿನ ಬಾಂಗ್ಲಾದೇಶ ಮುಸ್ಲಿಮರು ನಮ್ಮಿಂದ ರಾಜ್ಯವನ್ನು ಕಸಿದುಕೊಳ್ಳುತ್ತಾರೆ’ ಎಂದು ಹೇಳಿದರು.

‘ಮಮತಾ ಆಡಳಿತದಲ್ಲಿ ಉತ್ತರ ಬಂಗಾಳ ಅಭಿವೃದ್ಧಿ ಹೊಂದಿಲ್ಲ. ಬಿಜೆಪಿ ಅಧಿಕಾರಕ್ಕೆ ಬಂದರೆ ಬಾಂಗ್ಲಾದೇಶಿ ನುಸುಳುಕೋರರನ್ನು ಹೊರಹಾಕುತ್ತೇವೆ’ ಎಂದು ಹೇಳಿದರು.

ಬಿಜೆಪಿ ಅವನತಿ ಆರಂಭ: ಮಮತಾ

ಹೌರಾ (ಪಿಟಿಐ): ಮಹಿಳಾ ಮೀಸಲಾತಿ ಮಸೂದೆಗೆ ಲೋಕಸಭೆಯಲ್ಲಿ ಅಂಗೀಕಾರ ಪಡೆಯಲು ಕೇಂದ್ರ ಸರ್ಕಾರ ವಿಫಲವಾಗಿರುವ ಬೆನ್ನಲ್ಲೇ ಬಿಜೆಪಿಯ ಅವನತಿ ಆರಂಭಗೊಂಡಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಟೀಕಿಸಿದರು.

ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ನಾವು ಬಿಜೆಪಿಯನ್ನು ಸೋಲಿಸಿದ್ದೇವೆ. ಅವರಿಗೆ ಅವಮಾನ ಮಾಡಿದ್ದೇವೆ’ ಎಂದರು.

‘ದೇಶವನ್ನು ವಿಭಜಿಸುವ ಉದ್ದೇಶದಿಂದ ಅವರು ಕ್ಷೇತ್ರ ಪುನರ್‌ವಿಂಗಡಣೆ ಮಾಡಲು ಬಯಸಿದ್ದರು. ಮಹಿಳೆಯರಿಗೆ ಪ್ರಾತಿನಿಧ್ಯ ನೀಡಲು ಮಸೂದೆಯ ಅಗತ್ಯವಿಲ್ಲ. ನಮ್ಮ ಪಕ್ಷದಲ್ಲಿ ಮಹಿಳೆಯರ ಪ್ರಾತಿನಿಧ್ಯ ಹೆಚ್ಚಿದೆ. ಟಿಎಂಸಿಯ ಶೇಕಡ ಶೇ 36ರಷ್ಟು ಮಹಿಳಾ ಸಂಸದರು ಲೋಕಸಭೆಯಲ್ಲಿ ಮತ್ತು ಶೇ 46 ರಷ್ಟು ಮಹಿಳಾ ಸಂಸದರು ರಾಜ್ಯಸಭೆಯಲ್ಲಿದ್ದಾರೆ. ಬಿಜೆಪಿ ನಮ್ಮನ್ನು ನೋಡಿ ಕಲಿಯಲಿ. 1998 ರಿಂದಲೇ ನಾನು ಮಹಿಳಾ ಮೀಸಲಾತಿಗಾಗಿ ಹೋರಾಡುತ್ತಿದ್ದೇನೆ’ ಎಂದರು.

10 ಸಿಪಿಎಂ ಸದಸ್ಯರಿಗೆ ಜೈಲು

ಕಣ್ಣೂರು (ಪಿಟಿಐ): ಆರ್‌ಎಸ್‌ಎಸ್ ಹಾಗೂ ಬಿಜೆಪಿ ಕಾರ್ಯಕರ್ತರು ಪ್ರಯಾಣಿಸುತ್ತಿದ್ದ ವಾಹನದತ್ತ ಬಾಂಬ್ ಎಸೆದು, ಅವರನ್ನು ಕೊಲೆ ಮಾಡಲು ಯತ್ನಿಸಿದ ಪ್ರಕರಣದಲ್ಲಿ ಸಿಪಿಎಂನ ಒಬ್ಬ ಸದಸ್ಯನಿಗೆ 25 ವರ್ಷ ಹಾಗೂ 9 ಮಂದಿಗೆ 10 ವರ್ಷ ಜೈಲು ಶಿಕ್ಷೆ ವಿಧಿಸಿ ಇಲ್ಲಿನ ಸೆಷನ್ಸ್ ನ್ಯಾಯಾಲಯ ಶನಿವಾರ ಆದೇಶಿಸಿದೆ.

‘ಈ ಪ್ರಕರಣದ ಅಪರಾಧಿಗಳಿಗೆ ಐಪಿಸಿ, ಸ್ಫೋಟಕಗಳ ಕಾಯ್ದೆಯ ವಿವಿಧ ಅವಕಾಶಗಳಡಿ ಜೈಲು ಶಿಕ್ಷೆ ಹಾಗೂ ತಲಾ ₹2.6 ಲಕ್ಷ ದಂಡ ವಿಧಿಸಿ ತಳಿಪ್ಪರಂಬ್‌ನ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಪ್ರಶಾಂತ್ ಕೆ.ಎನ್ ಆದೇಶಿಸಿದ್ದಾರೆ’ ಎಂದು ಸರ್ಕಾರಿ ವಕೀಲ ಯು. ರಮೇಶನ್ ತಿಳಿಸಿದ್ದಾರೆ.

‘ಈ ಪ್ರಕರಣದಲ್ಲಿ, ವಾಹನದತ್ತ ಬಾಂಬ್ ಎಸೆದಿದ್ದ ಟಿ.ವಿ.ಬಿನು ಅಲಿಯಾಸ್ ಉರುಂಬನ್ ಬಿನು 25 ವರ್ಷ ಸೆರೆವಾಸ ಅನುಭವಿಸಬೇಕು ಎಂದು ನ್ಯಾಯಾಲಯ ನಿರ್ದೇಶನ ನೀಡಿದೆ. ಇತರ ಅಪರಾಧಿಗಳಾದ ಎಂ.ಕೆ.ಪ್ರದೀಪಕುಮಾರ್, ಪಿ.ಪಿ. ಸತ್ಯನ್, ಪಿ.ವಿ.ಬಾಬುರಾಜ್, ಇ.ವಿ. ವಿನೋದಕುಮಾರ್, ವಿಜಯನ್, ಕೆ.ಪಿ.ಸುರೇಶ್, ಟೋಬಿ, ಜನಾರ್ದನ್ ಕೆ.ವಿ ಹಾಗೂ ಶಿವಪ್ರಕಾಶ್‌ಗೆ 10 ವರ್ಷ ಸೆರೆವಾಸ ವಿಧಿಸಲಾಗಿದೆ’ ಎಂದೂ ತಿಳಿಸಿದ್ದಾರೆ.

ನಗರದಲ್ಲಿ ಆರ್‌ಎಸ್‌ಎಸ್ ಶಾಖೆ ತೆರೆಯುವ ವಿಚಾರವಾಗಿ 2011ರ ನವೆಂಬರ್ 26ರಂದು ಸಿಪಿಎಂ ಹಾಗೂ ಆರ್‌ಎಸ್‌ಎಸ್–ಬಿಜೆಪಿ ಕಾರ್ಯಕರ್ತರ ನಡುವೆ ವಾಗ್ವಾದ ನಡೆದಿತ್ತು. ಮಾರನೇ ದಿನ, ಆರ್‌ಎಸ್‌ಎಸ್ ಹಾಗೂ ಬಿಜೆಪಿ ಕಾರ್ಯಕರ್ತರಿದ್ದ ವಾಹನ ಥಿಮಿರಿ ಕಾಲೇಜು ಬಳಿ ಸಾಗುತ್ತಿದ್ದಾಗ, ವಾಹನದತ್ತ ಬಾಂಬ್ ಎಸೆಯಲಾಗಿತ್ತು.

ವಾಹನದಲ್ಲಿ 30 ಕಾರ್ಯಕರ್ತರು ಪ್ರಯಾಣಿಸುತ್ತಿದ್ದರು. ಬಾಂಬ್ ದಾಳಿಯಲ್ಲಿ 9 ಜನರು ಗಂಭೀರವಾಗಿ ಗಾಯಗೊಂಡಿದ್ದರು.

ಮುಖ್ಯಾಂಶಗಳು

- ಬಿಜೆಪಿ, ಆರ್‌ಎಸ್‌ಎಸ್, ಕಾರ್ಯಕರ್ತರ ಕೊಲೆ ಯತ್ನ ಪ್ರಕರಣ
- ಸೆಷನ್ಸ್ ನ್ಯಾಯಾಲಯದ ತೀರ್ಪು ಪ್ರಕಟ

ಲೈಂಗಿಕ ದೌರ್ಜನ್ಯ: ನಿರೀಕ್ಷಣಾ ಜಾಮೀನಿಗೆ ಅರ್ಜಿ

ನಾಸಿಕ್ (ಪಿಟಿಐ): ಇಲ್ಲಿನ ಟಿಸಿಎಸ್ ಕಂಪನಿಯಲ್ಲಿ ನಡೆದಿದೆ ಎನ್ನಲಾದ ಲೈಂಗಿಕ ದೌರ್ಜನ್ಯ ಮತ್ತು ಬಲವಂತದ ಮತಾಂತರ ಪ್ರಕರಣದ ಆರೋಪಿಯಾಗಿರುವ ಕಂಪನಿಯ ಮಹಿಳಾ ಉದ್ಯೋಗಿಯೊಬ್ಬರು ತಾನು ಗರ್ಭಿಣಿ ಎಂಬ ಆಧಾರದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದಾರೆ.

ತನ್ನ ವಿರುದ್ಧದ ಪ್ರಕರಣ ಏಳು ವರ್ಷಕ್ಕಿಂತ ಕಡಿಮೆ ಶಿಕ್ಷೆಯನ್ನು ಹೊಂದಿರುವುದರಿಂದ ನಿರೀಕ್ಷಣಾ ಜಾಮೀನು ನೀಡುವಂತೆ ಕೋರಿ ಆರೋಪಿ ನಿದಾ ಖಾನ್ ಅವರು ಸಲ್ಲಿಸಿರುವ ಅರ್ಜಿಯ ಕುರಿತು ನಾಸಿಕ್ ಸೆಷನ್ಸ್ ನ್ಯಾಯಾಲಯ ಸೋಮವಾರ ವಿಚಾರಣೆ ನಡೆಸಲಿದೆ. ‘ಖಾನ್ ಅವರು ಬಲವಂತದ ಮತಾಂತರ ಪ್ರಕರಣದಲ್ಲಿ ಮಾತ್ರ ಆರೋಪಿಯಾಗಿದ್ದಾರೆ’ ಎಂದು ನಾಸಿಕ್ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರಸಿದ್ಧ ಸ್ಥಳಗಳ ಮೇಲೆ ದಾಳಿ ನಡೆಸಲು ಯೋಜನೆ ರೂಪಿಸಿದ್ದ ಆರೋಪಿಗಳು

ನಾಲ್ವರು ಶಂಕಿತ ಉಗ್ರರ ಬಂಧನ

ನವದೆಹಲಿ (ಪಿಟಿಐ): ಭಯೋತ್ಪಾದನಾ ಚಟುವಟಿಕೆಗಳನ್ನು ನಡೆಸಲು ಸಂಚು ರೂಪಿಸಿದ್ದ ಆರೋಪದಡಿ ಮಹಾರಾಷ್ಟ್ರ, ಒಡಿಶಾ, ಬಿಹಾರದ ನಾಲ್ವರು ಶಂಕಿತ ಉಗ್ರರನ್ನು ದೆಹಲಿ ಪೊಲೀಸರು ಬಂಧಿಸಿದ್ದಾರೆ.

ಮೊಸೈಬ್ ಅಹ್ಮದ್, ಮೊಹಮ್ಮದ್ ಹಮ್ಮದ್, ಮೊಹಮ್ಮದ್ ಸೊಹೈಲ್ ಮತ್ತು ಶೇಖ್ ಇಮ್ರಾನ್ ಬಂಧಿತರು. ಆರೋಪಿಗಳಿಂದ ಕಚ್ಚಾಬಾಂಬ್ ಹಾಗೂ ಸಂಬಂಧಿಸಿದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

‘ಆರೋಪಿಗಳು ಪ್ರಸಿದ್ಧ ಹಾಗೂ ಸೂಕ್ಷ್ಮ ಪ್ರದೇಶಗಳ ಮೇಲೆ ದಾಳಿ ನಡೆಸಲು ಸ್ಥಳ ಪರಿಶೀಲನೆ ನಡೆಸಿದ್ದರು. ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳ ಮೂಲಕ ಕೆಲವರನ್ನು ನೇಮಿಸಿಕೊಳ್ಳಲು ಪ್ರಯತ್ನಿಸಿದ್ದರು. ಇವರ ಪೈಕಿ ಇಬ್ಬರು ಜನದಟ್ಟಣೆಯ ಸ್ಥಳಗಳನ್ನು ಗುರಿಯಾಗಿಸಿ ದಾಳಿ ನಡೆಸಲು, ರಿಮೋಟ್ ನಿಯಂತ್ರಿತ ಆಟಿಕೆಯ ಕಾರಿಗೆ ಕಚ್ಚಾಬಾಂಬ್ ಅಳವಡಿಸುವ ಕಾರ್ಯದಲ್ಲಿ ತೊಡಗಿದ್ದರು. ಈ ಜಾಲದಲ್ಲಿ ಭಾಗಿಯಾಗಿರುವ ಇತರರ ಪತ್ತೆಗೆ ತನಿಖೆ ನಡೆಸಲಾಗುತ್ತಿದೆ’ ಎಂದು ಮಾಹಿತಿ ನೀಡಿದ್ದಾರೆ.

‘ಖಲೀಫತ್ ಸ್ಥಾಪನೆ ಹಾಗೂ ಜನರನ್ನು ಉಗ್ರಗಾಮಿ ಚಟುವಟಿಕೆಗಳಿಗೆ ಸೆಳೆಯಲು ‘ಖುರಾಸಾನ್‌ನ ಲಷ್ಕರ್’ ಎಂಬ ಪರಿಕಲ್ಪನೆಯಿಂದ ಪ್ರೇರೇಪಿತರಾಗಿದ್ದರು. ಅಲ್ಲದೆ, ‘ಘಜ್ವಾ–ಎ–ಹಿಂದ್’ನಂತಹ ಪರಿಕಲ್ಪನೆಯ ಪ್ರಚಾರದಲ್ಲಿ ತೊಡಗಿದ್ದರು’ ಎಂದು ತಿಳಿಸಿದ್ದಾರೆ.

‘ಎನ್‌ಕ್ರಿಪ್ಟ್ ಮಾಡಿದ ಸಾಮಾಜಿಕ ಮಾಧ್ಯಮದ ಗುಂಪುಗಳಲ್ಲಿ ಆರೋಪಿಗಳು ಸಕ್ರಿಯರಾಗಿದ್ದರು. ಅಲ್ಲಿ ಜಿಹಾದ್, ಉಗ್ರಗಾಮಿ ಸಿದ್ಧಾಂತ ಮತ್ತು ಶಸ್ತ್ರಾಸ್ತ್ರಗಳಿಗೆ ಸಂಬಂಧಿಸಿದ ವಿಷಯಗಳನ್ನು ಹಂಚಿಕೊಳ್ಳಲಾಗುತ್ತಿತ್ತು. ಈ ವೇದಿಕೆಗಳನ್ನು ಹೊಸ ಸದಸ್ಯರನ್ನು ಗುರುತಿಸಲು, ಉಪದೇಶ ನೀಡಲು ಮತ್ತು ನೇಮಕ ಮಾಡಿಕೊಳ್ಳಲು ಬಳಸಲಾಗುತ್ತಿತ್ತು’ ಎಂದು ಹೇಳಿದ್ದಾರೆ.

‘ರಾಮಮಂದಿರದ ಮೇಲೆ ದಾಳಿ ನಡೆಸಲು ಶಂಕಿತರಿಂದ ಚರ್ಚೆ’

‘ಆರೋಪಿಗಳ ಪೈಕಿ ಒಬ್ಬ 2025ರ ಡಿಸೆಂಬರ್‌ನಲ್ಲಿ ದೆಹಲಿಯ ಕೆಂಪು ಕೋಟೆ ಹಾಗೂ ಇಂಡಿಯಾ ಗೇಟ್ ಸೇರಿದಂತೆ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದ. ಅಲ್ಲದೆ, ಸಂಸತ್ ಭವನ, ಸೇನೆಗೆ ಸೇರಿದ ಸಂಸ್ಥೆಗಳು ಹಾಗೂ ಅಯೋಧ್ಯೆಯ ರಾಮಮಂದಿರ ಸೇರಿದಂತೆ ಪ್ರಸಿದ್ಧ ಸ್ಥಳಗಳ ಮೇಲೆ ದಾಳಿ ನಡೆಸಲು ಚರ್ಚೆ ನಡೆಸಿರುವುದು ತನಿಖೆ ವೇಳೆ ಗೊತ್ತಾಗಿದೆ’ ಎಂದು ಹಿರಿಯ ಪೊಲೀಸ್ ಅಧಿಕಾರಿ ಮಾಹಿತಿ ನೀಡಿದ್ದಾರೆ.

ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ
ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ (ನೋಂ)
(ಸ್ನಾತಕೋತ್ತರ ವೈದ್ಯಕೀಯ ವಿಜ್ಞಾನಗಳ ಉನ್ನತ ಸಂಸ್ಥೆ)
ಸಹಕಾರ ಸಂಘಗಳ ನೋಂದಾಯಿತ ನೋಂದಣಿ ಸಂಖ್ಯೆ 132/85-86 ಅಡಿಯಲ್ಲಿ ಗುರುತಿಸಲ್ಪಟ್ಟಿದೆ
ದಕ್ಷಿಣ ಆಸ್ಪತ್ರೆಗಳ ಸಂಕೀರ್ಣ, ಧರ್ಮಾರಾಂ ಕಾಲೇಜು ಅಂಚೆ (ನಿಮ್ಹಾನ್ಸ್ ಹತ್ತಿರ), ಬೆಂಗಳೂರು–560029.
ಇ–ಮೇಲ್: ihealthchild@yahoo.in, ವೆಬ್‌ಸೈಟ್: https://igich.karnataka.org

ಸಂ.: ಇಂಗಾಂಮಆಸಂ/ನೇನೇಕೋ/01/2026–27/23 ದಿನಾಂಕ: 18.04.2026

ಸಂಕ್ಷಿಪ್ತ ಅಧಿಸೂಚನೆ

ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ವಿವಿಧ ವಿಭಾಗಗಳಲ್ಲಿ ಖಾಲಿಯಿರುವ ಈ ಕೆಳಕಂಡ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಹನ್ನೊಂದು (11) ತಿಂಗಳ ಅವಧಿಗೆ ಭರ್ತಿಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಗ್ರೂಪ್–ಎ

ಕ್ರ ಸಂ.	ವಿಭಾಗ	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ಮಾಸಿಕ ಸಂಚಿತ ವೇತನ
1	ಶಿಶು ವೈದ್ಯ ಶಾಸ್ತ್ರ	ಸಹ ಪ್ರಾಧ್ಯಾಪಕರು	01	ರೂ. 1,50,000/–
2	ಶಿಶು ಶಸ್ತ್ರ ಚಿಕಿತ್ಸಾ ಶಾಸ್ತ್ರ	ಸಹಾಯಕ ಪ್ರಾಧ್ಯಾಪಕರು	06	ರೂ. 1,20,000/–
3	ನವಜಾತ ಶಿಶು ಶಾಸ್ತ್ರ		01	ರೂ. 1,20,000/–
4	ಅರವಳಿಕೆ ಶಾಸ್ತ್ರ		03	ರೂ. 1,10,000/–
5	ಪಿಡಿಯಾಟ್ರಿಕ್ ನೆಫ್ರೋಲಜಿ		01	ರೂ. 1,20,000/–
6	ಇ.ಎನ್.ಟಿ		01	ರೂ. 1,10,000/–
7	ಗ್ಯಾಸ್ಟ್ರೊ ಎಂಟರಾಲಜಿ		01	ರೂ. 1,10,000/–
8	ಪಿಡಿಯಾಟ್ರಿಕ್ ಐಸಿಯು		01	ರೂ. 1,10,000/–
9	ಮೆಡಿಕಲ್ ಜೆನೆಟಿಕ್ಸ್		01	ರೂ. 1,10,000/–
10	ಪಿಡಿಯಾಟ್ರಿಕ್ ಅಂಕೋಲಜಿ		01	ರೂ. 1,20,000/–
11	ಪಿಡಿಯಾಟ್ರಿಕ್ ಪಲ್ಮನಾಲಜಿ		01	ರೂ. 1,10,000/–
12	ಪಿಡಿಯಾಟ್ರಿಕ್ ಎಂಡೋಕ್ರೈನಾಲಜಿ		01	ರೂ. 1,20,000/–
13	ಹೆಮಟಾಲಜಿ		01	ರೂ. 85,000/–
14	ಮೈಕ್ರೋಬಯಾಲಜಿ		01	ರೂ. 85,000/–
15	ಇಮ್ಯುನೋ ಹೆಮಟಾಲಜಿ & ಬ್ಲಡ್ ಟ್ರಾನ್ಸ್‌ಫ್ಯೂಷನ್	ಬ್ಲಡ್ ಸೆಂಟರ್ ಆಫೀಸರ್	01	ರೂ. 85,000/–
16	ರೇಡಿಯೋಲಜಿ	ಸಮಾಲೋಚಕರು	02	(Two full time Consultants on contract basis with renumeration Rs. 2,50,000/-)
17	Fetal Medicine (Neonatology)	Specialist	01	Full time Consultant on contract basis with renumeration Rs. 1,50,000/- per month
18	ಪಿಡಿಯಾಟ್ರಿಕ್ ನ್ಯೂರಾಲಜಿ	ಸೀನಿಯರ್ ರೆಸಿಡೆಂಟ್	01	ರೂ.75,000/–
19	ಪಿಡಿಯಾಟ್ರಿಕ್ ಎಂಡೋಕ್ರೈನಾಲಜಿ		01	ರೂ.75,000/–
20	ಮೆಡಿಕಲ್ ಜೆನೆಟಿಕ್		01	ರೂ.75,000/–

ಗ್ರೂಪ್–ಸಿ

ಕ್ರ ಸಂ.	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ಮಾಸಿಕ ಸಂಚಿತ ವೇತನ
1	ಶುಶ್ರೂಷಕಾಧಿಕಾರಿಗಳು	50	ರೂ. 33,350/–

1. ಆಸಕ್ತಿಯುಳ್ಳ ಅರ್ಹ ಅಭ್ಯರ್ಥಿಗಳು ಸಂಸ್ಥೆಯ ಜಾಲತಾಣ http://igich.karnataka.gov.in ನಲ್ಲಿ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು ಅರ್ಜಿಯಲ್ಲಿನ ಮಾಹಿತಿಯನ್ನು ಭರ್ತಿ ಮಾಡಿ ಅರ್ಜಿ ಶುಲ್ಕದೊಂದಿಗೆ ಕೊನೆಯ **ದಿನಾಂಕ: 28.04.2026 ರಂದು 5.30 ಗಂಟೆಯೊಳಗೆ ಅರ್ಜಿ** ಸಲ್ಲಿಸತಕ್ಕದ್ದು. 2. ಹೆಚ್ಚಿನ ಮಾಹಿತಿಯನ್ನು ಸಂಸ್ಥೆಯ ಕಛೇರಿ ಸಮಯ **ಪೂರ್ವಾಹ್ನ 10.30 ರಿಂದ ಸಂಜೆ 5.30 ರವರೆಗೆ** ಸಂಪರ್ಕಿಸಬಹುದು ಅಥವಾ ಸಂಸ್ಥೆಯ ಇ–ಮೇಲ್ ವಿಳಾಸ healthchild@yahoo.in ಇಲ್ಲಿ ವಿವರವಾದ ಅಧಿಸೂಚನೆಯಲ್ಲಿ ಪಡೆಯಬಹುದು

ಸಹಿ/– ನಿರ್ದೇಶಕರು
ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ, ಬೆಂಗಳೂರು

DIPR/CP/262/SA/2026-27

ಜೂನ್‌ನಲ್ಲಿ ಅಂತರರಾಷ್ಟ್ರೀಯ ಉದ್ಯಮಿ ಸಮಾವೇಶ

ಬೆಂಗಳೂರು: ಜಾಗತಿಕ ಮಟ್ಟದಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸುವ ಉದ್ದೇಶದೊಂದಿಗೆ, ಅಂತರರಾಷ್ಟ್ರೀಯ ಉದ್ಯಮಿ ಭಾರತ ಸಮಾವೇಶ ಮತ್ತು ಪ್ರದರ್ಶನವನ್ನು ಜೂನ್ 5, 6 ಮತ್ತು 7ರಂದು ಬೆಂಗಳೂರು ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಮಾವೇಶವು ಭಾರತ ಸೇರಿದಂತೆ ವಿವಿಧ ದೇಶಗಳಿಂದ ಉದ್ಯಮಿಗಳು, ಸ್ಟಾರ್ಟ್‌ಅಪ್‌ಗಳು, ಹೂಡಿಕೆದಾರರು, ತಂತ್ರಜ್ಞಾನ ತಜ್ಞರು ಮತ್ತು ಉದ್ಯಮಾಸಕ್ತರನ್ನು ಒಂದೇ ವೇದಿಕೆಯಲ್ಲಿ ಸೇರಿಸುವ ಕಾರ್ಯಕ್ರಮವಾಗಿದೆ. ಹೊಸ ಉದ್ಯಮ ಆರಂಭಿಸಲು, ಈಗಿನ ವ್ಯವಹಾರವನ್ನು ವಿಸ್ತರಿಸಲು ಹಾಗೂ ಜಾಗತಿಕ ಮಾರುಕಟ್ಟೆ ಪ್ರವೇಶಿಸಲು ಬಯಸುವವರಿಗೆ ಅವಕಾಶವಾಗಿದೆ.

ದೇಶೀಯ ಹಾಗೂ ವಿದೇಶಿ ತಜ್ಞರಿಂದ ಅಂತರರಾಷ್ಟ್ರೀಯ ಪ್ಯಾನೆಲ್ ಚರ್ಚೆಗಳು, ವ್ಯವಹಾರ ವಿಸ್ತರಣೆಗೆ ನೇರ ಸಂಪರ್ಕ, ಗ್ಲೋಬಲ್ ಬಿ2ಬಿ ಮತ್ತು ಬಿ2ಸಿ ಮೀಟಿಂಗ್‌ಗಳು ನಡೆಯಲಿವೆ. ಹೂಡಿಕೆದಾರರ ಮುಂದೆ ನಿಮ್ಮ ಆಲೋಚನೆಗಳನ್ನು ಪ್ರಸ್ತುತಪಡಿಸಲು ಅವಕಾಶ ಇರುವ ಸ್ಟಾರ್ಟ್‌ಅಪ್ ಕಾರ್ಯಾಗಾರ, ತರಬೇತಿ ಕಾರ್ಯಕ್ರಮಗಳು ನಡೆಯಲಿವೆ. ನವೀನ ಉತ್ಪನ್ನಗಳು ಮತ್ತು ಸೇವೆಗಳ ಪ್ರದರ್ಶನ, ಉಪನ್ಯಾಸಗಳು ಇರಲಿವೆ ಎಂದು ಆಯೋಜಕರು ತಿಳಿಸಿದ್ದಾರೆ.

ತ್ಯಾಜ್ಯ ವಿಲೇವಾರಿಗೆ ಹೊಸ ನಿಯಮ

ಘನ ತ್ಯಾಜ್ಯ ನಿರ್ವಹಣಾ ನಿಯಮ ಅನುಷ್ಠಾನಕ್ಕೆ ಕೈಜೋಡಿಸಿ: ಕರೀಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಘನ ತ್ಯಾಜ್ಯ ನಿರ್ವಹಣಾ ನಿಯಮಗಳು–2026 ಅನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಎಲ್ಲ ಪಾಲುದಾರರ ಸಮನ್ವಯ ಹಾಗೂ ನಾಗರಿಕರ ಸಕ್ರಿಯ ಭಾಗವಹಿಸುವಿಕೆ ಅತ್ಯಗತ್ಯ ಎಂದು ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕರೀಗೌಡ ತಿಳಿಸಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬಿಎಸ್‌ಡಬ್ಲ್ಯುಎಂಎಲ್ ವತಿಯಿಂದ ಘನ ತ್ಯಾಜ್ಯ ನಿರ್ವಹಣಾ ನಿಯಮಗಳು–2026 ಅನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು, ನಾಗರಿಕರು, ನಿವಾಸಿಗಳ ಕಲ್ಯಾಣ ಸಂಘಗಳು, ಸರ್ಕಾರೇತರ ಸಂಸ್ಥೆಗಳು, ಹೋಟೆಲ್ ಸಂಘಟನೆಗಳು ಹಾಗೂ ಬಿಎಸ್‌ಡಬ್ಲ್ಯುಎಂಎಲ್‌ನ ಅಧಿಕಾರಿಗಳು, ಸಿಬ್ಬಂದಿಗಾಗಿ ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ನಗರದಲ್ಲಿ ರಸ್ತೆ ಬದಿಗಳಲ್ಲಿ ಹಾಗೂ ಖಾಲಿ ಜಾಗಗಳಲ್ಲಿ ಕಸವನ್ನು ಬಿಸಾಡದೆ, ಮನೆ-ಮನೆಗೆ ಭೇಟಿ ನೀಡುವ ಆಟೊ ಟಿಪ್ಪರ್‌ಗಳಿಗೆ ತ್ಯಾಜ್ಯವನ್ನು ನೀಡಬೇಕು. ಮಿಶ್ರ ತ್ಯಾಜ್ಯವನ್ನು ನೀಡದೆ, ಹಸಿ ಹಾಗೂ ಒಣ ತ್ಯಾಜ್ಯವನ್ನು ಪ್ರತ್ಯೇಕವಾಗಿ ವಿಂಗಡಿಸಿ ನೀಡುವಂತೆ ಮನವಿ ಮಾಡಿದರು.

ನಗರದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಮೂಲದಲ್ಲಿಯೇ ಸಂಸ್ಕರಿಸಿ ಮರುಬಳಕೆ ಮಾಡಿಕೊಳ್ಳಲು ಎಲ್ಲರೂ ಮುಂದಾಗಬೇಕು. ಮನೆಗಳು, ಬೃಹತ್ ಸಮುಚ್ಚಯಗಳು ಹಾಗೂ ಹೋಟೆಲ್‌ಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಮೂಲದಲ್ಲಿಯೇ ಸಂಸ್ಕರಿಸಿ ಮರುಬಳಕೆ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ನಗರದ ದೊಡ್ಡ ಅಪಾರ್ಟ್‌ಮೆಂಟ್‌ಗಳಲ್ಲಿ ಉತ್ಪತ್ತಿಯಾಗುವ ಬೃಹತ್ ಪ್ರಮಾಣದ ತ್ಯಾಜ್ಯವನ್ನು ಹೇಗೆ ವಿಲೇವಾರಿ ಮಾಡಬೇಕು ಎಂಬುದರ ಕುರಿತು ಐದು ನಗರ ಪಾಲಿಕೆಗಳಲ್ಲಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳೊಂದಿಗೆ ಸಭೆಗಳನ್ನು ನಡೆಸಿ ಅಗತ್ಯ ಮಾಹಿತಿಯನ್ನು ನೀಡಲಾಗುವುದು ಎಂದು ತಿಳಿಸಿದರು.

ಬಿಎಸ್‌ಡಬ್ಲ್ಯುಎಂಎಲ್‌ನ ಮುಖ್ಯ ಕಾರ್ಯಾಚರಣಾಧಿಕಾರಿ ರಮಾಮಣಿ, ನಾಗರಿಕರು, ದೊಡ್ಡ ಪ್ರಮಾಣದ ತ್ಯಾಜ್ಯ ಉತ್ಪಾದಕರು, ಸಂಸ್ಕರಣಾ ಘಟಕಗಳು ಹಾಗೂ ಸರ್ಕಾರದ ವಿವಿಧ ಇಲಾಖೆಗಳ ಜವಾಬ್ದಾರಿಗಳನ್ನು ಪ್ರಾತ್ಯಕ್ಷಿಕೆಗಳ ಮೂಲಕ ವಿವರವಾದ ಮಾಹಿತಿ ನೀಡಿದರು.

ಘನ ತ್ಯಾಜ್ಯ ನಿರ್ವಹಣೆಯನ್ನು ಹೆಚ್ಚು ಸುಗಮ, ವೈಜ್ಞಾನಿಕ ಹಾಗೂ ಪರಿಣಾಮಕಾರಿಯಾಗಿಸಲು 2016ರ ನಿಯಮಗಳನ್ನು ಪರಿಷ್ಕರಿಸಿ ನೂತನ ಘನ ತ್ಯಾಜ್ಯ ನಿರ್ವಹಣಾ ನಿಯಮಗಳು–2026 ಅನ್ನು ಜಾರಿಗೆ ತರಲಾಗಿದೆ. ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಈ ಹೊಸ ನಿಯಮಗಳಡಿ ಹಲವು ಪ್ರಮುಖ ಬದಲಾವಣೆಗಳನ್ನು ತರಲಾಗಿದೆ ಎಂದು ಹೇಳಿದರು.

ಆನ್‌ಲೈನ್ ವ್ಯವಸ್ಥೆ: ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಹಾಗೂ ಮೇಲ್ವಿಚಾರಣೆಯನ್ನು ಚುರುಕುಗೊಳಿಸಲು ಹೊಸ ಕೇಂದ್ರೀಕೃತ ಆನ್‌ಲೈನ್ ಪೋರ್ಟಲ್ ಅನ್ನು ಶೀಘ್ರದಲ್ಲೇ ಪ್ರಾರಂಭಿಸಲಾಗುವುದು. ಇದರ ಮೂಲಕ ಘನ ತ್ಯಾಜ್ಯ ನಿರ್ವಹಣೆಯ ಮೂಲಸೌಕರ್ಯ ಮತ್ತು ದೈನಂದಿನ ಕಾರ್ಯಾಚರಣೆಗಳ ನಿಖರ ವರದಿಯನ್ನು ನಿರ್ವಹಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಬೃಹತ್ ಪ್ರಮಾಣದಲ್ಲಿ ತ್ಯಾಜ್ಯ ಉತ್ಪಾದಿಸುವವರ ಜವಾಬ್ದಾರಿಯನ್ನು ಹೆಚ್ಚಿಸಲು ಮತ್ತು ನಿಯಮಗಳ ಕಟ್ಟುನಿಟ್ಟಿನ ಅನುಷ್ಠಾನವನ್ನು ಖಚಿತಪಡಿಸಲು ಇಬಿಡಬ್ಲ್ಯುಜಿಆರ್ ಎಂಬ ಹೊಸ ಹೊಣೆಗಾರಿಕಾ ವ್ಯವಸ್ಥೆಯನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ ಎಂದು ಹೇಳಿದರು.

4 ವಿಧಗಳಲ್ಲಿ ವಿಂಗಡಣೆ ಕಡ್ಡಾಯ

ತ್ಯಾಜ್ಯವನ್ನು ಸುಲಭವಾಗಿ ವಿಲೇವಾರಿ ಮಾಡಲು ಹಾಗೂ ಮರುಬಳಕೆಯನ್ನು ಉತ್ತೇಜಿಸಲು, ಇನ್ನು ಮುಂದೆ ಪ್ರತಿ ಯೊಬ್ಬ ತ್ಯಾಜ್ಯ ಉತ್ಪಾದಕರೂ ಕಡ್ಡಾಯವಾಗಿ ತ್ಯಾಜ್ಯವನ್ನು ನಾಲ್ಕು ಪ್ರತ್ಯೇಕ ವಿಭಾಗಗಳಾಗಿ ವಿಂಗಡಿಸಿ ನೀಡಬೇಕು.

- **ಹಸಿ ತ್ಯಾಜ್ಯ:** ಜೈವಿಕವಾಗಿ ಕರಗುವ ತ್ಯಾಜ್ಯ
- **ಒಣ ತ್ಯಾಜ್ಯ:** ಮರುಬಳಕೆ ಮಾಡಬಹುದಾದ ತ್ಯಾಜ್ಯ
- **ನೈರ್ಮಲ್ಯ ತ್ಯಾಜ್ಯ:** ವೈಯಕ್ತಿಕ ನೈರ್ಮಲ್ಯಕ್ಕೆ ಬಳಸಿದ ತ್ಯಾಜ್ಯ
- **ವಿಶೇಷ ಕಾಳಜಿಯ ತ್ಯಾಜ್ಯ:** ವಿಲೇವಾರಿ ವೇಳೆ ವಿಶೇಷ ಎಚ್ಚರಿಕೆ ಅಗತ್ಯವಿರುವ ತ್ಯಾಜ್ಯ

ನಗರದಲ್ಲಿ ಎಲ್ಲ ನಾಗರಿಕರು ಹಸಿ, ಒಣ, ನೈರ್ಮಲ್ಯ ಹಾಗೂ ವಿಶೇಷ ಕಾಳಜಿಯ ತ್ಯಾಜ್ಯ ಸೇರಿದಂತೆ ನಾಲ್ಕು ವಿಧಗಳಲ್ಲಿ ವಿಂಗಡಣೆ ಮಾಡುವುದು, ಎಲ್ಲಿಯೂ ತ್ಯಾಜ್ಯವನ್ನು ಎಸೆಯದಿರುವುದು ಹಾಗೂ ನಗರವನ್ನು ಸ್ವಚ್ಛ, ಹಸಿರು ಮತ್ತು ಶಾಶ್ವತವಾಗಿಸಲು ಸಂಪೂರ್ಣ ಸಹಕಾರ ನೀಡುವಂತೆ ಬಿಎಸ್‌ಡಬ್ಲ್ಯುಎಂಎಲ್ ಮನವಿ ಮಾಡಿದೆ.

ಮುಂದಿನ ವಾರದಿಂದ ಎಲ್ಲೆಡೆ ಟೋಯಿಂಗ್: ಜಿಬಿಎ

ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲೂ ಅನಧಿಕೃತ ವಾಹನ ನಿಲುಗಡೆಯನ್ನು ನಿಯಂತ್ರಿಸಲು ಮುಂದಿನ ವಾರದಿಂದ ಟೋಯಿಂಗ್ ಆರಂಭವಾಗಲಿದೆ ಎಂದು ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ್ ರಾವ್ ತಿಳಿಸಿದರು.

ಒಂದೆರಡು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಟೋಯಿಂಗ್ ಆರಂಭಿಸಲಾಗಿದೆ. ಉಳಿದ ಭಾಗಗಳಲ್ಲೂ ಪ್ರಾರಂಭವಾಗಲಿದೆ. ನಗರದ ಎಲ್ಲ ಶಾಸಕರೂ ಅನಧಿಕೃತ ವಾಹನಗಳ ನಿಲುಗಡೆಯನ್ನು ನಿಯಂತ್ರಿಸಲು ಒತ್ತಾಯಿಸುತ್ತಿದ್ದಾರೆ. ಉಪ ಮುಖ್ಯಮಂತ್ರಿಯವರೂ ಸೂಚನೆ ನೀಡಿದ್ದಾರೆ. ಹೀಗಾಗಿ, ಅಗತ್ಯಕ್ಕೆ ಅನುಸಾರವಾಗಿ, ಸಂಚಾರ ಪೊಲೀಸರ ಸಲಹೆ ಮೇರೆಗೆ ಟೋಯಿಂಗ್ ವಾಹನಗಳನ್ನು ನಗರ ಪಾಲಿಕೆಗಳಿಂದ ಒದಗಿಸಲಾಗುವುದು ಎಂದು ತಿಳಿಸಿದರು.

‘ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸಲು ಒಟ್ಟು ಆರು ಟೋಯಿಂಗ್ ವಾಹನಗಳನ್ನು ಬಾಡಿಗೆಗೆ ಪಡೆಯಲಾಗಿದೆ. ವಾಹನಗಳ ಕಾರ್ಯಕ್ಷಮತೆ ಮತ್ತು ಗುತ್ತಿಗೆದಾರರ ಅರ್ಹತೆಯನ್ನು ಪರಿಶೀಲಿಸಿದ ನಂತರ, ಮುಂದಿನ ವಾರದಿಂದ ಈ ವಾಹನಗಳು ಅಧಿಕೃತವಾಗಿ ಸಂಚಾರ ಪೊಲೀಸರ ಉಸ್ತುವಾರಿಯಲ್ಲಿ ರಸ್ತೆಗಿಳಿದು ಕಾರ್ಯನಿರ್ವಹಿಸಲಿವೆ’ ಆಯುಕ್ತ ಕೆ.ಎನ್. ರಮೇಶ್ ಹೇಳಿದರು.

‘ವಿಜ್ಞಾನ ಲೇಖಕರನ್ನು ಪ್ರೋತ್ಸಾಹಿಸುತ್ತಿದ್ದ ಜಿಟಿಎನ್’

ಪ್ರಜಾವಾಣಿ ವಾರ್ತೆ



ನಾಗೇಶ ಹೆಗಡೆ

ಬೆಂಗಳೂರು: ‘ದೇವರು, ದಿಂಡರು ಎಂಬುದನ್ನು ವಿಜ್ಞಾನ ಲೇಖಕ ಜಿ.ಟಿ.ನಾರಾಯಣ ರಾವ್ (ಜಿಟಿಎನ್) ಒಪ್ಪುತ್ತಿರಲಿಲ್ಲ. ವಿಜ್ಞಾನ ಅರ್ಥ ಮಾಡಿಕೊಂಡು, ಮೂಢನಂಬಿಕೆಗೆ ಬಲಿಯಾಗದಿರಿ ಎನ್ನುತ್ತಿದ್ದರು’ ಎಂದು ವಿಜ್ಞಾನ ಲೇಖಕ ನಾಗೇಶ ಹೆಗಡೆ ಹೇಳಿದರು.

ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ ಸಂಚಿ–ಸಂಚಯ ಸಂಸ್ಥೆ ಶನಿವಾರ ಏರ್ಪಡಿಸಿದ್ದ ಜಿ.ಟಿ.ನಾರಾಯಣ ರಾವ್ ಶತಮಾನೋತ್ಸವ ಸಂಗಮ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಕನ್ನಡ ವಿಶ್ವಕೋಶ ವಿಜ್ಞಾನ ವಿಭಾಗದ ಸಂಪಾದಕರಾಗಿ ಒಳ್ಳೆಯ ಕೆಲಸ ಮಾಡಿರುವ ಅವರು, ವಿಜ್ಞಾನದಲ್ಲಿ ಬರೆಯಬಲ್ಲ ಲೇಖಕರನ್ನು ಹುಡುಕಿ, ಪತ್ರಿಕೆ ಮತ್ತು ಪ್ರಕಾಶನ ಸಂಸ್ಥೆಗಳಿಗೆ ಪರಿಚಯಿಸುತ್ತಿದ್ದರು. ವಿಜ್ಞಾನ ಲೇಖಕರನ್ನು ಗುರುತಿಸಿ, ಪ್ರೋತ್ಸಾಹಿಸುತ್ತಿದ್ದರು’ ಎಂದು ಶ್ಲಾಘಿಸಿದರು.

ಜಿಟಿಎನ್ ಅವರು ಗಣಿತ ಪ್ರಾಧ್ಯಾಪಕ ಹಾಗೂ ಎನ್‌ಸಿಸಿ ಮೇಷ್ಟ್ರು ಆಗಿದ್ದರು. ವಿಜ್ಞಾನ ಮತ್ತು ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಸಂಗೀತದ ಬಗ್ಗೆಯೂ ಆಸಕ್ತಿ ಇತ್ತು. ಹಾಗಾಗಿ ಮೈಸೂರಿನಲ್ಲಿ ಗಾನಭಾರತಿ ಸಂಗೀತ ಸಂಸ್ಥೆ ಆರಂಭಿಸಿ, ಹೆಚ್ಚು ಸಮಯ ಕಳೆಯುತ್ತಿದ್ದರು ಎಂದು ನುಡಿದರು.

ನೊಬೆಲ್ ಪುರಸ್ಕೃತ ವಿಜ್ಞಾನಿ ಎಸ್. ಚಂದ್ರಶೇಖರ್ ಅವರ ಸಂದರ್ಶನಕ್ಕಾಗಿ ಜಿಟಿಎನ್ ಅವರು ಅಮೆರಿಕಕ್ಕೆ ತೆರಳಿದ್ದ ಸಂದರ್ಭದಲ್ಲಿ ಅಕ್ಕ ಸಮ್ಮೇಳನ ನಡೆಯುತ್ತಿತ್ತು. ಬಹುತೇಕರು ಇಂಗ್ಲಿಷ್‌ನಲ್ಲಿ ಮಾತನಾಡುತ್ತಿದ್ದರು. ಆದರೆ, ನಾರಾಯಣ ರಾವ್ ಅವರು 15 ನಿಮಿಷ ಶುದ್ಧ ಕನ್ನಡದಲ್ಲಿ ಮಾತನಾಡಿದರು. ಗಾನಭಾರತಿ ಸಂಗೀತ ಸಂಸ್ಥೆಗೆ ದೇಣಿಗೆ ನೀಡುವಂತೆ ಮನವಿ ಮಾಡಿದಾಗ ಯಾರೂ ನೀಡಲಿಲ್ಲ. ಆದರೆ, ಚಂದ್ರಶೇಖರ್ ಅವರು 300 ಡಾಲರ್ ದೇಣಿಗೆ ನೀಡಿದರು. ಈ ವಿಚಾರವನ್ನು ಜಿಟಿಎನ್ ಅವರು ತಮ್ಮ ಪುಸ್ತಕದಲ್ಲಿ ಬರೆದುಕೊಂಡಿದ್ದಾರೆ ಎಂದು ವಿವರಿಸಿದರು.

‘ಪರಮಾಣು’ ಕುರಿತು ನನ್ನ ಲೇಖನವು ಪಿಯು ಪಠ್ಯವಾಯಿತು. ಇದಕ್ಕೆ ಜಿಟಿಎನ್ ಅವರೇ ಕಾರಣ. ಆ ಪಾಠ ನನಗೆ ಸಾಕಷ್ಟು ಜನಪ್ರಿಯತೆ ತಂದುಕೊಟ್ಟಿತು. ವಿಜ್ಞಾನ ಲೇಖನ ಬರೆಯುವುದರ ಬಗ್ಗೆ ಪ್ರತಿ ವರ್ಷ ಕಮ್ಮಟ ನಡೆಸುತ್ತಿದ್ದರು’ ಎಂದು ನೆನಪಿಸಿಕೊಂಡರು.

ಒಂದು ಕಡೆ ಚಂದ್ರನತ್ತ ತೆರಳಲು ತಯಾರಿ ನಡೆಯುತ್ತಿದೆ. ಮತ್ತೊಂದೆಡೆ ಚಂದ್ರ ಗ್ರಹಣವಾಯಿತು ಎಂದು ಸಂಪ್ ನೀರು ಖಾಲಿ ಮಾಡುತ್ತೇವೆ. ಬದುಕಿನ ಮತ್ತು ನಿಸರ್ಗದ ವಾಸ್ತವಗಳನ್ನು ಹೇಳಬಹುದಾದ ಯಾವ ಮಾಧ್ಯಮಗಳೂ ಇಲ್ಲ. ಎಲ್ಲ ಮಾಧ್ಯಮಗಳೂ ದುರ್ಬಲವಾಗುತ್ತಿವೆ. ವಿಜ್ಞಾನದ ಹೆಸರಿನಲ್ಲಿ ಮೂಢನಂಬಿಕೆ ಪ್ರಸಾರ ಮಾಡುತ್ತಿರುವ ಬಗ್ಗೆ ಕೆಲ ಉದಾಹರಣೆ ನೀಡಿದರು.

PUBLIC NOTICE

Publics are hereby informed that my client **M/s DS-Max Properties Pvt. Ltd.**, having its office at No. 1794, 14th Main, 30th Cross, HBR Layout, 1st Stage, 5th Block, Bengaluru- 43 and intend to enter into Absolute Sale Deed with Owner **Smt Rathnamma @ Baby** w/o Late Sridhar is the absolute owner of Agricultural land property bearing Sy. No. **136/1**, which measuring **1 acre 31.08 guntas**, situated at **Muthkur Village**, Anugondanahalli Hobli, Hoskote Taluk, Bengaluru Rural District and bounded on **East by:** Land of Sy.No.137, **West by:** Land of Sy.No. 136/2, **North by:** Naganayakanakote Gadi & Private lands, **South by:** Road and referred to as “schedule property”.

Any person or Any Authority or Any promoters having any asserting right, title, interest and claims to oppose for Absolute Sale Deed of property and further having any manner of right, title, claims etc., and may lodge their objections, claims over the property along with relevant papers in support of their claims, right to the below address within **15** days from the date of this notice, if any objections fails to comply, my client shall take further steps and deemed for entering into Absolute Sale Deed of property.

LINGARAJ. S. NADAGOUDA., ADVOCATE
No.1854, 17th Main, 30th 'B' Cross, HBR Layout, 1st Stage, 5th Block, Bangalore - 560 043.
Mob : 96204 74780 , 94481 35970

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562101
ದೂರವಾಣಿ ಸಂಖ್ಯೆ: ಕಛೇರಿ: 08156–295427
ಫ್ಯಾಕ್ಸ್: 08156 – 295427 ಇಮೇಲ್ – eemidcbpura@gmail.com

ಮರು ಟೆಂಡರ್ ಅಧಿಸೂಚನೆ

ಸಂಖ್ಯೆ: ಕಾಸಬ/ತಾಂಶಾ/ತಾಂಸ/ ಮರು ಟೆಂಡರ್/1035/2026–27 ದಿ: 17/01/2026

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : 14/2025–26, ದಿನಾಂಕ: 14/11/2025 ಮತ್ತು 24/2025–26, ದಿನಾಂಕ: 29/01/2026 ರಲ್ಲಿ ಆಹ್ವಾನಿಸಲಾಗಿದ್ದ 4702 ವಿಶೇಷ ಘಟಕ ಯೋಜನೆ ಅಡಿಯಲ್ಲಿ ಅನುಮೋದನೆಯಾಗಿರುವ ಹಲವು ಕಾಮಗಾರಿಗೆ ಯಾವುದೇ ಗುತ್ತಿಗೆದಾರರು ಭಾಗವಹಿಸದೇ ಇರುವುದರಿಂದ ಮರು ಟೆಂಡರ್ ಕರೆಯಲಾಗಿರುತ್ತದೆ ಉಳಿದ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 27/04/2026 ಸಾಯಂಕಾಲ 4.30 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ : 29/04/2026 ಬೆಳಿಗ್ಗೆ 11.00 ಗಂಟೆಗೆ (ಸಾಧ್ಯವಾದ್ದಲ್ಲಿ). ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ–08156–295427 ಮತ್ತು ಕೆ.ಪಿ.ಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆ: 91–8068948777 ಮತ್ತು 91–8046010000 ರಿಂದ ಪಡೆಯಬಹುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ಶಾಸಕ ಕೊತ್ತೂರು ಮಂಜುನಾಥ್ ಮೇಲ್ಮನವಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ಪರಿಶಿಷ್ಟ ಜಾತಿ ಪ್ರಮಾಣಪತ್ರ ರದ್ದುಗೊಳಿಸಿದ್ದ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ಕೋಲಾರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಕೊತ್ತೂರು ಮಂಜುನಾಥ್ ಸಲ್ಲಿಸಿದ್ದ ಮೇಲ್ಮನವಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಜಿ.ಮಂಜುನಾಥ್ (ಕೊತ್ತೂರು ಮಂಜುನಾಥ್) ಸಲ್ಲಿಸಿದ್ದ ರಿಟ್ ಮೇಲ್ಮನವಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ, ‘ಏಕಸದಸ್ಯ ನ್ಯಾಯಪೀಠದ ಆದೇಶದಲ್ಲಿ ಹಸ್ತಕ್ಷೇಪ ಮಾಡಬೇಕಾದ ಪ್ರಮೇಯವೇ ಇಲ್ಲ’ ಎಂದು ಸ್ಪಷ್ಟಪಡಿಸಿದೆ.

‘ಮಂಜುನಾಥ್ ಬುಡುಗ ಜಂಗಮ ಸಮುದಾಯಕ್ಕೆ ಸೇರಿಲ್ಲ. ಅವರು ಬೈರಾಗಿ ಸಮುದಾಯಕ್ಕೆ ಸೇರಿದವರು ಎಂದು ಹೇಳಲು ಸಾಕಷ್ಟು ದಾಖಲೆಗಳಿವೆ. ಜತೆಗೆ, ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ದಾಖಲೆಗಳಲ್ಲೂ ಈ ಅಂಶ ವ್ಯಕ್ತವಾಗಿದೆ. ಹೀಗಾಗಿ, ಏಕಸದಸ್ಯ ನ್ಯಾಯಪೀಠದ ಆದೇಶ ಸಮಂಜಸವಾಗಿದೆ’ ಎಂಬ ಅಭಿಪ್ರಾಯವನ್ನು ನ್ಯಾಯಪೀಠ ವ್ಯಕ್ತಪಡಿಸಿದೆ.

‘ಮಂಜುನಾಥ್, ಸ್ಥಳೀಯ ತಹಶೀಲ್ದಾರ್ ಕಚೇರಿಯ ಕಂಪ್ಯೂಟರ್ ದುರುಪಯೋಗ ಪಡಿಸಿಕೊಂಡು ನಕಲಿ ಜಾತಿ ಪ್ರಮಾಣ ಪತ್ರ ಪಡೆದಿರುವ ಗಂಭೀರ ಆರೋಪವಿದೆ. ಹೀಗಾಗಿ, ಏಕಸದಸ್ಯ ನ್ಯಾಯಪೀಠ ಆದೇಶಿರುವಂತೆ, ರಾಜ್ಯ ಸರ್ಕಾರ ಈ ಬಗ್ಗೆ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕು’ ಎಂದು ನಿರ್ದೇಶಿಸಿದೆ.

ರಾಜ್ಯ ಸಮಾಜ ಕಲ್ಯಾಣ ಇಲಾಖೆ ಮತ್ತು ಕೋಲಾರ ಜಿಲ್ಲಾ ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯ ಸೇರಿದಂತೆ ಸರ್ಕಾರದ ಒಟ್ಟು ಆರು ಪ್ರತಿವಾದಿಗಳ ಪರ ವಿಶೇಷ ವಕೀಲ ಸಿ.ಜಗದೀಶ್, ಮಾಜಿ ಶಾಸಕ ಅಮರೇಶ್ ಪರ ಪದಾಂಕಿತ ಹಿರಿಯ ವಕೀಲೆ ಪ್ರಮೀಳಾ ನೇಸರ್ಗಿ ಮತ್ತು ಹೈಕೋರ್ಟ್ ವಕೀಲರಾದ ಜಿ.ಎಸ್.ಕಾವ್ಯಶ್ರೀ ಹಾಗೂ ಎನ್.ಎಸ್.ಶೇಷಾದ್ರಿ ವಾದ ಮಂಡಿಸಿದ್ದರು.

ಪ್ರಕರಣವೇನು?: ‘ನಾನು ಪರಿಶಿಷ್ಟ ಜಾತಿಗಳ (ಎಸ್ ಸಿ) ಪಟ್ಟಿಯ ಬುಡುಗ ಜಂಗಮ ಜಾತಿಗೆ ಸೇರಿದವನು’ ಎಂದು ಘೋಷಿಸಿಕೊಂಡು ಜಿ.ಮಂಜುನಾಥ್ 2012ರಲ್ಲಿ ಪರಿಶಿಷ್ಟ ಜಾತಿ ಪ್ರಮಾಣಪತ್ರ ಪಡೆದು 2013ರಲ್ಲಿ ಮುಳಬಾಗಿಲು ಮೀಸಲು ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದಿದ್ದರು. ಪರಾಜಿತ ಅಭ್ಯರ್ಥಿ ಮುನಿ ಆಂಜಿನಪ್ಪ ಇವರ ಜಾತಿ ಪ್ರಮಾಣದ ಸಿಂಧುತ್ವವನ್ನು ಪ್ರಶ್ನಿಸಿದ್ದರು.

ವಿಚಾರಣೆಯಲ್ಲಿ ಮಂಜುನಾಥ್ ತಾವು ಪರಿಶಿಷ್ಟ ಜಾತಿಗೆ ಸೇರಿರುವುದನ್ನು ಸಾಬೀತುಪಡಿಸಲು ವಿಫಲವಾಗಿದ್ದ ಹಿನ್ನೆಲೆಯಲ್ಲಿ ಅವರ ಆಯ್ಕೆಯನ್ನು ಹೈಕೋರ್ಟ್ 2018ರ ಏಪ್ರಿಲ್‌ನಲ್ಲಿ ಅಸಿಂಧುಗೊಳಿಸಿತ್ತು.

ಈ ತೀರ್ಪಿನ ವಿರುದ್ಧ ಮಂಜುನಾಥ್ ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಸಲ್ಲಿಸಿದ್ದರು. ಮೇಲ್ಮನವಿ ವಜಾಗೊಳಿಸಿದ್ದ ಸುಪ್ರೀಂ ಕೋರ್ಟ್, ‘ಜಿಲ್ಲಾಧಿಕಾರಿ ನೇತೃತ್ವದ ಜಾತಿ ಪರಿಶೀಲನಾ ಸಮಿತಿ ಮಂಜುನಾಥ್ ಅವರ ಜಾತಿಯನ್ನು ಪರಿಶೀಲಿಸಬೇಕು. ಒಂದು ವೇಳೆ ಸಮಿತಿಯ ನಿರ್ಣಯದ ಬಗ್ಗೆ ಆಕ್ಷೇಪ ವಿದ್ದರೆ ಪುನಃ ಅದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಬಹುದು’ ಎಂದು ಆದೇಶಿಸಿತ್ತು.

ಪರಿಶೀಲನೆ ನಡೆಸಿದ್ದ ಜಿಲ್ಲಾಧಿಕಾರಿ ನೇತೃತ್ವದ ಜಾತಿ ಪರಿಶೀಲನಾ ಸಮಿತಿಯು, ‘ಜಿ. ಮಂಜುನಾಥ್ ಬುಡುಗ ಜಂಗಮ ಜಾತಿಗೆ ಸೇರಿಲ್ಲ. ಬೈರಾಗಿ ಜಾತಿಗೆ ಸೇರಿದವರು’ ಎಂಬ ನಿರ್ಣಯ ಕೈಗೊಂಡಿತ್ತು. ಸಮಿತಿಯ ನಿರ್ಣಯವನ್ನು ಮಂಜುನಾಥ್ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020.

ಸಂ: ಬೆಂಅಪ್ರಾ/ನಯೋಸ/CLU-526/2025-26/287/2026-27 ದಿನಾಂಕ: 18.04.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–Aರ ಅಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ. ನಂ	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ-2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಕೃಷ್ಣಾರೆಡ್ಡಿ. ಸಿ ಮತ್ತು ಶ್ರೀಮತಿ ಸುನಂದಮ್ಮ	ಆನೇಕಲ್	ಸರ್ಜಾಪುರ	ತಿಗಳಚೌಡದೇನಹಳ್ಳಿ	16/4	0–31	ವ್ಯವಸಾಯ	ವಾಣಿಜ್ಯ
2					16/5	0–11		

ಷರಾ: ವಾಣಿಜ್ಯ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ. ವಾಣಿಜ್ಯ ಸಂಕೀರ್ಣ ನಿರ್ಮಾಣವಾಗುವುದರಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂದು ಅರ್ಜಿದಾರರು ತಿಳಿಸುತ್ತಾ, **‘ವ್ಯವಸಾಯ ವಲಯ’** ದಿಂದ **‘ವಾಣಿಜ್ಯ ಉಪಯೋಗಕ್ಕೆ’** ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಾಯವಾಣಿ/ವಾಟ್ಸಪ್: 94831 66622 (24x7). X @BDAOfficialGoK

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಸಾರ್ವಜನಿಕ ಪ್ರಕಟಣೆ

ಈ ಸೂಚನಾ ಪತ್ರದ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷೀದಾರರು ಕೆಳಕಂಡ ಷೆಡ್ಯೂಲಿನಲ್ಲಿ ಐಟಂ ನಂ. 1 ರಿಂದ 3 ರಲ್ಲಿ ವಿವರಿಸಿರುವ ಷೆಡ್ಯೂಲ್ ಸ್ವತ್ತುಗಳನ್ನು ಕೆಳಕಂಡ ಷೆಡ್ಯೂಲಿನಲ್ಲಿ ಕ್ರಮವಾಗಿ ಕಾಣಿಸಿರುವ ಮಾಲೀಕರಿಂದ ಜಂಟಿಯಾಗಿ ಅಭಿವೃದ್ಧಿ ಪಡಿಸಲು ಇಚ್ಚಿಸಿರುತ್ತಾರೆ. ಷೆಡ್ಯುಲ್ ಸ್ವತ್ತುಗಳು ಸದರಿ ಕೆಳಕಂಡ ಮಾಲೀಕರ ಮಾಲೀಕತ್ವಕ್ಕೆ ಒಳಪಟ್ಟಿರುವುದಲ್ಲದೆ, ಅವರು ಅನಿರ್ಬಂಧಿತ ಅಭಿವೃದ್ಧಿಪಡಿಸುವ ಹಕ್ಕನ್ನು ಸಹ ಹೊಂದಿರುತ್ತಾರೆಂದು ಸದರಿಯವರು ತಿಳಿಸಿರುತ್ತಾರೆ.

ಸದರಿ ಷೆಡ್ಯುಲ್ ಸ್ವತ್ತಿನಲ್ಲಿ ಯಾವುದೇ ವ್ಯಕ್ತಿಯು ಯವುದೇ ತರಹದ ಹಕ್ಕುಗಳು ಅಥವಾ ಕ್ಲೇಮುಗಳೇನಾದರು ಹೊಂದಿದ್ದಲ್ಲಿ ಅಂತಹ ಕ್ಲೇಮುಗಳನ್ನು ಮತ್ತು ಹಕ್ಕುಗಳಿಗೆ ಸಂಬಂಧಪಟ್ಟ ದಾಖಲೆಪತ್ರಗಳೊಂದಿಗೆ ಈ ಕೆಳಗೆ ಸಹಿ ಮಾಡಲ್ಪಟ್ಟಿರುವ ವಿಳಾಸಕ್ಕೆ ಇಂದಿನಿಂದ ೧೪ ದಿನಗಳೊಳಗಾಗಿ ತಲುಪಿಸತಕ್ಕದ್ದು. ಸದರಿ ಸೂಚಿತ ಮತ್ತು ನಿಗದಿತ ಅವಧಿಯ ತರುವಾಯ ನಮ್ಮ ಕಕ್ಷೀದಾರರು, ಸದರಿ ಕೆಳಕಂಡ ಮಾಲೀಕರ ಮಾಲೀಕತ್ವಕ್ಕೆ ಮತ್ತು ಸದರಿ ಅಭಿವೃದ್ಧಿಗೆ ಯಾವುದೇ ತಂಟೆ ತಕರಾರುಗಳಿಲ್ಲವೆಂದು ಪರಿಗಣಿಸಿ, ಸದರಿ ಷೆಡ್ಯೂಲ್ ಸ್ವತ್ತಿನ ಅಭಿವೃದ್ಧಿಗೆ ಮುಂದಾಗುವರು.

ಷೆಡ್ಯೂಲ್ ಸ್ವತ್ತಿನ ವಿವರ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕುಂದಾನ ಹೋಬಳಿ, ದೊಡ್ಡಚೀಮನಹಳ್ಳಿ ಗ್ರಾಮದಲ್ಲಿರುವ ಒಟ್ಟು ವಿಸ್ತೀರ್ಣ 3 ಎಕರೆ ಉಳ್ಳ ಈ ಕೆಳಗೆ ವಿವರಿಸಿರುವ ಸ್ಥಿರ ಸ್ವತ್ತುಗಳು :

ನಂ.	ಸರ್ವೇ ನಂ.	ವಿಸ್ತೀರ್ಣ (ಎ =ಗು)	ಮಾಲೀಕರ ಹೆಸರು	ಚಕ್ಕುಬಂದಿ: ಪೂರ್ವ	ಚಕ್ಕುಬಂದಿ: ಪಶ್ಚಿಮ	ಚಕ್ಕುಬಂದಿ: ಉತ್ತರ	ಚಕ್ಕುಬಂದಿ: ದಕ್ಷಿಣ
01.	133/2	1 ಎಕರೆ	ದಿವಂಗತ ಟಿ. ಶಿಕಾಮಣಿ ರವರ ಮಗ ಶ್ರೀ ಟಿ. ಎಸ್. ಪ್ರಭುದಾಸ್	ಸರ್ವೇ ನಂ. 201 ಮತ್ತು 153/2 ರ ಜಮೀನುಗಳು	ಸರ್ವೇ ನಂ. 104 ಶ್ರೀ. ರಾಜಣ್ಣ ರವರ ಜಮೀನು	ಸರ್ವೇ ನಂ. 130/1 ಮತ್ತು 129 ರ ಜಮೀನುಗಳು	ಸರ್ವೇ ನಂ. 133/3 ರ ಜಮೀನು
02.	153/2	1 ಎಕರೆ	ದಿವಂಗತ ಟಿ. ಶಿಕಾಮಣಿ ರವರ ಮಗ ಶ್ರೀ ಜೋಹನ್ ಟಿ. ಎಸ್	ರಸ್ತೆ	ಸರ್ವೇ ನಂ. 133/1, 133/2 ಮತ್ತು 133/3 ರ ಜಮೀನುಗಳು	ಸರ್ವೇ ನಂ. 201 ರ ಜಮೀನು	ಸರ್ವೇ ನಂ. 153/1 ರ ಜಮೀನು
03.	104	1 ಎಕರೆ	ಶ್ರೀ ಅನ್ನಪ್ಪ ರವರ ಮಗ ಶ್ರೀ ನಂಜಪ್ಪ	ಸರ್ವೇ ನಂ. 153/1 ರ ಜಮೀನು	ಸರ್ವೇ ನಂ. 104 ಶ್ರೀ ದೊಡ್ಡಮುನಿಯಪ್ಪ ರವರ ಜಮೀನು	ಸರ್ವೇ ನಂ. 133/1 ರ ಜಮೀನು	ಸರ್ವೇ ನಂ. 104 ರ ಜಮೀನು

ಸಹಿ./- ಎ. ಸುಪ್ರೀತ್, ಪಾಲುದಾರರು
ಅಲೈಡ್ ಲಾ ಪ್ರಾಕ್ಟಿಸಸ್, ವಕೀಲರು
1/1, ಲೆವೆಲ್ 3, ಮಿಲ್ಲರ್ಸ್ ಆರ್ಕೇ, ಡ್ಮಿಲ್ಲರ್ಸ್ ರಸ್ತೆ, ವಸಂತನಗರ,
ಬೆಂಗಳೂರು - 560 001. ದೂ: **+91 (080) 2222 0003**

ಸ್ಥಳ : ಬೆಂಗಳೂರು
ದಿನಾಂಕ : ಏಪ್ರಿಲ್ 19th, 2026

15 ವರ್ಷದ ಬಳಿಕ ಸಿಕ್ಕಿಬಿದ್ದ ಕೈದಿ

ಚನ್ನಕೇಶವ

ಹಾಸನ: ಸಕಲೇಶಪುರ ಜೈಲಿನಿಂದ ತಪ್ಪಿಸಿಕೊಂಡಿದ್ದ ವಿಚಾರಣಾಧೀನ ಕೈದಿಯನ್ನು 15 ವರ್ಷಗಳ ಬಳಿಕ ಹಾಸನ ಪೊಲೀಸರು ಬಂಧಿಸಿದ್ದಾರೆ.

ಸಕಲೇಶಪುರ ತಾಲ್ಲೂಕಿನ ನಲ್ಲುಳ್ಳಿ ನಿವಾಸಿ ಚನ್ನಕೇಶವ ಅಲಿಯಾಸ್ ಕೇಶವ ಅಲಿಯಾಸ್ ಸುರೇಶ್‌ನನ್ನು, 2011ರಲ್ಲಿ ಜೈಲಿನಲ್ಲಿ ಇರಿಸಲಾಗಿತ್ತು. ಅದೇ ವರ್ಷ ಜೈಲಿನಿಂದ ಪರಾರಿಯಾಗಿದ್ದ.

ಖಚಿತ ಮಾಹಿತಿಯ ಮೇರೆಗೆ ಕಾರ್ಯಾಚರಣೆ ನಡೆಸಿದ ಹಾಸನ ಪೊಲೀಸರು, ಗೋವಾದಲ್ಲಿ ಆರೋಪಿಯನ್ನು ಇದೀಗ ಬಂಧಿಸಿದ್ದು, ಮತ್ತೆ ಜೈಲಿಗೆ ಕಳುಹಿಸಿದ್ದಾರೆ. ಆರೋಪಿ ಮುಂಬೈ ಸೇರಿದಂತೆ ವಿವಿಧ ನಗರಗಳ ಹೋಟೆಲ್‌ಗಳಲ್ಲಿ ಕೆಲಸ ಮಾಡಿಕೊಂಡು ಬದುಕು ಸಾಗಿಸುತ್ತಿದ್ದ ಎಂದು ತಿಳಿದುಬಂದಿದೆ.

ಬಂಧನ ಸಮಯದಲ್ಲಿ ಗೋವಾದ ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡುತ್ತಿದ್ದ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಮಾರ್ಗದರ್ಶನ, ಎಎಸ್ಪಿಗಳಾದ ತಮ್ಮಯ್ಯ ಹಾಗೂ ಶ್ರೀನಿಧಿ ನೇತೃತ್ವದಲ್ಲಿ, ಸಿಬ್ಬಂದಿ ರವಿ ಕಬ್ಬತ್ತಿ, ಸೋಮಶೇಖರ ಮತ್ತು ಬಸವರಾಜು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ದೆಹಲಿ ರೇಸ್

ರೀಬ್ಯಾಕ್ ಗೆಲ್ಲುವ ನಿರೀಕ್ಷೆ

ನಾರ್ತ್ ಇಂಡಿಯಾ ಫಿಲ್ಲೀಸ್ ಟ್ರಯಲ್ ಸ್ಟೇಕ್ಸ್ ಭಾನುವಾರದ ದೆಹಲಿ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ರೀಬ್ಯಾಕ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 3:00ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಬ್ಲ್ಯಾಕ್ ರೈನ್‌ಸ್ಟಾರ್ಮ್ 1, ಪಾಲಿ ಕ್ವಾರ್ 3, ಸರ್ ಮೋರ್ 5
2ನೇ ರೇಸ್: ಯಾಕುಸ್ಕ್ 1, ಮಾಸ್ಟರ್ ಟೊರ್ನಾಡೊ 2, ಬಿಗ್ ಬ್ಯಾಂಗ್ 3
3ನೇ ರೇಸ್: ಸೂಪರ್ ಸ್ಪೀಡ್ 8, ಸಿಡ್ನಿ ಸಸೆಕ್ಸ್ 5, ಕ್ಯಾಷಿಯರ್ 9
4ನೇ ರೇಸ್: ರೀಬ್ಯಾಕ್ 4, ವಿಂಡಿ ಕ್ರೀಕ್ 6, ಅಶ್ವ ರಿಕಾಂಗ್ ಪಿಯೊ 2
5ನೇ ರೇಸ್: ಅಶ್ವ ಕೋಹಿಮಾ 11, ಗೋಲ್ಡನ್ ಸನ್ 10, ಎಲಿಮಿನೇಟರ್ 1
6ನೇ ರೇಸ್: ಟೆಂಡಿಂಗ್ ಕ್ರೂಝ್ ,2, ಫಸ್ಟ್ ಕ್ಲಾಸ್ 1, ನೈರೋಬಿ 12

ಉತ್ತಮ ಬೆಟ್: ಬ್ಲ್ಯಾಕ್ ರೈನ್‌ಸ್ಟಾರ್ಮ್

ಜಾಕ್‌ಪಾಟ್‌ಗೆ	ಟ್ರಿಬಲ್
2,3,4,5,6	4,5,6

PM SHRI School Jawahar Navodaya Vidyalaya
(A Unit of Navodaya Vidyalaya Samiti)
Ministry of Education, Deptt. Of School Education & Literacy, Govt. of India
Village: Basettihalli, District: Bengaluru Rural, State:Karnataka, Pin Code: 562163

F.No.10-1/JNVD/2026-27/ Date:18.04.2026

TENDER NOTIFICATION

Sealed tenders are invited from the reputed firms/manufactures only for the supply of **1. Rice, 2. Kirana/Provision, 3. Bakery Items, 4. Vegetables, 5. Eggs, 6. Fruits, 7. Poultry(Chicken/Mutton) 8. Biscuit (Branded) 9. Masonary Items(Cement & Hardware Items) 10. Toilet Items, 11. Stationery Items (Office Stationery), 12. Bed & Pillow 13. Bedding Items 14. Hair Cutting 15. Uniform Washing and Ironing, 16. Wastage of Mess food Items, 17. Scrap Items & 18. Labour Outsourcing** details of which are in tender document. Interested Firms/Parties and well-established firms/manufacturers may obtain the tender schedule with conditions and specifications from this office by paying **Rs.200/-** (Each) cash or Payment of **Rs.200/-** through DD/online transfer to the Principal, Jawahar Navodaya Vidyalaya, Bangalore Rural at Bashettihalli, during the office hours on any working day from **20.04.2026 to 11.05.2026** between **10.00 am to 5.00 pm.** The sealed tender document should be submitted on or before **05.00 pm on 11.05.2026.**
The date of **Tender Opening is 12.05.2026 at 11.00** am in the Vidyalaya premises.

Sd/- Principal
JNV-BANGALORE RURAL

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ
ಬೆಂಗಳೂರು ದಕ್ಷಿಣ ಉಪ ವಿಭಾಗ, 13ನೇ ಅಡ್ಡ ರಸ್ತೆ, 29ನೇ ಮುಖ್ಯ ರಸ್ತೆ,
ಬಿ.ಟಿ.ಎಂ. 2ನೇ ಹಂತ, ಬೆಂಗಳೂರು–560076. Email ID - acfsouthsubdivision@gmail.com

ಇ–ಟೆಂಡರ್ ಪ್ರಕಟಣೆ

ವಿಷಯಃ– 2026–27ನೇ ಸಾಲಿನಲ್ಲಿ ಬೆಂಗಳೂರು ದಕ್ಷಿಣ ಉಪ ವಿಭಾಗದ ಆನೇಕಲ್ ವಲಯ ವ್ಯಾಪ್ತಿಯಲ್ಲಿನ ರಸ್ತೆಬದಿ ನೆಡುತೋಪು ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ಎರಡನೇಯ ಬಾರಿಗೆ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಬಗ್ಗೆ.

2026–27ನೇ ಸಾಲಿನಲ್ಲಿ ಬೆಂಗಳೂರು ದಕ್ಷಿಣ ಉಪ ವಿಭಾಗದ ಆನೇಕಲ್ ವಲಯ ವ್ಯಾಪ್ತಿಯಲ್ಲಿನ ರಸ್ತೆಬದಿ ನೆಡುತೋಪು ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ಕರ್ನಾಟಕ ಅರಣ್ಯ ಇಲಾಖೆಯಲ್ಲಿ 2026–27ನೇ ಸಾಲಿಗೆ ಗುತ್ತಿಗೆದಾರರಾಗಿ ಹೆಸರನ್ನು ನೊಂದಾಯಿಸಿಕೊಂಡಿರುವಂತಹ ಅರ್ಹ ಗುತ್ತಿಗೆದಾರರು ಮಾತ್ರ ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟಲ್ (https://kppp.karnataka.gov.in) ಮೂಲಕ ಎರಡನೇಯ ಬಾರಿಗೆ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಇ–ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 24.04.2026 ರ ಅಪರಾಹ್ನ 5.00 ಗಂಟೆಗೆ. ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: 27.04.2026 ರ ಅಪರಾಹ್ನ 5.00 ಗಂಟೆಗೆ. ತಾಂತ್ರಿಕ ಬಿಡ್ಡುಗಳಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ದಿನಾಂಕ: 28.04.2026 ರ ಅಪರಾಹ್ನ 5.00 ಗಂಟೆಗೆ ಆರ್ಥಿಕ ಬಿಡ್ಡುಗಳನ್ನು ತೆರೆಯಲಾಗುವುದು. ಪ್ರತ್ಯೇಕ ಕೆಲಸಗಳ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ (https://kppp.karnataka.gov.in) ನಲ್ಲಿ ಮಾಹಿತಿಗಳನ್ನು ಪಡೆಯಬಹುದು.

ಸಹಿ/–
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಬೆಂಗಳೂರು ದಕ್ಷಿಣ ಉಪ ವಿಭಾಗ, ಬೆಂಗಳೂರು.

DIPR/CP/259/ZEN/2026-27

ಮರಸೂರು ಗ್ರಾಮ ಪಂಚಾಯತ್ ಕಾರ್ಯಾಲಯ
ಕಸಬಾ ಹೋಬಳಿ, ಆನೇಕಲ್ ತಾಲ್ಲೂಕು, ಮರಸೂರು,
ಬೆಂಗಳೂರು ನಗರ ಜಿಲ್ಲೆ – 562106.
ಇ–ಮೇಲ್: maranekal@gmail.com / marasuru.ank.bngu@gmail.com

ಸಂಖ್ಯೆ: ಮ.ಗ್ರಾ.ಪಂ.ಟೆಂ.ಪ್ರ.ಸಂ: 01/2026–27 ದಿನಾಂಕ: 19–04–2026

ಟೆಂಡರ್ ಪ್ರಕಟಣೆ

ಮರಸೂರು ಗ್ರಾಮ ಪಂಚಾಯತ್ ಕಾರ್ಯಾಲಯ, ಮರಸೂರು, ಆನೇಕಲ್ ತಾಲ್ಲೂಕು ಇವರು **ವರ್ಗ–1 ರ ನಿಧಿ / 15ನೇ ಹಣಕಾಸು, ಯೋಜನೆಯ ಅನುದಾನಕ್ಕೆ ಸಂಬಂಧಿಸಿದಂತೆ ಕ್ರ.ಸಂ. 01 ರಿಂದ 08 ರವರೆಗೆ** ಜಿಎಸ್‌ಟಿ ಹೊಂದಿರುವ ಅಧಿಕೃತ ಸರಬರಾಜುದಾರರಿಂದ / ಅಂಗೀಕೃತ ಸಂಸ್ಥೆ / ಏಜನ್ಸಿ / ಪಂಚಾಯಿತಿ ನಿರ್ಧಿಷ್ಟಪಡಿಸುವ ಅರ್ಹತೆಗಳನ್ನು ಹೊಂದಿರುವ ಅರ್ಹ ವ್ಯಕ್ತಿಗಳಿಂದ ದಿನಾಂಕ: **01–05–2026 ರಿಂದ ದಿನಾಂಕ: 31–03–2027 ರವರೆಗೆ** ಅನ್ವಯಿಸುವಂತೆ ಈ ಕೆಳಕಂಡ ವಿಷಯಗಳ ಬಗ್ಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ವಿವರಗಳು	ಇ.ಎಂ.ಡಿ ಮೊತ್ತ
1	ಪಂಚಾಯಿತಿ ಊಟದ ಮನೆಗೆ (ಕ್ಯಾಂಟೀನ್)ಗೆ ದಿನಸಿ ಪದಾರ್ಥಗಳ ಪೂರೈಕೆ (ಬೇಡಿಕೆಗೆ ತಕ್ಕಂತೆ).	ರೂ. 20000.00
2	ಶಾಲಾ ಮಕ್ಕಳಿಗೆ ಆರೋಗ್ಯ ಕಿಟ್ ಪೂರೈಸುವುದು (ಬೇಡಿಕೆಗೆ ತಕ್ಕಂತೆ)	ರೂ. 20000.00
3	ಮಕ್ಕಳ ಮನೆ ವಿದ್ಯಾರ್ಥಿಗಳಿಗೆ ವಾಹನದ ವ್ಯವಸ್ಥೆ (ಸ್ಥಳೀಯರಿಗೆ ಆದ್ಯತೆ).	ರೂ. 10000.00
4	ಶಾಲಾ ಮಕ್ಕಳಿಗೆ ನೋಟ್ ಪುಸ್ತಕ, ಬ್ಯಾಗು ಇತರೆ ಲೇಖನ ಸಾಮಗ್ರಿಗಳನ್ನು ಪೂರೈಕೆ (ಬೇಡಿಕೆಗೆ ತಕ್ಕಂತೆ).	ರೂ. 10000.00
5	ಪಂಚಾಯಿತಿ ವಿವಿಧ ಕಾರ್ಯಕ್ರಮಗಳಿಗೆ ಶಾಮಿಯಾನ ವ್ಯವಸ್ಥೆ ಕಲ್ಪಿಸುವುದು (ಸ್ಥಳೀಯರಿಗೆ ಆದ್ಯತೆ) (ಬೇಡಿಕೆಗೆ ತಕ್ಕಂತೆ).	ರೂ. 10000.00
6	ಗ್ರಾಮ ಪಂಚಾಯಿತಿ ಶೆಟಲ್ ಕಾಕ್ ಕೋರ್ಟ್ ನಿರ್ವಹಣೆ (ಸ್ಥಳೀಯರಿಗೆ ಆದ್ಯತೆ).	ರೂ. 10000.00
7	ಪಂಚಾಯಿತಿ ವ್ಯಾಪ್ತಿಯ ಆರ್ ಓ ಘಟಕಗಳ ನಿರ್ವಹಣೆ (ಒಟ್ಟು 10 ಘಟಕಗಳು).	ರೂ. 10000.00
8	ಗ್ರಾಮ ಪಂಚಾಯಿತಿ ವಿವಿಧ ಕಾರ್ಯಗಳಿಗೆ ಜೆಸಿಬಿ ಬಳಕೆ (ಸ್ಥಳೀಯರಿಗೆ ಆದ್ಯತೆ).	ರೂ. 10000.00

ಖಾಲಿ ಟೆಂಡರ್ ಫಾರಂ ಬೆಲೆ: **ಕ್ರಮ ಸಂಖ್ಯೆ 1 ರಿಂದ 8 ಕ್ಕೆ ಪ್ರತಿ ರೂ. 1000/–**
1) ಟೆಂಡರ್ ಫಾರಂ ವಿತರಣೆ ದಿನಾಂಕ: **21–04–2026 ರಿಂದ 29–04–2026.** 2) ಭರ್ತಿ ಮಾಡಿದ ಟೆಂಡರ್‌ನ್ನು ಸ್ವೀಕರಿಸುವ ಅಂತಿಮ ದಿನಾಂಕ: **29–04–2026 ರಂದು ಮಧ್ಯಾಹ್ನ 1.00 ಗಂಟೆವರೆಗೆ.** 3) ಟೆಂಡರ್‌ಗಳನ್ನು ತೆರೆಯುವ ದಿನಾಂಕ: **29–04–2026 ರಂದು ಸಂಜೆ 4.00 ಗಂಟೆಗೆ.** 4) ಹೆಚ್ಚಿನ ಮಾಹಿತಿಗಾಗಿ ಪಂಚಾಯಿತಿ ಕಾರ್ಯಾಲಯವನ್ನು ಸಂಪರ್ಕಿಸುವುದು. 5) ಮೇಲ್ಕಂಡ ಟೆಂಡರ್‌ನ್ನು ಅಂಗೀಕರಿಸುವ / ತಿರಸ್ಕರಿಸುವ / ಮಾರ್ಪಡಿಸುವ ಹಾಗೂ ಯಾವುದೇ ಹಂತದಲ್ಲಿ ರದ್ದುಪಡಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುತ್ತಾರೆ.

ಸಹಿ/–
ಆಡಳಿತಾಧಿಕಾರಿಗಳು
ಮರಸೂರು ಗ್ರಾಮ ಪಂಚಾಯಿತಿ
ಆನೇಕಲ್ ತಾಲ್ಲೂಕು, ಬೆಂ.ನ. ಜಿಲ್ಲೆ

ಸಹಿ/–
ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಮರಸೂರು ಗ್ರಾಮ ಪಂಚಾಯಿತಿ
ಆನೇಕಲ್ ತಾಲ್ಲೂಕು, ಬೆಂ.ನ. ಜಿಲ್ಲೆ

ವಾಸಾಸಂಇ/ವಾ.ಪ್ರ/252/ಅಡ್ವಟೋರ್/2026–27

ಮೂರನೇ ಮಹಡಿಯಿಂದ ಬಿದ್ದು ರೋಗಿ ಸಾವು

ಗೌತಮ್ ಯಾದವ್

ದೇವನಹಳ್ಳಿ: ಪಟ್ಟಣದ ಆಕಾಶ್ ಆಸ್ಪತ್ರೆಯಲ್ಲಿ ಶನಿವಾರ ರೋಗಿಯೊಬ್ಬ ಮೂರನೇ ಮಹಡಿಯಿಂದ ಬಿದ್ದು ಮೃತಪಟ್ಟಿದ್ದಾರೆ.

ಕೋಡಗುರ್ಕಿ ಗ್ರಾಮದ ಗೌತಮ್ ಯಾದವ್ (34) ಮೃತರು. ಆರೋಗ್ಯ ಸಮಸ್ಯೆಯಿಂದ ಶುಕ್ರವಾರ ಆಸ್ಪತ್ರೆಗೆ ದಾಖಲಾಗಿದ್ದ ಗೌತಮ್ ಯಾದವ್ ಶನಿವಾರ ಬೆಳಿಗ್ಗೆ ಸುಮಾರು 7.30ರ ವೇಳೆಗೆ ಆಸ್ಪತ್ರೆಯ ಮೂರನೇ ಮಹಡಿಯಿಂದ ಬಿದ್ದು ಮೃತಪಟ್ಟರು.

ಈ ಸಾವಿಗೆ ಆಸ್ಪತ್ರೆ ಸಿಬ್ಬಂದಿ ನಿರ್ಲಕ್ಷ್ಯವೇ ಕಾರಣವೆಂದು ಕುಟುಂಬಸ್ಥರು ಆರೋಪಿಸಿದ್ದಾರೆ. ರೋಗಿಯೊಬ್ಬರು ಮೂರನೇ ಮಹಡಿಗೆ ತೆರಳುವವರೆಗೆ ಭದ್ರತಾ ಸಿಬ್ಬಂದಿ ಗಮನಹರಿಸದಿರುವುದು ದುರಂತಕ್ಕೆ ಕಾರಣ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಆಸ್ಪತ್ರೆ ಆಡಳಿತ ಮಂಡಳಿಯ ವಿರುದ್ಧ ಕ್ರಮ ಕೈಗೊಳ್ಳುವಂತೆ ಕುಟುಂಬಸ್ಥರು ಆಗ್ರಹಿಸಿದ್ದಾರೆ. ಘಟನೆ ಸಂಬಂಧ ದೇವನಹಳ್ಳಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ನಿಧನ ವಾರ್ತೆ

ಚಿಕ್ಕಪೂಜಮ್ಮ



ಪೀಣ್ಯ ದಾಸರಹಳ್ಳಿ: ಚಿಕ್ಕಸಂದ್ರ ನಿವಾಸಿ ಚಿಕ್ಕಪೂಜಮ್ಮ(102) ಅವರು ಶನಿವಾರ ವಯೋಸಹಜ ಅನಾರೋಗ್ಯದಿಂದ ನಿಧನರಾದರು.

ಐವರು ಪುತ್ರರು, ಆರು ಹೆಣ್ಣು ಮಕ್ಕಳು ಇದ್ದಾರೆ. ಪೀಣ್ಯ ಚಿತಾಗಾರದಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬಸ್ಥರು ತಿಳಿಸಿದರು.

ಮೈಲನಹಳ್ಳಿ ಮಹದೇವಯ್ಯ

ನೆಲಮಂಗಲ: ಪಟ್ಟಣದ ಸುಭಾಷ್‌ನಗರ ನಿವಾಸಿ, ಮೈಲನಹಳ್ಳಿ ಮಹದೇವಯ್ಯ (85) ಅವರು ವಯೋಸಹಜ ಕಾಯಿಲೆಯಿಂದ ಶನಿವಾರ ಮೃತಪಟ್ಟರು.

ಇಬ್ಬರು ಪುತ್ರರು, ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಶನಿವಾರ ಸಂಜೆ ಪಟ್ಟಣದ ರುದ್ರಭೂಮಿಯಲ್ಲಿ ಅಂತ್ಯ ಸಂಸ್ಕಾರ ನೆರವೇರಿತು.

ಸುಸ್ಥಿರ ಭವಿಷ್ಯಕ್ಕಾಗಿ ಇಂಧನ ಭದ್ರತೆ

ಬೆಂಗಳೂರು: ಸುಸ್ಥಿರ ಇಂಧನವು ಕೇವಲ ಆಯ್ಕೆಯಲ್ಲ, ಅದು ಮುಂದಿನ ಪೀಳಿಗೆಯ ಬದುಕಿನ ಹಕ್ಕು. ಭಾರತವು 2047ರ ವೇಳೆಗೆ ಇಂಧನ ಸ್ವಾವಲಂಬನೆ ಸಾಧಿಸುವ ಗುರಿ ಹೊಂದಿದ್ದು, ಇದಕ್ಕೆ ಪೂರಕವಾದ ಕಾನೂನು ಮತ್ತು ನೀತಿಗಳ ರಚನೆ ಇಂದಿನ ಅಗತ್ಯವಾಗಿದೆ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅಭಿಪ್ರಾಯಪಟ್ಟರು.

ನಗರದಲ್ಲಿ ಶನಿವಾರ ಕಾಮನ್ ವೆಲ್ತ್ ಲೀಗಲ್ ಎಜುಕೇಷನ್ ಅಸೋಸಿಯೇಷನ್ (ಸಿಎಲ್ಇಎ) ಆಯೋಜಿಸಿದ್ದ 'ಸುಸ್ಥಿರ ಇಂಧನ: 2047ರ ಭಾರತದ ಗುರಿ' ಎಂಬ ಅಂತರ ರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

ಪರ್ಯಾಯ ಇಂಧನಗಳ ಕಡೆಗೆ ಹೊರಳುವಾಗ ಸುಸ್ಥಿರತೆ, ಆರ್ಥಿಕತೆ, ಸ್ಥಳೀಯ ಸಮುದಾಯಗಳ ಒಳಿತು, ಸಮುದಾಯದ ಸಹಭಾಗಿತ್ವವನ್ನು ಖಾತರಿಪಡಿಸಿಕೊಂಡಾಗ ಸಂವಿಧಾನದ ಆಶಯಕ್ಕೆ ಅನುಗುಣವಾಗಿ ಇಂಧನ ನ್ಯಾಯ ದೊರೆಯುತ್ತದೆ ಎಂದರು.

'ದೇಶದ ಅಭಿವೃದ್ಧಿಗೆ ಸುಸ್ಥಿರ ಪರಿಸರ ಹಾಗೂ ಇಂಧನ ನ್ಯಾಯತತ್ವದ ಆಧಾರದಲ್ಲಿಯೇ ಸಾಗಬೇಕು. ಭವಿಷ್ಯಕ್ಕಾಗಿ ಹಸಿರು ಉಳಿಸುವ ನಮ್ಮ ಧ್ಯೇಯ ನಡುವಿನ ಅತಿ ಸೂಕ್ಷ್ಮವಾದ ಸಮತೋಲನವನ್ನು ಕಾಯ್ದುಕೊಳ್ಳಲು ದೇಶ ಸನ್ನದ್ಧವಾಗಬೇಕು' ಎಂದು ತಿಳಿಸಿದರು.

'ನ್ಯಾಯಾಂಗ ಪ್ರಸ್ತಾವ ಅತೀವ ನಿರ್ಲಕ್ಷ್ಯ'

ಸಿ.ಎಂ. ಎದುರೇ ಅಸಮಾಧಾನ ವ್ಯಕ್ತಪಡಿಸಿದ ನ್ಯಾ. ಅರವಿಂದ ಕುಮಾರ್

ಪ್ರಜಾವಾಣಿ ವಾರ್ತೆ

ನ್ಯಾ. ಅರವಿಂದ ಕುಮಾರ್

ಬೆಂಗಳೂರು: ನ್ಯಾಯಾಂಗದ ಪ್ರಸ್ತಾವಗಳ ಬಗ್ಗೆ ಕರ್ನಾಟಕ ಸರ್ಕಾರದ ಅಧಿಕಾರಿಗಳು ಅತೀವ ನಿರ್ಲಕ್ಷ್ಯ ತೋರುತ್ತಿದ್ದಾರೆ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅರವಿಂದ ಕುಮಾರ್ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಎದುರೇ ಅಸಮಾಧಾನ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ನ್ಯಾಯಾಂಗ ಅಧಿಕಾರಿಗಳ ಸಂಘ ಶನಿವಾರ ಆಯೋಜಿಸಿದ್ದ ರಾಜ್ಯ ಮಟ್ಟದ ನ್ಯಾಯಾಂಗ ಅಧಿಕಾರಿಗಳ ಸಮ್ಮೇಳನದಲ್ಲಿ ಅವರು ಮಾತನಾಡಿದಾಗ, ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಉಪಸ್ಥಿತರಿದ್ದರು.

ಸಮ್ಮೇಳನ ಉದ್ದೇಶಿಸಿ ಮಾತನಾಡಿದ ಸಿದ್ದರಾಮಯ್ಯನವರು ಸಭೆಯಲ್ಲಿ ಉಪಸ್ಥಿತರಿದ್ದಾಗಲೇ, ಮುಖ್ಯ ನ್ಯಾಯಮೂರ್ತಿಯವರ ಅನುಮತಿ ಪಡೆದು ಮಾತನಾಡಿದ ನ್ಯಾ. ಅರವಿಂದ ಕುಮಾರ್, ಅಧಿಕಾರಿಗಳ ಮಂದಗತಿಯ ಧೋರಣೆಯಿಂದಾಗಿ ನ್ಯಾಯಾಂಗದ ಮೇಲೆ ಆಗುತ್ತಿರುವ ಸಮಸ್ಯೆಗಳನ್ನು ಬಿಚ್ಚಿಟ್ಟರು.

ನ್ಯಾಯಾಂಗ ಕಟ್ಟಡ ಹಾಗೂ ನ್ಯಾಯಾಧೀಶರ ನಿವಾಸವನ್ನು ಜಿಲ್ಲೆಗಳಲ್ಲಿ ನಿರ್ಮಾಣ ಮಾಡುವುದು ಅತ್ಯವಶ್ಯ. ಈ ಕುರಿತು ಪ್ರಸ್ತಾವ ಸಲ್ಲಿಸಿದಾಗ ಅಧಿಕಾರಿಗಳು ಸರಿಯಾಗಿ ಸ್ಪಂದಿಸಿಲ್ಲ. ಪ್ರತಿವರ್ಷ ದಾಖಲಾಗುತ್ತಿರುವ ವ್ಯಾಜ್ಯಗಳ ಸಂಖ್ಯೆ ಹೆಚ್ಚುತ್ತಿದೆ. 2023ರಲ್ಲಿ 17 ಲಕ್ಷ ವ್ಯಾಜ್ಯ ದಾಖಲಾಗಿದ್ದರೆ, 2025ರಲ್ಲಿ 22 ಲಕ್ಷ ದಾಖಲಾಗಿವೆ. ಹೊಸ ಕಾನೂನುಗಳು ಮಂಡನೆಯಾಗುತ್ತಿವೆ. ಅವುಗಳ ಅಡಿಯಲ್ಲಿ ನ್ಯಾಯ ವಿತರಣೆ ಮಾಡಬೇಕಾಗುತ್ತದೆ. ಆದರೆ, ಮೂಲಸೌಕರ್ಯ, ನ್ಯಾಯಾಧೀಶರ ನೇಮಕಾತಿ, ಸರ್ಕಾರಿ ವಕೀಲರ ನೇಮಕ ಬಗ್ಗೆ ನ್ಯಾಯಾಲಯವು ಪ್ರಸ್ತಾವ ಸಲ್ಲಿಸಿದರೆ ಗಮನವನ್ನೇ ಹರಿಸುವುದಿಲ್ಲ. ಬೇಡಿಕೆಯನ್ನೇ ಕಡಿತಗೊಳಿಸುತ್ತಾರೆ ಎಂದು ದೂರಿದರು.

'ಎರಡು ವರ್ಷಗಳಲ್ಲಿ ಬೆಂಗಳೂರು, ಧಾರವಾಡ, ಕಲಬುರಗಿ ಹೈಕೋರ್ಟ್‌ಗಳಿಗೆ 666 ಹುದ್ದೆಗಳ ಅನುಮೋದನೆಗೆ ಕೇಳಿದಾಗ 238 ಮಾತ್ರ ಅನುಮೋದಿಸಿದರು. ಜಿಲ್ಲಾ ನ್ಯಾಯಾಲಯಗಳಿಗೆ 680 ಹುದ್ದೆಗಳ ಅನುಮೋದನೆಗೆ ಕೇಳಿದರೆ 400 ಹುದ್ದೆಗಳನ್ನು ಅನುಮೋದಿಸಿದರು' ಎಂದು ಬೇಸರ ವ್ಯಕ್ತಪಡಿಸಿದರು.

'ದೇಶದ ಸಾಂಸ್ಥಿಕ ಆಡಳಿತದಲ್ಲಿ ಒಂದು ಗಂಭೀರ ದೌರ್ಬಲ್ಯ ಇದೆ. ದೆಹಲಿಯಲ್ಲಿ ಆಗಿರುವುದನ್ನೇ ದೇಶದ ಉಳಿದ ಭಾಗಗಳಿಗೆ ಶಿಫಾರಸು ಮಾಡಲಾಗುತ್ತದೆ. ದೆಹಲಿಯನ್ನು ಭಾರತದ ಅಳತೆಗೋಲಾಗಿ ನೋಡಬಾರದು. ಕರ್ನಾಟಕಕ್ಕೆ ಎರವಲು ಪಡೆದ ಅಧಿಕಾರ ಪದ್ಧತಿ ಬೇಕಾಗಿಲ್ಲ. ಬಾಳಿಕೆ ಬರುವ ಸುಧಾರಣೆಗಳು ಸ್ವತಃ ಸಂಸ್ಥೆಗಳೊಳಗಿನ ಬೆಳವಣಿಗೆಯಿಂದ ಮಾತ್ರ ಬರುತ್ತವೆ ಹೊರತು ಅನುಕರಣೆಯಿಂದಲ್ಲ' ಎಂದು ಹೇಳಿದರು.

'ನ್ಯಾಯಾಂಗ ಸಂದಾಯದ ಶೇ 75ರಷ್ಟು ಮೊತ್ತವಾದರೂ ವೆಚ್ಚ ಮಾಡಿ'

'ನ್ಯಾಯಾಂಗವು ಶುಲ್ಕ, ದಂಡದ ರೂಪದಲ್ಲಿ ಸಂಗ್ರಹಿಸಿ, ಸರ್ಕಾರಕ್ಕೆ ಸಂದಾಯ ಮಾಡಿದ ಮೊತ್ತದಲ್ಲಿ ಕನಿಷ್ಠ ಶೇ 75ರಷ್ಟು ಮೊತ್ತವನ್ನು ನ್ಯಾಯಾಂಗಕ್ಕೇ ನೀಡಬೇಕು' ಎಂದು ನ್ಯಾ. ಅರವಿಂದ ಕುಮಾರ್ ಮನವಿ ಮಾಡಿದರು.

'ಹೈಕೋರ್ಟ್ ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ನ್ಯಾಯಾಂಗ ಶುಲ್ಕ, ದಂಡ ಹಾಗೂ ಮುದ್ರಾಂಕ ಶುಲ್ಕ ಹೊರತುಪಡಿಸಿ ರಾಜ್ಯಕ್ಕೆ ಸಂದಾಯವಾದ ಮೊತ್ತವು 2023–24ರಲ್ಲಿ ₹376 ಕೋಟಿ, 2024–25ರಲ್ಲಿ ₹439 ಕೋಟಿ, 2025–26ರಲ್ಲಿ ₹420 ಕೋಟಿಯಷ್ಟಿದೆ. ಸರ್ಕಾರವು ಸಿಬ್ಬಂದಿ ವರ್ಗದ ಸಂಬಳ ಅಲ್ಲದೇ ಬೇರೆ ವೆಚ್ಚವಾಗಿ ಕಳೆದ ನಾಲ್ಕು ವರ್ಷಗಳಲ್ಲಿ ಕ್ರಮವಾಗಿ ₹1.3 ಕೋಟಿ, ₹40 ಲಕ್ಷ, ₹1.37 ಕೋಟಿ ಮತ್ತು ₹1.41 ಕೋಟಿಯಷ್ಟು ಖರ್ಚು ಮಾಡಿದೆ. ನ್ಯಾಯಾಂಗ ಸಂದಾಯ ಮಾಡಿದ ಹಣದಲ್ಲಾದರೂ ನ್ಯಾಯಾಂಗಕ್ಕೆ ವಾಪಸ್ ಕೊಡಿ' ಎಂದರು.

ಅಲ್ಗಾರಿದಮಿಕ್ ಪಕ್ಷಪಾತ: ಸಿ.ಎಂ ಕಳವಳ

'ನ್ಯಾಯಾಂಗ ವ್ಯವಸ್ಥೆಯಲ್ಲಿ ಕೃತಕ ಬುದ್ಧಿಮತ್ತೆ ಅಳವಡಿಸಿದಾಗ, ಸಂಭಾವ್ಯ ಅಲ್ಗಾರಿದಮಿಕ್ ಪಕ್ಷಪಾತವು ಕಾನೂನಿನ ಮುಂದೆ ಸಮಾನತೆಯ ಖಾತರಿಯನ್ನು ಹಾಳುಮಾಡಬಹುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಳವಳ ವ್ಯಕ್ತಪಡಿಸಿದರು.

'ಪ್ರಜಾಪ್ರಭುತ್ವದ ಮೂಲ ಆಧಾರವಾಗಿರುವ ನ್ಯಾಯಾಂಗ ಸ್ವಾತಂತ್ರ್ಯವನ್ನು ಬಾಹ್ಯ ಒತ್ತಡಗಳಿಂದ ಮಾತ್ರವಲ್ಲದೆ, ಸೂಕ್ಷ್ಮ ತಾಂತ್ರಿಕ ಅವಲಂಬನೆಯಿಂದಲೂ ಸಂರಕ್ಷಿಸಬೇಕಿದೆ. ಅಪಾರದರ್ಶಕ ವ್ಯವಸ್ಥೆಗಳು ನಮ್ಮ ನ್ಯಾಯಾಂಗ ವ್ಯವಸ್ಥೆಯ ತಾರ್ಕಿಕ ನಿರ್ಧಾರಗಳ ಸಿದ್ಧಾಂತವನ್ನು ದುರ್ಬಲಗೊಳಿಸುವ ಆತಂಕವನ್ನು ಅಲ್ಲಗಳೆಯುವಂತಿಲ್ಲ' ಎಂದರು.

ಡಿಆರ್‌ಡಿಒ: ನಾಯಿಗಳ ಸ್ಥಳಾಂತರ ಎಫ್ಐಆರ್ ತಡೆ ತೆರವಿಗೆ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಡಿಆರ್‌ಡಿಒ ಟೌನ್‌ಶಿಪ್ ವ್ಯಾಪ್ತಿಯಲ್ಲಿನ ನಾಯಿಗಳನ್ನು ಸ್ಥಳಾಂತರಿಸಿದ ಆರೋಪದಡಿ, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ನೌಕರರ ವಿರುದ್ಧ ದಾಖಲಿಸಿದ್ದ ಎಫ್ಐಆರ್‌ಗೆ ನೀಡಲಾಗಿರುವ ಮಧ್ಯಂತರ ತಡೆ ಆದೇಶ ತೆರವುಗೊಳಿಸಲು ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ ಡಿಆರ್‌ಡಿಒ ಟೌನ್‌ಶಿಪ್ ಎಸ್ಟೇಟ್ ವ್ಯವಸ್ಥಾಪಕ ರಾಕೇಶ್ ಕುಮಾರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಹೆಚ್ಚಿನ ತನಿಖೆಯ ಅಗತ್ಯವಿದ್ದಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಸಂರಕ್ಷಿಸಿ' ಎಂದು ಡಿಆರ್‌ಡಿಒಗೆ ನಿರ್ದೇಶಿಸಿದೆ.

'ಮುಂದಿನ ವಿಚಾರಣೆವರೆಗೆ ಮಧ್ಯಂತರ ಆದೇಶ ಮುಂದುವರಿಯಲಿದೆ' ಎಂದು ಆದೇಶಿಸಿರುವ ನ್ಯಾಯಪೀಠ, ಆಕ್ಷೇಪಣೆ ಸಲ್ಲಿಸುವಂತೆ ಪ್ರತಿವಾದಿಗಳಿಗೆ ನಿರ್ದೇಶಿಸಿ ವಿಚಾರಣೆ ಮುಂದೂಡಿದೆ.

ಪ್ರಕರಣ: ಆರೋಪಿ ನೌಕರರ ವಿರುದ್ಧ, ಬೆಂಗಳೂರು ಪೂರ್ವ ವಿಭಾಗದ ಪಶು ಸಂಗೋಪನೆ ಸಹಾಯಕ ನಿರ್ದೇಶಕ ಡಾ.ವಿವೇಕ್, ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ (ಜಿಬಿಎ) ದೂರು ಸಲ್ಲಿಸಿದ್ದರು.

ಇದರ ಆಧಾರದ ಅಡಿಯಲ್ಲಿ ಡಿಆರ್‌ಡಿಒ ಎಸ್ಟೇಟ್ ವ್ಯವಸ್ಥಾಪಕ ಮತ್ತು ಕ್ಲೀನಿಂಗ್ ಸೂಪರ್‌ವೈಸರ್ ವಿರುದ್ಧ ಮಹದೇವಪುರ ಪೊಲೀಸ್ ಠಾಣೆಯಲ್ಲಿ ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆ-1960ರ ಕಲಂ 11 ಮತ್ತು ಭಾರತೀಯ ನ್ಯಾಯ ಸಂಹಿತೆ-2023ರ (ಬಿಎನ್ಎಸ್) ಕಲಂ 240, 325, 270, 61 (1)ರ ಅಪರಾಧಗಳಿಗಾಗಿ 2026ರ ಮಾರ್ಚ್ 9ರಂದು ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ.

ನ್ಯಾಯಾಂಗ ಅಧಿಕಾರಿಗಳ ರಾಜ್ಯಮಟ್ಟದ ಸಮ್ಮೇಳನದಲ್ಲಿ ಸಿಜೆಐ

'ಎ.ಐ ಪರ್ಯಾಯವಲ್ಲ, ಪೂರಕ'

ಪ್ರಜಾವಾಣಿ ವಾರ್ತೆ

22ನೇ ದ್ವೈವಾರ್ಷಿಕ ರಾಜ್ಯ ಮಟ್ಟದ ನ್ಯಾಯಾಂಗ ಅಧಿಕಾರಿಗಳ ಸಮ್ಮೇಳನದಲ್ಲಿ ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಹಸ್ತಲಾಘವ ಮಾಡಿದರು —ಪ್ರಜಾವಾಣಿ ಚಿತ್ರ

ಬೆಂಗಳೂರು: 'ಕೃತಕ ಬುದ್ಧಿಮತ್ತೆಯು (ಎ.ಐ) ನ್ಯಾಯಾಂಗ ವ್ಯವಸ್ಥೆಗೆ ಪೂರಕವಾಗಿ ಇರಬೇಕೇ ಹೊರತು, ಪರ್ಯಾಯವಾಗಿ ಅಲ್ಲ. ತಂತ್ರಜ್ಞಾನವನ್ನು ನಮ್ಮ ನೆರವಿಗೆ ಬಳಸಿಕೊಳ್ಳಬೇಕು. ಹಾಗಾಗಿ ಎ.ಐ ಬಗ್ಗೆ ಭಯಪಡುವ ಅಗತ್ಯವಿಲ್ಲ' ಎಂದು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹೇಳಿದರು.

ಕರ್ನಾಟಕ ರಾಜ್ಯ ನ್ಯಾಯಾಂಗ ಅಧಿಕಾರಿಗಳ ಸಂಘ ಶನಿವಾರ ಆಯೋಜಿಸಿದ್ದ 'ಕೃತಕ ಬುದ್ಧಿಮತ್ತೆಯ ಯುಗದಲ್ಲಿ ನ್ಯಾಯಾಂಗವನ್ನು ಪುನರ್ ಕಲ್ಪಿಸುವುದು' ವಿಷಯದ ಕುರಿತು ನಡೆದ 22ನೇ ದ್ವೈವಾರ್ಷಿಕ ರಾಜ್ಯಮಟ್ಟದ ನ್ಯಾಯಾಂಗ ಅಧಿಕಾರಿಗಳ ಸಮ್ಮೇಳನದಲ್ಲಿ ಅವರು ಮಾತನಾಡಿದರು.

'ನ್ಯಾಯಾಂಗ ವ್ಯವಸ್ಥೆಯಲ್ಲಿ ಎ.ಐ ತಂತ್ರಜ್ಞಾನದ ಅಳವಡಿಕೆ ಮಾಡುವಾಗ ಅದರ ಮಿತಿಗಳ ಬಗ್ಗೆ ಸ್ಪಷ್ಟ ಮತ್ತು ಪ್ರಜ್ಞಾಪೂರ್ವಕ ತಿಳಿವಳಿಕೆಯನ್ನು ಹೊಂದಿರಬೇಕು. ಯಾವುದೇ ತಂತ್ರಜ್ಞಾನವು ಮನುಷ್ಯನಿಗೆ ಪರ್ಯಾಯವಾಗಬಾರದು. ಎ.ಐ ಸಂಯೋಜಿಸುವಾಗ ಸಮತೋಲನದ ತತ್ವವನ್ನು ಪಾಲಿಸಬೇಕು. ದಕ್ಷತೆ ಹೆಚ್ಚಿಸಲು ಬಳಸಿಕೊಳ್ಳಬೇಕು. ಆದೇ ಹೊತ್ತಿನಲ್ಲಿ ನ್ಯಾಯದ ಹೃದಯ ಭಾಗದಲ್ಲಿರುವ ಮಾನವ ಬುದ್ಧಿಶಕ್ತಿ, ಅನುಭವ ಮತ್ತು ಸಾಂವಿಧಾನಿಕ ವಿವೇಕವನ್ನು ಅಚಲವಾಗಿ ಕಾಪಾಡಿಕೊಳ್ಳಬೇಕು. ಆಗ ನಿಮ್ಮೊಳಗಿನ ನ್ಯಾಯಾಧೀಶರು ಸ್ವತಂತ್ರರಾಗಿ ಉಳಿಯುತ್ತಾರೆ. ತಾಂತ್ರಿಕ ಪರಿಕರಗಳಿಂದ ಪ್ರಭಾವಿತರಾಗುವುದಿಲ್ಲ' ಎಂದು ಹೇಳಿದರು.

ನ್ಯಾಯಾಂಗ ವ್ಯವಸ್ಥೆಯ ದಾರಿ ತಪ್ಪಿಸಲು ಎ.ಐಯನ್ನು ದುರುಪಯೋಗಪಡಿಸಿಕೊಳ್ಳುವ ಅಪಾಯದ ಬಗ್ಗೆ ಎಚ್ಚರದಿಂದ ಇರಬೇಕು. ಜವಾಬ್ದಾರಿ ಮತ್ತು ವಿವೇಚನೆಯಿಂದ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ, ಅರವಿಂದ್ ಕುಮಾರ್, ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು, ರಾಜ್ಯ ನ್ಯಾಯಾಂಗ ಅಧಿಕಾರಿಗಳ ಸಂಘದ ಅಧ್ಯಕ್ಷೆ ಎಸ್. ನಾಗಶ್ರೀ, ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ಶೆಟ್ಟಿಗಾರ್ ಉಪಸ್ಥಿತರಿದ್ದರು.

'ಕರ್ನಾಟಕ 'ಲೋಕಾ' ದೇಶಕ್ಕೇ ಮಾದರಿ'

ರಾಜ್ಯ ಲೋಕಾಯುಕ್ತಕ್ಕೆ 40ರ ಸಂಭ್ರಮ: ನ್ಯಾ. ಸೂರ್ಯಕಾಂತ್ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭ್ರಷ್ಟಾಚಾರ ಮುಕ್ತ ಆಡಳಿತ ಮತ್ತು ಸಾಮಾನ್ಯ ಜನರ ಹಕ್ಕುಗಳ ರಕ್ಷಣೆಯಲ್ಲಿ ಕರ್ನಾಟಕ ಲೋಕಾಯುಕ್ತ ಸಂಸ್ಥೆಯು ದೇಶಕ್ಕೇ ಮಾದರಿ' ಎಂದು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹೇಳಿದರು.

ಲೋಕಾಯುಕ್ತ ಸಂಸ್ಥೆಯು ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ 'ಕರ್ನಾಟಕ ಲೋಕಾಯುಕ್ತದ 4 ದಶಕಗಳ ಪಯಣ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಸರ್ಕಾರದ ಸೇವೆ ಮತ್ತು ಆಡಳಿತದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವಲ್ಲಿ, ಅಧಿಕಾರ ದುರುಪಯೋಗ ಮತ್ತು ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ಕರ್ನಾಟಕ ಲೋಕಾಯುಕ್ತವು ಮಹತ್ವದ ಪಾತ್ರವಹಿಸಿದೆ. ಸಂಸ್ಥೆಯು 40 ವರ್ಷಗಳಿಂದಲೂ ಈ ಕೆಲಸವನ್ನು ಮಾಡಿಕೊಂಡು ಬರುತ್ತಿದೆ' ಎಂದರು.

'ಕಬ್ಬಿಣದ ಅದಿರು ಸೇರಿ ಖನಿಜ ಸಂಪನ್ಮೂಲಗಳ ಗಣಿಗಾರಿಕೆಯಲ್ಲಿನ ಅಕ್ರಮಗಳನ್ನು ಹೊರಗೆಡವಿದ್ದು ಇಡೀ ದೇಶದಲ್ಲಿ ಸಂಚಲನ ಮೂಡಿಸಿತ್ತು. ಜನರೇ ಭ್ರಷ್ಟಾಚಾರವನ್ನು ತಿರಸ್ಕರಿಸುವಂತಹ ವಾತಾವರಣ ನಿರ್ಮಿಸಿದ ಈ ಸಂಸ್ಥೆಯ ಬಗ್ಗೆ ನನಗೆ ಹೆಮ್ಮೆ ಇದೆ' ಎಂದು ಹೇಳಿದರು.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅರವಿಂದ್ ಕುಮಾರ್, 'ಭ್ರಷ್ಟಾಚಾರದ ವಿರುದ್ಧ ಹೋರಾಡಲು ದೇಶದಲ್ಲೇ ಮೊದಲ ಬಾರಿಗೆ ಲೋಕಾಯುಕ್ತವನ್ನು ಆರಂಭಿಸಿದ ಹೆಗ್ಗಳಿಕೆ ಕರ್ನಾಟಕಕ್ಕೆ ಸಲ್ಲುತ್ತದೆ. ಭ್ರಷ್ಟಾಚಾರ ಒಂದು ಸಾಮಾಜಿಕ ಪಿಡುಗು ಮತ್ತು ಅದರ ವಿರುದ್ಧ ಹೋರಾಡಬೇಕು ಎಂಬ ಮನಸ್ಥಿತಿಯನ್ನು ಜನರಲ್ಲಿ ಮೂಡಿಸುವಲ್ಲಿ ಈ ಸಂಸ್ಥೆ ದುಡಿದಿದೆ' ಎಂದರು.

'ಭ್ರಷ್ಟಾಚಾರ ಮತ್ತು ಅಪರಾಧದ ಸ್ವರೂಪದ ಪ್ರತಿದಿನವೂ ಬದಲಾಗುತ್ತಿದೆ. ಸೈಬರ್ ಅಪರಾಧ/ಭ್ರಷ್ಟಾಚಾರ, ಡಿಜಿಟಲ್ ತಿರುಚುವಿಕೆ ಈಗ ದೊಡ್ಡ ಪಿಡುಗುಗಳಾಗಿವೆ. ಅವುಗಳನ್ನೂ ನಿರ್ವಹಣೆ ಮಾಡುವಂತಹ ಅತ್ಯಾಧುನಿಕ ತಂತ್ರಜ್ಞಾನ, ವಿಧಿವಿಜ್ಞಾನ ಪರೀಕ್ಷೆಗಳಂತಹ ಸವಲತ್ತುಗಳನ್ನು ಕರ್ನಾಟಕ ಲೋಕಾಯುಕ್ತವು ಹೊಂದಬೇಕು' ಎಂದು ಸಲಹೆ ನೀಡಿದರು.

ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ, 'ಸರ್ಕಾರಿ ಸೇವೆಯಲ್ಲಿ ಪ್ರಾಮಾಣಿಕತೆ ತರುವುದು ಮತ್ತು ಆಡಳಿತ ಯಂತ್ರದಲ್ಲಿನ ಲೋಪದೋಷಗಳನ್ನು ಸರಿಪಡಿಸಿ, ಸಾಮಾನ್ಯ ಜನರಿಗೆ ನ್ಯಾಯ ಒದಗಿಸುವುದೇ ಲೋಕಾಯುಕ್ತದ ಮೂಲ ಉದ್ದೇಶ' ಎಂದರು.

'ದಿಢೀರ್ ದಾಳಿಗಳು ಮತ್ತು ದೂರುಗಳ ಆಧಾರದಲ್ಲಿ ತನಿಖೆ ಮಾತ್ರವಲ್ಲದೆ, ಜಿಲ್ಲಾ ಪ್ರವಾಸ ಹಾಗೂ ಲೋಕ ಅದಾಲತ್‌ಗಳನ್ನು ನಡೆಸುತ್ತಿದ್ದೇವೆ. ಜನರ ಸಮಸ್ಯೆಗಳನ್ನು ಆಲಿಸುತ್ತಿದ್ದೇವೆ. ಸರ್ಕಾರದ ಸೌಲಭ್ಯಗಳು ಅರ್ಹರನ್ನು ತಲುಪದೇ ಇದ್ದ ಅಥವಾ ವಿಳಂಬವಾದ ಸಂದರ್ಭದಲ್ಲಿ ಅದಕ್ಕೆ ಕಾರಣರಾದವರ ವಿರುದ್ಧ ಕ್ರಮ ತೆಗೆದುಕೊಂಡಿದ್ದೇವೆ. ಈ ವ್ಯವಸ್ಥೆ ಮೇಲೆ ಜನರಿಗೆ ನಂಬಿಕೆ ಮೂಡಿಸುವ ಕೆಲಸ ಮಾಡುತ್ತಿದ್ದೇವೆ' ಎಂದರು.

ಮುಖ್ಯಾಂಶಗಳು

- ಲೋಕಾಯುಕ್ತ ಸಂಸ್ಥೆಯ ಈವರೆಗಿನ ಸಾಧನೆ, ಪ್ರಮುಖ ಪ್ರಕರಣಗಳ ವಿವರ ಇರುವ ನಿಯತಕಾಲಿಕೆ ಬಿಡುಗಡೆ
- ಚುನಾಯಿತ ಜನಪ್ರತಿನಿಧಿಗಳ ಆಸ್ತಿ ಮತ್ತು ಸಾಲ ವಿವರ ದಾಖಲಿಸುವ ಪೋರ್ಟಲ್‌ಗೆ ಚಾಲನೆ
- ಸಾರ್ವಜನಿಕರು ಆನ್‌ಲೈನ್‌ನಲ್ಲಿಯೇ ದೂರು ದಾಖಲಿಸುವ ಅವಕಾಶ ನೀಡುವ ನೂತನ ಜಾಲತಾಣಕ್ಕೆ ಚಾಲನೆ



ಮಲ್ಲೇಶ್ವರದ ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜಿನ (ಎಂಎಲ್‌ಎಸಿ) ಆರನೇ ಘಟಿಕೋತ್ಸವದಲ್ಲಿ (ಎಡದಿಂದ) ಕಾಲೇಜಿನ ಪ್ರಾಂಶುಪಾಲರಾದ ನಂದಾ ಕುಲಕರ್ಣಿ, ಎಂಎಲ್‌ಎಸಿ ಟ್ರಸ್ಟಿ ಗೀತಾ ನಾರಾಯಣ್, ಎಂಎಲ್‌ಎಸಿ ಟ್ರಸ್ಟ್‌ನ ಅಧ್ಯಕ್ಷ ಎಸ್.ಎಸ್. ನಾಗಾನಂದ್, ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಬಿ. ರಮೇಶ್, ವಿಜ್ಞಾನಿ ಉಮಾ ರಾಮಕೃಷ್ಣನ್, ಎಂಎಲ್‌ಎಸಿ ಪರೀಕ್ಷಾ ನಿಯಂತ್ರಕಿ ಎ. ಕಮಲಾ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

'ರಾವಣನನ್ನು ಮೆಚ್ಚುವಂತೆ ಕಾವ್ಯದಲ್ಲಿ ಚಿತ್ರಣ'

ಬೆಂಗಳೂರು: 'ರಾವಣನ ಬಗ್ಗೆ ವ್ಯಾಸನ ಮೂಲ ರಾಮಾಯಣಕ್ಕಿಂತ ಭಿನ್ನವಾದ ಚಿತ್ರಣವು ನಾಗಚಂದ್ರನ 'ಪಂಪ ರಾಮಯಣ'ದಲ್ಲಿ ಸಿಗುತ್ತದೆ' ಎಂದು ಬಿ.ಎಂ. ಶ್ರೀ. ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಅಭಿಪ್ರಾಯಪಟ್ಟರು.

ಜೈನ್ ಮಿಲನ್, ಬೆಂಗಳೂರು ಸೆಂಟ್ರಲ್ ಹಾಗೂ ಚಕ್ರೇಶ್ವರಿ ಮಹಿಳಾ ಸಮಾಜ ಜಂಟಿಯಾಗಿ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಜೈನ ಸಾಹಿತ್ಯ ಸಿರಿ' ಕಾರ್ಯಕ್ರಮದಲ್ಲಿ 'ನಾಗಚಂದ್ರ ಕವಿಯ ಪಂಪ ರಾಮಾಯಣದ ವೈಶಿಷ್ಟ್ಯ ಒಂದು ನೋಟ' ವಿಷಯದ ಬಗ್ಗೆ ಮಾತನಾಡಿದರು.

'ಒಮ್ಮೊಮ್ಮೆ ಸಮುದ್ರವೂ ತನ್ನ ಮೇರೆಯನ್ನು ಮೀರುವಂತೆ ರಾವಣ ಸೀತೆಯನ್ನು ನೋಡಿದಾಗ ತನ್ನ ಮನಃಸ್ಥಿತಿಯ ಮೇರೆಯನ್ನು ಮೀರುತ್ತಾನೆ. ಆದರೆ, ತನ್ನ ಉದಾತ್ತ ನಡೆಯ ಮೂಲಕ ರಾವಣನನ್ನು ನಾವು ಮೆಚ್ಚುವಂತೆ ನಾಗಚಂದ್ರ ತನ್ನ ಕಾವ್ಯದಲ್ಲಿ ಚಿತ್ರಿಸಿದ್ದಾನೆ' ಎಂದರು.

'ಜೀವದಯೆ ಹಾಗೂ ಅಹಿಂಸೆ ಜೈನಧರ್ಮದ ಎರಡು ಕಣ್ಣುಗಳು ಎಂಬ ಮೂಲವನ್ನು ಆಶಯವಾಗಿಟ್ಟುಕೊಂಡು ನಾಗಚಂದ್ರ ಕೃತಿಗಳನ್ನು ರಚಿಸಿದ್ದಾನೆ' ಎಂದು ಹೇಳಿದರು.

ಜೈನ್ ಮಿಲನ್, ಬೆಂಗಳೂರು ಸೆಂಟ್ರಲ್ ಅಧ್ಯಕ್ಷೆ ಮಮತಾ ಕಾಂತರಾಜ್, ಚಕ್ರೇಶ್ವರಿ ಮಹಿಳಾ ಸಮಾಜದ ಅಧ್ಯಕ್ಷೆ ನಾಗಶ್ರೀ ಮುಪ್ಪಾನೆ ಹಾಗೂ ಸಂಚಾಲಕಿ ಪದ್ಮಿನಿ ನಾಗರಾಜು ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಸಿ.ಜಿ. ಲಕ್ಷ್ಮೀಪತಿ ಅವರಿಗೆ ಅಭಿನಂದನೆ ಸಮಾರಂಭ ಹಾಗೂ 'ಕ್ಯಾಸ್ಟ್ ಪಾಲಿಟಿಕ್ಸ್' ಪುಸ್ತಕ ಬಿಡುಗಡೆ: ತುಂಬಾಡಿ ರಾಮಯ್ಯ, ಪುಸ್ತಕದ ಕುರಿತು: ಪ್ರದೀಪ್ ರಾಮಾವತ್ ಜಿ., ಅಧ್ಯಕ್ಷತೆ: ಅಗ್ರಹಾರ ಕೃಷ್ಣಮೂರ್ತಿ, ಅತಿಥಿಗಳು: ಕೋಟಿಗಾನಹಳ್ಳಿ ರಾಮಯ್ಯ, ಜೋಗನ್ ಶಂಕರ್, ಮಾವಳ್ಳಿ ಶಂಕರ್, ಸೆಲ್ವಕುಮಾರಿ, ಲಿಂಚಿ ನಾಗರಾಜ್, ಆಯೋಜನೆ: ಸಿ.ಜಿ. ಲಕ್ಷ್ಮೀಪತಿ ಅವರ ಗೆಳೆಯರ ಬಳಗ, ಸ್ಥಳ: ಸರ್ಕಾರಿ ನೌಕರರ ಸಂಘದ ಸಭಾಂಗಣ, ಕಬ್ಬನ್ ಉದ್ಯಾನ, ಬೆಳಿಗ್ಗೆ 10.30

88ನೇ ಶ್ರೀರಾಮನವಮಿ ಸಂಗೀತೋತ್ಸವ: ಬೆಳಿಗ್ಗೆ 10.30ಕ್ಕೆ ಸಂಗೀತ ಕಛೇರಿ: ಎಂ.ಕೆ. ನಾಗರಾಜ್ ರಾವ್ ಮತ್ತು ತಂಡ, ಸಂಜೆ 5ಕ್ಕೆ ಸಂಗೀತ ಕಛೇರಿ: ಸೂರ್ಯ ಜಿ. ಮತ್ತು ತಂಡ, ಸಂಜೆ 6.30ಕ್ಕೆ ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ, ಹರಿಕಥೆ: ವಿಶಾಖ ಹರಿ, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ.

ವಿನಾಯಕ ಭಟ್ ತದ್ದಲಸೆ ಅವರ 'ರಾಧಾಕೃಷ್ಣ ಅಡಿಗ-ಇಡ್ಲಿ ಕಾಫಿ ಪರಂಪರೆ ಪಯಣ' ಪುಸ್ತಕ ಬಿಡುಗಡೆ: ದೇವದಾಸ್, ಪುಸ್ತಕ ಅವಲೋಕನ: ವಿಶ್ವೇಶ್ವರ ಭಟ್, ಉಪಸ್ಥಿತಿ: ಜಿ. ಪರಮೇಶ್ವರ, ತೇಜಸ್ವಿ ಸೂರ್ಯ, ಉದಯ್ ಬಿ. ಗರುಡಾಚಾರ್, ಬಿ.ಟಿ. ರುದ್ರೇಶ್, ಸ್ಥಳ: ಆರ್.ವಿ. ಟೀಚರ್ಸ್ ಕಾಲೇಜಿನ ಸಭಾಂಗಣ, ಜಯನಗರ, ಬೆಳಿಗ್ಗೆ 10.30

ಅಭಿನಂದನಾ ಕಾರ್ಯಕ್ರಮ, ಜಾನಪದ ಝೇಂಕಾರ, ಕವಿಗೋಷ್ಠಿ: ಉದ್ಘಾಟನೆ: ಎ.ಎಸ್. ನಾಗರಾಜಸ್ವಾಮಿ, ಅಧ್ಯಕ್ಷತೆ: ನೇ.ಭ. ರಾಮಲಿಂಗಶೆಟ್ಟಿ, ಭಾಷಣ: ಚೆನ್ನವೀರಯ್ಯ, ಆಯೋಜನೆ: ಕರುನಾಡ ಸಿರಿ ಸಾಹಿತ್ಯ ವೇದಿಕೆ, ಸ್ಥಳ: ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 10.30

ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ: ಉದ್ಘಾಟನೆ: ಕೃಷ್ಣ ಬೈರೇಗೌಡ, ಅತಿಥಿಗಳು: ಛಲವಾದಿ ನಾರಾಯಣಸ್ವಾಮಿ, ಪ್ರಸಾದ್ ಅಬ್ಬಯ್ಯ, ಡಾ. ನಾಗಲಕ್ಷ್ಮೀ ಚೌಧರಿ, ಎಸ್. ಆರ್. ವಿಶ್ವನಾಥ್, ಧರ್ಮಸೇನಾ, ಆನಂದ್ ಕುಮಾರ್, ಅಧ್ಯಕ್ಷತೆ: ರವಿಕುಮಾರ್, ಆಯೋಜನೆ: ಡಾ.ಬಿ.ಆರ್. ಅಂಬೇಡ್ಕರ್ ಸಮುದಾಯ ಭವನ ಟ್ರಸ್ಟ್, ಸ್ಥಳ: ಡಾ.ಬಿ. ಆರ್. ಅಂಬೇಡ್ಕರ್ ಸಮುದಾಯ ಭವನ, ಜಕ್ಕೂರು, ಬೆಳಿಗ್ಗೆ 11

ರಾಜ್ಯಮಟ್ಟದ ಕನ್ನಡ ಸಾಹಿತ್ಯ ಸಂಗೀತ ಸಂಭ್ರಮ: ಉದ್ಘಾಟನೆ: ಹಂ.ಪ. ನಾಗರಾಜಯ್ಯ, ಅಧ್ಯಕ್ಷತೆ: ಶಾಂತಿ ವಾಸು, ಸಾಧಕರಿಗೆ ಪ್ರಶಸ್ತಿ ಪ್ರದಾನ: ಜಯಶ್ರೀ ಅರವಿಂದ್, ಅತಿಥಿ: ಕೆ.ಜಿ. ಲಕ್ಷ್ಮೀನಾರಾಯಣಪ್ಪ, ಅಭಿನಂದನೆ ಸ್ವೀಕರಿಸುವವರು: ಎಂ.ವಿ. ಶಿವಪ್ರಸಾದ್, ಎಂ.ಪಿ.ಎಂ. ವೀರೇಶ್ ಯರಬಾಳು, ಉಪಸ್ಥಿತಿ: ಎಸ್. ರಾಮಲಿಂಗೇಶ್ವರ, ಆಯೋಜನೆ: ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಪ್ರೊ.ಬಿ. ಕೃಷ್ಣಪ್ಪ ಟ್ರಸ್ಟ್, ಅನಿಕೇತನ ಕನ್ನಡ ಬಳಗ, ಸ್ಥಳ: ಗಾಂಧಿ ಭವನ, ಕುಮಾರ ಕೃಪಾ ರಸ್ತೆ, ಬೆಳಿಗ್ಗೆ 11

ಹಂ.ಪ. ನಾಗರಾಜಯ್ಯ

'ಮಹಿಳಾ ಮೀಸಲಾತಿ ಮಸೂದೆ-ಸವಾಲುಗಳು ಹಾಗೂ ಪರಿಹಾರಗಳು' ಸಂಸದ ಧ್ವನಿ: ಅತಿಥಿಗಳು: ಆರ್. ಅಶೋಕ, ತೇಜಸ್ವಿ ಸೂರ್ಯ, ಪಿ.ಸಿ. ಮೋಹನ್, ಸಿ.ಕೆ. ರಾಮಮೂರ್ತಿ, ಸಿ. ಮಂಜುಳಾ, ಮಾಳವಿಕಾ ಅವಿನಾಶ್, ಶ್ವೇತಾ ರಾಘವೇಂದ್ರ, ಸ್ಥಳ: ಆರ್.ವಿ. ಡೆಂಟಲ್ ಕಾಲೇಜು, ಜೆ.ಪಿ. ನಗರ, ಬೆಳಿಗ್ಗೆ 11.15ರಿಂದ

ಕೆ.ಜಿ. ರಾಘವನ್ ಅವರ 'ಎಕೋಸ್ ಫ್ರಮ್ ರಾಮಾಯಣ' ಪುಸ್ತಕ ಬಿಡುಗಡೆ ಹಾಗೂ ಸನ್ಮಾನ ಕಾರ್ಯಕ್ರಮ: ಸನ್ಮಾನ ಸ್ವೀಕರಿಸುವವರು: ಶತಾವಧಾನಿ ಆರ್. ಗಣೇಶ್, ಅತಿಥಿಗಳು: ಕೃಷ್ಣ ಎಸ್. ದೀಕ್ಷಿತ್, ಪದ್ಮಾ ಸುಬ್ರಹ್ಮಣ್ಯಮ್, ಚಿರಂಜೀವ್ ಸಿಂಘ್, ಆಯೋಜನೆ ಭಾರತೀಯ ವಿದ್ಯಾಭವನ, ಡಾ.ಕೆ.ಎಂ. ಮುನ್ಷಿ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್ ಆ್ಯಂಡ್ ಕಲ್ಚರ್, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಮಧ್ಯಾಹ್ನ 3

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಮೇಘಾ ಶ್ರೀಧರ್, ಆಯೋಜನೆ: ಸುಧೀಂದ್ರ ನೃತ್ಯ ಕಲಾನಿಕೇತನ, ಸ್ಥಳ: ಸೇವಾ ಸನದ, ಮಲ್ಲೇಶ್ವರ, ಸಂಜೆ 5

ನಾಟಕಗಳ ಪ್ರದರ್ಶನ: ಸಂಜೆ 5ಕ್ಕೆ 'ಮುದ್ದಣ್ಣನ ಪ್ರಮೋಚನ್ ಪ್ರಸಂಗ' ನಾಟಕ ಪ್ರದರ್ಶನ: ರಚನೆ: ರಾಜೇಂದ್ರ ಕಾರಂತ, ಸಂಜೆ 7ಕ್ಕೆ 'ಪುಕ್ಕಟೆ ಸಲಹೆ' ನಾಟಕ ಪ್ರದರ್ಶನ: ರಚನೆ: ಎಚ್. ಡುಂಡಿರಾಜ್, ನಾಟಕಗಳ ನಿರ್ದೇಶನ: ಬಿ. ಅಶೋಕ್, ಆಯೋಜನೆ: ವಿಶ್ವಪಥ ಕಲಾ ಸಂಗಮ ಹವ್ಯಾಸಿ ರಂಗತಂಡ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ.

ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಗಾಯನ: ಎಸ್.ಎಂ. ನಾಗಚೇತನ್, ಪಿಟೀಲು: ಎಂ.ವಿ. ವಿಶ್ವಜಿತ್ ಮತ್ತೂರು, ಮೃದಂಗ: ಸುನಿಲ್ ಸುಬ್ರಮಣ್ಯ, ಖಂಜೀರಾ: ಹರಿಶ್ಚಂದ್ರ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5.30

ಪರಮ್ ವಿಹಾರ ಸಂಗೀತ ಕಛೇರಿ: ಗಾಯನ: ಚಿನ್ಮಯಿ ನಾಗೇಂದ್ರ, ಮಹತಿ ನಾಗೇಂದ್ರ, ಪಿಟೀಲು: ವೆಂಕಟೇಶ್ ಜೋಸ್ಯರ್, ಮೃದಂಗ: ಎ.ಎಸ್.ಎನ್. ಸ್ವಾಮಿ, ಮಾರ್ಗದರ್ಶನ: ಮಂಜುಶ್ರೀ ಸಂತೋಷ್, ಆಯೋಜನೆ: ಪರಮ್ ಫೌಂಡೇಷನ್, ಸ್ಥಳ: ಸನಾತನ ಕಲಾಕ್ಷೇತ್ರ, ಜಯನಗರ, ಸಂಜೆ 6

'ಉಪಕ್ರಮ' ನೃತ್ಯೋತ್ಸವ: ಪ್ರಸ್ತುತಿ: ನಿಧಿ ಎನ್. ಅತ್ರೇಯ, ಭೂಷಿತಾ ಬಿ.ಆರ್., ಹರ್ಷಿತಾ ಎಂ., ಆಯೋಜನೆ: ಸ್ಫೂರ್ತಿ ಸ್ಕೂಲ್ ಆಫ್ ಡಾನ್ಸ್, ಸ್ಥಳ: ಮೀನಾಕ್ಷಿ ರಂಗಮಂಚ, ದೊಡ್ಡಕಲ್ಲಸಂದ್ರ, ಸಂಜೆ 6

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಆರ್‌ಸಿಬಿ ಓಟಕ್ಕೆ ಕ್ಯಾಪಿಟಲ್ಸ್ ತಡೆ

ಚಿನ್ನಸ್ವಾಮಿಯಲ್ಲಿ ನೂರನೇ ಐಪಿಎಲ್ ಪಂದ್ಯ

• ರಜತ್ ಪಾಟೀದಾರ್ ಪಡೆಗೆ ನಿರಾಸೆ

• ಪ್ರದೀಶ್ ಎಚ್. ಮರೋಡಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನೂರನೇ ಐಪಿಎಲ್ ಪಂದ್ಯವನ್ನು ಅವಿಸ್ಮರಣೀಯವನ್ನಾಗಿಸುವ ಸುವರ್ಣಾವಕಾಶವನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಸ್ವಲ್ಪದರಲ್ಲೇ ತಪ್ಪಿಸಿಕೊಂಡಿತು. ಶನಿವಾರ ನಡೆದ ಪಂದ್ಯದಲ್ಲಿ ಆತಿಥೇಯ ತಂಡವು 6 ವಿಕೆಟ್‌ಗಳಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಮಣಿಯಿತು. ಇದರೊಂದಿಗೆ ತವರಿನಲ್ಲಿ ಆರ್‌ಸಿಬಿ ತಂಡದ ಅಜೇಯ ಓಟಕ್ಕೂ ತಡೆಬಿತ್ತು.

ಹಾಲಿ ಚಾಂಪಿಯನ್ ಆರ್‌ಸಿಬಿ ತಂಡಕ್ಕೆ ಇದು ಇಲ್ಲಿ ನೂರನೇ ಪಂದ್ಯವಾಗಿತ್ತು. ಈ ಮೈಲಿಗಲ್ಲು ತಲುಪಿದ ಮೊದಲ ತಂಡ ಎಂಬ ಹಿರಿಮೆಗೂ ಪಾತ್ರವಾಯಿತು. 'ಶತಕದ ಪಂದ್ಯ'ವನ್ನು ಅಭಿಮಾನಿಗಳ ಸಮ್ಮುಖದಲ್ಲಿ ಜಯಿಸಿ ನೆನಪಿನಲ್ಲಿ ಉಳಿಯುವಂತೆ ಮಾಡುವ ಅವಕಾಶವಿತ್ತು. ಅದಕ್ಕೆ, ಡೆಲ್ಲಿ ಬ್ಯಾಟರ್‌ಗಳಾದ ಕನ್ನಡಿಗ ಕೆ.ಎಲ್. ರಾಹುಲ್ (57;34ಎ) ಮತ್ತು ಟ್ರಿಸ್ಟನ್ ಸ್ಟಬ್ಸ್ (ಔಟಾಗದೇ 60;47ಎ) ಆಸ್ಪದ ನೀಡಲಿಲ್ಲ.

ಅವರಿಬ್ಬರ ಅರ್ಧಶತಕಗಳ ನೆರವಿನಿಂದ ಅಕ್ಷರ್ ಪಟೇಲ್ ಪಡೆಯು ಗೆಲುವಿನ ಹಳಿಗೆ ಮರಳಿತು. ಕೊನೆಯಲ್ಲಿ ಡೇವಿಡ್ ಮಿಲ್ಲರ್, ಹಿಂದಿನ ಪಂದ್ಯದ ತಪ್ಪನ್ನು ಮಾಡದೇ ಫಿನಿಷರ್ ಪಾತ್ರ ನಿರ್ವಹಿಸಿದರು.

ಟಾಸ್ ಗೆದ್ದ ಡೆಲ್ಲಿ ತಂಡವು ಫೀಲ್ಡಿಂಗ್ ಆಯ್ದುಕೊಂಡಿತು. ಲುಂಗಿ ಎನ್‌ಗಿಡಿ (39ಕ್ಕೆ 2), ಕುಲದೀಪ್ ಯಾದವ್ (32ಕ್ಕೆ 2) ಮತ್ತು ಅಕ್ಷರ್ (18ಕ್ಕೆ 2) ಪರಿಣಾಮಕಾರಿ ದಾಳಿ ನಡೆಸಿದರು. ಇದರಿಂದಾಗಿ ಆರ್‌ಸಿಬಿ ತಂಡವನ್ನು 8 ವಿಕೆಟ್‌ಗೆ 175 ರನ್‌ಗಳಿಗೆ ನಿಯಂತ್ರಿಸಿದರು. ಆರಂಭ ಆಟಗಾರ ಫಿಲ್ ಸಾಲ್ಟ್ (63;38ಎ) ಹೊರತುಪಡಿಸಿ ಉಳಿದವರು ನಿರಾಸೆ ಮೂಡಿಸಿದರು.

ಗುರಿ ಬೆನ್ನಟ್ಟಿದ ಡೆಲ್ಲಿ ತಂಡಕ್ಕೆ ವೇಗಿ ಭುವನೇಶ್ವರ್ ಕುಮಾರ್ ಆರಂಭದಲ್ಲೇ ಬಲವಾದ ಪೆಟ್ಟು ನೀಡಿದರು. ಮೊದಲ ಓವರ್‌ನಲ್ಲಿ ಪಥುಮ್ ನಿಸಾಂಕ (1) ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ಮೂರನೇ ಓವರ್‌ನಲ್ಲಿ ಕನ್ನಡಿಗ ಕರುಣ್ ನಾಯರ್ (5) ಮತ್ತು ಸಮೀರ್ ರಿಜ್ವಿ (2) ಅವರ ವಿಕೆಟ್‌ಗಳನ್ನು ಪಡೆದು ತಂಡಕ್ಕೆ ಆರಂಭಿಕ ಮೇಲುಗೈ ಒದಗಿಸಿದರು.

18 ರನ್‌ಗೆ 3 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದ ಡೆಲ್ಲಿ ತಂಡಕ್ಕೆ ರಾಹುಲ್ ಮತ್ತು ಸ್ಟಬ್ಸ್ ಆಸರೆಯಾದರು. ನಾಲ್ಕನೇ ವಿಕೆಟ್‌ಗೆ ಅಮೂಲ್ಯ 69 (44 ಎಸೆತ) ರನ್ ಸೇರಿಸಿದರು. ಕೃಣಾಲ್ ಪಾಂಡ್ಯ ಬೌಲಿಂಗ್‌ನಲ್ಲಿ ದೊಡ್ಡ ಹೊಡೆತಕ್ಕೆ ಮುಂದಾದ ರಾಹುಲ್, ವಿರಾಟ್ ಅವರಿಗೆ ಕ್ಯಾಚ್ ಆದರು. ಲಾಂಗ್ ಆಫ್‌ನಿಂದ ಎಡಕ್ಕೆ ಓಡಿ ಬಂದ ವಿರಾಟ್ ಚೆಂಡನ್ನು ಡೈವ್ ಮಾಡಿ ಹಿಡಿದರು.

ಸ್ಟಬ್ಸ್ ಅವರನ್ನು ಸೇರಿಕೊಂಡ ಅಕ್ಷರ್ (26;16ಎ) ಮತ್ತಷ್ಟು ಚೇತರಿಕೆ ನೀಡುವ ಪ್ರಯತ್ನ ನಡೆಸಿದರು. ಆಟದ ವೇಳೆ ಕಾಲು ನೋವಿಗೆ ಎರಡು ಬಾರಿ ಪ್ರಥಮ ಚಿಕಿತ್ಸೆ ಪಡೆದುಕೊಂಡ ಅಕ್ಷರ್ ಆಟ ಮುಂದುವರಿಸಲಾಗದೇ ಪೆವಿಲಿಯನ್‌ಗೆ ಮರಳಿದರು. ಈ ಹಂತದಲ್ಲಿ ಭುವಿ ಮತ್ತು ಹ್ಯಾಜಲ್‌ವುಡ್ ಬಿಗಿದಾಳಿ ನಡೆಸಿದ್ದರಿಂದ ಪಂದ್ಯ ರೋಚಕವಾಯಿತು. ಅಕ್ಷರ್ ಮರಳಿದ ನಂತರ ಕ್ರೀಸ್‌ಗಿಳಿದ 'ಕಿಲ್ಲರ್' ಮಿಲ್ಲರ್ ಕೊನೆಯ ಓವರಿನಲ್ಲಿ ಪರಾಕ್ರಮ ಮೆರೆದರು.

ಕೊನೆಯ ಓವರ್‌ನಲ್ಲಿ ಡೆಲ್ಲಿ ಗೆಲುವಿಗೆ 15 ರನ್ ಬೇಕಿದ್ದವು. ನಾಯಕ ರಜತ್ ಪಾಟೀದಾರ್ ಚೆಂಡನ್ನು ರೊಮಾರಿಯೊ ಶೆಫರ್ಡ್ ಕೈಗೆ ನೀಡಿದರು. ಮೊದಲ ಎರಡು ಎಸೆತಗಳಲ್ಲಿ ತಲಾ ಒಂದು ರನ್ ಬಂದಿದ್ದರಿಂದ ಆರ್‌ಸಿಬಿ ಅಭಿಮಾನಿಗಳಿಗೆ ಗೆಲುವಿನ ನಿರೀಕ್ಷೆ ಮೂಡಿತು. ಆದರೆ, ನಂತರದ ಎಸೆತಗಳಲ್ಲಿ ಮಿಲ್ಲರ್ ಕ್ರಮವಾಗಿ ಎರಡು ಸಿಕ್ಸರ್ ಮತ್ತು ಬೌಂಡರಿ ಬಾರಿಸಿ ಸಂಭ್ರಮಿಸಿದರು. ಒಂದು ಎಸೆತ ಬಾಕಿ ಇರುವಂತೆ ಡೆಲ್ಲಿ ತಂಡವು 4 ವಿಕೆಟ್‌ಗೆ 179 ರನ್ ಗಳಿಸಿ ಜಯ ಸಾಧಿಸಿತು.

ಸಾಲ್ಟ್ ಆಸರೆ: ಇದಕ್ಕೂ ಮೊದಲು ಸಾಲ್ಟ್ ಮತ್ತು ವಿರಾಟ್ ಕೊಹ್ಲಿ (19;13ಎ) ಮೊದಲ ವಿಕೆಟ್‌ಗೆ 52 ರನ್ ಸೇರಿಸಿ ಉತ್ತಮ ಆರಂಭ ಒದಗಿಸಿದರು. ಎನ್‌ಗಿಡಿ ಹಾಕಿದ ಆರನೇ ಓವರ್‌ನ ಮೊದಲ ಎಸೆತದಲ್ಲಿ ಕೊಹ್ಲಿ ದೊಡ್ಡ ಹೊಡೆತಕ್ಕೆ ಮುಂದಾಗಿ ಡೀಪ್ ಪಾಯಿಂಟ್‌ನಲ್ಲಿದ್ದ ಪಥುಮ್ ನಿಸಾಂಕ ಕ್ಯಾಚ್ ಪಡೆದರು.

ಇಂಪ್ಯಾಕ್ಟ್ ಆಟಗಾರನಾಗಿ ಬಂದ ಸ್ಥಳೀಯ ತಾರೆ ದೇವದತ್ತ ಪಡಿಕ್ಕಲ್ (18;13ಎ) ಅಕ್ಷರ್ ಬೌಲಿಂಗ್‌ನಲ್ಲಿ ಮಿಲ್ಲರ್ ಅವರಿಗೆ ಕ್ಯಾಚಿತ್ತು ಬೇಗನೆ ನಿರ್ಗಮಿಸಿದರು. 30 ಎಸೆತಗಳಲ್ಲಿ ಅರ್ಧಶತಕ ದಾಖಲಿಸಿದ ಸಾಲ್ಟ್ ಮತ್ತೊಂದು ಉಪಯುಕ್ತ ಇನಿಂಗ್ಸ್ ಆಡಿದರು.

ಪಾಟೀದಾರ್ (8) ಬೇಗನೇ ಪೆವಿಲಿಯನ್ ಸೇರಿಕೊಂಡರು. ವೇಗಿ ಮುಕೇಶ್ ಕುಮಾರ್ ಎಸೆತದಲ್ಲಿ ಚೆಂಡು ರಜತ್ ಬ್ಯಾಟ್‌ಗೆ ಸವರಿ ವಿಕೆಟ್ ಕೀಪರ್ ರಾಹುಲ್ ಕೈ ಸೇರಿತು. ಅವರು ಔಟಾಗುವುದರೊಂದಿಗೆ ಆರ್‌ಸಿಬಿಯ ರನ್ ವೇಗಕ್ಕೂ ಕಡಿವಾಣ ಬಿತ್ತು.

ಒಂದು ಹಂತದಲ್ಲಿ 12.3 ಓವರ್‌ಗಳಲ್ಲಿ 3 ವಿಕೆಟ್‌ಗೆ 131 ರನ್ ಗಳಿಸಿದ್ದ ತಂಡವು ದ್ವಿಶತಕದ ಗಡಿ ದಾಟುವ ನಿರೀಕ್ಷೆಯಲ್ಲಿತ್ತು. ಆದರೆ, ಡೆಲ್ಲಿ ಬೌಲರ್‌ಗಳ ಬಿಗಿದಾಳಿಗೆ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ತಿಣುಕಾಡಿದರು. ಟಿಮ್ ಡೇವಿಡ್ (26;17ಎ) ಕೆಲಕಾಲ ಹೋರಾಟ ತೋರಿದರು. ಕೊನೆಯ ಐದು ಓವರ್‌ಗಳಲ್ಲಿ ಕೇವಲ 29 ರನ್‌ಗಳಷ್ಟೇ ತಂಡದ ಖಾತೆ ಸೇರಿದವು.

ಹಸಿರು ಜೆರ್ಸಿ: ಪರಿಸರ ಸಂರಕ್ಷಣೆಯ ಜಾಗೃತಿ ಮೂಡಿಸಲು ಆರ್‌ಸಿಬಿ ತಂಡವು 'ಗೋ ಗ್ರೀನ್' ಉಪಕ್ರಮದ ಭಾಗವಾಗಿ ಹಸಿರು ಜರ್ಸಿ ಧರಿಸಿ ಕಣಕ್ಕಿಳಿದಿತ್ತು.

ಡೆಲ್ಲಿ ಕ್ಯಾಪಿಟಲ್ಸ್ ತಂಡದ ಕೆ.ಎಲ್. ರಾಹುಲ್ (ಎಡ) ಹಾಗೂ ಟ್ರಿಸ್ಟನ್ ಸ್ಟಬ್ಸ್ ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು: 8 ವಿಕೆಟ್‌ಗೆ 175 (20 ಓವರ್‌ಗಳಲ್ಲಿ)

ಸಾಲ್ಟ್ ಸಿ ಸ್ಟಬ್ಸ್ ಬಿ ಕುಲದೀಪ್ 63 (38ಎ, 4x4, 6x3)
ಕೊಹ್ಲಿ ಸಿ ಪಥುಮ್ ಬಿ ಎನ್‌ಗಿಡಿ 19 (13ಎ, 4x3)
ಪಡಿಕ್ಕಲ್ ಸಿ ಮಿಲ್ಲರ್ ಬಿ ಅಕ್ಷರ್ 18 (13ಎ, 4x1, 6x1)
ಪಾಟೀದಾರ್ ಸಿ ರಾಹುಲ್ ಬಿ ಮುಕೇಶ್ 8 (4ಎ, 6x1)
ಡೇವಿಡ್ ಸಿ ನಟರಾಜನ್ ಬಿ ಅಕ್ಷರ್ 26 (17ಎ, 4x3, 6x1)
ಜಿತೇಶ್ ಸಿ ಮಿಲ್ಲರ್ ಬಿ ಎನ್‌ಗಿಡಿ 14 (20ಎ, 4x1)
ಶೆಫರ್ಡ್ ಬಿ ಎಲ್‌ಬಿಡಬ್ಲ್ಯು ಕುಲದೀಪ್ 1 (4ಎ)
ಕೃಣಾಲ್ ರನೌಟ್ (ರಾಹುಲ್/ಎನ್‌ಗಿಡಿ) 12 (10ಎ, 6x1)
ರಸಿಕ್ ಔಟಾಗದೇ 0 (0ಎ)
ಭುವನೇಶ್ವರ್ ಔಟಾಗದೇ 3 (2ಎ)
ಇತರೆ: 11 (ಲೆಗ್‌ಬೈ 2, ವೈಡ್ 8, ನೋಬಾಲ್ 1)
ವಿಕೆಟ್ ಪತನ: 1-52 (ವಿರಾಟ್ ಕೊಹ್ಲಿ, 5.1), 2-99 (ದೇವದತ್ತ ಪಡಿಕ್ಕಲ್, 9.6), 3-105 (ಫಿಲ್ ಸಾಲ್ಟ್, 10.4), 4-131 (ರಜತ್ ಪಾಟಿದಾರ್, 12.4), 5-146 (ಟಿಮ್ ಡೇವಿಡ್, 15.2), 6-149 (ರೊಮಾರಿಯೊ ಶೆಫರ್ಡ್, 16.3), 7-172 (ಕೃಣಾಲ್ ಪಾಂಡ್ಯ, 19.2), 8-172 (ಜಿತೇಶ್ ಶರ್ಮಾ, 19.4)
ಬೌಲಿಂಗ್: ಅಕಿಬ್ ನಬಿ ದಾರ್ 3-0-36-0, ಮುಕೇಶ್ ಕುಮಾರ್ 4-0-32-1, ಲುಂಗಿ ಎನ್‌ಗಿಡಿ 4-0-39-2, ಕುಲದೀಪ್ ಯಾದವ್ 4-0-32-2, ಟಿ.ನಟರಾಜನ್ 2-0-16-0, ಅಕ್ಷರ್ ಪಟೇಲ್ 3-0-18-2

ಡೆಲ್ಲಿ ಕ್ಯಾಪಿಟಲ್ಸ್: 4 ವಿಕೆಟ್‌ಗೆ 179 (19.5 ಓವರ್‌ಗಳಲ್ಲಿ)

ನಿಸಾಂಕ ಎಲ್‌ಬಿಡಬ್ಲ್ಯು ಬಿ ಭುವನೇಶ್ವರ್ 1 (2ಎ)
ರಾಹುಲ್ ಸಿ ವಿರಾಟ್ ಬಿ ಕೃಣಾಲ್ 57 (34ಎ, 4x6, 6x2)
ಕರುಣ್ ಸಿ ಸಾಲ್ಟ್ ಬಿ ಭುವನೇಶ್ವರ್ 5 (5ಎ, 4x1)
ಸಮೀರ್ ಸಿ ಜಿತೇಶ್ ಬಿ ಭುವನೇಶ್ವರ್ 2 (3ಎ)
ಟ್ರಿಸ್ಟನ್ ಸ್ಟಬ್ಸ್ ಔಟಾಗದೇ 60 (47ಎ, 4x4, 6x1)
ಅಕ್ಷರ್ ಪಟೇಲ್ (ಗಾಯಾಳಾಗಿ ನಿವೃತ್ತಿ) 26 (19ಎ, 4x3)
ಡೇವಿಡ್ ಮಿಲ್ಲರ್ ಔಟಾಗದೇ 22 (10ಎ, 4x1, 6x2)
ಇತರೆ: 6 (ಲೆಗ್‌ಬೈ 3, ವೈಡ್ 2, ನೋಬಾಲ್ 1)
ವಿಕೆಟ್ ಪತನ: 1-2 (ಪಥುಮ್ ನಿಸಾಂಕ, 0.4), 2-16 (ಕರುಣ್ ನಾಯರ್, 2.2), 3-18 (ಸಮೀರ್ ರಿಜ್ವಿ, 2.5), 4-87 (ಕೆ.ಎಲ್.ರಾಹುಲ್, 10.1)
ಬೌಲಿಂಗ್: ಭುವನೇಶ್ವರ್ ಕುಮಾರ್ 4-0-26-3, ಜೋಶ್ ಹ್ಯಾಜಲ್‌ವುಡ್ 4-0-38-0, ರಸಿಕ್ ಸಲಾಮ್ ದಾರ್ 4-0-40-0, ಕೃಣಾಲ್ ಪಾಂಡ್ಯ 4-0-24-1, ಸುಯಶ್ ಶರ್ಮಾ 3-0-31-0, ರೊಮಾರಿಯೊ ಶೆಫರ್ಡ್ 0.5-0-17-0.
ಪಂದ್ಯದ ಆಟಗಾರ: ಟ್ರಿಸ್ಟನ್ ಸ್ಟಬ್ಸ್

ಪಂಜಾಬ್ ಕಿಂಗ್ಸ್–ಲಖನೌ ಸೂಪರ್ ಜೈಂಟ್ಸ್ ಹಣಾಹಣಿ

ಅಜೇಯ ಓಟದತ್ತ ಶ್ರೇಯಸ್ ಪಡೆ ಚಿತ್ತ

ಮುಲ್ಲನಪುರ (ಪಿಟಿಐ): ಶ್ರೇಯಸ್ ಅಯ್ಯರ್ ನಾಯಕತ್ವದ ಪಂಜಾಬ್ ಕಿಂಗ್ಸ್ ತಂಡವು ಪ್ರಸಕ್ತ ಐಪಿಎಲ್ ಟೂರ್ನಿಯಲ್ಲಿ ಸೋಲಿಲ್ಲದೇ ಮುನ್ನುಗ್ಗುತ್ತಿರುವ ಏಕೈಕ ತಂಡವಾಗಿದೆ.

ಅದೇ ಅಜೇಯ ಓಟವನ್ನು ಭಾನುವಾರ ನಡೆಯಲಿರುವ ಲಖನೌ ಸೂಪರ್ ಜೈಂಟ್ಸ್ ತಂಡದ ಎದುರು ಮುಂದುವರಿಸುವ ಛಲದಲ್ಲಿದೆ. ಲಖನೌ ತಂಡದ ನಾಯಕ ರಿಷಭ್ ಪಂತ್ ಅವರು ಈಚೆಗೆ ಆರ್‌ಸಿಬಿ ಎದುರಿನ ಪಂದ್ಯದಲ್ಲಿ ಗಾಯಗೊಂಡಿದ್ದರು. ಆದ್ದರಿಂದ ಅವರು ಕಣಕ್ಕಿಳಿಯುವುದು ಅನುಮಾನವಾಗಿದೆ.

'ಹಾಲಿ ರನ್ನರ್ಸ್ ಅಪ್' ಪಂಜಾಬ್ ತಂಡವು ಸದ್ಯ ಅಂಕಪಟ್ಟಿಯಲ್ಲಿಯೂ ಅಗ್ರಸ್ಥಾನದಲ್ಲಿದೆ. ತಂಡವು ಆಡಿರುವ ಕಳೆದ 11 ಪಂದ್ಯಗಳಲ್ಲಿ (2025ರ ಆವೃತ್ತಿಯ ಪಂದ್ಯಗಳೂ ಸೇರಿ) 9ರಲ್ಲಿ ಜಯಿಸಿದೆ. ಇದು ಆ ತಂಡದ ಪಾರುಪತ್ಯಕ್ಕೆ ತಕ್ಕ ಉದಾಹರಣೆಯಾಗಿದೆ. ಈಚೆಗೆ ಮುಂಬೈ ಇಂಡಿಯನ್ಸ್ ಎದುರಿನ ಪಂದ್ಯದಲ್ಲಿ ಪಂಜಾಬ್ ತಂಡವು ಆಡಿದ ರೀತಿ ಅಮೋಘವಾಗಿತ್ತು. ಶ್ರೇಯಸ್ ಮಿಂಚಿನ ಫೀಲ್ಡಿಂಗ್ ಹಾಗೂ ಅಬ್ಬರದ ಅರ್ಧಶತಕದ ಮೂಲಕ ತಂಡದ ಗೆಲುವಿನ ರೂವಾರಿಯಾಗಿದ್ದರು. ಅಲ್ಲದೇ ನಾಯಕತ್ವದಲ್ಲಿಯೂ ಮೇಲುಗೈ ಸಾಧಿಸಿದ್ದರು.

ಆದರೆ ಲಖನೌ ತಂಡದ ಪರಿಸ್ಥಿತಿ ಉತ್ತಮವಾಗಿಲ್ಲ. ತಂಡವು ಪಾಯಿಂಟ್ ಪಟ್ಟಿಯಲ್ಲಿ ಏಳನೇ ಸ್ಥಾನದಲ್ಲಿದೆ. ಈಚೆಗೆ ಆರ್‌ಸಿಬಿ ಎದುರಿನ ಪಂದ್ಯದ ಯಾವುದೇ ಹಂತದಲ್ಲಿಯೂ ಲಖನೌನಿಂದ ಪ್ರತಿರೋಧ ಕಂಡುಬರಲಿಲ್ಲ. ಆರ್‌ಸಿಬಿ ಏಕಪಕ್ಷೀಯ ಗೆಲುವು ಸಾಧಿಸಿತ್ತು. ಬ್ಯಾಟರ್‌ಗಳ ಪ್ರದರ್ಶನ ಅಸ್ಥಿರವಾಗಿದೆ. ಏಡನ್ ಮರ್ಕರಂ, ಮಿಚೆಲ್ ಮಾರ್ಷ್, ಆಯುಷ್ ಬಡೋಣಿ ಹಾಗೂ ರಿಷಭ್ ಅವರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಿಲ್ಲ. ಹೊಸಪ್ರತಿಭೆ ಮುಕುಲ್ ಚೌಧರಿ ಅವರ ಮೇಲೆ ಭರವಸೆ ಇಡಬಹುದು. ಆದರೆ, ತಂಡವು ಟೂರ್ನಿಯಲ್ಲಿ ಇದುವರೆಗೂ 200 ರನ್‌ಗಳಿಗಿಂತ ಹೆಚ್ಚಿನ ಮೊತ್ತವನ್ನು ಪೇರಿಸಿಲ್ಲ. ಬೌಲಿಂಗ್ ಸ್ಥಿತಿ ಕೂಡ ಹೀಗೆಯೇ ಇದೆ. ಸ್ಪಿನ್ನರ್ ದಿಗ್ವೇಶ್ ರಾಠಿ, ವೇಗಿ ಮೊಹಮ್ಮದ್ ಶಮಿ ಮತ್ತು ಆವೇಶ್ ಖಾನ್ ಅವರಿಗೆ ವಿಕೆಟ್ ಗಳಿಸುವ ಕಾರ್ಯವು ಸಲೀಸಾಗಿಲ್ಲ.

ಆದರೆ ಪಂಜಾಬ್ ಬ್ಯಾಟಿಂಗ್‌ನಲ್ಲಿ ಬಲಶಾಲಿಯಾಗಿದೆ. ಪ್ರಭಸಿಮ್ರನ್ ಸಿಂಗ್ ಮತ್ತು ಪ್ರಿಯಾಂಶ್ ಆರ್ಯ ಜೋಡಿಯು ಅಮೋಘ ಆರಂಭ ನೀಡುತ್ತಿದೆ. ಕೂಪರ್ ಕನೊಲಿ, ಶ್ರೇಯಸ್, ಶಶಾಂಕ್ ಸಿಂಗ್ ಅವರು ಯಾವುದೇ ಹಂತದಲ್ಲಿ ತಂಡವನ್ನು ಗೆಲುವಿನತ್ತ ಮುನ್ನಡೆಸುವ ತಾಕತ್ತು ಇರುವ ಆಟಗಾರರು. ಅವರ ಸಾಮರ್ಥ್ಯವು ಈಗಾಗಲೇ ಸಾಬೀತಾಗಿದೆ. ಆದ್ದರಿಂದ ಲಖನೌ ಬೌಲರ್‌ಗಳು ತಮ್ಮ ಪೂರ್ಣ ಸಾಮರ್ಥ್ಯವನ್ನು ಇವರನ್ನು ಕಟ್ಟಿಹಾಕುವತ್ತ ವಿನಿಯೋಗಿಸಬೇಕಾದ ಅಗತ್ಯವಿದೆ.

ಪಂಜಾಬ್ ತಂಡದ ಬೌಲಿಂಗ್ ಪಡೆಯೂ ಚೆನ್ನಾಗಿದೆ. ಅರ್ಷದೀಪ್ ಸಿಂಗ್, ಕನ್ನಡಿಗ ವೈಶಾಖ ವಿಜಯಕುಮಾರ್, ಝೇವಿಯರ್ ಬಾರ್ಟ್‌ಲೆಟ್ ಹಾಗೂ ಅನುಭವಿ ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರ ದಾಳಿಯನ್ನು ಎದುರಿಸಲು ಲಖನೌ ಬ್ಯಾಟಿಂಗ್ ಪಡೆಯೂ ಸಿದ್ಧವಾಗಬೇಕಿದೆ.

ಪಂಜಾಬ್ ತಂಡದ ಶ್ರೇಯಸ್ ಅಯ್ಯರ್

ರಿಷಭ್ ಪಂತ್



ಮೊಹಮ್ಮದ್ ಶಮಿ

ಬಲಾಬಲ	ಒಟ್ಟು ಪಂದ್ಯ 6
ಪಂಜಾಬ್ ಜಯ	3
ಲಖನೌ ಗೆಲುವು	3

ಇಂದಿನ ಪಂದ್ಯ

ಕೋಲ್ಕತ್ತ ನೈಟ್ ರೈಡರ್ಸ್ V/s ರಾಜಸ್ಥಾನ ರಾಯಲ್ಸ್
ತಾಣ: ಕೋಲ್ಕತ್ತ, ಆರಂಭ: ಮ. 3.30

ಪಂಜಾಬ್ ಕಿಂಗ್ಸ್ V/s ಲಖನೌ ಸೂಪರ್ ಜೈಂಟ್ಸ್
ತಾಣ: ಮುಲ್ಲನಪುರ, ಆರಂಭ: ರಾ 7.30

ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಪಿಬಿಕೆಎಸ್	5	4	0	1	9	1.067
ಆರ್‌ಸಿಬಿ	6	4	2	0	8	1.171
ಆರ್ ಆರ್	5	4	1	0	8	0.889
ಎಸ್‌ಆರ್‌ಎಚ್	6	3	3	0	6	0.566
ಡಿ ಸಿ	5	3	2	0	6	0.310
ಜಿ ಟಿ	5	3	2	0	6	0.018
ಸಿಎಸ್‌ಕೆ	6	2	4	0	4	-0.780
ಎಲ್‌ಎಸ್‌ಜಿ	5	2	3	0	4	-0.804
ಎಂ ಐ	5	1	4	0	2	-1.076
ಕೆಕೆಆರ್	6	0	5	1	1	-1.149

ಆರೇಂಜ್ ಕ್ಯಾಪ್–ಹೆನ್ರಿಚ್ ಕ್ಲಾಸೆನ್, ಎಸ್‌ಆರ್‌ಎಚ್ (283 ರನ್)
ಪರ್ಪಲ್ ಕ್ಯಾಪ್–ಅನ್ಷುಲ್ ಕಂಬೋಜ್, ಸಿಎಸ್‌ಕೆ (13 ವಿಕೆಟ್)

ಅಭಿಷೇಕ್ ಶರ್ಮಾ, ಹೆನ್ರಿಚ್ ಕ್ಲಾಸೆನ್ ಅರ್ಧಶತಕ: ಚೆನ್ನೈ ಸೂಪರ್ ಕಿಂಗ್ಸ್‌ಗೆ ನಾಲ್ಕನೇ ಸೋಲು

ಮಾಲಿಂಗ ದಾಳಿ: ಸನ್‌ರೈಸರ್ಸ್‌ಗೆ ಗೆಲುವು

ಹೈದರಾಬಾದ್ (ಪಿಟಿಐ): ಅಭಿಷೇಕ್ ಶರ್ಮಾ ಮತ್ತು ಹೆನ್ರಿಚ್ ಕ್ಲಾಸೆನ್ ಅವರ ಅರ್ಧಶತಕಗಳ ಬಳಿಕ ವೇಗಿ ಇಶಾನ್ ಮಾಲಿಂಗ ಪರಿಣಾಮಕಾರಿ ಬೌಲಿಂಗ್ ದಾಳಿ ನಡೆಸಿದರು. ಇದರಿಂದಾಗಿ ಸನ್‌ರೈಸರ್ಸ್ ಹೈದರಾಬಾದ್ ತಂಡವು ಶನಿವಾರ ಐಪಿಎಲ್‌ನ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 10 ರನ್‌ಗಳ ರೋಚಕ ಜಯ ಸಾಧಿಸಿತು.

ಹೆನ್ರಿಚ್ ಕ್ಲಾಸೆನ್

ಉಪ್ಪಳದ ರಾಜೀವಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಚೆನ್ನೈ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಅಭಿಷೇಕ್ (59;22ಎ, 4X6, 6X4) ಮತ್ತು ಕ್ಲಾಸೆನ್ (59;39ಎ, 4X6, 6X2) ಅವರ ಬ್ಯಾಟಿಂಗ್ ಬಲದಿಂದ ಹೈದರಾಬಾದ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 194 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಚೆನ್ನೈ ತಂಡಕ್ಕೆ ಇಶಾನ್ (29ಕ್ಕೆ 3) ಮತ್ತು ನಿತೀಶ್ ಕುಮಾರ್ ರೆಡ್ಡಿ (31ಕ್ಕೆ 2) ಕಡಿವಾಣ ಹಾಕಿದರು. ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿದ್ದ ಚೆನ್ನೈ ತಂಡ 8 ವಿಕೆಟ್‌ಗೆ 184 ರನ್ ಗಳಿಸಿ ಹೋರಾಟ ಮುಗಿಸಿತು. ಇಶಾನ್ ಕಿಶನ್ ಪಡೆಗೆ ಇದು ಸತತ ಎರಡನೇ ಗೆಲುವು.

ಚೆನ್ನೈ ತಂಡದ ಆರಂಭಿಕ ಆಟಗಾರ ಸಂಜು ಸ್ಯಾಮ್ಸನ್ (7) ನಿರಾಸೆ ಮೂಡಿಸಿದರು. ಅವರು ಎರಡನೇ ಓವರ್‌ನಲ್ಲೇ ಪೆವಿಲಿಯನ್ ಸೇರಿಕೊಂಡರು. ನಾಯಕ ಋತುರಾಜ್ ಗಾಯಕವಾಡ್ (19) ಮತ್ತು ಆಯುಷ್ ಮ್ಹಾತ್ರೆ (30) ಎರಡನೇ ವಿಕೆಟ್‌ಗೆ 51 ರನ್ ಸೇರಿಸಿದರು. ನಂತರ ಮ್ಯಾಥ್ಯೂ ಶಾರ್ಟ್ (34) ಮತ್ತು ಸರ್ಫರಾಜ್ ಖಾನ್ (25) ಕೊಂಚ ಹೋರಾಟ ನಡೆಸಿದರು.

4 ಓವರ್
29 ರನ್
3 ವಿಕೆಟ್

ರಾಜಸ್ಥಾನ ರಾಯಲ್ಸ್ ವಿರುದ್ಧದ ಪಂದ್ಯದಲ್ಲಿ ಮಿಂಚಿದ್ದ ಮಧ್ಯಮ ವೇಗಿ ಪ್ರಫುಲ್ ಹಿಂಗೆ (60ಕ್ಕೆ 1) ಈ ಪಂದ್ಯದಲ್ಲಿ ದುಬಾರಿಯಾದರು. ಆದರೆ, ಕೊನೆಯ ಓವರ್‌ನಲ್ಲಿ ಚೆನ್ನೈ ತಂಡ ಗೆಲುವಿಗೆ 18 ರನ್ ಬೇಕಿದ್ದಾಗ ಉತ್ತಮವಾಗಿ ಬೌಲಿಂಗ್ ಸಂಘಟಿಸಿ, ಕೇವಲ 7 ರನ್ ಬಿಟ್ಟುಕೊಟ್ಟರು. ಇದರೊಂದಿಗೆ ಜೆಮಿ ಒವರ್ಟನ್ ವಿಕೆಟ್ ಪಡೆದು ಸಂಭ್ರಮಿಸಿದರು.

ಇದಕ್ಕೂ ಮೊದಲು ಅಭಿಷೇಕ್ ತಮ್ಮ ನೈಜ ಆಕ್ರಮಣಶೀಲ ಆಟ ಪ್ರದರ್ಶಿಸಿದರು. 15 ಎಸೆತಗಳಲ್ಲಿ ಅರ್ಧಶತಕದ ಗಡಿ ದಾಟಿದರು. ಟ್ರಾವಿಸ್ ಹೆಡ್ 20 ಎಸೆತಗಳಲ್ಲಿ 23 ರನ್ ಗಳಿಸಿದರು. ಮೊದಲ ವಿಕೆಟ್‌ಗೆ ಅವರು 75 ರನ್ ಸೇರಿಸಿದರು. ಮಧ್ಯಮ ಕ್ರಮಾಂಕದಲ್ಲಿ ಕ್ಲಾಸನ್ ಕೂಡಾ ಬೀಸಾಟ ವಾಡಿದರು. ಆದರೆ ಉಳಿದ ಬ್ಯಾಟರ್‌ಗಳು ಹೆಚ್ಚು ರನ್ ಗಳಿಸದಂತೆ ಅನ್ಷುಲ್ ಕಂಬೋಜ್ (22ಕ್ಕೆ 3) ಮತ್ತು ಒವರ್ಟನ್ (37ಕ್ಕೆ3) ನೋಡಿಕೊಂಡರು.

ಸಂಕ್ಷಿಪ್ತ ಸ್ಕೋರು: ಸನ್‌ರೈಸರ್ಸ್ ಹೈದರಾಬಾದ್: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 194 (ಅಭಿಷೇಕ್ ಶರ್ಮಾ 59, ಟ್ರಾವಿಸ್ ಹೆಡ್ 23, ಹೆನ್ರಿಚ್ ಕ್ಲಾಸೆನ್ 59, ಸಲೀಲ್ ಅರೋರಾ 13, ನಿತೀಶ್ ಕುಮಾರ್ ರೆಡ್ಡಿ 12, ಶಿವಾಂಗ್ ಕುಮಾರ್ 12, ಮುಕೇಶ್ ಚೌಧರಿ 21ಕ್ಕೆ2, ಅನ್ಷುಲ್ ಕಂಬೋಜ್ 22ಕ್ಕೆ3, ಜೆಮಿ ಒವರ್ಟನ್ 37ಕ್ಕೆ3). ಚೆನ್ನೈ ಸೂಪರ್ ಕಿಂಗ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 184 (ಋತುರಾಜ್ ಗಾಯಕವಾಡ್ 19, ಆಯುಷ್ ಮ್ಹಾತ್ರೆ 30, ಮ್ಯಾಥ್ಯೂ ಶಾರ್ಟ್ 34, ಸರ್ಫರಾಜ್ ಖಾನ್ 25, ಶಿವಂ ದುಬೆ 21; ಇಶಾನ್ ಮಾಲಿಂಗ 29ಕ್ಕೆ3, ನಿತೀಶ್‌ಕುಮಾರ್ ರೆಡ್ಡಿ 31ಕ್ಕೆ2, ಶಿವಾಂಗ್ ಕುಮಾರ್ 18ಕ್ಕೆ1).
ಪಂದ್ಯದ ಆಟಗಾರ: ಇಶಾನ್ ಮಾಲಿಂಗ



ಮೂರು ವಿಕೆಟ್ ಪಡೆದ ಇಶಾನ್ ಮಾಲಿಂಗ ಸಂಭ್ರಮ ಪಿಟಿಐ ಚಿತ್ರ

ಎಸ್‌ಆರ್‌ಎಚ್‌ಗೆ ಜೆರಾಲ್ಡ್ ಕೊಟ್ಜಿಯ



ಹೈದರಾಬಾದ್ (ಪಿಟಿಐ): ದಕ್ಷಿಣ ಆಫ್ರಿಕಾದ ವೇಗದ ಬೌಲರ್ ಜೆರಾಲ್ಡ್ ಕೊಟ್ಜಿಯ ಅವರು ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಸೇರಿಕೊಳ್ಳಲಿದ್ದಾರೆ. ಪಾದದ ನೋವಿನಿಂದಾಗಿ ಐಪಿಎಲ್‌ನಿಂದ ಹೊರಬಿದ್ದಿರುವ ಡೇವಿಡ್ ಪೇನ್ ಬದಲಿಗೆ ಕೊಟ್ಜಿಯ ಸ್ಥಾನ ಪಡೆದಿದ್ದಾರೆ.

₹2 ಕೋಟಿ ಮೊತ್ತಕ್ಕೆ ಅವರು ತಂಡವನ್ನು ಸೇರಿಕೊಳ್ಳಲಿದ್ದಾರೆ ಎಂದು ಶನಿವಾರ ಐಪಿಎಲ್ ಪ್ರಕಟಣೆ ತಿಳಿಸಿದೆ.

ನಾಲ್ಕು ಟೆಸ್ಟ್, 14 ಏಕದಿನ ಮತ್ತು 18 ಟಿ20 ಪಂದ್ಯಗಳನ್ನು ಆಡಿರುವ ಅವರು ಒಟ್ಟು 67 ವಿಕೆಟ್‌ಗಳನ್ನು ಪಡೆದಿದ್ದಾರೆ.

ಈ ಬಲಗೈ ವೇಗದ ಬೌಲರ್ ಕೊಟ್ಜಿಯ ಅವರು ಈ ಹಿಂದೆ ಗುಜರಾತ್ ಟೈಟನ್ಸ್ (2025) ಮತ್ತು ಮುಂಬೈ ಇಂಡಿಯನ್ಸ್ (2024) ಪರ 14 ಪಂದ್ಯಗಳನ್ನು ಆಡಿದ್ದಾರೆ.

ರಹಾನೆ ಬಳಗಕ್ಕೆ ಇಂದು ರಾಜಸ್ಥಾನ ರಾಯಲ್ಸ್ ಸವಾಲು

ಕೋಲ್ಕತ್ತ ಇವತ್ತಾದರೂ ಗೆಲ್ಲುತ್ತಾ?

ಕೋಲ್ಕತ್ತ (ಪಿಟಿಐ): ಪೆಟ್ಟು ತಿಂದ ಹುಲಿಯಂತಾಗಿರುವ ರಾಜಸ್ಥಾನ ರಾಯಲ್ಸ್ ತಂಡವು ಭಾನುವಾರ ಕೋಲ್ಕತ್ತ ನೈಟ್ ರೈಡರ್ಸ್ ಎದುರು ಕಣಕ್ಕಿಳಿಯಲಿದೆ.

ಆತಿಥೇಯ ತಂಡವು ಟೂರ್ನಿಯಲ್ಲಿ ಇದುವರೆಗೂ ಗೆಲುವಿನ ಮುಖ ನೋಡಿಲ್ಲ. ಆರು ಪಂದ್ಯ ಆಡಿರುವ ಕೋಲ್ಕತ್ತ ತಂಡವು ಐದರಲ್ಲಿ ಸೋತಿದೆ. ಒಂದು ಪಂದ್ಯ ಮಳೆಯಿಂದ ರದ್ದಾಗಿತ್ತು. ಅದರ ಒಂದು ಅಂಕ ತಂಡದ ಖಾತೆಯಲ್ಲಿದೆ. ಈಡನ್ ಗಾರ್ಡನ್‌ನಲ್ಲಿ ನಡೆಯಲಿರುವ ಪಂದ್ಯದಲ್ಲಿ ಕೋಲ್ಕತ್ತ ಜಯಿಸಲೇ ಬೇಕಾದ ಒತ್ತಡದಲ್ಲಿದೆ. ಆದರೆ ತಂಡದ ಸ್ಪಿನ್ ಜೋಡಿ ವರುಣ್ ಚಕ್ರವರ್ತಿ ಮತ್ತು ಸುನಿಲ್ ನಾರಾಯಣ್ ಅವರು ಫಾರ್ಮ್‌ನಲ್ಲಿ ಇಲ್ಲ. ವೇಗಿಗಳಾದ ಹರ್ಷಿತ್ ರಾಣಾ ಮತ್ತು ಆಕಾಶ್ ದೀಪ್ ಅವರು ಗಾಯಗೊಂಡಿರುವುದರಿಂದ ತಂಡದ ಹಿನ್ನಡೆಗೆ ಕಾರಣವಾಗಿದೆ.

ಬಲಾಬಲ	ಒಟ್ಟು ಪಂದ್ಯ 32
ಕೋಲ್ಕತ್ತ ಗೆಲುವು	16
ರಾಜಸ್ಥಾನ ಜಯ	13
ಫಲಿತಾಂಶವಿಲ್ಲ	3

ಮಹೀಷ ಪಥಿರಾಣ ಅವರು ತಂಡಕ್ಕೆ ಮರಳಿಲಿದ್ದಾರೆ.

ನಾಯಕ ಅಜಿಂಕ್ಯ ರಹಾನೆ ಮತ್ತು ಕೋಚ್ ಅಭಿಷೇಕ್ ನಾಯರ್ ಅವರು ರೂಪಿಸುತ್ತಿರುವ ತಂತ್ರಗಾರಿಕೆಯ ಬಗ್ಗೆಯೂ ಈಗ ಚರ್ಚೆಗಳು ನಡೆಯುತ್ತಿವೆ.

ಕಳೆದ ಪಂದ್ಯದಲ್ಲಿ ವರುಣ್ ಚಕ್ರವರ್ತಿ ವಿಕೆಟ್ ಗಳಿಸಿದ್ದರು. ಕ್ಯಾಮರಾನ್ ಗ್ರೀನ್ ಅವರು ಅರ್ಧಶತಕ ಹೊಡೆದು ಲಯಕ್ಕೆ ಮರಳಿದ್ದರು. ಆದರೆ ರೋವ್ಮನ್ ಪೊವೆಲ್, ರಹಾನೆ, ರಿಂಕು ಸಿಂಗ್ ಮತ್ತು ಟಿಮ್ ಸೀಫರ್ಟ್ ಅವರು ಲಯಕ್ಕೆ ಮರಳಬೇಕಿದೆ. ಅಂಗಕ್ರಿಷ್ ರಘುವಂಶಿ ಅವರು ಉತ್ತಮ ಫಾರ್ಮ್‌ನಲ್ಲಿದ್ದಾರೆ.

ಆದರೆ ರಾಜಸ್ಥಾನ ತಂಡವನ್ನು ಸುಲಭವಾಗಿ ಮಣಿಸಲು ಸಾಧ್ಯವಿಲ್ಲ. ರಿಯಾನ್ ಪರಾಗ್ ಬಳಗವು ಸತತ ನಾಲ್ಕು ಪಂದ್ಯಗಳಲ್ಲಿ ಗೆದ್ದಿತ್ತು. ಆದರೆ ಐದನೇ ಪಂದ್ಯದಲ್ಲಿ ಸೋತಿದೆ. ಜಯದ ಹಾದಿಗೆ ಮರಳಲು ಪೂರ್ಣ ಪ್ರಯತ್ನ ಮಾಡುವುದು ಖಚಿತ.

ಆರಂಭಿಕ ಜೋಡಿ ವೈಭವ್ ಸೂರ್ಯವಂಶಿ ಹಾಗೂ ಯಶಸ್ವಿ ಜೈಸ್ವಾಲ್ ಅವರು ಅಬ್ಬರಿಸದಂತೆ ತಡೆಯಲು ಕೋಲ್ಕತ್ತ ಬೌಲರ್‌ಗಳು ಯಶಸ್ವಿಯಾದರೆ ಮಾತ್ರ ರನ್ ಹೊಳೆ ನಿಯಂತ್ರಿಸಬಹುದು. ನಂತರದ ಕ್ರಮಾಂಕದಲ್ಲಿಯೂ ಧ್ರುವ ಜುರೇಲ್, ಶಿಮ್ರಾನ್ ಹೆಟ್ಮೆಯರ್, ರವೀಂದ್ರ ಜಡೇಜ ಅವರಿದ್ದಾರೆ. ಅವರೂ ತಂಡವನ್ನು ಗೆಲುವಿನತ್ತ ನಡೆಸಬಲ್ಲರು.

ಜೋಫ್ರಾ ಆರ್ಚರ್, ಜಡೇಜ, ರವಿ ಬಿಷ್ಣೋಯಿ ಅವರಿರುವ ಬೌಲಿಂಗ್ ವಿಭಾಗವೂ ಪರಿಣಾಮಕಾರಿಯಾಗಿದೆ.

ಮಹಿಳಾ ಹಾಕಿ ತಂಡದ ಅರ್ಜೆಂಟೀನಾ ಪ್ರವಾಸ

ಸಮಬಲ ಸಾಧಿಸಿದ ವನಿತೆಯರು

ಬ್ಯೂನೊ ಐರ್ಸ್ (ಪಿಟಿಐ): ಭಾರತ ಮಹಿಳೆಯರ ಹಾಕಿ ತಂಡ ಹಿನ್ನಡೆಯಿಂದ ಚೇತರಿಸಿಕೊಂಡು ಅರ್ಜೆಂಟೀನಾದ ವಿರುದ್ಧದ ನಾಲ್ಕು ಪಂದ್ಯಗಳ ಸರಣಿಯನ್ನು 2–2 ರಿಂದ ಡ್ರಾ ಮಾಡಿಕೊಂಡಿತು.

ಶುಕ್ರವಾರ ನಡೆದ ಸರಣಿಯ ಕೊನೆಯ ಪಂದ್ಯವನ್ನು ಭಾರತ ಪೆನಾಲ್ಟಿ ಶೂಟೌಟ್‌ನಲ್ಲಿ 3–2 ರಿಂದ (ನಿಗದಿ ಅವಧಿಯ ಆಟ 0–0) ಗೆದ್ದುಕೊಂಡಿತು. ಸರಣಿಯ ಮೊದಲ ಎರಡು ಪಂದ್ಯಗಳ ನಂತರ 0–2 ರಿಂದ ಹಿಂದಿದ್ದ ಭಾರತ ಕೊನೆಯ ಎರಡು ಪಂದ್ಯಗಳನ್ನು ಗೆದ್ದುಕೊಂಡು ತೃಪ್ತಿಕರವಾಗಿ ಪ್ರವಾಸ ಮುಗಿಸಿತು.

'ಈ ಫಲಿತಾಂಶವು ಭಾರತ ತಂಡವು ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದೆ ಎಂಬುದಕ್ಕೆ ಪುರಾವೆಯಾಗಿದೆ' ಎಂದು ಭಾರತ ತಂಡದ ಹಂಗಾಮಿ ನಾಯಕಿ ನವನೀತ್ ಕೌರ್ ಅಭಿಪ್ರಾಯಪಟ್ಟಿದ್ದಾರೆ.

ಭಾರತ ಹಾಕಿ ತಂಡದ ಆಟಗಾರ್ತಿಯರು

ಏಪ್ರಿಲ್ 13ರಂದು ಪ್ರವಾಸದ ಮೊದಲ ಪಂದ್ಯವನ್ನು ಅರ್ಜೆಂಟೀನಾ 4–2 ರಿಂದ ಗೆದ್ದುಕೊಂಡಿತ್ತು. ಆದರೆ ಭಾರತ ಈ ಪಂದ್ಯದಲ್ಲಿ ಆಕ್ರಮಣಕಾರಿ ಮನೋಭಾವದಿಂದ ಆಡಿತ್ತು. 14ರಂದು ನಡೆದ ಎರಡನೇ ಪಂದ್ಯವನ್ನೂ ಆತಿಥೇಯರು 2–1 ರಿಂದ ಗೆದ್ದುಕೊಂಡಿದ್ದರು.

ಎರಡು ದಿನಗಳ ನಂತರ ನಡೆದ ಮೂರನೇ ಪಂದ್ಯದಲ್ಲಿ ಭಾರತ 2–1 ರಿಂದ ಜಯಿಸಿ ಪ್ರವಾಸದ ಮೊದಲ ಗೆಲುವನ್ನು ಕಂಡಿತ್ತು.

'ಎರಡು ಪಂದ್ಯಗಳನ್ನು ಸೋತ ನಂತರ ಈ ತಂಡ ಪ್ರತಿಕ್ರಿಯಿಸಿದ ರೀತಿ ನಿಜಕ್ಕೂ ಹೆಮ್ಮೆ ಮೂಡಿಸಿದೆ. ಅರ್ಜೆಂಟೀನಾದಂಥ ವಿಶ್ವದರ್ಜೆಯ ತಂಡದ ಎದುರು ಈ ರೀತಿಯ ಪುನರಾಗಮನ ಸುಲಭವಲ್ಲ. ಆದರೆ ನಾವು ಹೋರಾಡಲು ಅಗತ್ಯವಿದ್ದ ಕೆಚ್ಚನ್ನು ಪ್ರದರ್ಶಿಸಿದೆವು' ಎಂದು ನವನೀತ್ ಕೌರ್ ಹೇಳಿದರು.

ಇದೇ 26ರಂದು ಓಟ: ಅಭಿಷೇಕ್ ಪಾಲ್ ಮತ್ತು ಸಂಜೀವಿನಿ ಜಾಧವ್ ಆಕರ್ಷಣೆ

ವಿಶ್ವ ಟೆನ್ ಕೆ ಓಟ: 35 ಸಾವಿರ ಸ್ಪರ್ಧಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ ತಿಂಗಳು ನಡೆಯಲಿರುವ ಟಿಸಿಎಸ್ ವಿಶ್ವ ಟೆನ್ ಕೆ ಬೆಂಗಳೂರು ಓಟದಲ್ಲಿ 35 ಸಾವಿರ ಸ್ಪರ್ಧಿಗಳು ಪಾಲ್ಗೊಳ್ಳಲಿದ್ದಾರೆ.

ಇದೇ 26ರಂದು ನಡೆಯುವ ಈ ಓಟದಲ್ಲಿ ಹಾಲಿ ಚಾಂಪಿಯನ್ ಅಥ್ಲೀಟ್‌ಗಳಾದ ಅಭಿಷೇಕ್ ಪಾಲ್ ಮತ್ತು ಸಂಜೀವಿನಿ ಜಾಧವ್ ಪ್ರಮುಖ ಆಕರ್ಷಣೆಯಾಗಿದ್ದಾರೆ. ಸುಮಾರು ₹ 2 ಕೋಟಿ ಬಹುಮಾನ ಮೊತ್ತದ ಈ ಓಟಕ್ಕೆ ಒಲಿಂಪಿಯನ್ ಹೈಜಂಪ್ ಅಥ್ಲೀಟ್ ಬ್ಲಾಂಕಾ ವ್ಲಾಸಿಚ್ ಅವರು ಪ್ರಚಾರ ರಾಯಭಾರಿಯಾಗಿದ್ದಾರೆ.

ಶನಿವಾರ ನಡೆದ ಪೋಷಾಕು ಅನಾವರಣ ಕಾರ್ಯಕ್ರಮದಲ್ಲಿ ಪ್ರೊಕ್ಯಾಮ್ ಇಂಟರ್‌ನ್ಯಾಷನಲ್ ಜಂಟಿ ವ್ಯವಸ್ಥಾಪಕ ನಿರ್ದೇಶಕ ವಿವೇಕ್ ಸಿಂಗ್, 'ಟಿಸಿಎಸ್ ಟೆನ್ ಕೆ ಓಟವು ವರ್ಷದಿಂದ ವರ್ಷಕ್ಕೆ ಜನಪ್ರಿಯವಾಗುತ್ತಿದೆ. ಈ ಸಲವಂತೂ ಪ್ರವೇಶಗಳು ಆರಂಭವಾಗಿ ಆರು ದಿನಗಳಲ್ಲಿಯೇ ಎಲ್ಲ ವಿಭಾಗಗಳು ಭರ್ತಿಯಾಗಿ ದಾಖಲೆ ನಿರ್ಮಾಣವಾಗಿದೆ' ಎಂದರು.

ಬೆಂಗಳೂರಿನಲ್ಲಿ ನಡೆಯಲಿರುವ ಟಿಸಿಎಸ್ ಟೆನ್ ಕೆ ಓಟದ ಜೆರ್ಸಿಯನ್ನು ಶನಿವಾರ ನಡೆದ ಸಮಾರಂಭದಲ್ಲಿ ಬಿಡುಗಡೆ ಮಾಡಲಾಯಿತು (ಎಡದಿಂದ), ವಿವೇಕ್ ಸಿಂಗ್, ಬಿಲಾತ್ ಥೋಗ್ರಾಮ್, ಬ್ರಿಗೇಡಿಯರ್ ಎಂ.ಆರ್. ಸುಬೋಧ್, ಸುನಿಲ್ ದೇಶಪಾಂಡೆ, ಪ್ರಶಾಂತ್ ಪ್ರಭಾಕರ, ಒಲಿಂಪಿಯನ್ ಹಾಕಿ ಆಟಗಾರ ಜರ್ಮನ್‌ಪ್ರೀತ್ ಸಿಂಗ್, ಸಚಿನ್ ರಾಮನ್, ಸೌರಭ್ ಶರ್ಮಾ ಹಾಜರಿದ್ದರು

ಜೆರ್ಸಿ ಅನಾವರಣ ಮಾಡಿದ ಭಾರತ ಹಾಕಿ ತಂಡದ ಆಟಗಾರ ಜರ್ಮನ್‌ಪ್ರೀತ್ ಸಿಂಗ್, 'ಒಲಿಂಪಿಕ್ಸ್‌ನಲ್ಲಿ ಆಡಿದ್ದು ನನ್ನ ಜೀವನವನ್ನೇ ಬದಲಿಸಿದೆ. ಈ ಹಾದಿಯಲ್ಲಿ ಬಹಳಷ್ಟು ವಿಷಯ ಕಲಿತಿದ್ದೇನೆ' ಎಂದರು.

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1700 (1700)
ಸೋಯಾ (ರಿಫೈನ್ಡ್)	₹1540 (1540)
ಸೂರ್ಯಕಾಂತಿ (ರಿಫೈನ್ಡ್)	₹1675 (1675)
ಪಾಮೋಲಿನ್	₹1440 (1440)

ಮೊಟ್ಟೆ ಧಾರಣೆ (ಎನ್ಇಸಿಸಿ)

ಬೆಂಗಳೂರು	100 ಕ್ಕೆ	₹570
	12 ಕ್ಕೆ	₹78
ಮೈಸೂರು:	100 ಕ್ಕೆ	₹580

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹300-716
ದ್ವಿತಳಿ (ಬಿ.ವಿ)	₹380-793

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹227.50
ಆರ್‌ಎಸ್‌ಎಸ್-5	₹222
ಗುಡ್ ಲಾಟ್	₹200

ಮುದ್ರೆಮನೆ ಕಾಫಿ (50 ಕೆ.ಜಿಗೆ)

ಎಪಿ	₹23000
ಎಸಿ	₹13850
ಆರ್‌ಪಿ	₹18000
ಆರ್‌ಸಿ	₹9650

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1000-1300
ಮಧ್ಯಮ	₹500-800
ಸಣ್ಣ	₹200-500

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹34500-34500
ಹೊನವಾಡ	₹24000-24000
ಸುಳ್ಯ	₹10000-19000

ಚಿನ್ನ: ಪರ್ಯಾಯ ಆಯ್ಕೆಗಳಿಗೂ ಬಲ

ಚಿನ್ನದ ಮೇಲಿನ ಹೂಡಿಕೆ ಕುರಿತಾಗಿ ಮೋತಿಲಾಲ್ ಓಸ್ವಾಲ್‌ನಿಂದ ವರದಿ

ನವದೆಹಲಿ (ಪಿಟಿಐ): ಅಕ್ಷಯ ತೃತೀಯಾ ಸಂದರ್ಭದಲ್ಲಿ ಚಿನ್ನದ ಮೇಲಿನ ಹೂಡಿಕೆಗೆ ಸಾಂಪ್ರದಾಯಿಕ ಭೌತಿಕ ಚಿನ್ನದ ಜೊತೆಯಲ್ಲೇ, ಪರ್ಯಾಯ ಹೂಡಿಕೆ ಆಯ್ಕೆಗಳು ಈ ವರ್ಷದಲ್ಲಿಯೂ ಜನಪ್ರಿಯತೆ ಉಳಿದುಕೊಳ್ಳಲಿವೆ ಎಂದು ತಜ್ಞರು ಹೇಳಿದ್ದಾರೆ.

ಚಿನ್ನವನ್ನು ಖರೀದಿಸಲು ಲಭ್ಯವಿರುವ ಆಧುನಿಕ ಪರ್ಯಾಯ ಮಾರ್ಗಗಳನ್ನು ಹೂಡಿಕೆದಾರರು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ತಜ್ಞರು ಹೇಳಿದ್ದಾರೆ. ಚಿನ್ನದ ಖರೀದಿಗೆ ಅಕ್ಷಯ ತೃತೀಯಾ ಬಹಳ ಪ್ರಶಸ್ತವಾದ ಸಂದರ್ಭ ಎಂಬ ನಂಬಿಕೆ ಹಲವರಲ್ಲಿದೆ.

ಹೂಡಿಕೆದಾರರು ಚಿನ್ನದ ಖರೀದಿಯಲ್ಲಿ ತೊಡಗುವುದು ಕಾಲಕ್ರಮೇಣ ಹೆಚ್ಚಳ ಕಾಣುತ್ತಿದೆ. 'ಚಿನ್ನವನ್ನು ಹೂಡಿಕೆದಾರರು ಖರೀದಿಸುವ ಬಗೆಯಲ್ಲಿ ಬದಲಾವಣೆಯನ್ನು ನಾವು ಕಾಣುತ್ತಿದ್ದೇವೆ. ಅಕ್ಷಯ ತೃತೀಯಾದಂತಹ ಸಂದರ್ಭಗಳಲ್ಲಿ ಭೌತಿಕ ಚಿನ್ನವನ್ನು ಖರೀದಿಸುವುದು ಮುಖ್ಯವಾಗಿ ಇರಲಿದೆ. ಆದರೆ, ಹೆಚ್ಚು ಪಾರದರ್ಶಕವಾದ ಹೂಡಿಕೆ ಆಯ್ಕೆಗಳ ಕಡೆ ಹೂಡಿಕೆದಾರರು ಗಮನ ಹರಿಸುವುದು ಹೆಚ್ಚಾಗುತ್ತಿದೆ ಎಂಬುದು ಸ್ಪಷ್ಟ' ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ಸರಕು ವಿಭಾಗದ ವಿಶ್ಲೇಷಕ ಮಾನವ್ ಮೋದಿ ಹೇಳಿದ್ದಾರೆ.

> **ಹೂಡಿಕೆದಾರರು ಅನುಕೂಲ ಮತ್ತು ನಗದೀಕರಣದ ಅವಕಾಶಕ್ಕೆ ಹೆಚ್ಚು ಗಮನ ನೀಡುತ್ತಿರುವ ಕಾರಣ ಈ ಪ್ರವೃತ್ತಿಯು ಬಲ ಪಡೆದುಕೊಳ್ಳುವ ನಿರೀಕ್ಷೆ ಇದೆ**
> **ಮಾನವ್ ಮೋದಿ,** ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ಸರಕು ವಿಭಾಗದ ವಿಶ್ಲೇಷಕ

ಬೆಂಗಳೂರಿನ ಎಂ.ಜಿ ರಸ್ತೆಯಲ್ಲಿರುವ ಆಭರಣ ಮಳಿಗೆಯೊಂದರಲ್ಲಿ ಶನಿವಾರ ಆಭರಣ ಖರೀದಿಯಲ್ಲಿ ಮಹಿಳೆಯರು ತೊಡಗಿದ್ದರು –ಪ್ರಜಾವಾಣಿ ಚಿತ್ರ:ರಂಜು ಪಿ

2026ರಲ್ಲಿ ಚಿನ್ನ, ಬೆಳ್ಳಿಯ ಮಾರುಕಟ್ಟೆಯಲ್ಲಿ ಅಸ್ಥಿರತೆ ಹೆಚ್ಚಿನ ಮಟ್ಟದಲ್ಲಿ ಕಂಡುಬಂದಿದೆ. ಜಾಗತಿಕ ಮಟ್ಟದಲ್ಲಿನ ಅನಿಶ್ಚಿತತೆಗಳು ಹಾಗೂ ಜಾಗತಿಕ ಆರ್ಥಿಕ ಬೆಳವಣಿಗೆಯು ವೇಗ ಕಳೆದುಕೊಂಡಿದ್ದುದರ ನಡುವೆ ಈ ರೀತಿ ಆಗಿದೆ. ಹೀಗಿದ್ದರೂ, ಚಿನ್ನ ಮತ್ತು ಬೆಳ್ಳಿಯ ಬೆಲೆಯು ವರ್ಷದ ಆರಂಭದಿಂದ ಇದುವರೆಗೆ ಕ್ರಮವಾಗಿ ಶೇ 10ರಷ್ಟು ಹಾಗೂ ಶೇ 5ರಷ್ಟು ಹೆಚ್ಚಳ ಕಂಡಿದೆ ಎಂದು ಮೋತಿಲಾಲ್ ಓಸ್ವಾಲ್ ಸಿದ್ಧಪಡಿಸಿರುವ ವರದಿಯೊಂದು ಹೇಳಿದೆ. 'ಇದು ಚಿನ್ನ, ಬೆಳ್ಳಿಯ ಮೇಲಿನ ಹೂಡಿಕೆಗಳು ಸುರಕ್ಷಿತ ಎಂಬ ಭಾವನೆ ಈಗಲೂ ಇರುವುದನ್ನು ಹೇಳುತ್ತಿದೆ' ಎಂದು ವರದಿ ಉಲ್ಲೇಖಿಸಿದೆ.

ಚಿನ್ನದ ಬೆಲೆ ಹೆಚ್ಚಿರುವುದು ದೇಶದ ಮಾರುಕಟ್ಟೆಯಲ್ಲಿ ಆಭರಣಗಳ ಮೇಲಿನ ಬೇಡಿಕೆಯು ಮಂದವಾಗಿ ಇರುವಂತೆ ಮಾಡಿದೆ ಎಂದು ವರದಿಯಲ್ಲಿ ಹೇಳಲಾಗಿದೆ. ಈಗ ಚಿನ್ನದ ಮೇಲೆ ಹೂಡಿಕೆ ಮಾಡಲು ಹಲವು ಆಯ್ಕೆಗಳು ಇವೆ. ಚಿನ್ನವನ್ನು ಭೌತಿಕ ರೂಪದಲ್ಲಿ ಖರೀದಿಸುವುದು, ಚಿನ್ನದ ಇಟಿಎಫ್‌ಗಳು, ಡಿಜಿಟಲ್ ಚಿನ್ನ, ಡಿರೈವೇಟಿವ್‌ಗಳ ಮೇಲೆ ಹೂಡಿಕೆ ಮಾಡಬಹುದು.

ಚಿನ್ನವು ಭಾರತದ ಕುಟುಂಬಗಳ ಪಾಲಿಗೆ ಈಗಲೂ ನಂಬಿಕಸ್ಥ ಆಸ್ತಿಯಾಗಿ ಉಳಿದಿದೆ, ಜಾಗತಿಕವಾಗಿ ಅನಿಶ್ಚಿತತೆ ಹೆಚ್ಚುತ್ತಿರುವ ಹೊತ್ತಿನಲ್ಲಿ ಸಂಪ್ರದಾಯ ಮತ್ತು ಹಣಕಾಸಿನ ಭದ್ರತೆಯ ನಡುವೆ ಸೇತುವೆ ನಿರ್ಮಿಸುವ ಕೆಲಸ ಮಾಡುತ್ತಿದೆ ಎಂದು ಮೋತಿಲಾಲ್ ಓಸ್ವಾಲ್ ವರದಿಯು ಹೇಳಿದೆ.

ತೊಗರಿ ಖರೀದಿ ಅವಧಿ ವಿಸ್ತರಣೆ

ಬೆಂಗಳೂರು: ಬೆಂಬಲ ಬೆಲೆ ಯೋಜನೆಯಡಿಯಲ್ಲಿ ತೊಗರಿ ಖರೀದಿಸುವ ಅವಧಿಯನ್ನು ಒಂದು ತಿಂಗಳು ವಿಸ್ತರಿಸಲಾಗಿದೆ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದರು.



ಶಿವರಾಜ್ ಸಿಂಗ್ ಚೌಹಾಣ್

'ಕರ್ನಾಟಕದಲ್ಲಿ ತೊಗರಿ ಉತ್ಪಾದನೆ ಹೆಚ್ಚಿನ ಪ್ರಮಾಣದಲ್ಲಿದೆ. ಈಗಾಗಲೇ 98,610 ರೈತರು ನೋಂದಣಿ ಮಾಡಿಕೊಂಡಿದ್ದರೂ 12,834 ರೈತರಷ್ಟೇ ಪ್ರಯೋಜನ ಪಡೆದಿದ್ದಾರೆ. ಉಳಿದ ರೈತರಿಗೆ ಅವಕಾಶ ಕಲ್ಪಿಸುವ ಅಗತ್ಯವಿದೆ. ಮಾರುಕಟ್ಟೆಯಲ್ಲಿ ತೊಗರಿ ಬೆಲೆ ಕನಿಷ್ಠ ಬೆಂಬಲ ಬೆಲೆಯ ಸಮೀಪದಲ್ಲೇ ಇದೆ. ಖರೀದಿ ಅವಧಿ ವಿಸ್ತರಿಸಿದರೆ ಅನುಕೂಲವಾಗುತ್ತದೆ' ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರು ವಿಡಿಯೊ ಕಾನ್ಫರೆನ್ಸ್‌ನಲ್ಲಿ ಮಾಡಿದ ಮನವಿಗೆ ಸ್ಪಂದಿಸಿ ಅವಧಿ ಒಂದು ತಿಂಗಳ ಒಳಗೆ ಅಗತ್ಯವಿರುವ ತೊಗರಿ ಖರೀದಿಸಲು ಸಮ್ಮತಿಸಿದರು.

7.43 ಲಕ್ಷ ಕ್ವಿಂಟಲ್ ಕಡಲೆ ಖರೀದಿ: ಬೆಂಬಲ ಬೆಲೆ ಯೋಜನೆಯಡಿ 7.43 ಲಕ್ಷ ಕ್ವಿಂಟಲ್ ಕಡಲೆ ಖರೀದಿಸಲಾಗಿದೆ. 'ಇನ್ನೂ 58 ಸಾವಿರ ಕ್ವಿಂಟಲ್ ಖರೀದಿಗೆ ಅನುಮತಿ ನೀಡಲಾಗಿದೆ. ಖರೀದಿ ಅವಧಿಯನ್ನು ಒಂದು ತಿಂಗಳು ವಿಸ್ತರಿಸಲಾಗಿದೆ. 59 ಸಾವಿರ ಹೆಕ್ಟೇರ್‌ನಲ್ಲಿ ಸೂರ್ಯಕಾಂತಿ ಬಿತ್ತನೆಯಾಗಿದ್ದು, ಕ್ವಿಂಟಲ್‌ಗೆ ₹7,721 ದರದಲ್ಲಿ 11 ಸಾವಿರ ಟನ್ ಖರೀದಿಸಲು ಅನುಮತಿ ಕೋರಲಾಗಿದೆ ಎಂದು ಚಲುವರಾಯಸ್ವಾಮಿ ಹೇಳಿದರು.

ಮುಂಬೈ ಧಾರಣೆ (ಶೇಂಗಾ) 18-04-2026

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ (ಹೊಸ)	8300-8400
ದಪ್ಪ ಗುಜರಾತ್ (ಹೊಸ)	9400-9500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತರಿಗೆ ಬಿಟ್ಟು)	1710 (1710)
ಒಂದು ವಾರದ ಡೆಲಿವರಿ	1705 (1705)
ಪಾಮ್ ವಾರದ ಡೆಲಿವರಿ	1438 (1438)
ಸೂರ್ಯಕಾಂತಿ ಎಣ್ಣೆ ಕಚ್ಚಾ	1570 (1570)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,52,000 (1,52,500)
ಬೆಳ್ಳಿ ಕೆಜಿಗೆ	2,54,000 (2,56,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸದ್ಯ ಇರುವ ಲೋಕಸಭಾ ಸ್ಥಾನಗಳಿಗೆ ಅನುಗುಣವಾಗಿಯೇ ಮಹಿಳಾ ಮೀಸಲಾತಿ ಜಾರಿಗೊಳಿಸಲು ಕೇಂದ್ರ ಸರ್ಕಾರಕ್ಕೆ ಸಾಧ್ಯವಿಲ್ಲವೇ?

ಇದೆ | ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಅಡಿಕೆ ಧಾರಣೆ

ಕುಮಟಾ		ಸಿದ್ದಾಪುರ		ಶಿರಸಿ	
ಚಾಲಿ	44112-45535	ಬಿಳೆಗೋಟು	27699-36369	ಬೆಟ್ಟೆ	40699-51909
ಪುತ್ತೂರು		ಚಾಲಿ	40611-48099	ಬಿಳೆಗೋಟು	30100-38200
ಕೋಕ	20000-34500	ಕೋಕ	24029-33369	ಚಾಲಿ	44099-49100
ಹೊಸತು	30000-48500	ಕೆಂಪುಗೋಟು	32469-36800	ಕೆಂಪುಗೋಟು	23711-41199
ಹಳತು	50000-55500	ರಾಶಿ	49499-53529	ರಾಶಿ	50909-53899
		ತಟ್ಟಿಬೆಟ್ಟೆ	37029-51219		

ಫ್ರಾನ್ಸ್ ಸೈನಿಕ ಸಾವು

ಪ್ಯಾರಿಸ್ (ಎಪಿ): ದಕ್ಷಿಣ ಲೆಬನಾನ್‌ನಲ್ಲಿ ವಿಶ್ವಸಂಸ್ಥೆಯ ಶಾಂತಿಪಾಲಕ ಪಡೆಯ ಮೇಲೆ ನಡೆದ ಗುಂಡಿನ ದಾಳಿಯಲ್ಲಿ ಫ್ರಾನ್ಸ್‌ನ ಒಬ್ಬ ಸೈನಿಕ ಸಾವಿಗೀಡಾಗಿದ್ದು, ಇತರ ಮೂವರು ಗಾಯಗೊಂಡಿದ್ದಾರೆ ಎಂದು ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್ ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು 'ಈ ದಾಳಿಯು [illegible] ಮೇಲಿದೆ ಎಂಬುದನ್ನು ಎಲ್ಲವೂ ಸೂಚಿಸುತ್ತದೆ. ದಾಳಿಗೆ ಕಾರಣರಾದವರನ್ನು ಲೆಬನಾನ್‌ನ ಅಧಿಕಾರಿಗಳು ತಕ್ಷಣವೇ ಬಂಧಿಸಬೇಕು ಎಂದು ಫ್ರಾನ್ಸ್ ಒತ್ತಾಯಿಸುತ್ತದೆ' ಎಂದು ಹೇಳಿದ್ದಾರೆ.

₹12,980 ಕೋಟಿ ಹಣ ಒದಗಿಸಿದ ಕೇಂದ್ರ ಸರ್ಕಾರ

ಹಡಗುಗಳಿಗೆ ವಿಮೆ: ಸರ್ಕಾರದಿಂದ ನಿಧಿ

ನವದೆಹಲಿ (ಪಿಟಿಐ): 'ಭಾರತ ಸಮುದ್ರ ವಿಮೆ ನಿಧಿ' ಹೆಸರಿನ ಸಂಚಿತ ನಿಧಿಯೊಂದನ್ನು ಆರಂಭಿಸುವ ಪ್ರಸ್ತಾವಕ್ಕೆ ಕೇಂದ್ರ ಸಚಿವ ಸಂಪುಟವು ಶನಿವಾರ ಒಪ್ಪಿಗೆ ನೀಡಿದೆ. ಈ ನಿಧಿಗೆ ಸರ್ಕಾರದ ಕಡೆಯಿಂದ ₹12,980 ಕೋಟಿ ಹಣವನ್ನು ಖಾತರಿಯಾಗಿ ಒದಗಿಸಲಾಗುತ್ತದೆ.

ಸಮುದ್ರ ಮಾರ್ಗಗಳಲ್ಲಿ ಸಾಗುವ ವರಿಗೆ ವಿಮಾ ಸೌಲಭ್ಯವು ನಿರಂತರವಾಗಿ ಇರುವಂತೆ ನೋಡಿಕೊಳ್ಳಲು ಈ ಕ್ರಮವನ್ನು ಕೇಂದ್ರ ಸರ್ಕಾರ ಕೈಗೊಂಡಿದೆ.

ದೇಶಿ ವಿಮಾ ಸಂಚಿತ ನಿಧಿಯು ಜಾಗತಿಕ ಮಟ್ಟದಲ್ಲಿನ ಅನಿಶ್ಚಿತತೆಗಳು, ಅಸ್ಥಿರತೆಗಳಿಂದ ವಿಮಾ ಸೌಲಭ್ಯ ವಿಚಾರದಲ್ಲಿ ಎದುರಾಗುವ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತದೆ. ಭಾರತದ ಹಡಗುಗಳು ವಿದೇಶಿ ವಿಮೆಗಳ ಮೇಲೆ ಅವಲಂಬಿತವಾಗುವ ಸಂದರ್ಭಗಳನ್ನು ಕಡಿಮೆ ಮಾಡುತ್ತದೆ ಎಂದು ಸರ್ಕಾರದ ಪ್ರಕಟಣೆ ತಿಳಿಸಿದೆ.

'ಈ ವಿಮಾ ಸಂಚಿತ ನಿಧಿಯು ಸಮುದ್ರ ಮಾರ್ಗಗಳಿಗೆ ಸಂಬಂಧಿಸಿದ ಎಲ್ಲ ಬಗೆಯ ಅಪಾಯಗಳಿಗೆ ವಿಮಾ ರಕ್ಷೆಯನ್ನು ಒದಗಿಸುತ್ತದೆ. ಇದು ಯಾವುದೇ ದೇಶದಿಂದ ಭಾರತದ ಬಂದರಿಗೆ ಬರುವ ಹಡಗುಗಳಿಗೆ ಹಾಗೂ ಭಾರತದ ಬಂದರುಗಳಿಂದ ಯಾವುದೇ ದೇಶಕ್ಕೆ ತೆರಳುವ ಹಡಗುಗಳಿಗೆ ವಿಮಾ ಸೌಲಭ್ಯ ನೀಡುತ್ತದೆ. ಅಸ್ಥಿರತೆ ಎದುರಿಸುತ್ತಿರುವ ಸಮುದ್ರ ಮಾರ್ಗಗಳಲ್ಲಿ ಸಾಗುವ ಹಡಗುಗಳಿಗೂ ವಿಮೆ ಅನ್ವಯವಾಗುತ್ತದೆ' ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ಜಾಗತಿಕ ಮಟ್ಟದಲ್ಲಿ ಸಂಘರ್ಷಗಳು ಮತ್ತು ಅಸ್ಥಿರತೆ ಹೆಚ್ಚಾಗಿರುವ ಕಾರಣದಿಂದಾಗಿ ಸಮುದ್ರ ಮಾರ್ಗದ ಮೂಲಕ ನಡೆಯುವ ವ್ಯಾಪಾರ ವಹಿವಾಟುಗಳಿಗೆ ಧಕ್ಕೆ ಆಗಿದೆ. ಸರಕುಗಳು ಮತ್ತು ಅವುಗಳನ್ನು ಸಾಗಿಸುವ ಹಡಗುಗಳಿಗೆ ಅಪಾಯ ಹೆಚ್ಚಾಗಿದೆ. ಇದರಿಂದಾಗಿ ವಿಮಾ ವೆಚ್ಚದಲ್ಲಿ ಏರಿಕೆ ಆಗಿದೆ, ವಿಮೆಯ ನಿರಂತರ ಲಭ್ಯತೆಯು ಅನಿಶ್ಚಿತವಾಗಿದೆ.

ಈ ಸಂಚಿತ ನಿಧಿಯ ಸದಸ್ಯ ಕಂಪನಿಗಳಿಂದ ವಿಮಾ ಪಾಲಿಸಿಯನ್ನು ನೀಡಲಾಗುತ್ತದೆ. ಈ ಸಂಚಿತ ನಿಧಿಗಾಗಿ ಒಂದು ಆಡಳಿತ ಮಂಡಳಿಯನ್ನು ರಚಿಸಲಾಗುತ್ತದೆ.

ವಿಮೆ ವಿಚಾರದಲ್ಲಿ ಸ್ವಾವಲಂಬನೆ ಬಲಪಡಿಸುವುದು ಮತ್ತು ಜಾಗತಿಕವಾಗಿ ಎದುರಾಗುವ ನಿರ್ಬಂಧಗಳಿಂದ ಉಂಟಾಗುವ ಸಮಸ್ಯೆಯನ್ನು ನಿವಾರಿಸಿಕೊಳ್ಳಲು ಸರ್ಕಾರದ ಖಾತರಿಯ ವಿಮಾ ಸೌಲಭ್ಯಕ್ಕೆ ಚಾಲನೆ ನೀಡಲು ಮುಂದಡಿ ಇರಿಸಲಾಗಿದೆ.

ರಷ್ಯಾದಿಂದ ತೈಲ ಖರೀದಿ: ಅವಧಿ ವಿಸ್ತರಣೆ

ವಾಷಿಂಗ್ಟನ್ (ಎಎಫ್‌ಪಿ): ರಷ್ಯಾದಿಂದ ತೈಲ ಖರೀದಿಸಲು ಇತರ ದೇಶಗಳಿಗೆ ನೀಡಲಾಗಿದ್ದ ಅನುಮತಿಯನ್ನು ಅಮೆರಿಕವು ಮೇ 16ರ ವರೆಗೆ ವಿಸ್ತರಿಸಿದೆ. ಏರುತ್ತಿರುವ ಇಂಧನ ದರವನ್ನು ನಿಯಂತ್ರಿಸುವ ದೃಷ್ಟಿಯಿಂದ ಈ ನಿರ್ಧಾರ ತೆಗೆದುಕೊಂಡಿದೆ. ಈ ಹಿಂದೆ ನೀಡಲಾಗಿದ್ದ ವಿನಾಯಿತಿ ಅವಧಿ ಏಪ್ರಿಲ್ 11ಕ್ಕೆ ಮುಕ್ತಾಯಗೊಂಡಿತ್ತು.

'ಅನುಮತಿಯನ್ನು ವಿಸ್ತರಿಸುವುದಿಲ್ಲ' ಎಂದು ಎರಡು ದಿನಗಳ ಹಿಂದಷ್ಟೇ ಹಣಕಾಸು ಸಚಿವ ಸ್ಕಾಟ್ ಬೆಸೆಂಟ್ ಹೇಳಿದ್ದರು. ಶುಕ್ರವಾರದ (ಏಪ್ರಿಲ್ 17) ಒಳಗೆ ಹಡಗುಗಳಿಗೆ ತುಂಬಿಸಿರುವ ತೈಲ ಉತ್ಪನ್ನಗಳಿಗೆ ಈ ವಿನಾಯಿತಿ ಅನ್ವಯಿಸಲಿದೆ.

ಐಸಿಐಸಿಐ ಬ್ಯಾಂಕ್ ಲಾಭ ಹೆಚ್ಚಳ

ಮುಂಬೈ (ಪಿಟಿಐ): ಐಸಿಐಸಿಐ ಬ್ಯಾಂಕ್‌ನ ಮಾರ್ಚ್ ತ್ರೈಮಾಸಿಕದ ಲಾಭವು ಶೇ 9.28ರಷ್ಟು ಹೆಚ್ಚಳ ಕಂಡಿದ್ದು ₹14,755 ಕೋಟಿಗೆ ತಲುಪಿದೆ. ಸಂಭಾವ್ಯ ನಷ್ಟವನ್ನು ಸರಿದೂಗಿಸಲು ತೆಗೆದಿರಿಸುವ ಮೊತ್ತವು ಸರಿಸುಮಾರು ಶೇ 90ರಷ್ಟು ಇಳಿಕೆ ಆಗಿದ್ದುದು ಕೂಡ ಲಾಭದ ಹೆಚ್ಚಳಕ್ಕೆ ಒಂದು ಕಾರಣವಾಗಿದೆ.

ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸಿನ ವರ್ಷದಲ್ಲಿ ಬ್ಯಾಂಕ್‌ನ ತೆರಿಗೆ ನಂತರದ ಲಾಭವು ಶೇ 6.2ರಷ್ಟು ಹೆಚ್ಚಾಗಿ ₹50,147 ಕೋಟಿಗೆ ತಲುಪಿದೆ.

ಬ್ಯಾಂಕ್‌ನ ಕಾರ್ಯಾಚರಣೆ ವೆಚ್ಚವು ಶೇ 12ರಷ್ಟು ಹೆಚ್ಚಾಗಿ ₹12,089 ಕೋಟಿಗೆ ತಲುಪಿದೆ. ಮಾರ್ಚ್ ತ್ರೈಮಾಸಿಕದಲ್ಲಿ ಒಟ್ಟು ಎನ್‌ಪಿಎ ಪ್ರಮಾಣವು ಶೇ 1.40ಕ್ಕೆ ಇಳಿಕೆ ಕಂಡಿದೆ. ಇದು ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ 1.53ರಷ್ಟು ಹಾಗೂ ಹಿಂದಿನ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಶೇ 1.67ರಷ್ಟು ಇತ್ತು.

ದೇಶದ ಕಾರ್ಪೊರೇಟ್ ಕಂಪನಿಗಳಿಗೆ ಐಸಿಐಸಿಐ ಬ್ಯಾಂಕ್ ನೀಡಿರುವ ಸಾಲದ ಪ್ರಮಾಣವು ಶೇ 9ರಷ್ಟು ಹೆಚ್ಚಾಗಿದೆ.

ಬ್ಯಾಂಕ್‌ನ ಆಡಳಿತ ಮಂಡಳಿಯು ಷೇರುದಾರರಿಗೆ ₹12 ಅಂತಿಮ ಲಾಭಾಂಶ ಘೋಷಿಸಿದೆ.

ಎಚ್‌ಡಿಎಫ್‌ಸಿಗೆ ₹20,350 ಕೋಟಿ ಲಾಭ

ಮುಂಬೈ (ಪಿಟಿಐ): ದೇಶದ ಅತಿದೊಡ್ಡ ಖಾಸಗಿ ಬ್ಯಾಂಕ್ ಆಗಿರುವ ಎಚ್‌ಡಿಎಫ್‌ಸಿ ಬ್ಯಾಂಕ್, ಮಾರ್ಚ್ ತ್ರೈಮಾಸಿಕದಲ್ಲಿ ₹20,350 ಕೋಟಿ ನಿವ್ವಳ ಲಾಭ ಗಳಿಸಿದೆ.

ಕಳೆದ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಬ್ಯಾಂಕ್ ₹18,834 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 8ರಷ್ಟು ಏರಿಕೆಯಾಗಿದೆ ಎಂದು ಬ್ಯಾಂಕ್ ಶನಿವಾರ ತಿಳಿಸಿದೆ.

ಬ್ಯಾಂಕ್‌ನ ಒಟ್ಟು ವರಮಾನವು ₹89,809 ಕೋಟಿಯಾಗಿದೆ. ವೆಚ್ಚವು ₹62,951 ಕೋಟಿಯಿಂದ ₹62,006 ಕೋಟಿಗೆ ಇಳಿದಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣ ಶೇ 1.24ರಿಂದ ಶೇ 1.15ಕ್ಕೆ ಇಳಿದಿದೆ. ಸಂಭಾವ್ಯ ನಷ್ಟ ಸರಿದೂಗಿಸಲು ತೆಗೆದಿರಿಸುವ ಮೊತ್ತವು ₹3,193 ಕೋಟಿಯಿಂದ ₹2,610 ಕೋಟಿಗೆ ಇಳಿದಿದೆ ಎಂದು ತಿಳಿಸಿದೆ.

ಪ್ರತಿ ಷೇರಿಗೆ ₹13 ಅಂತಿಮ ಲಾಭಾಂಶ ನೀಡಲು ಬ್ಯಾಂಕ್‌ನ ಆಡಳಿತ ಮಂಡಳಿಯು ಶಿಫಾರಸು ಮಾಡಿದೆ.

ಯೆಸ್ ಬ್ಯಾಂಕ್ ಲಾಭ ಶೇ 45 ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರ್ಚ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಖಾಸಗಿ ವಲಯದ ಯೆಸ್ ಬ್ಯಾಂಕ್ ₹1,068 ಕೋಟಿ ಲಾಭ ಗಳಿಸಿದೆ.

2024–25ರ ಮಾರ್ಚ್ ತ್ರೈಮಾಸಿಕದಲ್ಲಿ ಬ್ಯಾಂಕ್ ₹738 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 44.7ರಷ್ಟು ಹೆಚ್ಚಳವಾಗಿದೆ ಎಂದು ಬ್ಯಾಂಕ್ ಶನಿವಾರ ತಿಳಿಸಿದೆ.

ಬ್ಯಾಂಕ್‌ನ ನಿವ್ವಳ ಬಡ್ಡಿ ವರಮಾನದಲ್ಲಿ ಶೇ 16ರಷ್ಟು ಏರಿಕೆಯಾಗಿದ್ದು, ₹2,638 ಕೋಟಿಯಷ್ಟಾಗಿದೆ. ಬಡ್ಡಿಯೇತರ ವರಮಾನವು ಶೇ 6ರಷ್ಟು ಹೆಚ್ಚಳವಾಗಿದ್ದು, ₹1,730 ಕೋಟಿಯಾಗಿದೆ. ವಸೂಲಾಗದ ಸಾಲದ ಸರಾಸರಿ ಪ್ರಮಾಣ ಶೇ 1.3ರಷ್ಟು ಆಗಿದೆ ಎಂದು ತಿಳಿಸಿದೆ.

'ಗಡಿ ವಿಸ್ತರಿಸಿಕೊಳ್ಳಲು ಇಸ್ರೇಲ್ ಹುನ್ನಾರ'

ಅಂತಾಲ್ಯ (ಟರ್ಕಿ) (ಎಎಫ್‌ಪಿ): 'ತನ್ನ ದೇಶದ ಭದ್ರತೆಗೆ ತೊಂದರೆ ಇದೆ ಎಂದು ಇಸ್ರೇಲ್ ಅಂತರರಾಷ್ಟ್ರೀಯ ಮಟ್ಟದಲ್ಲಿ ಭ್ರಮೆ ಸೃಷ್ಟಿಸುತ್ತಿದೆ. ತನ್ನ ಭೂ ಪ್ರದೇಶವನ್ನು ವಿಸ್ತರಿಸಿಕೊಳ್ಳುವುದಕ್ಕಾಗಿ ಇಂಥ ಭ್ರಮೆ ಬಿತ್ತುತ್ತಿದೆ' ಎಂದು ಟರ್ಕಿ ಶನಿವಾರ ದೂರಿದೆ.

'ಇಸ್ರೇಲ್ ತನ್ನ ಭದ್ರತೆ ಕುರಿತು ಯೋಚಿಸುತ್ತಿಲ್ಲ. ಅದಕ್ಕೆ ಭೂ ಪ್ರದೇಶವನ್ನು ವಿಸ್ತಾರ ಮಾಡಿಕೊಳ್ಳ ಬೇಕು. ಇದಕ್ಕೆ ಭದ್ರತೆ ಹೆಸರು ಹೇಳಿಕೊಂಡು ತನ್ನ ಸುತ್ತಮುತ್ತಲ ದೇಶಗಳೊಂದಿಗೆ ಯುದ್ಧ ಸಾರುತ್ತಿದೆ' ಎಂದು ಟರ್ಕಿಯ ವಿದೇಶಾಂಗ ಸಚಿವ ಹಕನ್ ಫಿದಾನ್ ಅವರು 'ಅಂತಾಲ್ಯ ರಾಜತಾಂತ್ರಿಕ ಫೋರಂ' ಕಾರ್ಯಕ್ರಮದಲ್ಲಿ ಹೇಳಿದರು.

'ಗಾಜಾ ಸೇರಿ ಪ್ಯಾಲೆಸ್ಟೀನಿಯನ್ನರ ಭೂ ಪ್ರದೇಶ, ವೆಸ್ಟ್ ಬ್ಯಾಂಕ್ ಮತ್ತು ಪೂರ್ವ ಜೆರುಸಲೇಂ ಬಳಿಕ ಇದೀಗ ಲೆಬನಾನ್ ಮತ್ತು ಸಿರಿಯಾವನ್ನು ಕಬಳಿಸಿ ತನ್ನ ದೇಶದ ಗಡಿಯನ್ನು ವಿಸ್ತರಿಸಿಕೊಳ್ಳುವುದು ಇಸ್ರೇಲ್ ಹುನ್ನಾರ. ಸ್ವಯಂ ರಕ್ಷಣೆ ಹೆಸರಿನಲ್ಲಿ ಇಸ್ರೇಲ್ ನಡೆಸುತ್ತಿರುವ ಈ ಯುದ್ಧವನ್ನು ನಿಲ್ಲಿಸಬೇಕು' ಎಂದು ಒತ್ತಾಯಿಸಿದರು.

ಭಾರತದ ನೌಕೆ ಮೇಲೆ ದಾಳಿ

ಒಂದನೇ ಪುಟದಿಂದ...

'ಹೊರ್ಮುಜ್ ಮೇಲಿನ ಪೂರ್ಣ ನಿಯಂತ್ರಣ ಮತ್ತೆ ಇರಾನ್ ಕೈಗೆ ಮರಳಿದೆ. ಸದ್ಯ ಈ ಮಾರ್ಗವು ಸಶಸ್ತ್ರ ಪಡೆಗಳ ಕಟ್ಟುನಿಟ್ಟಿನ ನಿಗಾ ಮತ್ತು ನಿಯಂತ್ರಣದಲ್ಲಿದೆ' ಎಂದು ಐಆರ್‌ಜಿಸಿ ಹೇಳಿದೆ.

ಹೊರ್ಮುಜ್ ಮುಕ್ತಗೊಳಿಸಿದರೂ, 'ಯುರೇನಿಯಂ ಸಮೃದ್ಧೀಕರಣ ಸೇರಿದಂತೆ ಹಲವು ವಿಷಯಗಳಲ್ಲಿ ಅಮೆರಿಕದೊಂದಿಗೆ ಇರಾನ್ ಒಪ್ಪಂದ ಮಾಡಿಕೊಳ್ಳುವವರೆಗೆ ಬಂದರಿನ ಮೇಲಿನ ದಿಗ್ಬಂಧನ ಮುಂದುವರಿಯಲಿದೆ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶನಿವಾರ ಬೆಳಿಗ್ಗೆ ಎಚ್ಚರಿಕೆ ನೀಡಿದ್ದರು. ಇದರ ಬೆನ್ನಲ್ಲೇ ಹೊರ್ಮುಜ್ ಜಲಸಂಧಿ ಪೂರ್ಣ ಮುಚ್ಚಿರುವುದಾಗಿ ಇರಾನ್ ಘೋಷಿಸಿದೆ.

ಮತ್ತೆ ಅನಿಶ್ಚಿತತೆ: ಅಮೆರಿಕ–ಇರಾನ್ ನಡುವಿನ ತಾತ್ಕಾಲಿಕ ಕದನ ವಿರಾಮವು ಏ.22ರಂದು ಕೊನೆಗೊಳ್ಳಲಿದೆ. ಇದರೊಳಗೆ ಎರಡನೆಯ ಸುತ್ತಿನ ಕದನ ವಿರಾಮ ಮಾತುಕತೆ ಆಯೋಜಿಸಲು ಮಧ್ಯಸ್ಥಿಕೆ ವಹಿಸಿರುವ ಪಾಕಿಸ್ತಾನ ಸಿದ್ಧತೆ ನಡೆಸಿತ್ತು. ಇಸ್ರೇಲ್-ಲೆಬನಾನ್ ಜತೆಗಿನ ಕದನ ವಿರಾಮ ಏ.27ರಂದು ಕೊನೆಗೊಳ್ಳಲಿದ್ದು, ಅದುವರೆಗೆ ಹೊರ್ಮುಜ್ ಮುಕ್ತಗೊಳಿಸಲು ಇರಾನ್ ಕೂಡ ಒಪ್ಪಿತ್ತು. ಆದರೆ, ಟ್ರಂಪ್ ಕದನ ವಿರಾಮ ಉಲ್ಲಂಘಿಸಿದ್ದಾರೆ ಎಂದು ಇರಾನ್ ಆರೋಪಿಸಿದೆ.

ಶುಕ್ರವಾರ ಹೊರ್ಮುಜ್ ಜಲಸಂಧಿ ಮುಕ್ತಗೊಂಡ ಬೆನ್ನಲ್ಲೇ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಇಳಿಕೆ ಆಗಿತ್ತು. ಮಾರುಕಟ್ಟೆಯಲ್ಲಿ ಚೇತರಿಕೆ ಕಂಡುಬಂದಿತ್ತು. ಆದರೆ, ಶನಿವಾರದಿಂದ ಮತ್ತೆ ಅನಿಶ್ಚಿತತೆ ಕಾಣಿಸಿಕೊಂಡಿದೆ.

ಸೋಲುಣಿಸಲು ಸಿದ್ಧ: ಮೊಜ್ತಬಾ

ಒಂದನೇ ಪುಟದಿಂದ...

ಹೊರ್ಮುಜ್ ಜಲಸಂಧಿಯನ್ನು ಮತ್ತೆ ಮುಚ್ಚುತ್ತಿರುವುದಾಗಿ ಇರಾನ್ ಘೋಷಿಸಿದ ಸ್ವಲ್ಪ ಹೊತ್ತಿನಲ್ಲೇ ಮೊಜ್ತಬಾ ಅವರ ಹೇಳಿಕೆಯೂ ಹೊರಬಿದ್ದಿದೆ.

ಇರಾನ್ ಸೇನೆ ಸ್ಥಾಪನೆಯ ವಾರ್ಷಿಕೋತ್ಸವ ಆಚರಣೆ ಭಾಗವಾಗಿ ಸಂದೇಶ ನೀಡಿರುವ ಮೊಜ್ತಬಾ ಖಮೇನಿ, 'ಪಶ್ಚಿಮ ಏಷ್ಯಾ ಸಂಘರ್ಷದ ಸಂದರ್ಭದಲ್ಲಿ, ಅಮೆರಿಕ ಮತ್ತು ಇಸ್ರೇಲ್ ಪಡೆಗಳನ್ನು ಡ್ರೋನ್ ದಾಳಿಯ ಮೂಲಕ ದಿಟ್ಟತನದಿಂದ ಎದುರಿಸಿದ ಐಆರ್‌ಜಿಸಿಗೆ ಅಭಿನಂದನೆ ಸಲ್ಲಿಸಿದ್ದಾರೆ.

'ಯುರೇನಿಯಂ ಹಸ್ತಾಂತರಿಸುವುದಿಲ್ಲ'

ಕೈರೊ (ಎಪಿ): 'ಸಮೃದ್ಧೀಕರಿಸಿದ ಯುರೇನಿಯಂಅನ್ನು ಅಮೆರಿಕಕ್ಕೆ ಹಸ್ತಾಂತರಿಸುವುದಿಲ್ಲ' ಎಂದು ಇರಾನ್ ಸ್ಪಷ್ಟವಾಗಿ ಹೇಳಿದೆ.

ಅಮೆರಿಕ–ಇರಾನ್ ನಡುವೆ ನಡೆಯಲಿರುವ ಎರಡನೆಯ ಸುತ್ತಿನ ಮಾತುಕತೆಯಲ್ಲಿ 'ಸಮೃದ್ಧೀಕರಿಸಿದ ಯುರೇನಿಯಂ' ವಾಪಸ್ ತರುವ ವಿಚಾರ ಪ್ರಮುಖವಾಗಿ ಚರ್ಚೆಗೆ ಬರಲಿದೆ ಎಂದು ಟ್ರಂಪ್ ಹೇಳಿದ್ದರು.

ಇದನ್ನು ತಳ್ಳಿ ಹಾಕಿರುವ ಇರಾನ್ ಸಹ ವಿದೇಶಾಂಗ ಸಚಿವ ಸಯೀದ್ ಖತೀಬ್ಜಾದೆ ಅವರು, 'ಅಮೆರಿಕ ತನ್ನ ಹಠಮಾರಿ ಧೋರಣೆ ತ್ಯಜಿಸಿಲ್ಲ, ಹೀಗಾಗಿ ಅವರೊಂದಿಗೆ ಮುಂದಿನ ಸುತ್ತಿನ ಮುಖಾಮುಖಿ ಮಾತುಕತೆ ಸಾಧ್ಯವಿಲ್ಲ' ಎಂದು ಹೇಳಿದ್ದಾರೆ.

ಇರಾನ್ 7 ವಾರಗಳ ಬಳಿಕ ಶನಿವಾರ ತನ್ನ ವಾಯುಪ್ರದೇಶವನ್ನು ಭಾಗಶಃ ತೆರೆದಿದೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

WANTED
A reputed Granite Factory in Udupi is hiring for Granite Cutting Machine Operator
Diploma Candidates in (Mechanical/Electrical/Electronics), PUC, or any Degree (Pass/Fail)
- 6 months training with 16,500/- monthly salary.
- After training: 20,000/- monthly salary.
- ESI Dispensary benefits provided.
- Accommodation will be provided for bachelors only.
- Interview travel expenses reimbursed.
- Selection on First-come, first-served hiring.
- Send your Bio-data to: impex1002@gmail.com

Call: 7338687921 7411061669

ಪ್ರಾಂಶುಪಾಲರು ಬೇಕಾಗಿದ್ದಾರೆ. ಚಿಕ್ಕಮಗಳೂರಿನಲ್ಲಿರುವ ಒಂದು ಪ್ರತಿಷ್ಠಿತ ಸಿಬಿಎಸ್‌ಇ ಶಾಲೆಗೆ ಪ್ರಾಂಶುಪಾಲರು ಬೇಕಾಗಿದ್ದು, ಕಡ್ಡಾಯವಾಗಿ ಸ್ನಾತಕೋತ್ತರ ಪದವಿ ಜೊತೆಗೆ ಬಿ.ಇಡಿ ವಿದ್ಯಾರ್ಹತೆಯುಳ್ಳ ಮತ್ತು ಕನಿಷ್ಠ 5 ವರ್ಷಗಳ ಬೋಧನಾ ಅನುಭವ ಹಾಗೂ 2 ವರ್ಷಗಳ ಪ್ರಾಂಶುಪಾಲ ಹುದ್ದೆ ನಿರ್ವಹಿಸಿದ ಅನುಭವ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಕನ್ನಡ ಭಾಷಾ ಜ್ಞಾನ ಹೊಂದಿರುವುದು ಅವಶ್ಯಕ. ಆಸಕ್ತಿಯುಳ್ಳ ಅಭ್ಯರ್ಥಿಗಳು, ಇದೇ ಏಪ್ರಿಲ್ 30, 2026ರೊಳಗೆ recruitment0609@gmail.com ಇಮೇಲ್ ಗೆ ತಮ್ಮ ರೆಸ್ಯೂಮ್ ಕಳುಹಿಸಬಹುದು.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Marketing & Sales

Wanted Commission-based sales executives to sell AI courses to schools, colleges, institutes Whatsapp 9108030542

ಸೌಂದರ್ಯ-ಆರೋಗ್ಯ

Health Clinic

ಮಂಡಿ, ಬೆನ್ನು, ಕತ್ತು ನೋವು, ಕೀಲು ನೋವು, ಲಕ್ವ, ವಿಶೇಷವಾದ ಹೈಡ್ರೋ, ಥೆರಪಿಯಿಂದ ಉಚಿತ ಚಿಕಿತ್ಸೆ. ಎಲ್ಲಾ ಊರುಗಳಲ್ಲಿ ಪ್ರಾರಂಭಿಸಿರಿ ತಿಂಗಳಿಗೆ 8 ರಿಂದ 10 ಲಕ್ಷದವರೆಗೂ ಸಂಪಾದಿಸಬಹುದು. ಸಂಪರ್ಕಿಸಿ: 9036316959

ರಿಯಲ್ ಎಸ್ಟೇಟ್ ಸೆಲ್ಲಿಂಗ್

Agricultural Land Converted

General

ಚಿತ್ರದುರ್ಗದಿಂದ 12KMದೂರದಲ್ಲಿರುವ ಬಗ್ಗಲರಂಗವ್ವನಹಳ್ಳಿ ಗ್ರಾಮದಲ್ಲಿ 2ಬೋರ್‌ವೆಲ್‌ಉಳ್ಳ 8ಎಕರೆ ಮತ್ತು 6ಎಕರೆ ಕೃಷಿಭೂಮಿ ಮಾರಾಟಕ್ಕಿವೆ. ಭದ್ರಾಮೇಲ್ದಂಡೆ ನೀರಾವರಿಕಾಮಗಾರಿ ಪ್ರಗತಿಯಲ್ಲಿದೆ. 22ಲಕ್ಷ/ಎಕರೆ. Mob: 9844231878

Kengeri

LUXURY APARTMENT Booking Started Call Kirti 9341218992 By Landmark, Next To Kingeri Metro Station 4 Tower Of 69-798999 Floor, Payment In 36 Months 3 Bhk- 2,250 To 2,601 Sft 3.6 cr To 4.16 cr+

House

Yelahanka

ಸೈಟ್ ಮಾರಾಟಕ್ಕಿದೆ 45x35 ಪೂರ್ವ/ ಉತ್ತರ ಮೂಲೆ ನಿವೇಶನ, ನಿಸರ್ಗ ಬಡಾವಣೆ, ಅನಂತಪುರ, ಯಲಹಂಕ, ಬೆಂಗಳೂರು. ಸಂಪರ್ಕಿಸಿ: 9241385139.

ವೈಯಕ್ತಿಕ

Lost

ಕಳೆದು ಹೋಗಿದೆ
ಯಲಹಂಕ ತಾಲ್ಲೂಕು ಬ್ಯಾಲಕೆರೆ ಗ್ರಾಮದ ಸರ್ವೆ ನಂಬರ್ 101ಸೈಟ್ ನಂಬರ್ 78 ರ ಆಶ್ರಯ ಯೋಜನೆಯಲ್ಲಿ ಮಂಜೂರಾದ ಹಕ್ಕು ಪತ್ರ ಮತ್ತು ದೀಡ್ ಮನೆ ಖಾಲಿ ಮಾಡುವಾಗ ಕಳೆದು ಹೋಗಿರುತ್ತದೆ. ಹಕ್ಕು ಪತ್ರವು ಸಿಕ್ಕಿದಲ್ಲಿ ರಂಗನಾಥ- (9972010566)

ಪ್ರವಾಸ

Travel

ಜುಲೈ 10 ರಿಂದ 12 ದಿನ ಅಮರನಾಥ, ವೈಷ್ಣೋದೇವಿ, ಶ್ರೀನಗರ, ಅಮೃತಸರ ಯಾತ್ರಾ ಪರ್ಮಿಟ್‌ಗಾಗಿ ಶೀಘ್ರ ಸಂಪರ್ಕಿಸಿ: 8105522123/ 9480253807 ಶ್ರೀ ಗಂಗಾ ಟೂರಿಸ್ಟ್

★ಶ್ರೇಯಸ್ ಟೂರ್ಸ್★ 01.05.2026 06ದಿನಗಳು ಸಂಪೂರ್ಣ ಅಹೋಬಲಂ ನವನಾರಸಿಂಹ,ಶ್ರೀಶೈಲಂ ಮಹಾನಂದಿ,ಯಾಗಂಟಿ ಬೇಲಂಗುಹೆ,ಗಂಡಿಕೋಟ ಮಂತ್ರಾಲಯ.06.05.2026 12ದಿನಗಳು ಅಖಂಡ ಕೇರಳ ರಾಜ್ಯ ಕನ್ಯಾಕುಮಾರಿ,ರಾಮೇಶ್ವರಂ ಮಧುರೈ.23.05.2026 10ದಿನಗಳು ಅಖಂಡ ಆಂಧ್ರ ತೆಲಂಗಾಣ ರಾಜ್ಯ ಪ್ರವಾಸ. 16.05.2026 07ದಿನಗಳು ಕಾಶಿ,ಅಯೋಧ್ಯೆ,ಪ್ರಯಾಗ್ ಗಯಾ.20.05.2026 12ದಿನಗಳು ಆದಿಕೈಲಾಸ.ಓಂಪರ್ವತ ನೈನಿತಾಲ್,ಇತರೆ. 8073824856 9206979202 9606032154

ಭಾರತಪರಂಪರ ದರ್ಶನ: 23.4.2026 5ದಿನ ಮಂತ್ರಾಲಯ,ಶ್ರೀಶೈಲಂ ನವನಾರಸಿಂಹ ಅಹೋಬಿಲಂ. 18.5.2026 13ದಿನ ಚಾರ್ ಧಾಮ್. 20.6.2026 ಮುಕ್ತಿನಾಥ್,ಕಾಶಿ,ದೇವಘರ್ ಸಹಿತ ನೇಪಾಳಯಾತ್ರೆ. 2.7.2026 ಅಮರನಾಥ್ ವೈಷ್ಣೋದೇವಿ. ಪ್ರಕಾಶ್ ಹೆಬ್ಬಾರ್ : 9448792891.

ನಗರಸಭಾ ಕಾರ್ಯಾಲಯ, ಉಡುಪಿ

ಕ್ರ.ಸಂ.:ಉನಸ:ಬಿ1:ಸಿಆರ್:2026-27 ದಿನಾಂಕ: 16-04-2026

ಟೆಂಡರು ಪ್ರಕಟಣೆ

2026-27ನೇ ಸಾಲಿನ ನಗರಸಭಾ ನಿಧಿ ಮತ್ತು 2025-26ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿಯ ಪರಿಶಿಷ್ಟ ಜಾತಿಯ ಉಪಯೋಜನೆಯ (ಎಸ್.ಸಿ.ಎಸ್.ಪಿ.) ಅನುದಾನದಡಿ ಈ ಕೆಳಗಿನ ಕಾಮಗಾರಿಯನ್ನು ಕೈಗೊಳ್ಳಲು ಅರ್ಹಗುತ್ತಿಗೆದಾರರಿಂದ Stndard Bid Document K.W.-1 & K.W-2ರ ನಿಯಮ ನಿಬಂಧನೆಗೊಳಪಟ್ಟು (ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವಂತೆ) e-procurement ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ https://kppp.karnataka.gov.in ನಿಂದ ಪಡೆದುಕೊಳ್ಳಬಹುದು.

1) ತುಂಬಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 30-04-2026 ಸಂಜೆ 5.00 ಗಂಟೆಗೆ
2) ಸ್ವೀಕರಿಸಲಾದ ಟೆಂಡರುಗಳನ್ನು ತೆರೆಯುವ ದಿನಾಂಕ: 02-05-2026 ಪೂರ್ವಾಹ್ನ 11.00 ಗಂಟೆಗೆ

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ	ಇ.ಎಂ.ಡಿ.	ಕಾಮಗಾರಿ ಪೂರ್ತಿಗೊಳಿಸುವ ಅವಧಿ
2026-27ನೇ ಸಾಲಿನ ನಗರಸಭಾ ನಿಧಿ				
1.	ಪ್ಯಾಕೇಜ್-4 DMA/2025-26/EL/WORK_INDENT55622	4710000.00	94200.00	6 ತಿಂಗಳು
2.	ಪ್ಯಾಕೇಜ್-5 DMA/2026-27/EL/WORK_INDENT57420	2000000.00	50000.00	3 ತಿಂಗಳು
2025-26ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿಯ ಪರಿಶಿಷ್ಟ ಜಾತಿಯ ಉಪಯೋಜನೆಯ (ಎಸ್.ಸಿ.ಎಸ್.ಪಿ.) ಅನುದಾನದಡಿ				
3.	DMA/2026-27/OW/WORK_INDENT57425	400000.00	10000.00	2 ತಿಂಗಳು
4.	DMA/2026-27/RD/WORK_INDENT57427	320000.00	8000.00	2 ತಿಂಗಳು

ಸಹಿ/- ಪೌರಾಯುಕ್ತರು, ಉಡುಪಿ ನಗರಸಭೆ

ಬೆಂಗಳೂರು ಸಹಕಾರ ಹಾಲು ಒಕ್ಕೂಟ ನಿಯಮಿತ (ಬೆಂಗಳೂರು ಡೇರಿ)
ಡಿ.ಆರ್.ಕಾಲೇಜು ಅಂಚೆ, ಡಾ: ಎಂ.ಹೆಚ್.ಮರೀಗೌಡ ರಸ್ತೆ, ಬೆಂಗಳೂರು-560029,
ಇ-ಮೇಲ್: bamulpurchase@gmail.com, ವೆಬ್‌ಸೈಟ್: www.bamulnandini.coop, ದೂರವಾಣಿ: 080-26096214 &282

ಟೆಂಡರ್ ಉಲ್ಲೇಖ ಸಂಖ್ಯೆ: ಬಮೂಲ್/ಖರೀದಿ/09/1844/ಟಿ-350/2026-27 ದಿನಾಂಕ: 18.04.2026

ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್

ಬೆಂಗಳೂರು ಸಹಕಾರ ಹಾಲು ಒಕ್ಕೂಟ ನಿ.(ಬಮೂಲ್), ಬೆಂಗಳೂರು ರವರು ಆಸಕ್ತಿಯುಳ್ಳ ಅರ್ಹ ತಯಾರಕರು /ಸರಬರಾಜುದಾರರಿಂದ ಈ ಕೆಳಕಂಡ ಸಾಮಗ್ರಿಗಳ ಸರಬರಾಜಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್‌ಕರೆಯಲಾಗಿದೆ.

ಕ್ರ ಸಂ	ಸಾಮಗ್ರಿಯ ವಿವರ	ಪರಿಮಾಣ	ಅಂದಾಜು (ಲಕ್ಷಗಳಲ್ಲಿ)	ಟೆಂಡರ್ ಸಂಖ್ಯೆ
1	Design, Supply, Installation, Testing and commissioning of **Plastic Injection Moulding Plant** to Bengaluru Dairy (Main Dairy).	01 Lot (Lumpsum)	3200.00	KMF/2026-27/ IND2173

1	ಇ-ಟೆಂಡರ್ ದಾಖಲೆಗಳು ಲಭಿಸುವ ದಿನಾಂಕ ಮತ್ತು ಸಮಯ	18.04.2026 ರಿಂದ 18.05.2026 ಅಪರಾಹ್ನ 02.00 ಗಂಟೆವರೆಗೆ
2	ಪ್ರೀ-ಬಿಡ್ ಮೀಟಿಂಗ್ ಮತ್ತು ಟೆಂಡರ್ ಬಗ್ಗೆ ಸ್ಪಷ್ಟನೆ ದಿನಾಂಕ ಮತ್ತು ಸಮಯ	30.04.2026 ಬೆಳಿಗ್ಗೆ 11.00 ಗಂಟೆಗೆ ವರೆಗೆ
3	ಟೆಂಡರ್ ಸಲ್ಲಿಸುವ/ನಮೂದಿಸುವ ಕೊನೆಯ ದಿನಾಂಕ ಮತ್ತು ಸಮಯ	18.05.2026 ಅಪರಾಹ್ನ 02.00 ಗಂಟೆವರೆಗೆ
4	ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	19.05.2026 ಅಪರಾಹ್ನ 02.35 ಗಂಟೆಗೆ
5	ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	21.05.2026 ಬೆಳಿಗ್ಗೆ 11.30 ಗಂಟೆಗೆ
6	ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ತೆರೆಯುವ ಸ್ಥಳ	ಬೆಂಗಳೂರು ಸಹಕಾರ ಹಾಲು ಒಕ್ಕೂಟ (ನಿ.) (ಬೆಂಗಳೂರು ಡೇರಿ) ಮಂಡಲಿ ಸಭಾಂಗಣ

ಟೆಂಡರ್‌ದಾರರು ಮೇಲೆ ತಿಳಿಸಿರುವ ಸೇವೆಗಳಿಗೆ ಪ್ರತ್ಯೇಕ ಟೆಂಡರ್ ಸಲ್ಲಿಸಬೇಕು. ಗುತ್ತಿಗೆ ನೀಡಿಕೆಗೆ ಅರ್ಹರಾಗಲು ಹೊಂದಿರ ಬೇಕಾದ ಅರ್ಹತಾ ಅಗತ್ಯತೆಯನ್ನು ವಿಭಾಗ VIIರಲ್ಲಿ ತಿಳಿಸಲಾಗಿದೆ.
ಇ.ಎಂ.ಡಿ. ಬಾಬ್ತಿನ ಹಣವು ಟೆಂಡರ್ ಅವಧಿಯ 45 ದಿನಗಳ ವಾಯ್ದೆ ಮೀರಿದ್ದು, ಅಂದರೆ ಒಟ್ಟು 135 ದಿನಗಳ ಸಿಂಧುತ್ವದ ಅವಧಿಗೆ ಅನ್ವಯವಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಶುಲ್ಕ ಇ-ಪಾವತಿಯ ವಿಧಾನಗಳು ಮತ್ತು ಟೆಂಡರ್ ದಾಖಲೆಗಳ ವಿವರವನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ವೀಕ್ಷಿಸಬಹುದು. ಆಸಕ್ತಿಯುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಯನ್ನು ಮೇಲ್ಕಾಣಿಸಿದ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ, ಸಹಾಯವಾಣಿ ಸಂ.8046010000/8068948777.

ಸಹಿ/- ವ್ಯವಸ್ಥಾಪಕ ನಿರ್ದೇಶಕರು
ಟೆಂಡರ್‌ಆಹ್ವಾನಿಸುವ ಪ್ರಾಧಿಕಾರ(ಬಮೂಲ್)

ಬೆಂಗಳೂರು ಪೂರ್ವ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಎಂಪಿ&ಸಿಎಸ್, ಕೆ.ಆರ್. ಪುರಂ, ಬೆಂಪೂನಪಾ, ಹಳೇ ಮದ್ರಾಸ್ ರಸ್ತೆ, ಬೆಂಗಳೂರು-560036

ನಂ.: ಬೆಂಪೂನಪಾ/ಪಿಆರ್/ಕಾಪಾಅ(ಎಂಪಿ&ಸಿಎಸ್)/10/2025-26 ದಿನಾಂಕ: 18.04.2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ಕೆಪಿಪಿ.ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಎಂಪಿ&ಸಿಎಸ್), ಬೆಂಪೂನಪಾ, ಬೆಂಗಳೂರು-36 ಇವರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಥವಾ ಜಿಬಿಎ ಅಥವಾ ಬೆಂಪೂನಪಾ ಅಥವಾ ತತ್ಸಮಾನ ನೋಂದಾಯಿತ ಕೆಪಿಡಬ್ಲ್ಯುಡಿ / ಸಿಪಿಡಬ್ಲ್ಯುಡಿ / ಬಿಡಬ್ಲ್ಯುಎಸ್‌ಎಸ್‌ಬಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಟೆಂಡರ್‌ದಾರರಿಂದ ಈ ಕೆಳಗಿನ ಸೇವೆಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ಬೆಂಗಳೂರು ಪೂರ್ವ ನಗರ ಪಾಲಿಕೆ, ಮಹದೇವಪುರ ವಲಯ-1ಕ್ಕೆ ಘನತ್ಯಾಜ್ಯ ನಿರೀಕ್ಷಕರ ಮಾನವ ಸಂಪನ್ಮೂಲ ಒದಗಿಸುವುದು. ಕರೆ-2. ಅಂದಾಜು ಮೊತ್ತ (ಲಕ್ಷಗಳಲ್ಲಿ): 210.00, ಇಎಂಡಿ (ರೂ.ಗಳಲ್ಲಿ): 3,15,000/-.
2	ಬೆಂಗಳೂರು ಪೂರ್ವ ನಗರ ಪಾಲಿಕೆ, ಮಹದೇವಪುರ ವಲಯ-2ಕ್ಕೆ ಘನತ್ಯಾಜ್ಯ ನಿರೀಕ್ಷಕರ ಮಾನವ ಸಂಪನ್ಮೂಲ ಒದಗಿಸುವುದು. ಅಂದಾಜು ಮೊತ್ತ (ಲಕ್ಷಗಳಲ್ಲಿ): 250.00, ಇಎಂಡಿ (ರೂ.ಗಳಲ್ಲಿ): 3,75,000/-.
3	ಬೆಂಗಳೂರು ಪೂರ್ವ ನಗರ ಪಾಲಿಕೆಯ ಕೆ.ಆರ್. ಪುರಂ ವಲಯ-02ಕ್ಕೆ ಕಂಪ್ಯೂಟರ್ ಆಪರೇಟರ್‌ಗಳನ್ನು ಒದಗಿಸುವುದು. ಕರೆ-2. ಅಂದಾಜು ಮೊತ್ತ (ಲಕ್ಷಗಳಲ್ಲಿ): 130.00, ಇಎಂಡಿ (ರೂ.ಗಳಲ್ಲಿ): 1,95,000/-.
4	ಬೆಂಗಳೂರು ಪೂರ್ವ ನಗರ ಪಾಲಿಕೆಯ ಮಹದೇವಪುರ ವಲಯ-01ಕ್ಕೆ ಕಂಪ್ಯೂಟರ್ ಆಪರೇಟರ್‌ಗಳನ್ನು ಒದಗಿಸುವುದು. ಕರೆ-2. ಅಂದಾಜು ಮೊತ್ತ (ಲಕ್ಷಗಳಲ್ಲಿ): 206.00, ಇಎಂಡಿ (ರೂ.ಗಳಲ್ಲಿ): 3,09,000/-.
5	ಕೆ.ಆರ್.ಪುರ, ವಾರ್ಡ್ ನಂ. 91ರ ಕೋಟೆ ದೇವಸ್ಥಾನ ಸಮೀಪದ ಟೈಲರಿಂಗ್ ಸೆಂಟರ್ ಕಟ್ಟಡದ ದುರಸ್ತಿ. (ವರ್ಗ: ಇತರೆ) ಕರೆ-2. ಅಂದಾಜು ಮೊತ್ತ (ಲಕ್ಷಗಳಲ್ಲಿ): 2.00, ಇಎಂಡಿ (ರೂ.ಗಳಲ್ಲಿ): 5,000/-.
6	ಕಲ್ಕೆರೆ, ವಾರ್ಡ್ ನಂ. 88ರ ಕಲ್ಕೆರೆ ರುದ್ರಭೂಮಿಯ ರುದ್ರಭೂಮಿ ಸುಧಾರಣೆ. (ವರ್ಗ: ಇತರೆ) ಕರೆ-2. ಅಂದಾಜು ಮೊತ್ತ (ಲಕ್ಷಗಳಲ್ಲಿ): 10.00, ಇಎಂಡಿ (ರೂ.ಗಳಲ್ಲಿ): 25,000/-.
7	ದೇವಸಂದ್ರ, ವಾರ್ಡ್ ನಂ. 93ರ ಕೆ.ಆರ್.ಪುರಂನ ಬಿಬಿಎಂಪಿ ಕಛೇರಿಯಲ್ಲಿ ಮಳೆನೀರು ಕೊಯ್ಲು. (ವರ್ಗ: ಇತರೆ) ಕರೆ-2. ಅಂದಾಜು ಮೊತ್ತ (ಲಕ್ಷಗಳಲ್ಲಿ): 5.00, ಇಎಂಡಿ (ರೂ.ಗಳಲ್ಲಿ): 12,500/-.
8	ಹೊರಮಾವು, ವಾರ್ಡ್ ನಂ. 87ರ ಹೊರಮಾವು ವಾರ್ಡ್‌ನ ಬಿಬಿಎಂಪಿ ಕಛೇರಿ ಮತ್ತು ಬಿಬಿಎಂಪಿ ಆಸ್ಪತ್ರೆಯಲ್ಲಿ ಮಳೆನೀರು ಕೊಯ್ಲು. (ವರ್ಗ: ಪ.ಜಾ.) ಕರೆ-2. ಅಂದಾಜು ಮೊತ್ತ (ಲಕ್ಷಗಳಲ್ಲಿ): 10.00, ಇಎಂಡಿ (ರೂ.ಗಳಲ್ಲಿ): 12,500/-.
9	ರಾಮಮೂರ್ತಿ ನಗರ, ವಾರ್ಡ್ ನಂ. 90ರ ಹಳೆ ಮಂಜುನಾಥ ಲೇಔಟ್ ಬಿಬಿಎಂಪಿ ಆಸ್ಪತ್ರೆಯಲ್ಲಿ ಮಳೆನೀರು ಕೊಯ್ಲು. (ವರ್ಗ: ಇತರೆ) ಕರೆ-2. ಅಂದಾಜು ಮೊತ್ತ (ಲಕ್ಷಗಳಲ್ಲಿ): 3.00, ಇಎಂಡಿ (ರೂ.ಗಳಲ್ಲಿ): 7,500/-.

ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಮೂಲಕ 22.04.2026ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವಭಾವಿ ಸಭೆಯು 27.04.2026ರ ಮಧ್ಯಾಹ್ನ 3:00 ಗಂಟೆಗೆ ಕಾರ್ಯಪಾಲಕ ಅಭಿಯಂತರರು (ಎಂಪಿ&ಸಿಎಸ್)ರವರ ಕಛೇರಿ, ಕೆ.ಆರ್. ಪುರಂ, ಬೆಂಗಳೂರು-560036ರಲ್ಲಿ ನಡೆಯಲಿದೆ. (3) ಟೆಂಡರ್‌ಗಳನ್ನು ಆನ್‌ಲೈನ್ ಕೆಪಿಪಿ ಪೋರ್ಟಲ್‌ನಲ್ಲಿ 30.04.2026ರ ಸಂಜೆ 4:00 ಗಂಟೆಗೆ ಮುಂಚಿತವಾಗಿ ಸಲ್ಲಿಸತಕ್ಕದ್ದು ಹಾಗೂ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗದರ್ಶನದಂತೆ ತೆರೆಯಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ವೆಬ್‌ಸೈಟ್ https://kppp.karnataka.gov.in ಮೂಲಕ ಕಾರ್ಯಪಾಲಕ ಅಭಿಯಂತರರು (ಎಂಪಿ&ಸಿಎಸ್)ರವರ ಕಛೇರಿಯಲ್ಲಿ 02.05.2026ರ ಬೆಳಿಗ್ಗೆ 11:30 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://kppp.karnataka.gov.in ನಿಂದ ಪಡೆದುಕೊಳ್ಳಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು(ಎಂಪಿ&ಸಿಎಸ್), ಬೆಂಪೂನಪಾ

ಅಬ್ಬ...ಮೈಮನ ತಣ್ಣಗಾಯಿತು...

ಪ್ರಾಣಿ-ಪಕ್ಷಿಗಳ ದಾಹ ತಣಿಸುತ್ತಾ...

ಇಗೋ ಈ ಪಾತ್ರೆಯಲ್ಲಿ ನೀರಿದೆ ಎನ್ನುತ್ತಿದೆ ಕೋಗಿಲೆ...

ಬೇಸಿಗೆಯ ಕಡು ಬಿಸಿಲಿನಲ್ಲಿ ನೀರಿನ ಕೊರತೆಯಿಂದ ಬಳಲುತ್ತಿರುವ ಪ್ರಾಣಿ–ಪಕ್ಷಿಗಳಿಗೆ ವಿವಿಧ ಕಡೆಗಳಲ್ಲಿ ಮಾನವೀಯ ಸ್ಪಂದನೆಗಳು ಸಿಗುತ್ತಿವೆ. 'ಹಕ್ಕಿಗೊಂದು ಗುಟುಕು' ಎಂಬ ಅಭಿಯಾನದಿಂದ ಹಿಡಿದು ಕಾಡಿನೊಳಗೆ ಜಲತೊಟ್ಟಿಗಳ ನಿರ್ಮಾಣದವರೆಗೆ–ಸಣ್ಣ ಪ್ರಯತ್ನಗಳು ದೊಡ್ಡ ಬದಲಾವಣೆಗೆ ದಾರಿ ತೋರುತ್ತಿವೆ. ಅಂತಹ ಕೆಲವು ಯಶಸ್ವಿ ಮಾದರಿಗಳು ಇಲ್ಲಿವೆ.

ಹಕ್ಕಿಗೊಂದು ಗುಟುಕು: ಮಾನವೀಯ ಸ್ಪಂದನೆ

• ಕೆ.ಎಸ್.ಗಿರೀಶ

ಬೇಸಿಗೆಯಲ್ಲಿ ಕೆರೆ–ತೊರೆಗಳು ಒಣಗುತ್ತಾ, ಪ್ರಾಣಿ–ಪಕ್ಷಿಗಳು ನೀರಿಗಾಗಿ ಹಾತೊರೆಯುವ ಸ್ಥಿತಿ ಉಂಟಾಗುತ್ತದೆ. ಇಂತಹ ಸಮಯದಲ್ಲಿ ಮಾನವೀಯ ಮನಸ್ಸುಗಳು ಮುಂದೆ ಬಂದು ಜೀವಿಗಳಿಗೆ ಜಲದಾನ ಮಾಡುವ ಮೂಲಕ ಪ್ರಕೃತಿಯೊಂದಿಗಿನ ನಂಟನ್ನು ಪುನಃ ನೆನಪಿಸುತ್ತಿವೆ.

ಸೋಮವಾರಪೇಟೆ ತಾಲ್ಲೂಕಿನ 'ನಾವು ಪ್ರತಿಷ್ಠಾನ' ಸಂಘಟನೆಯು ಈ ಕೆಲಸವನ್ನು ಸಾಮೂಹಿಕ ನೆಲೆಯಲ್ಲಿ ವಿಸ್ತರಿಸಲು ಹೊರಟು ಯಶಸ್ವಿಯಾಗಿದೆ. 2021ರಿಂದ ಈ ಸಂಘಟನೆ ನಿರಂತರವಾಗಿ ನಡೆಸುವ 'ಹಕ್ಕಿಗೊಂದು ಗುಟುಕು' ಅಭಿಯಾನ ಪಕ್ಷಿಗಳ ದಾಹ ತಣಿಸುತ್ತಿದೆ.

ಪ್ರತಿ ವರ್ಷ ಮಾರ್ಚ್ 20ರಂದು ನಡೆಯುವ ವಿಶ್ವ ಗುಬ್ಬಚ್ಚಿ ದಿನದಿಂದ ಹಿಡಿದು ಏಪ್ರಿಲ್ 22ರ ವಿಶ್ವ ಭೂದಿನದವರೆಗೆ ಕೊಡಗಿನಾದ್ಯಂತ 'ಹಕ್ಕಿಗೊಂದು ಗುಟುಕು' ಅಭಿಯಾನ ನಡೆಸುತ್ತಿದೆ. ವಾಟ್ಸ್‌ಆ್ಯಪ್ ನಂಬರ್ ನೀಡಿ ಜನರು ತಮ್ಮ ಮನೆಯ ಮುಂದೆ ಪಕ್ಷಿಗಳಿಗಾಗಿ ನೀರು ಇಡುವ ಚಿತ್ರ, ವಿಡಿಯೊ ಕಳಿಸಿದರೆ ಉತ್ತಮವಾದುದನ್ನು ಆಯ್ಕೆ ಮಾಡಿ ಬಹುಮಾನ ನೀಡಲಾಗುತ್ತದೆ. ಈ ಬಗೆಯ ಸ್ಪರ್ಧೆಯಿಂದ ಹೆಚ್ಚು ಹೆಚ್ಚು ಜನರು ಪಕ್ಷಿಗಳಿಗೆ ನೀರನ್ನಿಟ್ಟು ಅವುಗಳ ಚಿತ್ರಗಳನ್ನು ಕಳುಹಿಸುತ್ತಿದ್ದಾರೆ. ಏನಿಲ್ಲ ಎಂದರೂ, ಪ್ರತಿ ವರ್ಷ ಸುಮಾರು 500ಕ್ಕೂ ಅಧಿಕ ಮಂದಿ ಚಿತ್ರ, ವಿಡಿಯೊ ಕಳುಹಿಸುತ್ತಿದ್ದಾರೆ.

'ವಿನೂತನ ಬಗೆಯಲ್ಲಿ ನೀರನ್ನಿಡುವುದು, ಪರಿಸರ ಸ್ನೇಹಿ ವಸ್ತುಗಳನ್ನು ಬಳಸಿ ನೀರು, ಆಹಾರ ಇಡುವುದು ಸೇರಿದಂತೆ ಅನೇಕ ಮಾನದಂಡಗಳ ಆಧಾರದ ಮೇಲೆ ಪಕ್ಷಿತಜ್ಞರು ಬಹುಮಾನ ಯಾರಿಗೆ ನೀಡಬೇಕು ಎಂದು ನಿರ್ಧರಿಸುತ್ತಾರೆ' ಎಂದು 'ನಾವು ಪ್ರತಿಷ್ಠಾನ' ಸಂಸ್ಥೆಯ ಸ್ಥಾಪಕ ಗೌತಮ್ ಕಿರಗಂದೂರು ಹೇಳುತ್ತಾರೆ.

'ಇತ್ತೀಚಿನ ವರ್ಷಗಳಲ್ಲಿ ಬೇಸಿಗೆಯಲ್ಲಿ ಕೆರೆ, ಕಟ್ಟೆಗಳು ಒಣಗಿ ಹೋಗುತ್ತಿವೆ. ಜಲ ತೊರೆಗಳು ಬತ್ತಿ ಹೋಗುತ್ತಿವೆ. ಇದರಿಂದ ಕುಡಿಯುವ ನೀರಿಗಾಗಿ ಪಕ್ಷಿಗಳು ಬಹುದೂರದವರೆಗೂ ಹಾರಬೇಕಾಗಿದೆ. ಗುಟುಕು ನೀರೂ ಸಿಗದೆ ಪರದಾಡುತ್ತಿವೆ. ಇದನ್ನು ಗಮನಿಸಿ ಇಂತಹದ್ದೊಂದು ಅಭಿಯಾನ ಆರಂಭಿಸಲಾಯಿತು' ಎಂದು ಅವರು ತಿಳಿಸುತ್ತಾರೆ.

ಸದ್ಯ, ಈ ಸಂಸ್ಥೆಯ ಕಾರ್ಯಕಾರಿ ನಿರ್ದೇಶಕರಾಗಿ ಸುಮನ್ ಮ್ಯಾಥ್ಯೂ ಕಾರ್ಯನಿರ್ವಹಿಸುತ್ತಿದ್ದಾರೆ.

ಪೇಟೆಯಲ್ಲಿ ಸೇವೆ...

ವಿರಾಜಪೇಟೆಯ ಪಕ್ಷಿವೀಕ್ಷಕ ಎಸ್.ವಿ.ನರಸಿಂಹನ್ ನಾಲ್ಕು ವರ್ಷಗಳಿಂದ ತಮ್ಮ ಮನೆಯ ಕಾಂಪೌಂಡ್‌ನ ಹೊರಗೆ ಮತ್ತು ಒಳಗೆ ಪ್ರಾಣಿ ಮತ್ತು ಪಕ್ಷಿಗಳಿಗಾಗಿ ನೀರು ಇಡುವ ವ್ಯವಸ್ಥೆ ಮಾಡುತ್ತಿದ್ದಾರೆ.

ಮನೆಯ ಹೊರಗೆ ಜಾನುವಾರುಗಳಿಗಾಗಿ ತೊಟ್ಟಿ ಕಟ್ಟಿಸಿದ್ದಾರೆ. ನಿತ್ಯವೂ ಇದಕ್ಕೆ ನೀರು ತುಂಬಿಸುತ್ತಾರೆ. ಬೇಸಿಗೆಯಲ್ಲಿ ಕೆಲವೊಮ್ಮೆ ದಿನಕ್ಕೆ ಎರಡು ಬಾರಿ ನೀರು ತುಂಬಿಸಬೇಕಾಗುತ್ತದೆ. ಬೀದಿಯಲ್ಲಿ ಅಲೆಯುವ ಜಾನುವಾರುಗಳು ತೃಪ್ತಿ ಆಗುವಷ್ಟು ನೀರು ಕುಡಿಯುತ್ತವೆ. ಜೊತೆಗೆ ಹಕ್ಕಿಗಳಿಗಾಗಿ ಬಟ್ಟಲಿನಲ್ಲಿ ನೀರು ಇಡುತ್ತಿದ್ದಾರೆ. ಇಲ್ಲಿಗೆ ನಿತ್ಯ ಬರುವ ವಿವಿಧ ಪಕ್ಷಿಗಳು ನೀರಿನಲ್ಲಿ ಮಿಂದು, ನೀರು ಕುಡಿದು ಬಿಸಿಲಿನ ಬೇಗೆಯನ್ನು ತಣಿಸಿಕೊಳ್ಳುತ್ತಿವೆ. ❖

ತೆಂಗಿನ ಚಿಪ್ಪುಗಳಲ್ಲಿ ಪಕ್ಷಿಗಳಿಗಾಗಿ ನೀರು...

ತೋಟದಲ್ಲಿ ಪಕ್ಷಿಗಳ ಕಲರವ

• ಕೆ.ರಾಘವೇಂದ್ರ

ಶಿವಮೊಗ್ಗ ಜಿಲ್ಲೆ ಸಾಗರ ಪಟ್ಟಣದ ಗಾಂಧಿನಗರ ಬಡಾವಣೆಯ ಕೆ.ಎಚ್.ಬಿ. ಕಾಲೋನಿಯಲ್ಲಿರುವ ಹವ್ಯಾಸಿ ಛಾಯಾಗ್ರಾಹಕ ಜಿ.ಆರ್.ಪಂಡಿತ್ ಅವರ ಮನೆಗೆ ಕಾಲಿಟ್ಟರೆ ವಿವಿಧ ಪಕ್ಷಿಗಳ ಚಿಲಿಪಿಲಿ, ಕಲರವದ ಸದ್ದು ಕೇಳುತ್ತದೆ.

ಬೇಸಿಗೆಯ ಸುಡು ಬಿಸಿಲಿನಲ್ಲಿ ಪಕ್ಷಿಗಳು ನೀರಿನ ಕೊರತೆಯಿಂದ ಬಳಲಬಾರದು ಎಂಬ ಪರಿಸರ ಕಾಳಜಿಯಿಂದ ಪಂಡಿತ್ ಅವರು ತಮ್ಮ ಮನೆಯ ತೋಟದಲ್ಲೆ ಪಕ್ಷಿಗಳಿಗೆ ನೀರಿನ ವ್ಯವಸ್ಥೆ ಮಾಡಿದ್ದಾರೆ.

ತೋಟದ ಸುತ್ತಲೂ ಪಿವಿಸಿ ಪೈಪ್‌ಗಳನ್ನು ಅಳವಡಿಸಿ ಅವುಗಳ ಮೇಲೆ ವಿವಿಧ ಗಾತ್ರದ ಮಣ್ಣಿನ ಪಾತ್ರೆ, ಹೂಜಿಗಳನ್ನು ಇಟ್ಟು ಅವುಗಳಲ್ಲಿ ಪಕ್ಷಿಗಳಿಗಾಗಿಯೇ ನೀರನ್ನು ತುಂಬಿಸಿಟ್ಟಿದ್ದಾರೆ. ಮಾವಿನಮರದ ಹೆರೆಯ ಮೇಲೆ ಭತ್ತದ ಕಾಳು ತುಂಬಿದ ಗಾಜಿನಪೆಟ್ಟಿಗೆಯನ್ನು ನೇತು ಹಾಕಿದ್ದಾರೆ.

ಮೈನಾ, ಬುಲ್ ಬುಲ್, ರಾಬಿನ್, ಗಿಳಿ, ಕೋಗಿಲೆ, ಮುನಿಯ, ಉಲಿಯಕ್ಕಿ, ನವರಂಗಿ, ಹಳದಿ ಚೇಕಡಿ, ಬಾರ್ಬೆಟ್, ಗುಬ್ಬಿ ಮೊದಲಾದ ಪಕ್ಷಿಗಳ ಜೊತೆಗೆ ಮುಂಗುಸಿ, ಅಳಿಲುಗಳು ಕೂಡ ಪಂಡಿತ್ ಅವರ ಕೈತೋಟದಲ್ಲಿ ಬೆಳಗಿನಿಂದ ಸಂಜೆಯವರೆಗೂ ವಿಹರಿಸುತ್ತಿವೆ.

'ಪ್ರಕೃತಿದತ್ತವಾದ ಸಹಜವಾದ ವಾತಾವರಣ ವಿದ್ದರೆ ಮಾತ್ರ ಪಕ್ಷಿಗಳು ಬರುತ್ತವೆ. ಈ ಕಾರಣಕ್ಕೆ ತೋಟದ ನೆಲದಲ್ಲಿ ಹುಲ್ಲು, ಕಳೆ ಗಿಡಗಳನ್ನು ಬೆಳೆಸಿದ್ದೇನೆ. ಕೆಲವು ಪಕ್ಷಿಗಳು ಚಿಕ್ಕ ಗಾತ್ರದ ಪಾತ್ರೆ, ಹೂಜಿಯನ್ನು ಬಯಸಿದರೆ, ಮತ್ತೆ ಕೆಲವು ಪಕ್ಷಿಗಳು ದೊಡ್ಡ ಗಾತ್ರವನ್ನು ಬಯಸುತ್ತವೆ. ಹೀಗಾಗಿ ವಿವಿಧ ಗಾತ್ರದ ಪಾತ್ರೆ, ಹೂಜಿ ಬಳಸಲಾಗಿದೆ' ಎನ್ನುತ್ತಾರೆ ಪಂಡಿತ್.

'ಪ್ರತಿದಿನ 3ರಿಂದ 4 ಬಾರಿ ಪಾತ್ರೆ, ಹೂಜಿಯಲ್ಲಿನ ನೀರನ್ನು ಬದಲಿಸಿ ಸ್ವಚ್ಛಗೊಳಿಸಬೇಕು. ಕೆಲವರು ನೀರಿಟ್ಟರೂ ಪಕ್ಷಿ ಬರುವುದಿಲ್ಲ ಎಂದು ದೂರುತ್ತಾರೆ. ಆದರೆ ನೀರು ಇಟ್ಟ ತಕ್ಷಣ ಪಕ್ಷಿಗಳು ಬರುವುದಿಲ್ಲ. ಅವುಗಳಲ್ಲಿ ಭದ್ರತೆಯ ಬಗ್ಗೆ ವಿಶ್ವಾಸ ಮೂಡಬೇಕು. ಕನಿಷ್ಠ ಎರಡು ತಿಂಗಳ ನಂತರವಷ್ಟೆ ಪಕ್ಷಿಗಳನ್ನು ನಿರೀಕ್ಷಿಸಬಹುದು' ಎಂದು ಅವರು ವಿವರಿಸುತ್ತಾರೆ.

ತಮ್ಮ ಕೈತೋಟಕ್ಕೆ ಬರುವ ವಿವಿಧ ಜಾತಿಯ ಪಕ್ಷಿಗಳ ಫೋಟೊ ಕ್ಲಿಕ್ಕಿಸುವುದು, ಅವುಗಳ ಚಲನವಲನದ ವಿಡಿಯೊ ದಾಖಲಿಸುವ ಆಸಕ್ತಿಯನ್ನು ಪಂಡಿತ್ ಹೊಂದಿದ್ದಾರೆ. ಈ ಮೂಲಕ ಬೇಸಿಗೆಯಲ್ಲಿ ಪಕ್ಷಿಗಳ ನೀರಿನ ದಾಹ ತಣಿಸುವ ಕಾಯಕದಲ್ಲಿ ಅವರು ನಿರತರಾಗಿದ್ದಾರೆ.

ಇದು ಕೇವಲ ಒಂದು ಮನೆಯ ಕಥೆಯಲ್ಲ; ಇದು ನಗರ ಜೀವನದಲ್ಲಿ ಪ್ರಕೃತಿಯನ್ನು ಮರಳಿ ಆಹ್ವಾನಿಸುವ ಪ್ರಯತ್ನ. ಕಾಂಕ್ರೀಟ್ ಕಟ್ಟಡಗಳ ನಡುವೆ ಪಕ್ಷಿಗಳಿಗೆ ಆಶ್ರಯ ಕಲ್ಪಿಸುವುದು, ಅವುಗಳಿಗೆ ಆಹಾರ ನೀರು ಒದಗಿಸುವುದು–ಇವೆಲ್ಲವು ಪರಿಸರದ ಸಮತೋಲನ ಉಳಿಸುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳು.

ಪಂಡಿತ್ ಅವರ ಅನುಭವವು ಒಂದು ಸ್ಪಷ್ಟ ಸಂದೇಶ ನೀಡುತ್ತದೆ: ಪಕ್ಷಿಗಳನ್ನು ಆಕರ್ಷಿಸಲು ಕೇವಲ ನೀರು ಇಡುವುದಷ್ಟೇ ಸಾಕಾಗುವುದಿಲ್ಲ. ಸಹಜ ವಾತಾವರಣ, ಸ್ವಚ್ಛತೆ ಮತ್ತು ಸಹನೆ ಅಗತ್ಯ. ಪಕ್ಷಿಗಳ ವಿಶ್ವಾಸ ಗಳಿಸಿದಾಗ ಮಾತ್ರ ಅವು ಮಾನವನ ಸನಿಹ ಬರುತ್ತವೆ.

ಒಂದು ಮನೆಯ ತೋಟವೇ ಅನೇಕ ಜೀವಿಗಳಿಗೆ ಆಶ್ರಯವಾಗಬಹುದು ಎಂಬುದನ್ನು ಈ ಪ್ರಯತ್ನ ಸಾಬೀತುಪಡಿಸಿದೆ. ಬೆಳಗಿನ ಚಿಲಿಪಿಲಿ, ಸಂಜೆಗಿನ ಕಲರವ–ಇವು ಕೇವಲ ಶಬ್ದವಲ್ಲ, ಪ್ರಕೃತಿಯ ಜೀವಂತಿಕೆಯನ್ನು ಸಾರುವ ಸಂಕೇತಗಳು. ❖

ಕಾಡಿನ ದಾಹಕ್ಕೆ ನಗರದ 'ಜಲಧಾರೆ'

• ಸಂಧ್ಯಾ ಹೆಗಡೆ

ಕಾಂಕ್ರಿಟ್ ಕಾಡಿನ ನಡುವಿನ ಪುಟ್ಟ ಪುಟ್ಟ ಜಾಗಗಳಲ್ಲಿ ಹಣ್ಣಿನ ಗಿಡಗಳನ್ನು ನೆಟ್ಟು, ನಗರಕ್ಕೆ ಹಸಿರು ಹೊದಿಕೆ ಹಬ್ಬಿಸುತ್ತಿರುವ ಮಂಗಳೂರಿನ ರಾಷ್ಟ್ರೀಯ ಪರಿಸರ ಸಂರಕ್ಷಣಾ ಒಕ್ಕೂಟವು (ಎನ್‌ಇಸಿಎಫ್) ಬೇಸಿಗೆಯಲ್ಲಿ ಕಾಡುಪ್ರಾಣಿಗಳ ಜಲದಾಹ ನೀಗಿಸುತ್ತಿವೆ.

'ಕಾಡಿನಲ್ಲಿ ಜಲಮೂಲ ಬರಿದಾದಾಗ ಪ್ರಾಣಿಗಳು ನಾಡಿನೆಡೆಗೆ ಮುಖ ಮಾಡಿದವು. ಜೀವಜಲ ಅರಸುತ್ತ ಕೃಷಿಕರ ತೋಟ, ಬೆಟ್ಟಗಳಲ್ಲಿ ಅಲೆದಾಡುತ್ತಿದ್ದವು. ನೀರನ್ನು ಕಂಡು ನೆಗೆಯುತ್ತ ಬರುವ ಪ್ರಾಣಿಗಳಿಗೆ ಕಾಡು ಮತ್ತು ನಾಡಿನ ಗಡಿಯಲ್ಲಿ ಜಲತೊಟ್ಟಿ ನಿರ್ಮಿಸಿದರೆ, ಕಾಡಂಚಿನಲ್ಲೇ ನೀರಡಿಕೆ ನೀಗಿಸಬಹುದೆಂದು ಹೊಳೆದಿದ್ದು ಆಗ. ಉಡುಪಿ ಜಿಲ್ಲೆ ಸಿದ್ದಾಪುರದ ಸಮೀಪ ಅಂಪಾರಿನಲ್ಲಿ ಮೊದಲ ತೊಟ್ಟಿ ಕಟ್ಟಿ, ನೀರು ತುಂಬಿಸಿದೆವು. ನೀರು ಕುಡಿವ ಕಾಡುಪ್ರಾಣಿಗಳು ಬೆಟ್ಟದೆಡೆಗೆ ಮುಖ ಮಾಡುತ್ತಿದ್ದವು' ಎನ್ನುತ್ತಾರೆ ಎನ್‌ಇಸಿಎಫ್ ಕಾರ್ಯದರ್ಶಿ ಶಶಿಧರ್ ಶೆಟ್ಟಿ.

ಮೂರ್ನಾಲ್ಕು ವರ್ಷಗಳಲ್ಲಿ ಎಂಟಕ್ಕೂ ಹೆಚ್ಚು ಕಡೆಗಳಲ್ಲಿ ತೊಟ್ಟಿಗಳನ್ನು ಇಟ್ಟಿರುವ ಸಂಘಟನೆ, ಅದಕ್ಕೆ ಪ್ರತಿ 10–15 ದಿನಗಳಿಗೊಮ್ಮೆ ಟ್ಯಾಂಕರ್ ಮೂಲಕ ನೀರು ತುಂಬಿಸುತ್ತದೆ. ಕಡವೆ, ಹಂದಿ, ಚಿರತೆ, ನರಿ, ತೋಳ, ಮೊಲ ಇಂತಹ ಕಾಡುಪ್ರಾಣಿಗಳ ಚಲನವಲನ ಇರುವ ಪ್ರದೇಶಗಳನ್ನು ಗುರುತಿಸಿ ತೊಟ್ಟಿಗಳನ್ನು ಇಟ್ಟಿದೆ. ಹಗಲಿನಲ್ಲಿ ಪಕ್ಷಿಗಳು ಈ ತೊಟ್ಟಿಯಲ್ಲಿ ಜಲಕ್ರೀಡೆಯಾಡುತ್ತವೆ. ಮೇಯಲು ಹೋಗಿ ವಾಪಸ್ ಬರುವಾಗ ದನ–ಕರುಗಳು ತೊಟ್ಟಿಯ ನೀರು ಕುಡಿದು ಹಟ್ಟಿ ಸೇರುತ್ತವೆ.

ಉಡುಪಿ ಜಿಲ್ಲೆಯ ಕಮಲಶಿಲೆ, ಸಿದ್ದಾಪುರ, ಒತ್ತಿನೆಣೆಗುಡ್ಡ, ಮದ್ದೋಣಿಅಣೆ, ಜೋಗೂರು, ತೊಂಡ್ಲೆ, ಸಾಮಿನಕೊಡ್ಲು ಮೊದಲಾದ ಕಡೆಗಳಲ್ಲಿ ವೃತ್ತಾಕಾರದ ಜಲಪಾತ್ರೆಗಳನ್ನು ಇಟ್ಟಿದ್ದೇವೆ. ಸಾಮಿನಕೊಡ್ಲುವಿನ ತೊಟ್ಟಿಗೆ ನಮ್ಮ ಮನೆಯಿಂದಲೇ ಪೈಪ್ ಹಾಕಿ ನೀರನ್ನು ಪೂರೈಕೆ ಮಾಡುತ್ತೇವೆ. ಒಂದು ತೊಟ್ಟಿಗೆ ಅಂದಾಜು ₹20 ಸಾವಿರ ವೆಚ್ಚವಾಗುತ್ತದೆ. ಸಂಘಟನೆಯ ಸದಸ್ಯರೆಲ್ಲ ಸೇರಿ ಈ ವೆಚ್ಚ ಭರಿಸಿದ್ದೇವೆ. ಸಣ್ಣ ತೊಟ್ಟಿಗೆ ಹೆಚ್ಚೆಂದರೆ ₹7ರಿಂದ 8 ಸಾವಿರ ಖರ್ಚಾಗಬಹುದು. ಕೃಷಿಕರು ತಮ್ಮ ಜಮೀನಿನ ಅಂಚಿನಲ್ಲಿ ಪುಟ್ಟದೊಂದು ತೊಟ್ಟಿ ನಿರ್ಮಿಸಿ, ವಾರಕ್ಕೊಮ್ಮೆ ನೀರು ತುಂಬಿಸಿದರೆ, ನೀರು ಕುಡಿದು ಸಂತುಷ್ಟಗೊಂಡ ವನ್ಯಪ್ರಾಣಿಗಳು ತೋಟಕ್ಕೆ ನುಗ್ಗಲಾರವು ಎಂಬುದು ಅವರ ಸಲಹೆ.

ಒಂದೊಂದು ತೊಟ್ಟಿಯ ಸುತ್ತಲೂ ರಂಗೋಲಿಯ ಅಚ್ಚಿನಂತೆ ಕಾಣುವ ಹೆಜ್ಜೆಗಳೇ ಕಾಡುಪ್ರಾಣಿಗಳ ಜಲದಾಹದ ಕಥೆಗಳನ್ನು ಹೇಳುತ್ತವೆ. ಮುಂದಿನ ದಿನಗಳಲ್ಲಿ ಕ್ಯಾಮೆರಾ ಟ್ರ್ಯಾಪ್ ಅಳವಡಿಸಿ ದಾಖಲೀಕರಣ ಮಾಡಲು ಎನ್‌ಇಸಿಎಫ್ ಯೋಚಿಸಿದೆ.

ಈ ವರ್ಷ ಬೈಂದೂರು ಅರೆಶಿರೂರು ಮತ್ತು ಗಂಟಿಹೊಳೆ ಅರಣ್ಯ ವ್ಯಾಪ್ತಿಯಲ್ಲಿ 10ಕ್ಕೂ ಹೆಚ್ಚು ಜಲತೊಟ್ಟಿ ನಿರ್ಮಿಸಲು ಎನ್‌ಇಸಿಎಫ್ ಸಿದ್ಧತೆ ನಡೆಸಿದೆ. ಬೈಂದೂರು ಶಾಸಕ ಗುರುರಾಜ್ ಗಂಟಿಹೊಳೆ ಇವುಗಳ ಆರ್ಥಿಕ ಹೊರೆ ಹೊತ್ತುಕೊಳ್ಳುವ ಭರವಸೆ ನೀಡಿರುವುದು ಇನ್ನಷ್ಟು ಜಲಪಾತ್ರೆಗಳನ್ನು ನಿರ್ಮಿಸುವ ಸಂಘಟನೆಯ ಕನಸಿಗೆ ಕಸುವು ತುಂಬಿದೆ.

ಮಂಗಳೂರು ಸಮೀಪದ ಮೂಲ್ಕಿ ತಾಲ್ಲೂಕಿನ ಪಕ್ಷಿಕೆರೆ ಪುಟ್ಟ ಗ್ರಾಮ. ಇಲ್ಲಿನ ಸರ್ಕಾರಿ ಕೆರೆಯೊಂದನ್ನು ಪೇಪರ್ ಸೀಡ್ ಎಂಬ ಸಂಸ್ಥೆ ಊರಿನ ಕೆಲವರ ಸಹಕಾರದೊಂದಿಗೆ ಹೂಳೆತ್ತಿ ಶುಚಿಗೊಳಿಸಿ, ಕೆರೆಯ ಸುತ್ತ ಸಸಿಗಳನ್ನು ನಾಟಿ ಮಾಡಿದೆ. ಬಿರುಬೇಸಿಗೆಯಲ್ಲೂ ಕೆರೆಯಲ್ಲಿ ಸಮೃದ್ಧ ಜಲರಾಶಿ ಇದೆ. ಮುಳ್ಳು ಹಂದಿ, ಕಾಡು ಬೆಕ್ಕು, ಕಾಡು ಹಂದಿ, ಮೊಲ, ಪಕ್ಷಿಗಳು ಸೇರಿ 50ಕ್ಕೂ ಹೆಚ್ಚು ಜಾತಿಯ ಪ್ರಾಣಿ–ಪಕ್ಷಿಗಳು ನೀರಿಗಾಗಿ ಈ ಕೆರೆಯನ್ನು ಅವಲಂಬಿಸಿವೆ. ಪೇಪರ್ ಸೀಡ್ ಸಂಸ್ಥೆಯ ಮುಖ್ಯಸ್ಥ ನಿತಿನ್ ವಾಸ್, ಇಲ್ಲಿ ಹಾಕಿರುವ ಕ್ಯಾಮೆರಾದಲ್ಲಿ ಜೀವರಾಶಿಗಳ ಚಲನವಲನ ದಾಖಲಾಗಿದೆ.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅಲ್ಲಲ್ಲಿ ಇಂತಹ ಮಾನವೀಯ ಕಾರ್ಯಗಳು ನಡೆದಿವೆ. ❖

ದಾಹ ನೀಗಿಸಲು ಟ್ಯಾಂಕರ್ ನೀರು

'ನೆರಳು': ಕಾಡಿನ ಜೀವಗಳಿಗೆ ಜೀವಜಲ

• ಮೈಲಾರಿ ಲಿಂಗಪ್ಪ

ಅರಣ್ಯ ಭಾಗದಲ್ಲಿ ಕೆರೆ–ಕಟ್ಟೆ, ಝರಿ–ತೊರೆಗಳು ಬತ್ತಿ ಹೋಗಿ, ಹನಿ ನೀರಿಗೂ ಹಾಹಾಕಾರ ಶುರುವಾಗುವ ಹೊತ್ತಿನಲ್ಲಿ ಯುವಕರು ಕಟ್ಟಿದ ಸಂಘಟನೆಯೊಂದು ಪ್ರಾಣಿ–ಪಕ್ಷಿಗಳ ಪಾಲಿಗೆ ವರವಾಗಿದೆ.

'ನೆರಳು' ಸಂಘಟನೆಯು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಮದಲಿಂಗನ ಕಣಿವೆ ಗುಡ್ಡ ಪ್ರದೇಶದ ವನ್ಯಜೀವಿಗಳ ದಾಹ ತಣಿಸುವ ಕೆಲಸ ಮಾಡುತ್ತಿದೆ. 2018ರಿಂದ ಈ ಸಂಘಟನೆ ಸಕ್ರಿಯವಾಗಿದೆ. ಸದಸ್ಯರು ಬೆಟ್ಟದ ಭಾಗದಲ್ಲಿ ಹನ್ನೊಂದು ನೀರಿನ ತೊಟ್ಟಿ ನಿರ್ಮಿಸಿ, ವನ್ಯಜೀವಿಗಳ ಜೀವ ಉಳಿಸುವ ಕಾಯಕದಲ್ಲಿ ನಿರತರಾಗಿದ್ದಾರೆ.

ಕಾಡಿನಲ್ಲಿ ಪ್ರಾಣಿಗಳು ಓಡಾಡುವ ಜಾಗ ಗುರುತಿಸಿ, ಸಿಮೆಂಟ್ ತೊಟ್ಟಿ ನಿರ್ಮಾಣ ಮಾಡಿದ್ದಾರೆ. ಪ್ರತಿ ಬೇಸಿಗೆಯಲ್ಲಿ ಈ ತೊಟ್ಟಿಗಳಿಗೆ ಟ್ಯಾಂಕರ್ ಮೂಲಕ ನೀರು ತುಂಬಿಸುತ್ತಾರೆ. ಸದಸ್ಯರಾದ ಮಹ್ಮದ್ ಹುಸೇನ್, ಲಕ್ಷ್ಮಿಕಾಂತ, ಅರುಣ್‌ಕುಮಾರ್, ಯೋಗೀಶ್, ಇತರರು ಪ್ರಾಣಿ-ಪಕ್ಷಿಗಳ ನೀರಿನ ಬವಣೆ ನೀಗಿಸುತ್ತಿದ್ದಾರೆ.

ತಾಲ್ಲೂಕಿನ ಪರಿಸರ ಪ್ರೇಮಿಗಳು ಸಂಘಟನೆ ಜತೆಗೆ ಕೈ ಜೋಡಿಸುತ್ತಿದ್ದಾರೆ. ಜನ್ಮದಿನದ ಸಂಭ್ರಮಾಚರಣೆ ಹೆಸರಿನಲ್ಲಿ ಮಾಡುವ ಅನವಶ್ಯಕ ವೆಚ್ಚಕ್ಕೆ ಕಡಿವಾಣ ಹಾಕುತ್ತಿದ್ದಾರೆ. ಪರಿಸರ ಸ್ನೇಹಿ ಆಚರಣೆಯಿಂದ ಗಮನ ಸೆಳೆಯುತ್ತಿದ್ದಾರೆ. ಜನ್ಮದಿನದ ವಿಶೇಷವಾಗಿ ವನ್ಯಜೀವಿಗಳಿಗಾಗಿ ಒಂದು ಟ್ಯಾಂಕರ್ ನೀರು ಒದಗಿಸುವ ಸಂಪ್ರದಾಯ ರೂಢಿಸಿಕೊಂಡಿದ್ದಾರೆ. ಇದು 'ನೆರಳು' ಸದಸ್ಯರ ಆತ್ಮಸ್ಥೈರ್ಯ ಹೆಚ್ಚಿಸಿದೆ.

ಹರಕೆಯ ಇಟ್ಟಿಗೆ...

ಮದಲಿಂಗನ ಕಣಿವೆ ಗುಡ್ಡದ ಪ್ರದೇಶದಲ್ಲಿ ಭೂತಪ್ಪನ ಗುಡಿ ಇದೆ. ಈ ಭಾಗದ ಜನರು ದೇಗುಲಕ್ಕೆ ಹರಕೆ ರೂಪದಲ್ಲಿ ಇಟ್ಟಿಗೆ ಕೊಡುತ್ತಾರೆ. ಸಂಘಟನೆ ಸದಸ್ಯರು ಇದೇ ಇಟ್ಟಿಗೆ ಬಳಸಿಕೊಂಡು ತೊಟ್ಟಿಯೊಂದನ್ನು ನಿರ್ಮಿಸಿದ್ದಾರೆ. ಇದನ್ನು ಹೊರತುಪಡಿಸಿ ದಾನಿಗಳ ನೆರವಿನಿಂದ ಹತ್ತು ಸಿಮೆಂಟ್ ತೊಟ್ಟಿ ತಯಾರಿಸಿದ್ದಾರೆ. ಈ ಎಲ್ಲ ಚಟುವಟಿಕೆಗಳಿಂದ ಕಾಡು ಪ್ರಾಣಿಗಳು ಆಹಾರ, ನೀರು ಅರಸಿ ನಾಡಿಗೆ ಬರುವುದು ಕಡಿಮೆಯಾಗಿದೆ. ಈ ಪ್ರದೇಶದಲ್ಲಿ ಮಾನವ–ವನ್ಯಜೀವಿ ಸಂಘರ್ಷವೂ ತಗ್ಗಿದೆ.

ನೆರಳು ಸಂಘಟನೆಯ ಮಹ್ಮದ್ ಹುಸೇನ್ ಆಂಬುಲೆನ್ಸ್ ಚಾಲಕರಾಗಿದ್ದಾರೆ. ಅವರ ಜತೆಗಿರುವ ಎಲ್ಲರೂ ಅಂದಿನ ಕೂಲಿ ಕೆಲಸ ನೆಚ್ಚಿಕೊಂಡು ಬದುಕು ಸಾಗಿಸುತ್ತಿದ್ದಾರೆ. ಆದರೂ ಅವರೆಲ್ಲರೂ ಪ್ರಾಣಿ–ಪಕ್ಷಿಗಳ ಉಳಿವಿಗೆ ಟೊಂಕ ಕಟ್ಟಿ ನಿಂತಿದ್ದಾರೆ.

'ಬೇಸಿಗೆ ಆರಂಭವಾಗುತ್ತಿದ್ದಂತೆ ಪ್ರಾಣಿಗಳು ಬೆಟ್ಟದ ತಪ್ಪಲಿನ ಜನ ವಸತಿ ಪ್ರದೇಶಕ್ಕೆ ಲಗ್ಗೆ ಇಡುತ್ತಿದ್ದವು. ಮನೆ, ಕುರಿ ರೊಪ್ಪದ ಮೇಲೆ ಚಿರತೆ ದಾಳಿ ಮಾಡಿ ನಾಯಿ, ಕುರಿ–ಮೇಕೆಗಳನ್ನು ಕೊಂದು ಹಾಕುತ್ತಿದ್ದವು. ಇದನ್ನು ತಡೆಯುವುದು ಹೇಗೆ? ಯಾವ ಕಾರಣಕ್ಕೆ ಪ್ರಾಣಿಗಳು ಹಳ್ಳಿಗಳ ಕಡೆಗೆ ದಾಂಗುಡಿ ಇಡುತ್ತಿವೆ? ಎಂಬುದು ತಿಳಿಯುತ್ತಿರಲಿಲ್ಲ. ಸ್ನೇಹಿತರ ಜತೆಗೆ ಕುಳಿತು ಇದರ ಬಗ್ಗೆ ಯೋಚಿಸಿದಾಗ ಕಾಡಿನಲ್ಲಿ ನೀರಿನ ಕೊರತೆ ಆಗುತ್ತಿರುವುದು ಕಂಡು ಬಂತು. ನಂತರ ಎಲ್ಲರು ಚರ್ಚಿಸಿ ನೆರಳು ಸಂಘಟನೆ ಅಸ್ತಿತ್ವಕ್ಕೆ ರೂಪುರೇಷೆ ಸಿದ್ಧಪಡಿಸಲಾಯಿತು' ಎಂದು ಮಹ್ಮದ್ ಹುಸೇನ್ ಸಂಘಟನೆ ಹುಟ್ಟಿನ ಕ್ಷಣಗಳನ್ನು ಮೆಲುಕು ಹಾಕಿದರು.

ಇದು ಕೇವಲ ನೀರು ತುಂಬಿಸುವ ಕಾರ್ಯವಲ್ಲ; ಇದು ಪ್ರಕೃತಿಯೊಂದಿಗೆ ಮನುಷ್ಯನ ಹೊಂದಾಣಿಕೆಯ ಕಥೆ. ಕಾಡಿನ ಜೀವಿಗಳು ಹಳ್ಳಿಗಳತ್ತ ಬರಲು ಕಾರಣವಾಗಿರುವುದು ಅವುಗಳ ದಾಹ ಮತ್ತು ಆಹಾರದ ಕೊರತೆ ಎಂಬುದನ್ನು ಅರಿತ ಈ ಯುವಕರು, ಸಮಸ್ಯೆಯನ್ನು ಮೂಲದಲ್ಲೇ ಪರಿಹರಿಸುವ ಪ್ರಯತ್ನ ಮಾಡಿದ್ದಾರೆ.

ಮಠದ ಸೇವೆಯೂ...

ಕೊರಟಗೆರೆ ತಾಲ್ಲೂಕಿನ ಸಿದ್ಧರಬೆಟ್ಟ ಔಷಧೀಯ ಗಿಡಗಳು, ಗುಹೆಗಳ ಜತೆಗೆ ಹಲವು ಬಗೆಯ ವನ್ಯಜೀವಿಗಳ ಆವಾಸ ಸ್ಥಾನವೂ ಹೌದು. ಇಲ್ಲಿಯೂ ಪ್ರತಿ ಬೇಸಿಗೆಯಲ್ಲಿ ಕಾಡು ಪ್ರಾಣಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಎದುರಾಗುತ್ತದೆ. ಇದನ್ನು ಅರಿತು ಸಿದ್ಧರಬೆಟ್ಟದ ರಂಭಾಪುರಿ ಶಾಖಾ ಮಠದ ವೀರಭದ್ರ ಶಿವಾಚಾರ್ಯ ಸ್ವಾಮೀಜಿ ನೇತೃತ್ವದಲ್ಲಿ ನೀರಿನ ತೊಟ್ಟಿ ಮಾಡಲಾಗಿದೆ.

ಪ್ರತಿ ವರ್ಷ ಮಠದ ವಿದ್ಯಾರ್ಥಿಗಳು, ಅಕ್ಕಪಕ್ಕದ ಗ್ರಾಮಸ್ಥರು, ಗ್ರಾಮ ಪಂಚಾಯಿತಿ ಅಧಿಕಾರಿಗಳು, ಸಿಬ್ಬಂದಿ ಅರಣ್ಯದಲ್ಲಿನ ತೊಟ್ಟಿಗಳಿಗೆ ನೀರು ತುಂಬಿಸುತ್ತಾರೆ.

'ಬೆಟ್ಟದಲ್ಲಿ ನೀರಿಗೆ ಅಭಾವ ಆಗದಂತೆ ಪ್ರತಿ ವಾರಕ್ಕೊಮ್ಮೆ ತೊಟ್ಟಿ ತುಂಬಿಸಲಾಗುತ್ತಿದೆ. 15 ವರ್ಷಗಳಿಂದ ಈ ಕಾರ್ಯ ಮಾಡಲಾಗುತ್ತಿದೆ. ಇದು ತುಂಬಾ ಜನರಿಗೆ ಸ್ಫೂರ್ತಿಯಾಗಿದೆ' ಎನ್ನುತ್ತಾರೆ ಶಿವಾನಂದ ಶಿವಾಚಾರ್ಯ ಸ್ವಾಮೀಜಿ. ❖

ಹರಕೆ ಇಟ್ಟಿಗೆಯಲ್ಲಿ ನಿರ್ಮಾಣಗೊಂಡ ತೊಟ್ಟಿ

'ಗುಡಿ ಗ್ರಂಥಾಲಯ' ಹಚ್ಚಿದ ಅಕ್ಷರ ದೀಪ

• ನಾಗರಾಜನಾಯಕ ಡಿ.ಡೊಳ್ಳಿನ

ಕೊಪ್ಪಳದ ಬಸವೇಶ್ವರ ನಗರ ವಾರ್ಡ್ 12 ರಲ್ಲಿ ಹನುಮಪ್ಪನ ದೇವಸ್ಥಾನದ ಆವರಣದಲ್ಲಿ ಬೆಳಗಿನ ಹೊತ್ತು ವಿಶಿಷ್ಟ ನಿಶ್ಯಬ್ದತೆ ನೆಲೆಸಿರುತ್ತದೆ. ಅದು ಪೂಜೆಯ ನಿಶ್ಯಬ್ದವಲ್ಲ; ಅದು ಓದುವ ನಿಶ್ಯಬ್ದತೆ. ಪತ್ರಿಕೆ ಪುಟಗಳ ಸರಸರ, ಪುಸ್ತಕದ ಪುಟ ತಿರುಗುವ ಸಣ್ಣ ಶಬ್ದ, ಮತ್ತು ಯಾವುದೋ ಹುಡುಗನ ಏಕಾಗ್ರತೆಯ ಕಣ್ಣುಗಳು... ಇವೆಲ್ಲ ಸೇರಿ ಇಲ್ಲಿ ಒಂದು ಹೊಸ 'ಗುಡಿ' ರೂಪುಗೊಂಡಿದೆ. ಅದೇ 'ಗುಡಿ ಗ್ರಂಥಾಲಯ'!

ಒಂದು ಕಾಲದಲ್ಲಿ 'ಸಾಲಿಗುಡಿ' ಎಂಬ ಕಲ್ಪನೆ ಜನಮನದಲ್ಲಿ ಇದ್ದಂತೆ, ಇಂದು ಇಲ್ಲಿ ದೇವರ ಗುಡಿಯ ಜೊತೆಗೆ ಅಕ್ಷರದ ಗುಡಿಯೂ ಬೆಳೆಯುತ್ತಿದೆ. ಈ ಪ್ರಯೋಗಕ್ಕೆ ಒಂದು ವರ್ಷ ತುಂಬಿದೆ. ಈ ಓಣಿಯ ಕಥೆ–ಒಂದು ನಂಬಿಕೆ, ಒಂದು ಕನಸು ಮತ್ತು ಒಂದು ನಿರಂತರ ಶ್ರಮದ ದಾಖಲೆ.

ಅದು ಏಪ್ರಿಲ್ 14, 2025. ಅಂಬೇಡ್ಕರ್ ಜಯಂತಿ. ಹನುಮಪ್ಪನ ದೇವಸ್ಥಾನದ ಮುಂದೆ ಅಂಬೇಡ್ಕರ್ ಹಾಗೂ ಜಗಜೀವನರಾಮ ಅವರ ಭಾವಚಿತ್ರಗಳಿಗೆ ಪುಷ್ಪಾರ್ಪಣೆ ನಡೆಯಿತು. ದೀಪ ಬೆಳಗಿತು. ಆದರೆ ಆ ಬೆಳಕು ಕೇವಲ ಎಣ್ಣೆಯ ದೀಪದ ಬೆಳಕಾಗಿರಲಿಲ್ಲ, ಅದು ಓದುವ ಆಸೆಯತ್ತ ತೆರೆದ ದಾರಿ.

ಆ ದಿನದಿಂದಲೇ ದೇವಸ್ಥಾನದ ಒಂದು ಮೂಲೆಯಲ್ಲಿ ದಿನಪತ್ರಿಕೆಗಳು ಬಂದು ಬೀಳತೊಡಗಿದವು. ನಿಧಾನವಾಗಿ ಆ ಸ್ಥಳವೇ ಓದುವವರ ಜಾಗವಾಯಿತು. ಶಾಲೆ ಮುಗಿದ ಮಕ್ಕಳು, ಕೆಲಸದ ನಂತರ ಬಂದ ಯುವಕರು–ಎಲ್ಲರದೂ ಒಂದೇ ಉದ್ದೇಶ, 'ಓದಬೇಕು.'

ಈ ನಡುವೆ ಓದುವ ಆಸೆಗೆ ಇನ್ನಷ್ಟು ಬಲ ನೀಡುವಂತೆ ಇಲ್ಲಿ ಪುಸ್ತಕಗಳ ಸಂಗ್ರಹವೂ ಸೇರತೊಡಗಿತು. ಈಗ ಇಲ್ಲಿ ಲಭ್ಯವಿರುವ ಗ್ರಂಥಗಳು ಸುಮಾರು 150 ರಿಂದ 170. ಅವುಗಳಲ್ಲಿ ಕನ್ನಡ ವ್ಯಾಕರಣ, ಮಾನವತವಾದಿ ಡಾ.ಅಂಬೇಡ್ಕರ್, ಈಗ ಭಾರತ ಮಾತಾಡಬೇಕಿದೆ, ಸಂವಿಧಾನ, ಜೈಭೀಮ್, ಪೂನಾ ಒಪ್ಪಂದ, ಸಾಮಾಜಿಕ ಸಬಲೀಕರಣ, ಎದೆಗೆ ಬಿದ್ದ ಅಕ್ಷರ, ಮೂಕಜ್ಜಿಯ ಕನಸುಗಳು, ಟಿಂಗರ ಬುಡ್ಡಣ್ಣ ನಾಟಕ, ಅಂಬೇಡ್ಕರ್ ನಾಟಕ, ಮಕ್ಕಳಿಗಾಗಿ ಪಂಚತಂತ್ರ, ಈಸೋಪನ ನೀತಿ ಕಥೆಗಳು, ನೈತಿಕ ಕಥೆಗಳು ಸೇರಿದಂತೆ ಹಲವು ಮಹತ್ವದ ಕೃತಿಗಳು ಸೇರಿವೆ. ಈ ಪುಸ್ತಕಗಳು ಕೇವಲ ಓದಿನ ಸಾಮಗ್ರಿಯಲ್ಲ, ಅವು ಚಿಂತನೆಗೆ ದಾರಿ ತೋರಿಸುವ ಸಂಗಾತಿಗಳು.

ಅದೇ ರೀತಿ, ನಿಯತಕಾಲಿಕೆಗಳೂ ಇಲ್ಲಿ ಓದುಗರನ್ನು ಕಾಯುತ್ತಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ವಾರ್ತಾಪತ್ರ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಮಹಾಮನೆ ಮುಂತಾದವುಗಳು ಜ್ಞಾನವಿಸ್ತಾರಕ್ಕೆ ಸಹಾಯ ಮಾಡುತ್ತಿವೆ.

ದಿನಪತ್ರಿಕೆಗಳ ವಿಚಾರದಲ್ಲಿ ಈ ಗುಡಿಯು ಇನ್ನಷ್ಟು ಜೀವಂತವಾಗಿದೆ. 'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್' ಸೇರಿದಂತೆ ಹಲವು ಪತ್ರಿಕೆಗಳು ಪ್ರತಿದಿನ ಇಲ್ಲಿಗೆ ಬರುತ್ತಿವೆ. ವಿಶೇಷವೆಂದರೆ, ಸದ್ಯ ಬರುತ್ತಿರುವ ದಿನಪತ್ರಿಕೆಗಳಿಗೆ ಸಮಾನ ಮನಸ್ಕ ಗೆಳೆಯರು ತಾವೇ ಮುಂದೆ ಬಂದು ಒಂದು ವರ್ಷದ ಚಂದಾದಾರಿಕೆ ನೀಡಿದ್ದಾರೆ. ಒಬ್ಬರು ಮೂರು ಪತ್ರಿಕೆಗಳ ಚಂದಾ ನೀಡಿದರೆ, ಉಳಿದವರು ಒಂದು ಪತ್ರಿಕೆಯ ಚಂದಾದಾರಿಕೆಯನ್ನು ಹೊತ್ತುಕೊಂಡಿದ್ದಾರೆ. ಇದು ಸಮುದಾಯದ ಪಾಲ್ಗೊಳ್ಳುವಿಕೆಯ ಮಾದರಿ.

'ನಾವು ನಿತ್ಯದ ಸುದ್ದಿಗಳನ್ನು, ಕಥೆಗಳನ್ನು ಇಲ್ಲಿ ಓದುತ್ತೇವೆ. ಓದಿ ಮತ್ತೆ ಅದೇ ಜಾಗಕ್ಕೆ ಇಡುವುದು ಅಭ್ಯಾಸವಾಗಿದೆ' ಎಂದು ಯುವಕರು ನಗುಮುಖದಿಂದ ಹೇಳುತ್ತಾರೆ. ಅವರ ಮಾತಿನಲ್ಲಿ ಅಭ್ಯಾಸಕ್ಕಿಂತ ಹೆಚ್ಚು ಒಂದು ಹೆಮ್ಮೆ ಇದೆ. ತಮ್ಮ ಕೇರಿಯನ್ನು ತಾವೇ ಬದಲಿಸುತ್ತಿರುವ ಹೆಮ್ಮೆ.

ಈ ಕನಸಿನ ಹಿಂದೆ ನಿಂತಿರುವವರಲ್ಲಿ ಈಶಪ್ಪ ದೊಡ್ಡಮನಿ ಹೇಳುವಂತೆ, ಇದು ದೊಡ್ಡ ಸಂಸ್ಥೆಯ ಯೋಜನೆ ಅಲ್ಲ. 'ನಾವು ಕೆಲ ಸಮಾನ ಮನಸ್ಕ ಗೆಳೆಯರು ಸೇರಿ ಆರಂಭಿಸಿದ ಕೆಲಸ. ಪ್ರತಿದಿನ ಬೆಳಿಗ್ಗೆ ಬಂದು ಕಸಗುಡಿಸುತ್ತೇವೆ, ಪತ್ರಿಕೆಗಳನ್ನು ಸರಿಯಾಗಿ ಜೋಡಿಸುತ್ತೇವೆ, ಹಳೆಯ ಪತ್ರಿಕೆಗಳನ್ನು ವ್ಯವಸ್ಥಿತವಾಗಿ ಇಡುತ್ತೇವೆ. ಇದು ನಮ್ಮ ದಿನಚರಿ' ಎಂದು ಅವರು ಹೇಳುತ್ತಾರೆ.

ಈ ಸರಳ ದಿನಚರಿಯಲ್ಲೇ ಒಂದು ದೊಡ್ಡ ಪರಿವರ್ತನೆ ಅಡಗಿದೆ. ದೇವಸ್ಥಾನದ ಆವರಣವು ಈಗ ಕೇವಲ ಭಕ್ತಿಯ ಸ್ಥಳವಲ್ಲ–ಅದು ಜಾಗೃತಿಯ ಸ್ಥಳವಾಗುತ್ತಿದೆ. ಮಕ್ಕಳು ಪುಸ್ತಕದ ಕಡೆ ಕೈಚಾಚುವಾಗ, ಆ ದೃಶ್ಯವೇ ಇಲ್ಲಿ ನಡೆಯುತ್ತಿರುವ ನಿಜವಾದ ಪೂಜೆ.

ನಗರಸಭೆಯ ಮಾಜಿ ಸದಸ್ಯೆ ಯಲ್ಲಮ್ಮ ರಮೇಶ್ ಗಿಣಗೇರಿ ಅವರ ದೃಷ್ಟಿಯಲ್ಲಿ ಈ ಪ್ರಯೋಗ ಇನ್ನಷ್ಟು ದೊಡ್ಡ ದಾರಿಯ ಆರಂಭ. ಸಾರ್ವಜನಿಕ ಗ್ರಂಥಾಲಯ ಕಟ್ಟಡಕ್ಕೂ ಜಾಗ ಸಿಕ್ಕಿದ್ದು, ಕಾಮಗಾರಿ ಆರಂಭವಾಗಲಿದೆ. 'ಆದರೆ ಅದಕ್ಕೂ ಮುನ್ನವೇ ಈ ಗುಡಿ ಗ್ರಂಥಾಲಯ ಜನರ ಮನಸ್ಸಿನಲ್ಲಿ ಓದುವ ಆಸೆ ಹಚ್ಚಿಸಿದೆ' ಎನ್ನುತ್ತಾರೆ. ಜೊತೆಗೆ ₹5000 ಮೌಲ್ಯದ ಪುಸ್ತಕಗಳನ್ನು ನೀಡುವ ಭರವಸೆಯೂ ಈ ಪ್ರಯತ್ನಕ್ಕೆ ಇನ್ನಷ್ಟು ಬಲ ನೀಡಿದೆ.

ಇಲ್ಲಿ ಒಂದು ಶೆಲ್ಫ್‌ನಲ್ಲಿ ಇಂದಿನ ಪತ್ರಿಕೆಗಳು, ಇನ್ನೊಂದು ಕಡೆ ಹಳೆಯ ಸಂಚಿಕೆಗಳು. ತೆಗೆದುಕೊಳ್ಳುವುದು ಸುಲಭ, ಓದುವುದು ಸಹಜ, ಮತ್ತೆ ಇಡುವುದು ಶಿಸ್ತಿನ ಭಾಗ. ಈ ಸರಳ ವ್ಯವಸ್ಥೆಯೊಳಗೆ ಒಂದು ಪಾಠವಿದೆ, ಅದು ಜವಾಬ್ದಾರಿಯ ಪಾಠ.

ಮಾರುತಿ ಕಟ್ಟಿಮನಿ, ಮಹಾಲಕ್ಷ್ಮೀ ಕಂದಾರಿ, ಶ್ರವಣಕುಮಾರ ಶರ್ಮಾ, ಪರಶುರಾಮ ಕಿಡದಾಳ, ಗವಿಸಿದ್ಧಪ್ಪ ಗಿಣಗೇರಿ, ಶಿವಪುತ್ರಪ್ಪ ಬಂಗಾರಿ, ದೇವಪ್ಪ ಗಿಣಗೇರಿ, ವಿನಾಯಕ ಕಿಡದಾಳ, ಗವಿರಾಜ ದೊಡ್ಡಮನಿ, ಮಂಜುನಾಥ ಹಳ್ಳಿಕೇರಿ ಸೇರಿದಂತೆ ಅನೇಕ ಯುವಕರು ಈ ಚಿಕ್ಕದಾಗಿ ಕಾಣುವ, ಆದರೆ ಉದಾತ್ತವಾದ ಆಶಯದ ಭಾಗವಾಗಿದ್ದಾರೆ.

ದೇವಸ್ಥಾನದ ಗಂಟೆಯ ಶಬ್ದ ನಿಂತ ನಂತರವೂ ಇಲ್ಲಿ ಮತ್ತೊಂದು ಶಬ್ದ ಕೇಳಿಸುತ್ತದೆ. ಪುಟ ತಿರುಗುವ ಶಬ್ದ. ಬಹುಶಃ ಅದೇ ಈ ಕೇರಿಯ ಹೊಸ ಪ್ರಾರ್ಥನೆ. ಅಕ್ಷರದ ಬೆಳಕಿನಲ್ಲಿ ಬೆಳೆಯುತ್ತಿರುವ ಈ 'ಗುಡಿ ಗ್ರಂಥಾಲಯ' ಈಗ ಒಂದು ವರ್ಷದ ಆರೋಗ್ಯವಂತ ಕೂಸು. ❖

ಇದು ಕೇವಲ ಗುಡಿಯಲ್ಲ...ಜ್ಞಾನದೇಗುಲ...

ಚಿತ್ರಗಳು: ಭರತ್ ಕಂದಕೂರ

ನೀಚಡಿಯ ನವೀಕೃತ ಚೌಡಿಕೆರೆ

ಕೆರೆ ಮರುಹುಟ್ಟು ಈ ಹಬ್ಬದ ಹುಟ್ಟು!

ಒಂದು ಬತ್ತಿದ ಕೆರೆಯಿಂದ ಹುಟ್ಟಿದ ಕೆರೆ ಹಬ್ಬ, ಇಂದು ಆಲೆಮನೆ ಹಬ್ಬವಾಗಿ ಸಂಭ್ರಮಿಸುತ್ತದೆ. ನೀಚಡಿ ಮತ್ತು ಹಳೆಇಕ್ಕೇರಿಯ ಈ ಕಥೆಗಳು ಹೇಳುವುದು ಒಂದೇ– ಪ್ರಕೃತಿ ಉಳಿದರೆ ಬದುಕು ಉಳಿಯುತ್ತದೆ; ಸಂಭ್ರಮ ಹಂಚಿದರೆ ಸಂಬಂಧಗಳು ಬೆಳೆಯುತ್ತವೆ.

• ಗಣಪತಿ ಶಿರಳಗಿ

ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕು ಕೇಂದ್ರದಿಂದ ಸುಮಾರು 17 ಕಿ.ಮೀ. ದೂರದಲ್ಲಿ ನೀಚಡಿ ಎಂಬ ಗ್ರಾಮವಿದೆ. ಅಲ್ಲಿ ಒಂದು ಕೆರೆ ಕೇವಲ ಜಲಮೂಲವಾಗಿರಲಿಲ್ಲ; ಅದು ಊರಿನ ಜೀವನಾಡಿಯಾಗಿತ್ತು. ಅದೇ ಕೆರೆ, ಕೆಲವು ವರ್ಷಗಳ ಹಿಂದೆ ಬತ್ತುವ ಹಂತಕ್ಕೆ ತಲುಪಿದಾಗ, ಊರಿನ ಜನರ ಬದುಕೇ ಆತಂಕದಲ್ಲಿತ್ತು.

ನೂರಾರು ವರ್ಷಗಳ ಇತಿಹಾಸವಿರುವ ಚೌಡಿಕೆರೆ ಸುಮಾರು 5 ಎಕರೆ 23 ಗುಂಟೆ ವಿಸ್ತೀರ್ಣ ಹೊಂದಿದೆ. ಮಧ್ಯದಲ್ಲಿ ರಸ್ತೆ ಹಾದುಹೋಗುವುದರಿಂದ ಇದು ಜೋಡಿಕೆರೆಯಂತೆ ಕಾಣುತ್ತದೆ. ಒಂದು ಕಾಲದಲ್ಲಿ ಸಮೃದ್ಧವಾಗಿದ್ದ ಈ ಕೆರೆ, 2017ರಲ್ಲಿ ಜಲಕ್ಷಾಮಕ್ಕೆ ತುತ್ತಾಗಿ ನೀರಿನ ಮಟ್ಟ ಅಚ್ಚರಿಯ ರೀತಿಯಲ್ಲಿ ಇಳಿಯಿತು. ಇದು ಗ್ರಾಮದ ಸುಮಾರು 200 ಕುಟುಂಬಗಳ ಕುಡಿಯುವ ನೀರಿಗೆ, ಸುತ್ತಮುತ್ತಲಿನ ಅಡಿಕೆ ತೋಟಗಳಿಗೆ ಹಾಗೂ ತರಿ ಜಮೀನುಗಳಿಗೆ ಜೀವನಾಡಿಯಾಗಿತ್ತು. ಈ ಕೆರೆ ಬತ್ತುತ್ತಿರುವುದು ಗ್ರಾಮಸ್ಥರಲ್ಲಿ ಚಿಂತೆಯನ್ನು ಮೂಡಿಸಿತ್ತು.

'ಕೆರೆ ಹೂಳೆತ್ತಿದರೆ ನೀರು ಮತ್ತೆ ಬರುತ್ತದೆ' ಎಂಬ ನಂಬಿಕೆಯಿಂದ ಗ್ರಾಮಸ್ಥರು ಕೈಜೋಡಿಸಿದರು. ಸರ್ಕಾರದ ಅನುದಾನ, ದಾನಿಗಳ ನೆರವು ಮತ್ತು ಮುಖ್ಯವಾಗಿ ಗ್ರಾಮಸ್ಥರ ಶ್ರಮದಾನ–ಈ ಮೂರೂ ಸೇರಿ ಸುಮಾರು 35 ಲಕ್ಷ ರೂಪಾಯಿ ವೆಚ್ಚದಲ್ಲಿ ಎರಡು ವರ್ಷ ಕೆರೆ ಹೂಳೆತ್ತುವ ಕೆಲಸ ನಡೆಯಿತು. ಸುಮಾರು 16 ಅಡಿ ಹೂಳು ತೆಗೆಯಲಾಯಿತು. ಇಂದು, ಕೆರೆಯ ಮಧ್ಯಭಾಗದಲ್ಲಿ 20 ಅಡಿ ಮಟ್ಟದ ನೀರು ಸಂಗ್ರಹವಾಗುತ್ತದೆ. ಮೇ ತಿಂಗಳಲ್ಲಿಯೂ 15 ಅಡಿ ನೀರು ಇರುತ್ತದೆ. ಇದು ಗ್ರಾಮಸ್ಥರ ಶ್ರಮದಾನಕ್ಕೆ ದೊರೆತ ಉಡುಗೊರೆ. 'ಇದು ನಮ್ಮ ಒಗ್ಗಟ್ಟಿನ ಫಲ' ಎಂದು ಗ್ರಾಮದ ಯೋಗೀಶ್ ಹೇಳುತ್ತಾರೆ.

ಈ ಪುನರುಜ್ಜೀವನ ಕೇವಲ ಕೆಲಸವಾಗಿ ಉಳಿಯಲಿಲ್ಲ; ಅದು ಸಂಭ್ರಮವಾಯಿತು.

ಕೆರೆ ಮತ್ತೆ ಜೀವ ಪಡೆದುಕೊಂಡ ಸಂತಸದಲ್ಲಿ, ಗ್ರಾಮಸ್ಥರು 'ಕೆರೆ ಹಬ್ಬ' ಆಚರಿಸಿದರು. ಊರಿನ ಕೃಷಿಕ ಮಹಾಬಲೇಶ್ವರ ಅವರ ಕುಟುಂಬ, ತಮ್ಮ ಸಾವಯವ ಕಬ್ಬನ್ನು ಈ ಸಂಭ್ರಮಕ್ಕೆ ಸಮರ್ಪಿಸಿದರು. ಕೆರೆಯ ದಂಡೆಯಲ್ಲಿಯೇ ಜನರನ್ನು ಆಹ್ವಾನಿಸಿ, ಕಬ್ಬಿನ ಹಾಲು, ಮಂಡಕ್ಕಿ, ಮಿರ್ಚಿ ಮುಂತಾದ ಸರಳ ತಿನಿಸುಗಳೊಂದಿಗೆ ಆತಿಥ್ಯ ನೀಡಿದರು.

ಹಬ್ಬದ ಸಂಭ್ರಮಕ್ಕೆ ಕಬ್ಬಿನ ಹಾಲು, ಮಿರ್ಚಿ, ಮಂಡಕ್ಕಿ...

ಆ ದಿನದ ಸಂಭ್ರಮವೇ, ಮುಂದಿನ ವರ್ಷಗಳಲ್ಲಿ ಒಂದು ಹೊಸ ರೂಪ ತಾಳಿತು. 'ಕೆರೆ ಹಬ್ಬ' ನಿಧಾನವಾಗಿ 'ಆಲೆಮನೆ ಹಬ್ಬ'ವಾಯಿತು.

ಇಂದು, ಈ ಹಬ್ಬ ಕೇವಲ ಒಂದು ಆಚರಣೆ ಅಲ್ಲ. ಅದು ಊರಿನ ಒಗ್ಗಟ್ಟು, ಪರಿಸರ ಸಂರಕ್ಷಣೆ ಮತ್ತು ಸಂಸ್ಕೃತಿಯ ಜೀವಂತ ಸಂಕೇತವಾಗಿದೆ. ಹಬ್ಬದ ಒಂದು ವಾರ ಮೊದಲು ಕೆರೆಯನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಲಾಗುತ್ತದೆ. ಸುತ್ತಮುತ್ತಲ ಪರಿಸರವನ್ನು ಸಂರಕ್ಷಿಸುವ ಕೆಲಸಕ್ಕೂ ವಿಶೇಷ ಆದ್ಯತೆ ನೀಡಲಾಗುತ್ತದೆ.

ಸಂಜೆ ಹೊತ್ತಿಗೆ ಕೆರೆಯ ಸುತ್ತಲೂ ದೀಪಾಲಂಕಾರ ಹೊಳೆಯುತ್ತದೆ. ಗ್ರಾಮಸ್ಥರು ಮಾತ್ರವಲ್ಲ, ಅವರ ಪರಿಚಿತರು, ಸ್ನೇಹಿತರು, ನೆಂಟರು ಸೇರಿದಂತೆ ಸಾವಿರಾರು ಜನರು ಈ ಹಬ್ಬಕ್ಕೆ ಸಾಕ್ಷಿಯಾಗುತ್ತಾರೆ. ಕಬ್ಬಿನ ಹಾಲು, ಮಸಾಲೆ ಮಂಡಕ್ಕಿ, ಮಿರ್ಚಿ, ಮಾವಿನ ಮಿಡಿ–ಸರಳವಾದರೂ ಹೃದಯಸ್ಪರ್ಶಿ ಆತಿಥ್ಯ ಎಲ್ಲರಿಗೂ ಸಿಗುತ್ತದೆ.

ಮಹಾಬಲೇಶ್ವರ ಕುಟುಂಬ ಬೆಳೆದ ಕಬ್ಬನ್ನು ಹಬ್ಬಕ್ಕೆ ಬಳಸಿಕೊಂಡು, ಉಳಿದುದನ್ನು ಬೆಲ್ಲ ತಯಾರಿಕೆಗೆ ಉಪಯೋಗಿಸುತ್ತಾರೆ. ಹಬ್ಬದ ಸಂದರ್ಭದಲ್ಲಿ ನಡೆಯುವ ಸಂಗೀತ, ನೃತ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಸಂಭ್ರಮಕ್ಕೆ ಮತ್ತಷ್ಟು ಮೆರುಗು ನೀಡುತ್ತವೆ. ಅತಿಥಿಗಳಿಗೂ ತಮ್ಮ ಪ್ರತಿಭೆ ಪ್ರದರ್ಶಿಸಲು ಅವಕಾಶ ಕಲ್ಪಿಸಲಾಗುತ್ತದೆ.

ನೀಚಡಿ ಟ್ರಸ್ಟ್, ಶ್ರೀ ರಾಜರಾಜೇಶ್ವರಿ ಮಹಿಳಾ ಸಮಾಜ, ಚಿಂತನಾ ಯುವಕ ಸಂಘ, ಶ್ರೀ ಕಲಾ ಪ್ರತಿಷ್ಠಾನ ಹಾಗೂ ಗ್ರಾಮಾಭಿವೃದ್ಧಿ ಸಂಘ–ಇವುಗಳ ಸಮನ್ವಯದಿಂದ ಈ ಹಬ್ಬ ಇನ್ನಷ್ಟು ಬಲ ಪಡೆದುಕೊಂಡಿದೆ.

ಒಟ್ಟಿನಲ್ಲಿ, ನೀಚಡಿಯ ಆಲೆಮನೆ ಹಬ್ಬ ಕೇವಲ ಒಂದು ಹಬ್ಬವಲ್ಲ. ಅದು ಒಂದು ಸಂದೇಶ. ಒಂದು ಕೆರೆಯನ್ನು ಉಳಿಸಿದರೆ, ಒಂದು ಊರು ಉಳಿಯುತ್ತದೆ. ಒಂದು ಊರು ಒಗ್ಗಟ್ಟಾದರೆ, ಸಂಸ್ಕೃತಿಯೂ, ಸಂಬಂಧಗಳೂ ಮರುಜೀವ ಪಡೆಯುತ್ತವೆ. ❖

ಸವಿಯಲು ಕಬ್ಬಿನ ಹಾಲು ಸಿದ್ಧ

ಆಲೆಮನೆ ಹಬ್ಬದ ಪರಿಮಳ

ಬೆಳಗಿನ ಮಂಜು ಇನ್ನೂ ಸಂಪೂರ್ಣ ಕರಗಿರಲಿಲ್ಲ. ಗದ್ದೆಯಿಂದ ಕಡಿದು ತರಲಾಗುತ್ತಿರುವ ಕಬ್ಬಿನಜಲ್ಲೆಗಳು ಆಲೆಮನೆ ಅಂಗಳದಲ್ಲಿ ಗುಡ್ಡೆಯಾಗುತ್ತಿವೆ. ಗಾಣದ ಚಕ್ರ ನಿಧಾನವಾಗಿ ಸುತ್ತಲು ಶುರುವಾಗುತ್ತಿದ್ದಂತೆ, ಹಸಿರು ಕಬ್ಬಿನ ರಸ ಜಲದಂತೆ ಹರಿಯುತ್ತದೆ.

ಈ ದೃಶ್ಯ ಕೇವಲ ಕೃಷಿ ಪ್ರಕ್ರಿಯೆಯಲ್ಲ, ಇದು ಮಲೆನಾಡಿನ ಜೀವಂತ ಸಂಸ್ಕೃತಿ.

ಸಾಗರ ತಾಲ್ಲೂಕಿನ ಹಳೆಇಕ್ಕೇರಿಯಲ್ಲಿ ಪ್ರತೀ ವರ್ಷ ನಡೆಯುವ ಆಲೆಮನೆ ಹಬ್ಬ, ಈ ಸಂಸ್ಕೃತಿಗೆ ಹೊಸ ಅರ್ಥ ನೀಡುತ್ತದೆ. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಗಾಯಕಿ ವಸುಧಾ ಶರ್ಮ ಮತ್ತು ತಬಲಾ ವಿದ್ವಾಂಸ ನರಸಿಂಹಮೂರ್ತಿ ದಂಪತಿ, ತಮ್ಮ ಕುಟುಂಬದೊಂದಿಗೆ ಈ ಸಂಭ್ರಮವನ್ನು ಜೀವಂತವಾಗಿಟ್ಟಿದ್ದಾರೆ.

ಇಂತಹ ಸಂಭ್ರಮ ಈಗ ಒಂದು ಹಳ್ಳಿಗೆ ಮಾತ್ರ ಸೀಮಿತವಾಗಿಲ್ಲ. ಸಮೀಪದ ಶಾಂತನಕೊಪ್ಪದಲ್ಲಿ ಕೃಷಿಕ ಶ್ರೀಕಾಂತ್ ಕೂಡ ಇಂಥ ಆಲೆಮನೆ ಹಬ್ಬವನ್ನು ಆಯೋಜಿಸಿ ಗಮನ ಸೆಳೆದಿದ್ದಾರೆ.

ಹಬ್ಬದ ದಿನ, ಆಲೆಮನೆ ಅಂಗಳವೇ ಒಂದು ಮುಕ್ತ ವೇದಿಕೆ. ಯಾರಿಗೂ ವಿಶೇಷ ಆಹ್ವಾನ ಇಲ್ಲ; ಆದರೂ ಎಲ್ಲರೂ ಆಹ್ವಾನಿತರೇ. ಹತ್ತಿರದ ಹಳ್ಳಿಗಳಿಂದ ಹಿಡಿದು ದೂರದ ನಗರಗಳವರೆಗೂ ಜನರು ಇಲ್ಲಿ ಸೇರುತ್ತಾರೆ.

ಸ್ವಾಗತದಲ್ಲಿ ಅತಿರೇಕ ಇಲ್ಲ; ಆದರೆ ಆತ್ಮೀಯತೆ ಅಪಾರ. ಹೊಸ ಕಬ್ಬಿನ ರಸ, ಮಿಡಿ ಉಪ್ಪಿನಕಾಯಿ, ಮಂಡಕ್ಕಿ, ಮಿರ್ಚಿ– ಸರಳವಾದರೂ ಅದ್ಭುತ ರುಚಿಗಳು.

ಒಬ್ಬ ಹಿರಿಯ ರೈತ, 'ಇದು ನಮ್ಮ ಬಾಲ್ಯದ ರುಚಿ' ಎಂದು ಹೇಳುವಾಗ, ಈ ಹಬ್ಬದ ಅರ್ಥ ಸ್ಪಷ್ಟವಾಗುತ್ತದೆ. ಪ್ರತಿಯೊಂದು ಭೇಟಿ ಒಂದು ಪುಟ್ಟ ಪುನರ್ಮಿಲನವಾಗುತ್ತದೆ.

ಸಾವಿರಾರು ಜನರು ಬಂದು, ಸಿಹಿ ಸವಿದು, ಮಾತು-ನಗು ಹಂಚಿಕೊಂಡು ಹಿಂತಿರುಗುತ್ತಾರೆ. ಆತಿಥ್ಯ ನೀಡುವವರಿಗೂ, ಸ್ವೀಕರಿಸುವವರಿಗೂ ಈ ಕ್ಷಣಗಳು ಒಂದೇ ರೀತಿಯ ಆನಂದ ನೀಡುತ್ತವೆ.

ಸಂಗೀತ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ಈ ದಂಪತಿ, ಕೃಷಿಯೊಂದಿಗೆ ತಮ್ಮ ನಂಟನ್ನು ಉಳಿಸಿಕೊಂಡಿದ್ದಾರೆ. ಅವರ ಆಲೆಮನೆ ಹಬ್ಬದಲ್ಲೂ ಒಂದು ಲಯ, ಒಂದು ತಾಳ ಕಂಡುಬರುತ್ತದೆ.

ಇದು ಹೊಟ್ಟೆ ತುಂಬಿಸುವ ಹಬ್ಬವಲ್ಲ. ಇದು ಹೃದಯ ತುಂಬಿಸುವ ಹಬ್ಬ. ಆಧುನಿಕ ಜೀವನದಲ್ಲಿ ದೂರವಾಗುತ್ತಿರುವ ಸಂಬಂಧಗಳನ್ನು, ಈ ಆಲೆಮನೆ ಅಂಗಳ ಮತ್ತೆ ಹತ್ತಿರಕ್ಕೆ ತರುತ್ತದೆ. ಇಲ್ಲಿ ಸಿಹಿ ಕೇವಲ ಬೆಲ್ಲದಲ್ಲೇ ಇಲ್ಲ; ಅದು ಹಂಚಿಕೊಳ್ಳುವ ಕ್ಷಣಗಳಲ್ಲಿ ಇದೆ. ❖

ಪ್ರಾಣಿ ಪಕ್ಷಿಗಳ ದಾಹ ತಣಿಸುತ್ತಾ...

ಹಕ್ಕಿಗಳ ದಾಹ ನೀಗಿಸುವ ರಮೇಶ್

ಕಾಡಿನ ಹಕ್ಕಿಗಳಿಗೆ ಕಾಳು, ನೀರು, ಹಣ್ಣು...

• ಗಣಂಗೂರು ನಂಜೇಗೌಡ

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ಸಮೀಪದಲ್ಲಿರುವ ಕರಿಘಟ್ಟದ ಕಡಿದಾದ ರಸ್ತೆಯಲ್ಲೂ, ತೀವ್ರ ತಿರುವುಗಳನ್ನೂ ದಾಟುತ್ತ ಬೆಟ್ಟ ಏರುತ್ತಿದ್ದಾಗ ಕೆಲವು ಮರಗಳಲ್ಲಿ ನೇತಾಡುತ್ತಿದ್ದ ಮಣ್ಣಿನ ಮಡಕೆಗಳು ಮತ್ತು ಬೋಗುಣಿಗಳು ಕಣ್ಣಿಗೆ ಬಿದ್ದವು. ಅವು ಏನೋ ಅರ್ಥವತ್ತಾದ ಕಥೆಯನ್ನು ಹೇಳುವಂತೆ ಕಂಡವು.

ದೇವಾಲಯದ ಬಳಿಯ ಅರಣ್ಯ ಇಲಾಖೆಯ ನೌಕರನನ್ನು ಕೇಳಿದಾಗ, ರಮೇಶ್ ಪರಿಚಯವಾಯಿತು. ಏಳೆಂಟು ವರ್ಷಗಳಿಂದ ಕರಿಘಟ್ಟದ ಕಾಡಿನಲ್ಲಿ ಗಿಡ ನೆಟ್ಟು ಬೆಳೆಸೋದು, ಕಾಡಿಗೆ ಬೆಂಕಿ ತಗಲದಂತೆ ಜಾಗೃತಿ ಮೂಡಿಸುವುದು, ಬೇಸಿಗೆಯಲ್ಲಿ ಪ್ರಾಣಿ–ಪಕ್ಷಿಗಳಿಗೆ ಆಹಾರ–ನೀರು ಒದಗಿಸುವುದು– ಎಲ್ಲವನ್ನೂ ಆ ವ್ಯಕ್ತಿಯೇ ಮಾಡುತ್ತಿದ್ದಾರೆ ಎನ್ನುವುದು ತಿಳಿಯಿತು.

ಕರಿಘಟ್ಟದ ವ್ಯೂ ಪಾಯಿಂಟ್ ಕಡೆ ಹೋದಾಗ ಮರಗಳ ಮಧ್ಯೆ ತೂಗಾಡುತ್ತಿದ್ದ ಬೋಗುಣಿಗಳು ಕಂಡವು. ನೀರು ಕುಡಿಯುತ್ತಿದ್ದ ಒಂದು ಪಿಕಳಾರ (ಬುಲ್‌ಬುಲ್) ಹಾರಿಹೋದ ದೃಶ್ಯ, ಈ ಕಾರ್ಯದ ಅಗತ್ಯವನ್ನು ಮೌನವಾಗಿ ವಿವರಿಸಿತು.

'ಇಲ್ಲಿ ಪಕ್ಷಿಗಳು ಮಾತ್ರವಲ್ಲ, ಅಳಿಲು, ಮಂಗಗಳೂ ಇವೆ. ಬೇಸಿಗೆಯಲ್ಲಿ ಅವುಗಳಿಗೆ ಆಹಾರ ಸಿಗೋದಿಲ್ಲ. ಅದಕ್ಕಾಗಿಯೇ ಕಾಳುಗಳ ಜೊತೆಗೆ ಹಣ್ಣುಗಳನ್ನೂ ಇಡುತ್ತೇನೆ' ಎಂದು ರಮೇಶ್ ವಿವರಿಸಿದರು. ಗಿಳಿ, ಪಿಕಳಾರ, ಗೊರವಂಕಗಳು ಹಣ್ಣು ತಿನ್ನಿ ಬೀಜ ಪ್ರಸರಣ ಮಾಡುತ್ತವೆ. ಅದರ ಮೂಲಕವೇ ಕಾಡು ಬೆಳೆಸುವ ಚಕ್ರ ಮುಂದುವರೆಯುತ್ತದೆ ಎಂಬುದನ್ನು ಅವರು ಸರಳವಾಗಿ ಹೇಳಿದರು.

ಸುಮಾರು 250 ಎಕರೆ ವ್ಯಾಪ್ತಿಯ ಈ ಕರಿಘಟ್ಟದ ಅರಣ್ಯದಲ್ಲಿ ನೂರಾರು ಮರಗಳಿಗೆ ರಮೇಶ್ ಬೋಗುಣಿ ಮತ್ತು ಮಡಕೆಗಳನ್ನು ಕಟ್ಟಿದ್ದಾರೆ. ಪ್ರತಿಯೊಂದು ಬೋಗುಣಿಯಲ್ಲೂ ವಿಭಿನ್ನ ಧಾನ್ಯಗಳು– ರಾಗಿ, ನವಣೆ, ಸಜ್ಜೆ, ಜೋಳದ ನುಚ್ಚು ಇರುತ್ತವೆ. ಮಡಕೆಗಳಲ್ಲಿ ನೀರು. ಕೆಲವೆಡೆ ಬಾಟಲಿಗಳಲ್ಲೂ ಕಾಳುಗಳನ್ನು ತುಂಬಿ, ಚಮಚದ ಸಹಾಯದಿಂದ ಒಂದೊಂದೇ ಕಾಳು ಬೀಳುವಂತೆ ಮಾಡಿದ ವಿನೂತನ ಉಪಾಯವೂ ಕಾಣುತ್ತದೆ.

ಪ್ರತಿ ವರ್ಷ ಮಾರ್ಚ್‌ನಿಂದ ಮಳೆಗಾಲದವರೆಗೆ ಈ ಕಾರ್ಯ ನಿರಂತರ. ವಾರಕ್ಕೆ ಎರಡು ಬಾರಿ ನೀರು ಮತ್ತು ಆಹಾರ ತುಂಬುವ ಶ್ರಮ. ಈ ಎಲ್ಲವನ್ನು ಯಾವುದೇ ಪ್ರಚಾರದ ಆಸೆಯಿಲ್ಲದೆ ಮಾಡುವ ರಮೇಶ್, ಸ್ಥಳೀಯರಲ್ಲಿ 'ಪರಿಸರ ರಮೇಶ್' ಎಂದೇ ಪರಿಚಿತರು.

ಹಕ್ಕಿಗಳಿಗಿಟ್ಟ ಆಹಾರ

ಕರಿಘಟ್ಟ ಕೇವಲ ಒಂದು ಗುಡ್ಡವಲ್ಲ, ಇದು ಜೀವ ವೈವಿಧ್ಯತೆಯ ಜೀವಂತ ಪಾಠಶಾಲೆ. ಪಿಕಳಾರ, ಜೇನು ಹಿಡುಕ, ಕಾಡು ಪರಿವಾಳ, ಗೊರವಂಕ, ನವಿಲು ಸೇರಿದಂತೆ ಅನೇಕ ಪಕ್ಷಿಗಳು; ಅಳಿಲು, ಮೊಲ, ಕಾಡುಹಂದಿ, ಚಿರತೆವರೆಗಿನ ಪ್ರಾಣಿಗಳು; ವಿವಿಧ ಔಷಧೀಯ ಗಿಡಮೂಲಿಕೆಗಳು ಈ ಕಾಡಿನ ಅಸ್ತಿತ್ವವನ್ನು ಸಮೃದ್ಧಗೊಳಿಸುತ್ತವೆ.

ಈ ಸಮೃದ್ಧಿಯನ್ನು ಉಳಿಸಿಕೊಳ್ಳಲು ರಮೇಶ್‌ರಂತಹವರ ಸೇವೆ ಎಷ್ಟು ಅಗತ್ಯವೆಂಬುದನ್ನು ಕರಿಘಟ್ಟದ ಮರಗಳಿಗೆ ನೇತಾಡುವ ಪ್ರತಿಯೊಂದು ಬೋಗುಣಿಯೂ, ಮಡಕೆಯೂ ಹೇಳುತ್ತಿವೆ. ಪ್ರಕೃತಿಯೊಡನೆ ಸಹಜೀವನ ನಡೆಸುವ ಪಾಠವನ್ನು ಅವರು ಮಾತಿಲ್ಲದೆ ಕಲಿಸುತ್ತಿದ್ದಾರೆ.

ಬೇಸಿಗೆಯ ಸುಡು ಬಿಸಿಲಿನ ನಡುವೆಯೂ, ಕರಿಘಟ್ಟದಲ್ಲಿ ಜೀವಜಲದ ಹಬ್ಬ ನಡೆಯುತ್ತಿದೆ. ❖

ಹಕ್ಕಿಗಳಿಗೆ ನೀರು ಇಡುತ್ತಿರುವ ಮನೋಹರ್

ಸಣ್ಣ ಪ್ರಯತ್ನ, ದೊಡ್ಡ ಸಂದೇಶ

• ಬಾಲಶೇಖರ ಬಂದಿ

ಬೆಳಗಾವಿ ಜಿಲ್ಲೆಯ ಮೂಡಲಗಿ ಶಿಕ್ಷಣ ಸಂಸ್ಥೆಯಲ್ಲಿ ಗ್ರಂಥಾಲಯ ಸಹಾಯಕ ಮನೋಹರ ಲಮಾಣಿ ಅವರು ಕಳೆದ ಒಂದೂವರೆ ದಶಕದಿಂದ ಪಕ್ಷಿಗಳಿಗೆ ನೀರು ಮತ್ತು ಆಹಾರ ಒದಗಿಸುತ್ತಿದ್ದಾರೆ. ಕಾಲೇಜು ಆವರಣದಲ್ಲಿ ಮಣ್ಣಿನ ತಟ್ಟೆಗಳನ್ನು ನೇತುಹಾಕಿ ನೀರು ತುಂಬಿಸುವುದು ಅವರ ದಿನಚರಿಯ ಭಾಗವಾಗಿದೆ.

ಗ್ರಂಥಾಲಯ ಕೆಲಸ ಮುಗಿದ ಬಳಿಕವೂ ಅವರು ತೋಟದಲ್ಲಿ ಪಕ್ಷಿಗಳಿಗೆ ನೀರು ಹಾಕುತ್ತಾರೆ. ಅವರ ಈ ಸಣ್ಣ ಪ್ರಯತ್ನದಿಂದ ಕಾಲೇಜು ಆವರಣವೇ ಪಕ್ಷಿಗಳ ನೆಚ್ಚಿನ ತಾಣವಾಗಿದೆ. ವಿದ್ಯಾರ್ಥಿಗಳು ಕೂಡ ಈ ಕಾರ್ಯಕ್ಕೆ ಕೈಜೋಡಿಸುತ್ತಿದ್ದಾರೆ.

ಅವರ ಮಾತಿನಲ್ಲಿ, ಗುಬ್ಬಿಗಳ ಕಲರವ ಕಡಿಮೆಯಾಗುತ್ತಿರುವುದು ನಗರೀಕರಣ ಮತ್ತು ನೀರಿನ ಕೊರತೆಯ ಪರಿಣಾಮ. ಆದ್ದರಿಂದ ಸಣ್ಣ ಮಟ್ಟದ ಪ್ರಯತ್ನಗಳೂ ಪರಿಸರ ಸಮತೋಲನಕ್ಕೆ ಮಹತ್ವದ ಕೊಡುಗೆ ನೀಡುತ್ತವೆ. ❖

ಮುನ್ನೋಟ 19-04-2026 ರಿಂದ 25-04-2026

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ನಿಮ್ಮ ಆಲೋಚನೆ ಬಹಳಷ್ಟು ದ್ವಂದ್ವದಿಂದ ಕೂಡಿರುತ್ತದೆ. ಆದಾಯವು ಮಧ್ಯಮ-ಗತಿಯಲ್ಲಿರುತ್ತದೆ. ಭೂಮಿಯ ವ್ಯವಹಾರ ಮಾಡುವವರಿಗೆ ಲಾಭ ಹೆಚ್ಚು. ಧರ್ಮ ವಿದ್ಯೆಯನ್ನು ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಹೆಚ್ಚು ಯಶಸ್ಸು ಇರುತ್ತದೆ. ಚರ್ಮ ಕಾಯಿಲೆಗಳು ಇರುವವರು ಎಚ್ಚರ ವಹಿಸಿ. ಸಂಗಾತಿಯ ಸಹಕಾರ ದೊರೆಯುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ವಾರದ ಆರಂಭದಲ್ಲೇ ನಿಮ್ಮ ಉತ್ಸಾಹ ಕುಗ್ಗಿದಂತೆ ಕಾಣಿಸುವುದು. ನಿಮ್ಮ ಆದಾಯವು ಖಂಡಿತ ನಿರೀಕ್ಷೆಯಷ್ಟಿರುತ್ತದೆ. ಕೃಷಿ ಭೂಮಿಯನ್ನು ಅಭಿವೃದ್ಧಿ ಮಾಡಬಹುದು. ವಿದ್ಯಾರ್ಥಿಗಳಿಗೆ ಯಶಸ್ಸು ದೊರೆಯುತ್ತದೆ. ಕೆಲವರಿಗೆ ಗುಪ್ತಾಂಗಗಳಲ್ಲಿ ಸಮಸ್ಯೆ ಕಾಣಿಸಬಹುದು. ಸಂಗಾತಿಗೆ ಆಸ್ತಿ ಸಿಗುವ ಯೋಗವಿದೆ. ವಿದೇಶದಲ್ಲಿ ಉದ್ಯೋಗದಲ್ಲಿರುವವರಿಗೆ ಈಗ ಹೆಚ್ಚು ಅಭಿವೃದ್ಧಿ ಇರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಆದಾಯವು ಸ್ವಲ್ಪ ಉತ್ತಮ ಸ್ಥಿತಿಯನ್ನು ತಲುಪುತ್ತದೆ. ಆಸ್ತಿ ವಿಚಾರದಲ್ಲಿ ಅತಿಯಾದ ಆತುರ ಬೇಡ. ಮಕ್ಕಳ ಬಗ್ಗೆ ಉತ್ತಮ ವಾರ್ತೆಗಳನ್ನು ಕೇಳಬಹುದು. ಸಂಗಾತಿಯಿಂದ ಆರ್ಥಿಕ ಸಹಕಾರ ಸಿಗುತ್ತದೆ. ವೃತ್ತಿಯ ಜಾಗದಲ್ಲಿ ಹಿತ ಶತ್ರುಗಳ ಕಾಟ ಜಾಸ್ತಿಯಾಗಬಹುದು. ಹಿರಿಯರಿಗೆ ವಿದೇಶಿಯಾನದ ಯೋಗವಿದೆ. ಅಲಂಕಾರಿಕ ವಸ್ತುಗಳನ್ನು ಮಾರುವವರ ಆದಾಯ ಹೆಚ್ಚುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಆದಾಯವು ಕಡಿಮೆ ಇರುತ್ತದೆ. ಧಾರ್ಮಿಕವಾಗಿ ಮಾತನಾಡುವಾಗ ಎಚ್ಚರವಿರಲಿ. ಕೆಲಸ ಕಾರ್ಯಗಳಿಗೆ ಬಂಧುಗಳ ಸಹಾಯ ಸ್ವಲ್ಪ ಮಟ್ಟಿಗೆ ಸಿಗಬಹುದು. ಸ್ಥಿರಾಸ್ತಿಯನ್ನು ಕೊಳ್ಳಲು ಮನಸ್ಸು ಮಾಡಬಹುದು. ಎಲೆಕ್ಟ್ರಾನಿಕ್ಸ್ ವಿದ್ಯಾರ್ಥಿಗಳಿಗೆ ಸ್ವಲ್ಪ ಅಭಿವೃದ್ಧಿ ಇರುತ್ತದೆ. ಕೆಲವರಿಗೆ ದೇಹದಲ್ಲಿ ಪಿತ್ತ ಹೆಚ್ಚಾಗಬಹುದು. ಅನಿರೀಕ್ಷಿತವಾಗಿ ವಿದೇಶಿ ಪ್ರಯಾಣ ಯೋಗವಿದೆ. ವೃತ್ತಿ ಸ್ಥಳದಲ್ಲಿದ್ದ ಕೆಲವು ಗೊಂದಲಗಳು ಕಡಿಮೆಯಾಗುತ್ತವೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಕೆಲಸ ಮಾಡಲು ಮುನ್ನುಗ್ಗುವ ಶಕ್ತಿ ಕಡಿಮೆಯಾದಂತೆ ಭಾಸವಾಗುತ್ತದೆ. ಆದಾಯವು ತಕ್ಕಮಟ್ಟಿಗೆ ಮಾತ್ರ ಇರುತ್ತದೆ. ನಿಮ್ಮ ಕೆಲವು ಕಾರ್ಯಗಳಿಗೆ ಒಡಹುಟ್ಟಿದವರ ಸಹಕಾರ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಅವರ ನಿರೀಕ್ಷೆಗಿಂತ ಹೆಚ್ಚು ಉತ್ತಮ ಫಲಿತಾಂಶ ಬರುತ್ತದೆ. ಕೆಲವರಿಗೆ ಮೂಳೆ ತೊಂದರೆ ಕಾಣಿಸಬಹುದು. ಸಂಗಾತಿಗೆ ವಿದೇಶದಲ್ಲಿ ಉದ್ಯೋಗ ದೊರೆಯುವ ಸಾಧ್ಯತೆಗಳಿವೆ. ಕೃಷಿಯಿಂದ ನಿರೀಕ್ಷೆಮಾಡಿದಷ್ಟು ಲಾಭ ಬರುವುದಿಲ್ಲ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ನಿಮ್ಮ ಪರಿಶ್ರಮಕ್ಕೆ ತಕ್ಕ ಫಲ ದೊರೆಯುತ್ತದೆ. ಆದಾಯದಲ್ಲಿ ಸ್ವಲ್ಪ ಏರಿಕೆಯನ್ನು ಕಾಣಬಹುದು. ಆಸ್ತಿ ವ್ಯವಹಾರ ಮಾಡುವವರ ಆದಾಯ ಗಣನೀಯವಾಗಿ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಇರುವುದಿಲ್ಲ. ಶ್ವಾಸಕೋಶದ ತೊಂದರೆಗಳು ಕೆಲವರನ್ನು ಕಾಡಬಹುದು. ಸಂಗಾತಿಯ ನಡವಳಿಕೆ ನಿಮಗೆ ಬೇಸರ ತರಿಸಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ವೈಯಕ್ತಿಕ ಅಲಂಕಾರಕ್ಕೆ ಹೆಚ್ಚು ಗಮನ ಕೊಡುವಿರಿ. ಆದಾಯವು ಕಡಿಮೆ ಇರುತ್ತದೆ. ನಿಮ್ಮ ಕೆಲಸಕಾರ್ಯಗಳಿಗೆ ಸಮಾಜದ ಸಹಕಾರ ದೊರೆಯುತ್ತದೆ. ಸಾಂಪ್ರದಾಯಿಕ ಕೃಷಿ ಮಾಡುವವರಿಗೆ ಅಭಿವೃದ್ಧಿ ಇದೆ. ವೈಮಾನಿಕ ಕ್ಷೇತ್ರದಲ್ಲಿ ಓದುತ್ತಿರುವವರಿಗೆ ಈಗ ಹೆಚ್ಚಿನ ಯಶಸ್ಸು ಲಭಿಸುತ್ತದೆ. ಮೂಳೆ, ನರರೋಗ ತಜ್ಞರಿಗೆ ಬೇಡಿಕೆ ಹೆಚ್ಚುತ್ತದೆ. ವೃತ್ತಿಯಲ್ಲಿ ಅನುಕೂಲತೆಗಳು ಹೆಚ್ಚುತ್ತವೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಮುನ್ನುಗ್ಗುವ ಹುಮ್ಮಸ್ಸು ನಿಮ್ಮಲ್ಲಿ ತುಂಬಿರುತ್ತದೆ. ಆದಾಯವು ಮಧ್ಯಮಗತಿಯ-ಲ್ಲಿರುತ್ತದೆ. ಆಟೋಮೊಬೈಲ್ ವಿಷಯ ಓದುತ್ತಿರುವವರಿಗೆ ಅನುಕೂಲತೆ ಹೆಚ್ಚು. ಕೆಲವರಿಗೆ ಕಣ್ಣಿನಲ್ಲಿ ದೋಷ ಕಾಣಿಸಬಹುದು. ಸಂಗಾತಿಯ ಆದಾಯ ಇಳಿಕೆಯಾಗುತ್ತದೆ. ಕೆಲವರಿಗೆ ಅನಿರೀಕ್ಷಿತವಾಗಿ ಹಣ ಲಾಭವಾಗುವ ಸಾಧ್ಯತೆಯಿದೆ. ತಾಯಿ ಆರೋಗ್ಯದಲ್ಲಿ ವ್ಯತ್ಯಾಸ-ವಾಗಬಹುದು. ಗಣಿಗಾರಿಕೆ ಮಾಡುವವರ ಆದಾಯ ಹೆಚ್ಚುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಬಹಳ ಗಂಭೀರವಾದ ವರ್ತನೆ ನಿಮ್ಮಲ್ಲಿರುತ್ತದೆ. ಆದಾಯವು ಸ್ವಲ್ಪ ಕಡಿಮೆ ಇರುತ್ತದೆ. ವಿದ್ಯಾರ್ಥಿಗಳಿಗೆ ಈಗ ಉತ್ತಮ ಫಲಿತಾಂಶ ಪಡೆಯುವ ಅವಕಾಶಗಳಿವೆ. ಫ್ಯಾಷನ್ ಡಿಸೈನಿಂಗ್ ಓದುತ್ತಿರುವವರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ಪ್ರಸೂತಿ ತಜ್ಞರಿಗೆ ಬೇಡಿಕೆ ಹೆಚ್ಚಾಗುತ್ತದೆ. ತಾಯಿಯಿಂದ ಸ್ವಲ್ಪ ಸಹಕಾರ ದೊರೆಯುತ್ತದೆ. ವೃತ್ತಿಯಲ್ಲಿ ಇದ್ದ ಕಿರಿಕಿರಿಗಳು ಸ್ವಲ್ಪ ಕಡಿಮೆಯಾಗುತ್ತವೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ವೃತ್ತಿ ಧರ್ಮ ನಿಮ್ಮನ್ನು ಕಾಪಾಡುತ್ತದೆ. ಆದಾಯವು ಕಡಿಮೆ ಇರುತ್ತದೆ. ಆದರೆ ವಿದೇಶಿ ವ್ಯವಹಾರ ಮಾಡುವವರ ಆದಾಯ ಹೆಚ್ಚುತ್ತದೆ. ಮಾತನಾಡುವಾಗ ಎಚ್ಚರಿಕೆ ಇರಲಿ. ಹಿತಶತ್ರುಗಳನ್ನು ನಿಗ್ರಹ ಮಾಡುವುದರಲ್ಲಿ ಸ್ವಲ್ಪ ಮಟ್ಟಿಗೆ ಯಶಸ್ವಿಯಾಗುವಿರಿ. ಸ್ಥಿರಾಸ್ತಿಯನ್ನು ಕೊಳ್ಳುವ ಯೋಗವಿದೆ. ಸಂಸಾರದಲ್ಲಿ ಸಂತೋಷವಿರುತ್ತದೆ. ಉದರ ಸಂಬಂಧಿ ದೋಷಗಳು ಈಗ ಕಾಣಿಸಬಹುದು. ಅನಿರೀಕ್ಷಿತವಾಗಿ ಸಂತರ ದರ್ಶನ ಲಭಿಸುವ ಸಾಧ್ಯತೆಗಳಿವೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಯುವಕರಲ್ಲಿ ಅತಿಯಾದ ಉಗ್ರತೆಯನ್ನು ಕಾಣಬಹುದು. ಹಿರಿಯರ ಕಾರ್ಯಗಳಿಗೆ ಸಾಕಷ್ಟು ಸಹಕಾರ ಸಿಗುತ್ತದೆ. ವಿದ್ಯಾರ್ಥಿಗಳಿಗೆ ಅವರ ನಿರೀಕ್ಷೆಗಿಂತ ಹೆಚ್ಚಿನ ಫಲಿತಾಂಶ ಪಡೆಯುವ ಯೋಗವಿದೆ. ತಾಯಿಯ ಆರೋಗ್ಯದಲ್ಲಿ ವ್ಯತ್ಯಾಸವನ್ನು ಕಾಣಬಹುದು. ಹಿರಿಯರು ಮಾಡುವ ಧಾರ್ಮಿಕ ಕಾರ್ಯಗಳಿಗೆ ಎಲ್ಲರಿಂದ ಶ್ಲಾಘನೆ ಸಿಗುತ್ತದೆ. ಅದಿರು ವ್ಯವಹಾರ ಮಾಡುವವರ ಆದಾಯ ಹೆಚ್ಚುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ನಿಮ್ಮ ಬುದ್ಧಿವಂತಿಕೆಯು ಕೆಲಸ ಮಾಡದೆ ಹೆಚ್ಚು ಶ್ರಮ ಪಡಬೇಕಾದೀತು. ಆದಾಯವು ಮಧ್ಯಮಗತಿಗಿಂತ ಹೆಚ್ಚಿರುತ್ತದೆ. ಸ್ವಂತ ಬುದ್ಧಿಯಿಂದ ಆದಾಯವನ್ನು ಹೆಚ್ಚು ಮಾಡಿಕೊಳ್ಳಬಹುದು. ಭಾಷಣಕಾರರಿಗೆ ಮತ್ತು ಸಂಗೀತಗಾರರಿಗೆ ಉತ್ತಮ ವೇದಿಕೆ ದೊರೆತು, ಆದಾಯವು ಹೆಚ್ಚುತ್ತದೆ. ಉದರ ಸಂಬಂಧಿ ದೋಷಗಳು ಕಾಡಬಹುದು.

ಪದಬಂಧ 2940

ಮೇಲಿಂದ ಕೆಳಕ್ಕೆ

1. ಅಯ್ಯೋ ಎಂದಾಗ ಆವರಿಸುವ ಗೊಂದಲ 4
2. ಸಂಧ್ಯೆಯ ಮೂರು ಸಮಯದಲ್ಲೂ ಕಾಲಿಡುವವಳು 4
3. ಅಕ್ಕನ ಗಂಡನ ಜೊತೆಗೂಡುವ ಆಂತರ್ಯದ ಕೂಡಲು 5
4. ನಮಗೆ ವೈರಿಗಳಿಲ್ಲದಂತೆ ಮಾಡುವ ರಿಪು ನಿರ್ನಾಮ 5
8. ಬ್ರಾಹ್ಮಣಿಕೆಗೆ ಜುಟ್ಟಿನ ಜೊತೆಗೂಡುವ ಯಜ್ಞೋಪವೀತ 4
9. ಹಳ್ಳಿಗಳಿಗೆ ನೀರಿನಾಸರೆಯಾಗಿದ್ದ ತಟಾಕದ ಏರಿ 4
10. ಭಾರಿ ಎನಿಸುವ ಭವ್ಯವಾದ ಅರಸನ ಮನೆ 4
11. ಪರಮಾತ್ಮನನ್ನು ನಿಷ್ಠೆಯಿಂದ ನೋಮು ಮಾಡುವ ಭೀಷ್ಮ 4
13. ಹೆಚ್ಚು ಕಾಸು ಮಾಡಿರುವ ಸಿರಿವಂತರು 5
14. ವ್ರತ, ಹೋಮಾದಿಗಳಲ್ಲಿ ಮೊದಲು ಮಾಡುವ ಗಂಗೆಯ ಮಂಗಳ ಕುಂಭಾರಾಧನೆ 5
16. ಈಶ್ವರನೇ ಶತ್ರುವಲ್ಲ, ಇವನು ಶತ್ರುಸಂಹಾರಿ 4
17. ಒಳಗೊಳಗೇ ಒದ್ದೆಯಾಗಿ ಒದ್ದಾಡುವ ಕೋಪ ದುಃಖ 4

ಎಡದಿಂದ ಬಲಕ್ಕೆ

1. ಅಹಾ ಇದು ಬರೀ ಇರುಳಲ್ಲ, ಇರುಳಿಡೀ 4
3. ನಮ್ಮ ರಾಷ್ಟ್ರ ದೇವಿಯ ಒಡೆಯ 4
5. ಸಮಯವನ್ನು ನಿಯಂತ್ರಿಸುವ ಭಯಸ್ವರೂಪದ ಮಹಾದೇವ 5
6. ದಾರ್ಶನಿಕ ಕಾವ್ಯಬ್ರಹ್ಮ ಉದಾಹರಣೆಗೆ ಕಬೀರ, ಶಿಶುನಾಳ, ರಾಮದಾಸ... 4
7. ಮನೆಯ ಹಿರಿಯನಾಗಿ ಎಲ್ಲವನ್ನೂ ನಿಭಾಯಿಸುವವನ ಪಟ್ಟ 5
10. ಕೌಸಲ್ಯಾತನಯ ಕೊಟ್ಟ ಜೀವನ ಒಸಗೆ 5
12. ಧಾನ್ಯ ತುಂಬುವ ಕೀಟ 3
13. ಪ್ರಪಂಚದ ಬೇಕು ಬೇಡದ ವಿಷಯವನ್ನು ಚರ್ಚೆ ಮಾಡುವ ಅಂಗಳದ ಬೆಂಚು 5
15. ವಿಷ್ಣುವಿನ ಬಗ್ಗೆ ಆಂತರಂಗದಲ್ಲಿ ಹರಿಯುವ ಯೋಚನೆ ತರ್ಕ 5
18. ಬಂಗಾಳ ಪ್ರಾಂತದ ಪ್ರಾಚೀನ ನಾಮ 4
19. ಪೂರ್ಣ ಪ್ರಮಾಣದಲ್ಲಿ ಪ್ರಮಾದ ಉಂಟುಮಾಡುವ ನೆರೆ 5
20. ಉಗ್ರ ರೂಪಿ ಮಹಾದೇವನಿಗೆ ಮಾಡುವ ಧೂಪ, ದೀಪ ,ನೈವೇದ್ಯ ಅರ್ಚನೆ ಇತ್ಯಾದಿ 4
21. ತೇರು ಸಾಗುವ ರಸ್ತೆ 4

1			2	■	■	■	3			4
	■	■	5					■	■	
	■	■		■	■	■	6			
7	8			9	■	■		■	■	
■		■	■		■	10			11	
■		■	■	12			■	■		■
13			14		■		■	■		■
	■	■		■	■	15	16			17
18				■	■	■		■	■	
	■	■	19					■	■	
20				■	■	■	21			

ಪದಬಂಧ ಉತ್ತರ -2939

ಮೇಲಿಂದ ಕೆಳಕ್ಕೆ

1.ಮೂಷಿಕ 2.ರಜಾ 3.ಹದ 4.ದಿಬ್ಬಣ 6.ವಿಶ್ರಾಂತ 8.ಲುಕ್ಸಾನು 9.ಕವನ 10.ಕುಂತಿಮಾದರಿ 11.ಲವಣಕಾರಿ 12.ಸಲಾಮು 14.ರತ್ನಾಂಗಿ 16. ಸಂಸಾರಿ 18.ಕಡ್ಡಾಯ 20.ಪೇಪರ 21.ಮುದುಕ 23.ಶರಣ 24.ಕಳೆ 25.ಕರ

ಎಡದಿಂದ ಬಲಕ್ಕೆ

1. ಮೂಲಾಧಾರ 3.ಹಟವಾದಿ 5.ಜಾತಿವಿವಾದ 7.ಕಟೀಲು 9.ಕಲ್ಯಾಣ 10.ಕುಂತಲ 12.ಸಹಾನುಭೂತಿ 13.ವಚನಕಾರ 15.ಮುಕ್ತಸಂವಾದ 17.ಕಾಡುಕಮಂಗಿ 19.ರಿಪೇರಿ 21.ಮುರಾರಿ 22.ಯತೀಶ 24.ಕಲಾರಸಿಕ 26.ಕರಾವಳಿ 27.ರಮ್ಯತಾಣ

ರಂಗದಾಚೆಗೂ ಕಾಡುವ ಶಕೀಲ್ ನಾಟಕಗಳು

ಶಕೀಲ್ ಅಹ್ಮದ್ ತಮ್ಮ ನಾಟಕಗಳಲ್ಲಿ ಪ್ರೇಕ್ಷಕರನ್ನು ಕೇವಲ ಮನರಂಜನೆಗಷ್ಟೇ ಸೀಮಿತಗೊಳಿಸುವುದಿಲ್ಲ; ಅವರನ್ನು ಚಿಂತನೆಗೆ, ಸಂವಾದಕ್ಕೆ ಹಚ್ಚುತ್ತಾರೆ. ಸಮಾಜದ ಪ್ರಸಕ್ತ ಸಮಸ್ಯೆಗಳನ್ನಿಟ್ಟುಕೊಂಡು ನಾಟಕ ಸಿದ್ಧಪಡಿಸುವ ಇವರು ರಂಗಭೂಮಿಗೆ ಹೊಸ ಆಲೋಚನೆಗಳನ್ನು ತರುತ್ತಿದ್ದಾರೆ.

• ದಿವ್ಯಶ್ರೀ ಮುದಕವಿ

ಧಾರವಾಡದಲ್ಲಿ ಶಕೀಲ್ ಅಹ್ಮದ್ ಅವರ 'ಫಾರ್ ಎ ಬೈಟ್ ಆಫ್ ಫುಡ್' ಏಕವ್ಯಕ್ತಿ ನಾಟಕ ಪ್ರದರ್ಶನ ಮುಗಿದ ಕ್ಷಣದಲ್ಲೇ ಸಭಾಂಗಣದಲ್ಲಿ ಜೋರಾದ ಕರತಾಡನ ಮೊಳಗಿತು. ಆದರೆ ಆ ಚಪ್ಪಾಳೆಯ ನಂತರ ಏಕಾಏಕಿ ಮೌನ ನೆಲಸಿತು. ನಾಟಕ ಮುಗಿದರೂ ಪ್ರೇಕ್ಷಕರು ತಮ್ಮ ಸ್ಥಾನಗಳಿಂದ ಕದಲಲಿಲ್ಲ. ಕೆಲವೇ ಕ್ಷಣಗಳಲ್ಲಿ ಆ ಮೌನ ಚರ್ಚೆಯಾಗಿ ಮಾರ್ಪಟ್ಟಿತು. ಆಹಾರ ಆಯ್ಕೆಯ ಹಕ್ಕಿನ ಬಗ್ಗೆ ಗಂಭೀರ ಸಂವಾದ ಆರಂಭವಾಯಿತು. ಉತ್ತರ ಪ್ರದೇಶದ ದಾದ್ರಿ ಗುಂಪು ಹತ್ಯೆ ಘಟನೆಯನ್ನು ಆಧರಿಸಿದ ಈ ನಾಟಕ, ಪ್ರೇಕ್ಷಕರ ಮನಸ್ಸಿನಲ್ಲಿ ಅಸಹಜವಾದರೂ ಅಗತ್ಯವಾದ ಪ್ರಶ್ನೆಗಳನ್ನು ಎಸೆದಿತ್ತು. ನಾಟಕದ ನಿಜವಾದ ಯಶಸ್ಸು ಇದೇ.

ಶಕೀಲ್ ಅಹ್ಮದ್

ಇಂತಹ ಪ್ರತಿಕ್ರಿಯೆಗಳನ್ನು ಹುಟ್ಟಿಸುವುದು ಶಕೀಲ್ ಅವರ ನಾಟಕಗಳ ವಿಶಿಷ್ಟ ಗುಣ. ನಲ್ವತ್ತು ವರ್ಷದ ಈ ರಂಗಕರ್ಮಿ, ಪ್ರೇಕ್ಷಕರನ್ನು ಕೇವಲ ಮನರಂಜನೆಗಷ್ಟೇ ಸೀಮಿತಗೊಳಿಸುವುದಿಲ್ಲ; ಅವರನ್ನು ಚಿಂತನೆಗೆ, ಸಂವಾದಕ್ಕೆ ಹಚ್ಚುತ್ತಾರೆ. ಸರ್ಕಾರದ ನೀತಿಗಳು, ಸಾಂಸ್ಕೃತಿಕ ಆಚರಣೆಗಳು, ಸಾಮಾಜಿಕ ಬೆಳವಣಿಗೆಗಳ ಬಗ್ಗೆ ಕಠಿಣ ಪ್ರಶ್ನೆಗಳನ್ನು ವೇದಿಕೆಯ ಮೇಲೆ ಇಡುವುದು ಅವರ ನಾಟಕಗಳ ಧ್ಯೇಯ. ಅವರ ದೃಷ್ಟಿಯಲ್ಲಿ ರಂಗಭೂಮಿ ಕೇವಲ ಮನರಂಜನೆಯ ವೇದಿಕೆ ಅಲ್ಲ; ಅದು ಸಾರ್ವಜನಿಕ ಮತ್ತು ರಾಜಕೀಯ ಚರ್ಚೆಯ ಜೀವಂತ ತಾಣ.

ತೆರಿಗೆ ಮತ್ತು ಬೆಲೆ ಏರಿಕೆ ಕುರಿತು 'ಕೊಡಲ್ಲ ಅಂದ್ರೆ ಕೊಡಲ್ಲ', ಅತೋಲ್ ಫುಗಾರ್ಡ್ ಅವರ ಕೃತಿಯ ಅನುವಾದ 'ಅನಾಮಿಕನ ಸಾವು', ಮತ್ತು ಅಡಾಲ್ಫ್ ಹಿಟ್ಲರ್ ಅಧಿಕಾರಾರೋಹಣವನ್ನು ವ್ಯಂಗ್ಯವಾಗಿ ಚಿತ್ರಿಸುವ 'ತಿಂಡಿಗೆ ಬಂದ ತುಂಡೇರಾಯ'–ಈ ನಾಟಕಗಳು ಅವರ ಚಿಂತನೆಯ ವೈವಿಧ್ಯತೆಯನ್ನು ತೋರಿಸುತ್ತವೆ.

ಖ್ಯಾತ ರಂಗಕರ್ಮಿ ಮಂಗಳಾ ಎನ್., 'ಫಾರ್ ಎ ಬೈಟ್ ಆಫ್ ಫುಡ್ ನಾಟಕ ನನ್ನನ್ನು ಹಲವು ತಿಂಗಳು ಕಾಡಿತು. ಆಹಾರದ ಆಯ್ಕೆಯ ಕಾರಣಕ್ಕಾಗಿ ಒಬ್ಬನನ್ನು ಕೊಲ್ಲುವುದು ಎಷ್ಟು ಸರಿ ಎನ್ನುವ ಪ್ರಶ್ನೆ ಅದು ನಮ್ಮ ಮುಂದೆ ಇಡುತ್ತದೆ. 'ಕೊಡಲ್ಲ ಅಂದ್ರೆ ಕೊಡಲ್ಲ' ನಾಟಕ ದೈನಂದಿನ ಆರ್ಥಿಕ ಆತಂಕಗಳನ್ನು ವಿಭಿನ್ನ ಶೈಲಿಯಲ್ಲಿ ತೀಕ್ಷ್ಣವಾಗಿ ವಿಮರ್ಶಿಸುತ್ತದೆ' ಎನ್ನುತ್ತಾರೆ.

ಪ್ರೇಕ್ಷಕರಲ್ಲೊಬ್ಬರಾದ ಶಂಕರ ಎನ್.ಕೆ. ಹೇಳುವಂತೆ, 'ಅನಾಮಿಕನ ಸಾವು ನಾಟಕ ಈಗಿನ ಸನ್ನಿವೇಶಕ್ಕೆ ಬಹಳ ಸೂಕ್ತ. ಎನ್‌ಆರ್‌ಸಿ ಹಿನ್ನೆಲೆ, ಗುರುತು ಸಾಬೀತುಪಡಿಸುವ ಭೀತಿ, ಆರ್ಥಿಕ ಶೋಷಣೆ–ಇವುಗಳನ್ನು ಪರಿಣಾಮಕಾರಿಯಾಗಿ ತೋರಿಸುತ್ತದೆ.'

ಸಮಾಜದ ಸಂಕೀರ್ಣ ಪ್ರಶ್ನೆಗಳನ್ನು ಜನರಿಗೆ ಅರ್ಥವಾಗುವ ರೀತಿಯಲ್ಲಿ ರಂಗಕ್ಕೆ ಇಳಿಸುವುದು ಶಕೀಲ್ ಅವರ ಶಕ್ತಿ. 2015ರಲ್ಲಿ ವಿಜಯಪುರ ಜಿಲ್ಲೆಯ ಲೋಣಿ ಬಿ.ಕೆ. ಗ್ರಾಮದಲ್ಲಿ 'ದಿ ಸ್ಪಿನ್ನಿಂಗ್ ಟ್ರೀ ಥಿಯೇಟರ್ ಕಂಪನಿ'ಯನ್ನು ಸ್ಥಾಪಿಸಿದ ಅವರು, ಬಹುಭಾಷಾ ನಟ ಪ್ರಕಾಶ್ ರಾಜ್ ನೇತೃತ್ವದ 'ನಿರ್ದಿಗಂತ' ಸೇರಿದಂತೆ ಹಲವು ತಂಡಗಳೊಂದಿಗೆ ಕೆಲಸ ಮಾಡಿದ್ದಾರೆ. ದೈಹಿಕ ಚಲನವಲನಗಳಿಗೆ ಪ್ರಾಮುಖ್ಯತೆ ನೀಡುವ ಅವರ ಪ್ರದರ್ಶನ ಶೈಲಿ, ಪಾತ್ರಧಾರಿಗಳನ್ನು ಹೆಚ್ಚು ನೈಜವಾಗಿಸುತ್ತದೆ.

ತಂಡದ ಸದಸ್ಯ ದಿನೇಶ್ ನಾಯ್ಕ್ ವಿವರಿಸುವಂತೆ, 'ನಟರ ದೈಹಿಕ ಚಲನವಲನಗಳ ಅಧ್ಯಯನ ಮತ್ತು ಪ್ರಾದೇಶಿಕ ಉಪಭಾಷೆಗಳ ಬಳಕೆಯಿಂದ ತಾಲೀಮು ಆರಂಭವಾಗುತ್ತದೆ. ಕಠಿಣ ದೈಹಿಕ ತರಬೇತಿ ಅವರ ಅಭಿನಯವನ್ನು ಇನ್ನಷ್ಟು ತೀವ್ರಗೊಳಿಸುತ್ತದೆ.'

ಮೂಕಾಭಿನಯ, ತೈ ಚಿ (ಚೀನಾದ ಸಮರ ಕಲೆ) ಮತ್ತು ಇತರ ರಂಗ ಅಂಶಗಳನ್ನು ಸಂಯೋಜಿಸುವ ಮೂಲಕ, ಕಲಾವಿದರು ಅಮೂರ್ತ ಭಾವನೆಗಳನ್ನು ಪರಿಣಾಮಕಾರಿಯಾಗಿ ವ್ಯಕ್ತಪಡಿಸುವಂತೆ ಶಕೀಲ್ ರೂಪಿಸುತ್ತಾರೆ.

ನಟ ವಿಶಾಲ್ ಅವರ ಪ್ರಕಾರ, 'ಈ ವಿಧಾನಗಳು ಉಸಿರಾಟ ನಿಯಂತ್ರಣ ಮತ್ತು ದೈಹಿಕ ಸಮತೋಲನಕ್ಕೂ ಸಹಕಾರಿಯಾಗುತ್ತವೆ.'

ಆದರೆ, ಕೋಮು ಮತ್ತು ರಾಜಕೀಯವಾಗಿ ಸೂಕ್ಷ್ಮ ವಿಷಯಗಳನ್ನು ಹೇಳುವುದರಿಂದ ಪ್ರತಿರೋಧವೂ ಎದುರಾಗುತ್ತದೆ. 'ಕೆಲವೆಡೆ ನಾಟಕದ ಪೋಸ್ಟರ್‌ಗಳನ್ನು ಕಿತ್ತುಹಾಕಲಾಗಿದೆ. ಕೆಲವೆಡೆ ಪ್ರದರ್ಶನದ ನಂತರ ಗಲಾಟೆಗಳು ನಡೆದಿವೆ' ಎಂದು ಶಕೀಲ್ ನೆನಪಿಸಿಕೊಳ್ಳುತ್ತಾರೆ. ಆದರೂ ಅವರು ಸುಮ್ಮನಿಲ್ಲ. 'ಪ್ರಜಾಪ್ರಭುತ್ವಕ್ಕೆ ಮೌನವಲ್ಲ, ಬೌದ್ಧಿಕ ಸಂವಾದವೇ ಅಗತ್ಯ' ಎನ್ನುವುದು ಅವರ ನಿಲುವು.

ವೇದಿಕೆಯಾಚೆಯ ಸಂವಾದ

ಶಕೀಲ್ ಅವರ ಸಂವಾದ ಕೇವಲ ವೇದಿಕೆಗೆ ಸೀಮಿತವಾಗಿಲ್ಲ. ಕಾಲೇಜುಗಳಲ್ಲಿ ಪ್ರದರ್ಶನ ನೀಡಿದ ನಂತರ ವಿದ್ಯಾರ್ಥಿಗಳೊಂದಿಗೆ ಚರ್ಚೆ ನಡೆಸುವುದು ಅವರ ಅಭ್ಯಾಸ. 'ವಿದ್ಯಾರ್ಥಿಗಳು ತಮ್ಮ ನಾಗರಿಕ ಹಕ್ಕುಗಳನ್ನು ಅರಿತುಕೊಳ್ಳಬೇಕು, ಪ್ರಶ್ನಿಸುವುದನ್ನು ಕಲಿಯಬೇಕು. ಅವರೇ ಪ್ರಜಾಪ್ರಭುತ್ವದ ಭವಿಷ್ಯ' ಎಂದು ಅವರು ಹೇಳುತ್ತಾರೆ.

ಶಕೀಲ್, ಬಾಲ್ಯದಲ್ಲೇ ರಂಗಭೂಮಿಯತ್ತ ಆಕರ್ಷಿತರಾದರು. ಶಾಲಾ ನಾಟಕಗಳು ಅವರ ಮೊದಲ ಪಾಠಶಾಲೆ. ಪಿಯುಸಿ ಓದುವಾಗ ಇಂಗ್ಲಿಷ್ ಮೇಲಿನ ಹಿಡಿತದ ಕೊರತೆಯಿಂದ ಆತ್ಮವಿಶ್ವಾಸ ಕುಂದಿದರೂ, ಅದೇ ಅವಧಿಯಲ್ಲಿ ಅವರು ರಂಗಭೂಮಿಯತ್ತ ಮುಖ ಮಾಡಿದರು. ಫಿಲ್ಮ್ ಆ್ಯಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾಗೆ ಸೇರುವ ಕನಸು ಸಾಧ್ಯವಾಗದಿದ್ದರೂ, ಮೈಸೂರಿನ ರಂಗ ಸಂಸ್ಕೃತಿ ಅವರನ್ನು ಬೆಳೆಸಿತು. ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾಗ 'ನೀನಾಸಂ'ನಲ್ಲಿ ರಂಗ ಶಿಕ್ಷಣ ಪಡೆದ ಅವರು, 2011ರಲ್ಲಿ ಪೂರ್ಣಾವಧಿ ರಂಗಭೂಮಿಗೆ ಕಾಲಿಟ್ಟರು.

ಯಕ್ಷಗಾನದಂತಹ ಸಾಂಪ್ರದಾಯಿಕ ಕಲೆಯಲ್ಲೂ ತರಬೇತಿ ಪಡೆದ ಅವರು, ನಂತರ ಸಿಂಗಪುರದ ಇಂಟರ್ ಕಲ್ಚರಲ್ ಥಿಯೇಟರ್ ಇನ್‌ಸ್ಟಿಟ್ಯೂಟ್‌ನಲ್ಲಿ ಏಷ್ಯನ್ ರಂಗ ಪ್ರಕಾರಗಳನ್ನು ಅಧ್ಯಯನ ಮಾಡಿದರು. 'ನೀನಾಸಂ ರಂಗಭೂಮಿಯ ವ್ಯಾಕರಣ ಕಲಿಸಿದರೆ, ಸಿಂಗಪುರದ ಅನುಭವ ದೇಹಭಾಷೆಯ ಮಹತ್ವ ತಿಳಿಸಿತು' ಎಂದು ಅವರು ಹೇಳುತ್ತಾರೆ.

ಕೆಂಟ್ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದಿರುವ ಶಕೀಲ್, ರಂಗಾಯಣ, ಸಾಣೇಹಳ್ಳಿ ಮತ್ತು ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದಂತಹ ಸಂಸ್ಥೆಗಳಲ್ಲಿ ಕಾರ್ಯಾಗಾರಗಳನ್ನು ನಡೆಸಿದ್ದಾರೆ ವಿಶ್ವದಾದ್ಯಂತ ಪ್ರದರ್ಶನ ನೀಡಿದ್ದರೂ, ಅವರ ಗಮನ ಮಾತ್ರ ಉತ್ತರ ಕರ್ನಾಟಕದ ಹಳ್ಳಿಗಳ ಮೇಲಿದೆ. 'ಜಾನಪದ ಸಂಸ್ಕೃತಿಯಿಂದ ಸಮೃದ್ಧ ಈ ಪ್ರದೇಶ ಅರ್ಥಪೂರ್ಣ ರಂಗಭೂಮಿಗೆ ಸಿದ್ಧವಾಗಿದೆ' ಎನ್ನುತ್ತಾರೆ ಅವರು.

ಮೈಸೂರು ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು ಹೇಳುವಂತೆ, 'ಶಕೀಲ್ ರಂಗಭೂಮಿಗೆ ಹೊಸ ಆಲೋಚನೆಗಳನ್ನು ತರುವ ಅಪರೂಪದ ಪ್ರತಿಭೆ.' ಎಸ್. ರಘುನಂದನ ಶಕೀಲ್ ಅವರ ರಾಜಕೀಯ ಜವಾಬ್ದಾರಿ ಮತ್ತು ಭಾಷಾ ಪ್ರಯೋಗವನ್ನು ಶ್ಲಾಘಿಸುತ್ತಾರೆ. ಕುಟುಂಬದ ಬಲ, ತಮ್ಮ ಪ್ರೌಢಶಾಲಾ ಶಿಕ್ಷಕ ರಾಜಶೇಖರ್ ಅವರ ಪ್ರೇರಣೆಯನ್ನು ಸ್ಮರಿಸುತ್ತಾ, ಶಕೀಲ್ ಹೇಳುತ್ತಾರೆ: 'ಮಾನವೀಯತೆಯನ್ನು ಜೀವಂತವಾಗಿಟ್ಟುಕೊಳ್ಳುವುದು ನನ್ನ ರಂಗಭೂಮಿಯ ಗುರಿ.'

ಅನುವಾದ: ಅಬ್ದುಲ್ ರಹಿಮಾನ್

ತಂಡದೊಂದಿಗೆ ಶಕೀಲ್ ರಂಗ ತಾಲೀಮು

ಕಥೆ
ಎಂ.ವಿ. ಶಶಿಭೂಷಣ ರಾಜು ಅವರ ಆಂಜನೇಯ ಮತ್ತು ಅಮೆರಿಕ
prajavani.net/short-story

ಕವನ
ಚಿಕ್ಕೋಬನಹಳ್ಳಿ ಚಾಂದ್ ಬಾಷ ಅವರ ಬರುವನೆ... ವಸಂತ ?
www.prajavani.net/poetry

ಸಾದರ ಸ್ವೀಕಾರ
ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ಕಾಲಾತೀತ ಕಥೆ ಸಮಕಾಲೀನ ಸ್ಪಂದನೆ

ನಾಟಕದ ದೃಶ್ಯ

• ಹರ್ಷವರ್ಧನ ಪಿ.ಆರ್.

ಕಲಾ ಪ್ರದರ್ಶನದ ಅಂತ್ಯ ಪ್ರೇಕ್ಷಕರ ಅಂತರಂಗದಲ್ಲಿ ಹೊಸ ಭಾವೋದಯಕ್ಕೆ ಕಾರಣವಾಗಬೇಕು ಎಂಬ ಮಾತಿಗೆ ಆಳ್ವಾಸ್ ರಂಗ ಅಧ್ಯಯನ ಕೇಂದ್ರದ 'ಕರ್ಣಾಸ್ತಮಾನ' ಏಕಾಂಕ ನಾಟಕ ಸಮರ್ಥ ನಿದರ್ಶನವಾಗಿ ಮೂಡಿಬಂದಿದೆ. ಇತಿಹಾಸದ ಕರ್ಣನ ಅಸ್ತಮಾನವನ್ನು ಇಂದಿನ ಸ್ಥಿತಿಗತಿಗಳೊಂದಿಗೆ ಸಂವಾದಗೊಳಿಸುವ ಈ ರಂಗ ಪ್ರಯೋಗ ಪ್ರೇಕ್ಷಕರ ಮನಸ್ಸನ್ನು ಆಳವಾಗಿ ತಟ್ಟುತ್ತದೆ.

ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಸಾಂಸ್ಕೃತಿಕ ಪ್ರಯೋಗಗಳಲ್ಲಿ ಪ್ರಮುಖವಾದ 'ಆಳ್ವಾಸ್ ರಂಗ ಅಧ್ಯಯನ ಕೇಂದ್ರ'ದಲ್ಲಿ ಈ ನಾಟಕ ಪ್ರದರ್ಶನಗೊಂಡಿತು. ಜೀವನ್ ರಾಂ ಸುಳ್ಯ ಅವರ ನಿರ್ದೇಶನದಲ್ಲಿ ಮೂಡಿಬಂದ ಅರ್ಧಗಂಟೆಯ ಏಕಾಂಕ, ತನ್ನ ತಾತ್ವಿಕ ಗಂಭೀರತೆ ಮತ್ತು ದೃಶ್ಯ ವೈವಿಧ್ಯದಿಂದ ಗಮನ ಸೆಳೆಯಿತು.

ಮಹಾಭಾರತದ ಕರ್ಣನ ಅಸ್ತಮಾನವನ್ನು ಆಧಾರವಾಗಿಸಿಕೊಂಡು, 'ಧರ್ಮ–ಅಧರ್ಮ', 'ಮಾತು–ಕೃತಿ', 'ಇತಿಹಾಸ–ವರ್ತಮಾನ'ಗಳ ನಡುವಿನ ಸಂಘರ್ಷವನ್ನು ನಾಟಕ ಸೂಕ್ಷ್ಮವಾಗಿ ಅನಾವರಣಗೊಳಿಸುತ್ತದೆ. ಸಾಂಪ್ರದಾಯಿಕ ಮೌಲ್ಯಗಳ ಜೊತೆಗೆ ಮಾನವೀಯತೆಯ ಪ್ರಶ್ನೆಯನ್ನು ಮುಖಾಮುಖಿಯಾಗಿಸಿ, ಸರಿ–ತಪ್ಪಿನ ತೀರ್ಪನ್ನು ಪ್ರೇಕ್ಷಕರಿಗೆ ಬಿಟ್ಟಿರುವುದು ಇದರ ವಿಶೇಷ.

ಖಾಂಡವವನದ ಪ್ರಸಂಗದೊಂದಿಗೆ ನಾಟಕ ತೆರೆದುಕೊಳ್ಳುತ್ತದೆ. ನಾಗ ಅಶ್ವಸೇನ ತನ್ನ ತಾಯಿ ತಕ್ಷಕಿಯನ್ನು ರಕ್ಷಿಸಲು ಹೋರಾಡುವ ದೃಶ್ಯ, ಇಂದಿನ ಪರಿಸರ ಸಂಕಟವನ್ನು ಪ್ರತಿಬಿಂಬಿಸುವಂತೆ ಕಾಣುತ್ತದೆ. 'ಈ ನೆಲ ನಮ್ಮದು' ಎಂಬ ಅವನ ಹೃದಯಭರಿತ ಮಾತುಗಳು ಸಮಕಾಲೀನ ಅರ್ಥವನ್ನು ಪಡೆದುಕೊಳ್ಳುತ್ತವೆ.

ಅರ್ಜುನನ ಮೇಲೆ ಪ್ರತೀಕಾರ ತೀರಿಸಲು ಅಶ್ವಸೇನನು 'ಸರ್ಪಮುಖಿ' ಬಾಣವಾಗಿ ಕರ್ಣನೊಂದಿಗೆ ಸೇರುತ್ತಾನೆ. ಆದರೆ, ಕುಂತಿಗೆ ನೀಡಿದ ವಚನದಂತೆ 'ಒಮ್ಮೆ ಪ್ರಯೋಗಿಸಿದ ಬಾಣವನ್ನು ಮತ್ತೆ ಪ್ರಯೋಗಿಸುವುದಿಲ್ಲ' ಎಂಬ ತನ್ನ ನಿಲುವಿಗೆ ಕರ್ಣ ಬದ್ಧನಾಗಿರುವುದು ನಾಟಕದ ಕೇಂದ್ರಬಿಂದು. ಕೃಷ್ಣನ ಚಾತುರ್ಯದಿಂದ ಕರ್ಣನಿಂದ ಈ ವಾಗ್ದಾನವನ್ನು ಪಡೆಯುವ ದೃಶ್ಯವನ್ನು ಫ್ಲ್ಯಾಶ್‌ಬ್ಯಾಕ್ ಶೈಲಿಯಲ್ಲಿ ನಿರೂಪಿಸಿರುವುದು ಪರಿಣಾಮಕಾರಿ ತಂತ್ರವಾಗಿದೆ.

ಕರ್ಣನ ಧರ್ಮನಿಷ್ಠೆಯನ್ನು ಪ್ರಶ್ನಿಸುವ ಸಂಭಾಷಣೆಗಳು ನಾಟಕಕ್ಕೆ ತೀವ್ರತೆ ನೀಡುತ್ತವೆ. 'ಅಧರ್ಮ ನಡೆದಾಗ ನೀನು ಎಲ್ಲಿದ್ದೆ?' ಎಂಬ ಪ್ರಶ್ನೆಗಳ ಮೂಲಕ ಅವನ ಅಂತರಂಗವನ್ನು ಕದಡಲಾಗುತ್ತದೆ. ಇದರಿಂದ 'ನಿಜವಾದ ಧರ್ಮ ಯಾವುದು?' ಎಂಬ ಪ್ರಶ್ನೆ ಪ್ರೇಕ್ಷಕರ ಮನದಲ್ಲಿ ಮೂಡುತ್ತದೆ.

ಬೆಳಕು, ಬಣ್ಣ ಮತ್ತು ಶಬ್ದದ ಬಳಕೆ ನಾಟಕಕ್ಕೆ ದೃಶ್ಯಕಾವ್ಯದ ಸೊಗಡನ್ನು ನೀಡುತ್ತದೆ. ಸಂಗೀತದಲ್ಲಿ ಯಕ್ಷಗಾನದ ಸ್ಪರ್ಶ ಕಂಡುಬಂದು, ರಂಗಪ್ರಯೋಗಕ್ಕೆ ಸ್ಥಳೀಯ ಸಂಸ್ಕೃತಿಯ ಸುವಾಸನೆ ಸೇರಿದೆ. ಅಭಿನಯವೂ ಸಹ ಸಮರ್ಪಕವಾಗಿದ್ದು, ವಿದ್ಯಾರ್ಥಿ ಕಲಾವಿದರ ಸಾಧನೆ ಮೆಚ್ಚುಗೆಗೆ ಪಾತ್ರವಾಗಿದೆ. ವಿಶೇಷವಾಗಿ, ಮುಖ್ಯ ಪುರುಷ ಪಾತ್ರಗಳನ್ನು ಮಹಿಳಾ ಕಲಾವಿದರು ನಿರ್ವಹಿಸಿರುವುದು ಗಮನಾರ್ಹ.

ಆದಾಗ್ಯೂ, ಕೆಲ ಸಂಭಾಷಣೆಗಳು ದೀರ್ಘವಾಗಿರುವುದರಿಂದ ನಾಟಕದ ವೇಗದಲ್ಲಿ ಸ್ವಲ್ಪ ಮಂದಗತಿ ಕಾಣಿಸಿಕೊಂಡ ಕ್ಷಣಗಳೂ ಇದ್ದವು. ಈ ಸಣ್ಣ ಕೊರತೆಯನ್ನು ಹೊರತುಪಡಿಸಿದರೆ, ಒಟ್ಟಾರೆ ರಂಗಪ್ರಯೋಗ ಚೆನ್ನಾಗಿದೆ.

ಅಂತ್ಯದಲ್ಲಿ ಮೂಡುವ 'ವಿಶ್ವಮಾನವ' ಸಂದೇಶ ನಾಟಕದ ಹೃದಯವಾಗಿದೆ. ಜಾತಿ, ದ್ವೇಷ, ಅಸಹಿಷ್ಣುತೆಯ ನಡುವೆ ಮಾನವೀಯತೆ ಉಳಿಯಬೇಕೆಂಬ ಆಶಯ ರಂಗಗೀತೆಯ ಮೂಲಕ ಸ್ಪಷ್ಟವಾಗಿ ಮೂಡುತ್ತದೆ. ನಾಟಕ ಮುಗಿದ ನಂತರವೂ ಆ ಗೀತೆಯ ಪ್ರತಿಧ್ವನಿ ಪ್ರೇಕ್ಷಕರ ಮನದಲ್ಲಿ ಉಳಿಯುತ್ತದೆ.

ಖ್ಯಾತ ನೃತ್ಯ ಕಲಾವಿದೆ ವೈಜಯಂತಿ ಕಾಶಿ ಅವರು, 'ವಿದ್ಯಾರ್ಥಿ ಕಲಾವಿದರು ಎಂದು ಅನಿಸಲೇ ಇಲ್ಲ; ಪ್ರತಿಯೊಂದು ಪಾತ್ರವೂ ಮನಸ್ಸನ್ನು ಕಾಡುತ್ತದೆ' ಎಂದು ಅಭಿಪ್ರಾಯಪಟ್ಟರು.

ಒಟ್ಟಾರೆ, ಕರ್ಣಾಸ್ತಮಾನ ಕೇವಲ ಪುರಾಣದ ಪುನರ್‌ಕಥನವಾಗಿರದೆ–ಪುರಾಣ ಹೇಗೆ ರೂಪುಗೊಳ್ಳುತ್ತದೆ ಎಂಬುದನ್ನು ತೆರೆದಿಡುತ್ತದೆ. ಇಂದಿನ ಮಾನವನ ಆತ್ಮಪರಿಶೀಲನೆಗೆ ಪ್ರೇರಣೆ ನೀಡುವ ಚಿಂತನಾತ್ಮಕ ರಂಗಪ್ರಯೋಗವಾಗಿ ಮೆರೆದಿದೆ.

ಹದಿನೈದರಿಂದ ಮೂರಡಿಗೆ ಅಡಿಕೆ ಅಟ್ಟ

• ಬೀರಣ್ಣ ನಾಯಕ ಮೊಗಟಾ

ಮಲೆನಾಡಿನ ಅಡಿಕೆ ತೋಟಗಳ ನಡುವೆಯೇ ಮನೆಯಿಂದಲೇ ಎದುರಾಗುವ ಎತ್ತರದ 'ಅಡಿಕೆ ಅಟ್ಟ' ಗಳು ಹಳ್ಳಿಯ ಇತಿಹಾಸ ಮತ್ತು ಪರಂಪರೆಯನ್ನು ಪ್ರತಿಬಿಂಬಿಸುತ್ತವೆ. ಹದಿನೈದು ಅಡಿ ಎತ್ತರದ ಬೃಹದಾಕಾರದ ನಾಟಿಮರದಿಂದ ನಿರ್ಮಿತ ಈ ಅಡಿಕೆ ಅಟ್ಟದ ಹೊತ್ತುಗಳು ಒಮ್ಮೆ ವೈಭವದ ಕಾಲದ ಸಂಕೇತವಾಗಿದ್ದವು. ಅಂದರೆ, ಅಡಿಕೆ ಕೃಷಿ ಮನೆಮಠಗಳ ಆರ್ಥಿಕ ಬೆನ್ನೆಲುಬಾಗಿದ್ದ ಸಮಯದಲ್ಲಿ, ಈ ಅಟ್ಟಗಳು ಕೇವಲ ಅಡಿಕೆಯನ್ನು ಒಣಗಿಸಲು ಅಥವಾ ಸಂಗ್ರಹಿಸಲು ಬಳಸುವ ಸ್ಥಳಗಳಷ್ಟೇ ಅಲ್ಲದೆ, ಮನೆಯ ಸಮೃದ್ಧಿ, ಸ್ಥಿರತೆ ಮತ್ತು ಗೌರವವನ್ನು ಪ್ರತಿಬಿಂಬಿಸುವ ಪ್ರಮುಖ ಭಾಗವಾಗಿದ್ದವು.

ಹಬ್ಬಗಳ ಸಮಯದಲ್ಲಿ, ಮದುವೆ, ಉಪನಯನ, ಸೀಮಂತ, ನಾಮಕರಣ, ಹಿರಿಯರ ದಿನಗಳಲ್ಲಿ ಅಡಿಕೆ ಅಟ್ಟವೇ ಮಂಟಪವಾಗುತ್ತಿತ್ತು. ಬೇಸಿಗೆಯಲ್ಲಿ ಇದು ಮನೆಯೊಳಗಿನ 'ಏಸಿ' ಆಗಿ, ಉಷ್ಣನಿಯಂತ್ರಣದ ಕಾರ್ಯವನ್ನೂ ನಿಭಾಯಿಸುತ್ತಿತ್ತು. ಮಕ್ಕಳಿಗೆ ಇಲ್ಲಿ ಜೋಕಾಲಿ ಕಟ್ಟುವ, ಆಟವಾಡುವ ಸ್ಥಳವೂ ದೊರಕಿತ್ತು. ತಾಯಂದಿರು ಹಪ್ಪಳ, ಸಂಡಿಗೆ, ಮಜ್ಜಿಗೆ ಮೆಣಸು ಮುಂತಾದವನ್ನೂ ಅಡಿಕೆ ಅಟ್ಟದಲ್ಲಿ ಒಣಗಿಸುತ್ತಿದ್ದರು. 'ಅಡಿಕೆ ಅಟ್ಟಾ ಒಂದಿರಾ, ಯಾವುದಕ್ಕೂ ಇಲ್ಲಾ ಬಾರಾ' ಎಂಬ ಹಳ್ಳಿಯ ಹಳಬರ ನುಡಿಗಳು ಈ ಅಡಿಕೆ ಅಟ್ಟದ ಮಹತ್ವವನ್ನು ಸಮರ್ಥಿಸುತ್ತವೆ.

ಈಗಿನ ಅಟ್ಟ

ಆದರೆ ಕಾಲಚಕ್ರ ಎಲ್ಲವನ್ನೂ ಬದಲಾಯಿಸಿದೆ. ಹಳ್ಳಿಯ ಯುವಜನತೆ ಪಟ್ಟಣಗಳಿಗೆ, ವಿದೇಶಗಳಿಗೆ ತೆರಳುತ್ತಿದ್ದಂತೆ, ಹದಿನೈದು ಅಡಿ ಎತ್ತರದ ಅಡಿಕೆ ಅಟ್ಟಗಳು ನಿಧಾನವಾಗಿ ಬಳಕೆಯಿಂದ ದೂರವಾದವು. ಅದರ ಬದಲಿಗೆ ತಾಂತ್ರಿಕತೆಯ ನೆರವಿನಿಂದ ಮೂರಡಿ ಎತ್ತರದ ಅಟ್ಟಗಳನ್ನು ನಿರ್ಮಿಸುವುದು ಸಾಧ್ಯವಾಯಿತು. ಈ ಹೊಸ ಅಟ್ಟಗಳು ಹಣ್ಣು ಒಣಗಿಸಲು, ಮಳೆನೀರಿನಿಂದ ರಕ್ಷಿಸಲು ಹಾಗೂ ಕಡಿಮೆ ಶ್ರಮದಲ್ಲಿ ಬಳಸಲು ಅನುಕೂಲಕರವಾಗಿದ್ದು, ಹಳ್ಳಿಯ ರೈತರಿಗೆ ಸರಳ ಮತ್ತು ಪರಿಣಾಮಕಾರಿ ಪರ್ಯಾಯವಾಗಿ ರೂಪುಗೊಂಡವು.

'ಬದಲಾವಣೆ ಜಗದ ನಿಯಮ' ಎನ್ನುವ ಮಾತಿಗೆ ಇದು ಸಾಕ್ಷಿ. ವೈಭವ, ಪರಂಪರೆ, ಮಕ್ಕಳ ಆಟ, ಸಾಂಸ್ಕೃತಿಕ ಸಮಾರಂಭಗಳೆಲ್ಲವೂ ಕಾಲದ ಹೊತ್ತಿಗೆ ತಕ್ಕಂತೆ ರೂಪಾಂತರಗೊಳ್ಳುತ್ತವೆ. ಆದರೆ ಅಡಿಕೆ ಅಟ್ಟದ ಛಾಯೆ, ನೆನಪು, ಗೌರವ, ಮತ್ತು ಅವನತಿಯ ಕಥೆಗಳು ಶಾಶ್ವತ.

ಹಳೆ ಕಾಲದ ಎತ್ತರದ ಅಟ್ಟ

ಮೊದಲ ಓದು





- ಡೀಲ್ ಅಂದ್ರೆ ಡೀಲ್
- ನಾನೂ ವಿಜ್ಞಾನಿಯಾಗುವೆ;
- ಮೇಡ್ ಇನ್ ಚೈನಾ

ಲೇ: ಮತ್ತೂರು ಸುಬ್ಬಣ್ಣ
ಪ್ರ: ಪ್ರೇಮ ಪ್ರಕಾಶನ
ಸಂ: 9886026085

ಬೇಸಿಗೆ ರಜಾ ಓದುವ ಮಜಾ

ಬೇಸಿಗೆಯ ರಜೆಯೆಂದರೆ ಅಜ್ಜನ ಮನೆ ಎಂಬ ಕಾಲವೊಂದಿತ್ತು ಎನ್ನುವುದರಿಂದಲೇ ಈಗ ಕತೆಗಳು ಆರಂಭವಾಗುತ್ತವೆ. ವಿಘಟಿತ ಕುಟುಂಬದ ಮಕ್ಕಳಿಗೆ ಅಜ್ಜನ ಮನೆಯ ವಾಸ, ರಜಾ ಮಜಾ ಎಲ್ಲವೂ ದೊರೆಯುವುದು ಈ ಕಾಲದಲ್ಲಿ ತುಸು ಕಠಿಣವಾಗಿದೆ. ಇದನ್ನು ಸರಳಗೊಳಿಸಲು, ಕುಟುಂಬದವರೆಲ್ಲ ಒಟ್ಟುಗೂಡಿ ಒಂದಷ್ಟು ಸಮಯ ಕಳೆಯಲು ಅನುಕೂಲವಾಗುವಂಥ ನಾಲ್ಕು ಮಕ್ಕಳ ಪುಸ್ತಕಗಳು ಪ್ರೇಮ ಮತ್ತು ಶ್ರುತಿ ಪ್ರಕಾಶನದಿಂದ ಪ್ರಕಟವಾಗಿವೆ.

ಮಕ್ಕಳ ಸಾಹಿತ್ಯದಲ್ಲಿ ಕೃಷಿ ಮಾಡುತ್ತಿರುವ ಮತ್ತೂರು ಸುಬ್ಬಣ್ಣ ಅವರಿಗೂ ಈ ಹಳಹಳಿಕೆ ಇದೆ. ಆದರೆ ಹೇಳಬೇಕಿರುವುದನ್ನೆಲ್ಲ ಕತೆಯ ಮೂಲಕವೇ ಹೇಳುವಲ್ಲಿ ಅವರು ಯಶಸ್ವಿಯಾಗಿದ್ದಾರೆ.

ಈ ಕಾಲದ ಮಕ್ಕಳು ತೋರುಬೆರಳಿನಿಂದ ಮೊಬೈಲ್ ಫೋನನ್ನು ಸ್ಕ್ರೋಲ್ ಮಾಡುವುದರಲ್ಲಿಯೇ ನಿರತರಾಗಿರುವಾಗ ಅವರನ್ನು ಕಲ್ಪನಾ ಲೋಕಕ್ಕೆ ಕರೆದೊಯ್ಯಲು ಇವರ 'ನಾನೂ ವಿಜ್ಞಾನಿಯಾಗುವೆ' ಪುಸ್ತಕ ಸಹಕಾರಿಯಾಗಿದೆ. ವಿಜ್ಞಾನದ ಸರಳ ಪ್ರಯೋಗಗಳನ್ನು ಮಕ್ಕಳಿಗೆ ಅರ್ಥವಾಗುವಂತೆ ವಿವರಿಸುತ್ತಲೇ ಪಾಠ ಎನಿಸದಂತೆ ಕತೆ ಹೆಣೆದಿದ್ದಾರೆ. ವೈಜ್ಞಾನಿಕ ಹಿನ್ನೆಲೆಯ ಈ ಕತೆಗಳು ಮಕ್ಕಳ ಕುತೂಹಲ ತಣಿಸುವುದರೊಂದಿಗೆ ಅಸಾಧ್ಯವಾದುದು ಯಾವುದೂ ಇಲ್ಲ ಎಂಬ ಆತ್ಮವಿಶ್ವಾಸವನ್ನು ನೀಡುತ್ತದೆ. ಮಕ್ಕಳಲ್ಲಿ ಕುತೂಹಲ ಕೆದರಿಸುವಂಥ ಕತೆಗಳೂ ಇದರಲ್ಲಿವೆ.

ಅಜ್ಜ ಅಜ್ಜಿಯರೊಂದಿಗೆ ಇರಬಹುದಾದ ಬಾಂಧವ್ಯವನ್ನೇ ಚಿತ್ರಿಸುವ 'ಡೀಲ್ ಅಂದ್ರೆ ಡೀಲ್' ಪುಸ್ತಕದಲ್ಲಿ ಅಜ್ಜ ಅಜ್ಜಿ ಹಾಗೂ ಮೊಮ್ಮಕ್ಕಳ ನಡುವಿನ ಬಾಂಧವ್ಯ ನಗರದ ಜೀವನದಲ್ಲಿ ಛಿದ್ರವಾಗಿರುವುದು ಅರಿವಿಗೆ ತರುತ್ತದೆ. ಮಕ್ಕಳಲ್ಲಿ ಅಜ್ಜ ಅಜ್ಜಿಯರ ಬಗೆಗೆ ಪ್ರೀತಿ ಬೆಳೆಯುವಂತೆಯೂ ಮಾಡುತ್ತದೆ. ಅಜ್ಜನ ಮನೆಯೆಂಬುದು ಪೆಂಡೋರಾ ಬಾಕ್ಸ್ ಇದ್ದಂತೆ. ಪ್ರತಿಸಲವೂ ಸೋಜಿಗವೊಂದನ್ನು ನಿರೂಪಿಸುವಂಥ ಕತೆಗಳು ಇದರಲ್ಲಿವೆ.

ಸಮಕಾಲೀನ ಸಾಮಾಜಿಕ ವ್ಯವಸ್ಥೆಯನ್ನು ವಿವರಿಸುವಂಥ ಕತೆಗಳಿರುವ ಸಂಕಲನ 'ಮೇಡ್ ಇನ್ ಚೈನಾ ಮತ್ತು ಇತರ ಮಕ್ಕಳ ಕತೆಗಳು'. 'ಮಕ್ಕಳೇ ಕೇಳಿಸಿಕೊಳ್ಳಿ' ಎಂಬ ಪುಸ್ತಕದಲ್ಲಿ ಬದುಕನ್ನು ಸ್ವೀಕರಿಸುವ, ಹಿರಿಯರನ್ನು ಆದರಿಸುವಂತೆ ತಿಳಿಹೇಳುವ ಮಾತುಗಳಿವೆ. ಒಂಟಿ ದಾರದೆಳೆಯ ಮೇಲೆ ನಾಜೂಕಾಗಿ ತೂಗಾಡುತ್ತಿರುವ ಬಾಂಧವ್ಯಗಳಿಗೆ ಅಂಟು ಹಾಕಿ ಕೂರಿಸುವ ಕೆಲಸವನ್ನು ಈ ಪುಸ್ತಕಗಳು ಮಾಡುತ್ತವೆ. ಮಕ್ಕಳೊಂದಿಗೆ ಹಿರಿಯರೂ ಓದಿದಾಗ. ಮಲಗುವ ಮುನ್ನ, ಮಕ್ಕಳಿಗೆ ಕತೆ ಓದಿ ಹೇಳಲು, ಮಧ್ಯಾಹ್ನದ ಬಿಸಿಲಿನ ಬೇಗೆ ತಪ್ಪಿಸಲು ಓದಲು ಹೇಳಲು ಈ ಪುಸ್ತಕಗಳ ಸಂಗ್ರಹ ಸಹಕಾರಿಯಾಗಿದೆ.



ಮಕ್ಕಳೇ ಕೇಳಿಸಿಕೊಳ್ಳಿ
ಲೇ: ಮತ್ತೂರು ಸುಬ್ಬಣ್ಣ
ಪ್ರ: ಶ್ರುತಿ ಪ್ರಕಾಶನ
ಸಂ: 9886026085

ಪ್ರತಿ ಪುಸ್ತಕದ ಪುಟ: 92 ಪ್ರತಿ ಪುಸ್ತಕದ ಬೆಲೆ ₹100



ಹಳದಿ ಕಣ್ಣಿನ ಸಾವು
ಲೇ: ಡಿ.ಎಸ್. ಚೌಗಲೆ
ಪ್ರ: ಸಪ್ನ ಬುಕ್ ಹೌಸ್
ಸಂ: 40114455

ದೇಸಿ ಭಾಷೆಯ ಸೂಕ್ಷ್ಮ ಸಂವೇದನೆಯ ಕಥೆಗಳು..

ಸಾಹಿತಿ ಡಿ.ಎಸ್. ಚೌಗಲೆ ಅವರ ಏಳನೇ ಕಥಾಸಂಕಲನ 'ಹಳದಿ ಕಣ್ಣಿನ ಸಾವು'ದಲ್ಲಿ ಒಟ್ಟು ಎಂಟು ಕಥೆಗಳಿವೆ. ವಿಭಿನ್ನ ಜೀವನಾನುಭವಗಳನ್ನೊಳಗೊಂಡ ಈ ಕಥೆಗಳು ಮನುಷ್ಯ ಸಂಬಂಧಗಳ ಸೂಕ್ಷ್ಮ ತಂತುಗಳನ್ನು ಸ್ಪರ್ಶಿಸುತ್ತವೆ.

ಯೌವನದಲ್ಲಿ ಪ್ರೀತಿಸಿದ್ದ ಹುಡುಗಿ ಹಲವು ವರ್ಷಗಳ ನಂತರ ಎದುರಿಗೆ ಬಂದು 'ನೀನು ನಿಜವಾಗಿಯೂ ಪ್ರೀತಿಸುತ್ತಿಯಾ?' ಎಂದು ಕೇಳಿದಾಗ ಕಥಾನಾಯಕ ಬಸೂ ಏನು ಹೇಳುತ್ತಾನೆ? ಹೆತ್ತತಾಯಿಯ ಕೊನೆಯ ಸಂಪರ್ಕದಂತಿದ್ದ ಮಂಚವನ್ನು ಹುಡುಕಿಕೊಂಡು ಹೊರಟ ಬಾಳಗೊಂಡನಿಗೆ ಅದು ಕೊನೆಗೂ ಸಿಗುತ್ತದೆಯೇ?–ಇವು 'ರೂಹು ಶಬ್ದಗಳಾಚೆಗಿನ ಬೆಳಗು' ಮತ್ತು 'ಮಂಚ ಮತ್ತು ಕಾಲು' ಕಥೆಗಳ ವಸ್ತು. ಈ ಸಂಕಲನದ ಬಹುತೇಕ ಕಥೆಗಳಲ್ಲೂ ಇದೇ ರೀತಿಯ ವಿಭಿನ್ನ ವಸ್ತುಗಳ ಆಯ್ಕೆ ಕಾಣಿಸುತ್ತದೆ.

'ಪಿಂಟ್ಯಾ' ಕಥೆಯಲ್ಲಿ ಕಾಯಿಲೆ ಬಿದ್ದ ಬೀದಿ ನಾಯಿಯನ್ನು ಉಳಿಸಲು ಬಾಳಾಸಾಹೇಬರು ನಡೆಸುವ ಪ್ರಯತ್ನಗಳು ಮನಸಿಗೆ ತಾಕುತ್ತವೆ; 'ಹಳದಿ ಕಣ್ಣಿನ ಸಾವು' ಕಥೆಯಲ್ಲಿ ಮಗಳನ್ನು ಉಳಿಸಲು ತಂದೆ ರಾಮಗೊಂಡನ ಹೋರಾಟ ಹೃದಯ ಕಲುಕುತ್ತದೆ.

'ಕಿಲುಬು', 'ಮನದ ಕೊನೆಯ ಮೊನೆಯ ಮೇಲೆ', 'ಕೊರಳು ಹರಿತು', 'ಬಾವಾ ಭಾವು' ಕಥೆಗಳು ಸಮಾಜದ ವಿವಿಧ ಸ್ತರಗಳ ಬದುಕನ್ನು ಅನಾವರಣಗೊಳಿಸುತ್ತವೆ. ಅದರಲ್ಲೂ 'ಕಿಲುಬು' ಕಥೆಯಲ್ಲಿ ಕಥೆಗಾರರೇ ನಿರೂಪಕರಾಗಿರುವುದು ಗಮನ ಸೆಳೆಯುತ್ತದೆ.

ಈ ಸಂಕಲನದ ಬಹುತೇಕ ಕಥೆಗಳು ಕರ್ನಾಟಕ–ಮಹಾರಾಷ್ಟ್ರ ಗಡಿಭಾಗದ ಬೆಳಗಾವಿಯ ಗ್ರಾಮೀಣ ಅಂತರಾಳವನ್ನು ಶೋಧಿಸುತ್ತವೆ. ಭಾಷಾ ಬಳಕೆ, ಪದಪ್ರಯೋಗವೂ ಅದೇ ಸೊಗಡನ್ನು ಹೊತ್ತುಕೊಂಡಿದ್ದು, ದೇಶಿ ನುಡಿಗಟ್ಟುಗಳು ಮತ್ತು ರೂಪಕಗಳ ಮೂಲಕ ಕಥೆಗಳು ಇನ್ನಷ್ಟು ಜೀವಂತವಾಗಿವೆ.

ಕೆಲವು ಕಥೆಗಳು ಸಮಕಾಲೀನ ಸಮಸ್ಯೆಗಳನ್ನು ಹೇಳಿದರೆ, ಕೆಲವು ಸಾರ್ವಕಾಲಿಕ ವಿಷಯಗಳನ್ನು ಒಳಗೊಂಡಿವೆ. ಒಟ್ಟಿನಲ್ಲಿ, ಸರಳ ನಿರೂಪಣೆಯಲ್ಲೇ ಸೂಕ್ಷ್ಮ ಸಂವೇದನೆಯನ್ನು ಹೊತ್ತ ಈ ಕಥೆಗಳು ಓದುಗರನ್ನು ಸುಲಭವಾಗಿ ಸೆಳೆಯುತ್ತವೆ.

ಪುಟ: 114 ₹110

ಡ್ರೆಸ್ಡೆನ್ ಅರಮನೆ



ಜ್ವಿಂಗರ್ ಪ್ಯಾಲೆಸ್‌ನ ಹೊರನೋಟ

ಪ್ರವಾಸ

ಬೃಂದಾವನದಿಂದ ಎಲ್ಬ್ ನದಿಯ ತಟದವರೆಗೆ

ದೂರದ ಜರ್ಮನಿಯ ನಗರವೊಂದು ಅತ್ಯಾಕರ್ಷಕ ಶೈಲಿಯ ಕಟ್ಟಡಗಳಿಂದಾಗಿ 'ಯುರೋಪಿನ ಜುವೆಲ್ ಬಾಕ್ಸ್' ಎಂಬ ಹೆಗ್ಗಳಿಕೆ ಪಡೆದಿದೆ. ವಿಶೇಷವೇನೆಂದರೆ ಈ ನಗರವು ಕರ್ನಾಟಕದೊಂದಿಗೆ ಅಚ್ಚರಿಯ ನಂಟೊಂದನ್ನು ಹೊಂದಿದೆ...

• ಚಿತ್ರ-ಬರಹ: ಡಿ.ಜಿ. ಮಲ್ಲಿಕಾರ್ಜುನ

ಸಂಜೆಹೊತ್ತಿನಲ್ಲಿ ನಮ್ಮ ಕೃಷ್ಣರಾಜ ಸಾಗರದ (ಕೆಆರ್‌ಎಸ್) ಬೃಂದಾವನ ಉದ್ಯಾನದಲ್ಲಿ ನಿಂತು ನೋಡಿದರೆ, ನೀರಿನ ಕಾರಂಜಿಗಳು ಬೆಳಕಿನ ಜೊತೆಯಲ್ಲಿ ನೃತ್ಯ ಮಾಡುತ್ತಾ ಸೆಳೆಯುತ್ತವೆ. ಸುತ್ತಮುತ್ತ ಹಸಿರು ತೋಟಗಳು, ಸಮತಟ್ಟಾಗಿ ಹರಡಿಕೊಂಡಿರುವ ದಾರಿಗಳು, ಅಚ್ಚುಕಟ್ಟಾದ ವಿನ್ಯಾಸ–ಈ ಎಲ್ಲವನ್ನು ನೋಡಿದಾಗ ಈ ಉದ್ಯಾನದ ಹಿಂದಿರುವ ಮಹಾನ್ ತೋಟವಿನ್ಯಾಸ ತಜ್ಞನನ್ನು ನೆನಪಿಸಿಕೊಳ್ಳದೇ ಇರಲು ಸಾಧ್ಯವಿಲ್ಲ.

ಅವರು ಗುಸ್ಟಾವ್ ಹರ್ಮನ್ ಕೃಂಬಿಗಲ್. ಜರ್ಮನಿಯ ಡ್ರೆಸ್ಡೆನ್ ಬಳಿ ಜನಿಸಿ, ಮೈಸೂರು ಸಂಸ್ಥಾನದ ತೋಟಗಾರಿಕೆಗೆ ಹೊಸ ರೂಪ ನೀಡಿದ ಮಹಾನ್ ತೋಟಗಾರಿಕ ತಜ್ಞ.

ಈ ನೆನಪೇ ನನ್ನನ್ನು ದೂರದ ಯೂರೋಪಿನ ಒಂದು ನಗರಕ್ಕೆ ಕರೆದೊಯ್ಯುತ್ತದೆ. ಎಲ್ಬ್ ನದಿಯ ತಟದಲ್ಲಿ ಅರಳಿರುವ ಜರ್ಮನಿಯ ಸ್ಯಾಕ್ಸನಿ ರಾಜ್ಯದ ರಾಜಧಾನಿ ಡ್ರೆಸ್ಡೆನ್. ಇತಿಹಾಸ, ಕಲೆ ಮತ್ತು ವಾಸ್ತುಶಿಲ್ಪದ ವೈಭವದಿಂದ 'ಯುರೋಪಿನ ಜುವೆಲ್ ಬಾಕ್ಸ್' ಎಂದು ಹೆಸರಾಗಿರುವ ಈ ನಗರ, ಕರ್ನಾಟಕದ ಜೊತೆಗೂ ಒಂದು ಅಚ್ಚರಿಯ ನಂಟನ್ನು ಹೊಂದಿದೆ.

ತೋಟಗಳಿಗೆ ಜೀವ ತುಂಬಿದ ಕೃಂಬಿಗಲ್

ಗುಸ್ಟಾವ್ ಹರ್ಮನ್ ಕೃಂಬಿಗಲ್ ತೋಟಗಾರಿಕಾ ನಿರ್ದೇಶಕ, ಸಸ್ಯಶಾಸ್ತ್ರಜ್ಞ, ನಗರ ವಿನ್ಯಾಸಕಾರ, ವಾಸ್ತುಶಿಲ್ಪಿ–ಹೀಗೆ ಅನೇಕ ಕ್ಷೇತ್ರಗಳಲ್ಲಿ ಪರಿಣತಿ ಪಡೆದ ಬಹುಮುಖ ಪ್ರತಿಭೆ.

ಬರೋಡ ಸಂಸ್ಥಾನದಲ್ಲಿ ತೋಟಗಳನ್ನು ಸುಂದರವಾಗಿ ಅಭಿವೃದ್ಧಿಪಡಿಸಿದ್ದ ಅವರ ಕೆಲಸವನ್ನು ಮೆಚ್ಚಿದ ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್, ಅವರನ್ನು ಮೈಸೂರು ಸಂಸ್ಥಾನಕ್ಕೆ ಆಹ್ವಾನಿಸಿದರು. 1908ರಲ್ಲಿ ಕೃಂಬಿಗಲ್ ಲಾಲ್‌ಬಾಗ್ ಮತ್ತು ಸರ್ಕಾರಿ ತೋಟಗಳ ಅಧೀಕ್ಷಕರಾಗಿ



ಗುಸ್ಟಾವ್ ಹರ್ಮನ್ ಕೃಂಬಿಗಲ್

ಜೂಲಿಯಸ್ ಥಿಯೊಡರ್ ಹಲ್ಷ್

ಕಾರ್ಯಾರಂಭಿಸಿದರು.

ಅವರಿಂದಾಗಿ ಮೈಸೂರು ಮತ್ತು ಬೆಂಗಳೂರು ನಗರಗಳ ತೋಟಗಳು ಹೊಸರೂಪ ಪಡೆದವು. ಕನ್ನಂಬಾಡಿ ಕಟ್ಟೆಯ ಕೆಳಭಾಗದಲ್ಲಿ ನಿರ್ಮಿತವಾದ ಪ್ರಸಿದ್ಧ ಬೃಂದಾವನ ಉದ್ಯಾನ ಕೂಡ ಅವರ ವಿನ್ಯಾಸದ ಅದ್ಭುತ ಉದಾಹರಣೆ.

ಕೃಂಬಿಗಲ್ ಅವರು ಮೈಸೂರು ಸಂಸ್ಥಾನದ ಮುಖ್ಯ ವಾಸ್ತುಶಿಲ್ಪಿಯಾಗಿಯೂ ಕಾರ್ಯನಿರ್ವಹಿಸಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತದ ಬೆಳ್ಳಿ ಮಹೋತ್ಸವದ ಸಂದರ್ಭದಲ್ಲಿ ಆಯ್ದ ಹಳ್ಳಿಗಳಲ್ಲಿ ನಿರ್ಮಿಸಿದ ವೃತ್ತಾಕಾರದ ಭಜನೆಮನೆಗಳ ವಿನ್ಯಾಸವೂ ಅವರದ್ದೇ.

ಕರ್ನಾಟಕದಲ್ಲಿ ಜೀವನದ ಬಹುತೇಕ ಸಮಯವನ್ನು ಕಳೆದ ಕೃಂಬಿಗಲ್ 1956ರಲ್ಲಿ ಬೆಂಗಳೂರಿನಲ್ಲಿ ನಿಧನರಾದರು. ಬೆಂಗಳೂರಿನ 'ಕೃಂಬಿಗಲ್ ರಸ್ತೆ' ಅವರ ಸೇವೆಯನ್ನು ನೆನಪಿಸುತ್ತದೆ.

ಶಾಸನಗಳ ಲೋಕ ಬೆಳಗಿಸಿದ ಹಲ್ಷ್

ಡ್ರೆಸ್ಡೆನ್‌ನೊಂದಿಗೆ ಕರ್ನಾಟಕವನ್ನು ಜೋಡಿಸುವ ಮತ್ತೊಬ್ಬ ಮಹತ್ವದ ವ್ಯಕ್ತಿ ಜೂಲಿಯಸ್ ಥಿಯೊಡರ್ ಹಲ್ಷ್.

ಅವರು ಪ್ರಸಿದ್ಧ ಶಾಸನತಜ್ಞರು ಹಾಗೂ ಭಾಷಾ ಪಂಡಿತರಾಗಿದ್ದರು. 1886ರಲ್ಲಿ ದಕ್ಷಿಣ ಭಾರತದ ಪುರಾತತ್ವ ಇಲಾಖೆಯಲ್ಲಿ ಪ್ರಥಮ ಶಾಸನತಜ್ಞರಾಗಿ ನೇಮಕಗೊಂಡರು. ಮದರಾಸು ಪ್ರಾಂತ್ಯದ ವಿವಿಧ ಭಾಗಗಳಲ್ಲಿ ಸಂಚರಿಸಿ ಅನೇಕ ಶಾಸನಗಳನ್ನು ಅವರು ಪತ್ತೆ ಹಚ್ಚಿದರು. ರಾಷ್ಟ್ರಕೂಟ, ಚಾಲುಕ್ಯ, ಚೋಳ, ಪಾಂಡ್ಯ, ಚೇರ ಮೊದಲಾದ ರಾಜವಂಶಗಳಿಗೆ ಸಂಬಂಧಿಸಿದ ಶಾಸನಗಳನ್ನು ಅಧ್ಯಯನ ಮಾಡಿ ಬೆಳಕಿಗೆ ತಂದರು.

ಕನ್ನಡ ವಿದ್ವಾಂಸರಾದ ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿ ಅವರ ಸಹಾಯಕರಾಗಿದ್ದರು.

ಹಲ್ಷ್ ಸಂಪಾದಿಸಿ ಪ್ರಕಟಿಸಿದ 'ಕಾರ್ಪಸ್ ಇನ್‌ಸ್ಕ್ರಿಪ್ಷನಮ್ ಇಂಡಿಕಾರಮ್' ಸಂಪುಟವು ಮೌರ್ಯ ಸಾಮ್ರಾಟ ಅಶೋಕನ ಶಾಸನಗಳ ಅಧ್ಯಯನಕ್ಕೆ ಅಮೂಲ್ಯವಾಗಿದೆ. ಸಂಸ್ಕೃತ, ಪ್ರಾಕೃತ ಮತ್ತು ದ್ರಾವಿಡ ಭಾಷೆಗಳ ಮೇಲೆ ಅವರಿಗೆ ಅದ್ಭುತ ಪಾಂಡಿತ್ಯವಿತ್ತು.

1927 ಜನವರಿ 16ರಂದು ಜರ್ಮನಿಯ ಹಲ್ಲೆ ನಗರದಲ್ಲಿ ಅವರು ನಿಧನರಾದರು.

ಎಲ್ಬ್ ನದಿಯ ತಟದ ನಗರ

ಎಲ್ಬ್ ನದಿಯ ತಟದಲ್ಲಿರುವ ಡ್ರೆಸ್ಡೆನ್ ನಗರವು ಇತಿಹಾಸ, ಸಂಸ್ಕೃತಿ ಮತ್ತು ಕಲೆಗಳ ಅಪಾರ ಸಂಪತ್ತಿನಿಂದ ಪ್ರಸಿದ್ಧವಾಗಿದೆ.

ಒಂದು ಕಾಲದಲ್ಲಿ ಸ್ಯಾಕ್ಸನ್ ರಾಜವಂಶದ ರಾಜಧಾನಿಯಾಗಿದ್ದ ಈ ನಗರದಲ್ಲಿ ಬರೋಕ್ ಮತ್ತು ರೊಕೊಕೋ ಶೈಲಿಯ ಅದ್ಭುತ ಕಟ್ಟಡಗಳು ನಿರ್ಮಾಣವಾಗಿದ್ದವು. ಅವುಗಳ ಸೌಂದರ್ಯದಿಂದಲೇ ಇದನ್ನು 'ಯುರೋಪಿನ ಜುವೆಲ್ ಬಾಕ್ಸ್' ಎಂದು ಕರೆಯಲಾಯಿತು.

ಇಟಲಿಯ ಫ್ಲೋರೆನ್ಸ್ ನಗರಕ್ಕೆ ಹೋಲಿಕೆಯಾಗಿರುವುದರಿಂದ 'ಫ್ಲೋರೆನ್ಸ್ ಆನ್ ದಿ ಎಲ್ಬ್' ಎಂಬ ಹೆಸರನ್ನೂ ಈ ನಗರ ಪಡೆದಿದೆ.

ಯುದ್ಧದ ಬಳಿಕ ಪುನರ್ಜನ್ಮ

ಎರಡನೇ ಮಹಾಯುದ್ಧದ ವೇಳೆ ಡ್ರೆಸ್ಡೆನ್ ಭಾರಿ ಬಾಂಬ್ ದಾಳಿಗೆ ಗುರಿಯಾಯಿತು. ನಗರ ಬಹುತೇಕ ನಾಶವಾಯಿತು. ಅನೇಕ ಐತಿಹಾಸಿಕ ಕಟ್ಟಡಗಳು ಅವಶೇಷಗಳಾಗಿ ಬಿದ್ದವು.

ಫ್ರೌನ್ ಕಿರ್ಖೆ ಚರ್ಚ್

ಆದರೆ ಯುದ್ಧದ ನಂತರ ಜರ್ಮನಿ ಈ ನಗರವನ್ನು ಮತ್ತೆ ಅದೇ ವೈಭವದಲ್ಲಿ ಪುನರ್ ನಿರ್ಮಿಸಿತು. ಹಳೆಯ ಕಟ್ಟಡಗಳನ್ನು ಮೂಲ ವಿನ್ಯಾಸದಂತೆ ಮರುನಿರ್ಮಿಸಲು ಅಪಾರ ಶ್ರಮವಹಿಸಲಾಯಿತು.

ಇಂದು ಡ್ರೆಸ್ಡೆನ್ ಜರ್ಮನಿಯ ಪ್ರಮುಖ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಕೇಂದ್ರವಾಗಿದೆ. ಇಲ್ಲಿ ಇರುವ ಟೆಕ್ನಿಕಲ್ ಯೂನಿವರ್ಸಿಟಿ ಡ್ರೆಸ್ಡೆನ್ ಪ್ರಮುಖ ವಿಶ್ವವಿದ್ಯಾಲಯಗಳಲ್ಲಿ ಒಂದಾಗಿದೆ. ಐಟಿ, ಅರೆವಾಹಕ ಮತ್ತು ವಿದ್ಯುನ್ಮಾನ ಉದ್ಯಮಗಳ ಬೆಳವಣಿಗೆಯಿಂದಾಗಿ ಈ ನಗರ 'ಯೂರೋಪಿಯನ್ ಸಿಲಿಕಾನ್ ವ್ಯಾಲಿ' ಎಂದೂ ಹೆಸರಾಗಿದೆ.

ಡ್ರೆಸ್ಡೆನ್‌ನ ಅತ್ಯಂತ ಪ್ರಸಿದ್ಧ ಕಟ್ಟಡಗಳಲ್ಲಿ ಜ್ವಿಂಗರ್ ಪ್ಯಾಲೆಸ್ ಪ್ರಮುಖವಾದದು. 1709ರಲ್ಲಿ ಬರೋಕ್ ಶೈಲಿಯಲ್ಲಿ ನಿರ್ಮಿಸಲಾದ ಈ ಅರಮನೆ, ಅದ್ಭುತ ಕಲಾ ಸಂಗ್ರಹಾಲಯಗಳು ಮತ್ತು ಸುಂದರ ಉದ್ಯಾನಗಳಿಂದ ಪ್ರಸಿದ್ಧವಾಗಿದೆ.

ಇಲ್ಲಿ ನಡೆಯುವ ಸಂಗೀತ ಹಾಗೂ ನಾಟಕ ಕಾರ್ಯಕ್ರಮಗಳು ಪ್ರವಾಸಿಗರನ್ನು ಆಕರ್ಷಿಸುತ್ತವೆ.

ಡ್ರೆಸ್ಡೆನ್‌ನ ಪ್ರಮುಖ ಚರ್ಚ್ ಆಗಿರುವ ಫ್ರೌನ್ ಕಿರ್ಖೆ ತನ್ನ ಭವ್ಯ ಗುಮ್ಮಟದಿಂದ ಪ್ರಸಿದ್ಧವಾಗಿದೆ. 18ನೇ ಶತಮಾನದಲ್ಲಿ ನಿರ್ಮಿಸಲಾದ ಈ ಚರ್ಚ್ ಯುದ್ಧದ ವೇಳೆ ಸಂಪೂರ್ಣ ನಾಶವಾಯಿತು. ಆದರೆ ನಂತರ ಅದರ ಮೂಲ ಕಲ್ಲುಗಳನ್ನೇ ಬಳಸಿಕೊಂಡು ಅದನ್ನು ಮತ್ತೆ ನಿರ್ಮಿಸಲಾಯಿತು. ಈ ಪುನರ್ ನಿರ್ಮಾಣವೇ ಡ್ರೆಸ್ಡೆನ್ ನಗರದ ಪುನರ್ಜನ್ಮದ ಸಂಕೇತವಾಗಿದೆ.

ಸೆಂಪರ್ ಓಪೆರಾ ಹೌಸ್

ಡ್ರೆಸ್ಡೆನ್‌ನ ಸಾಂಸ್ಕೃತಿಕ ಹೃದಯವೆಂದೇ ಹೇಳಬಹುದಾದ ಸೆಂಪರ್ ಓಪೆರಾ ಹೌಸ್ 1841ರಲ್ಲಿ ನಿರ್ಮಿಸಲಾಯಿತು. ಬೆಂಕಿ ಅವಘಡ ಮತ್ತು ಯುದ್ಧದ ದಾಳಿಯಿಂದ ಎರಡು ಬಾರಿ ನಾಶವಾದರೂ ಅದನ್ನು ಮತ್ತೆ ಮೂಲ ರೂಪದಲ್ಲೇ ನಿರ್ಮಿಸಲಾಗಿದೆ. ಇಂದು ಇಲ್ಲಿ ಸಂಗೀತ, ನೃತ್ಯ ಮತ್ತು ಓಪೆರಾ ಕಾರ್ಯಕ್ರಮಗಳು ನಡೆಯುತ್ತವೆ.

ಡ್ರೆಸ್ಡೆನ್‌ನ ಮತ್ತೊಂದು ವಿಶೇಷತೆ 101 ಮೀಟರ್ ಉದ್ದದ ಪರಸಿಲೇನ್ ಭಿತ್ತಿಚಿತ್ರ. 'ಪೆರೇಡ್ ಆಫ್ ಪ್ರಿನ್ಸೆಸ್' ಎಂದು ಕರೆಯಲಾಗುವ ಈ ಚಿತ್ರದಲ್ಲಿ ವೆಟ್ಟಿನ್ ರಾಜವಂಶದ ಸ್ಯಾಕ್ಸನ್ ರಾಜರ ಮೆರವಣಿಗೆಯನ್ನು ಚಿತ್ರಿಸಲಾಗಿದೆ.

ಪಿಂಗಾಣಿ ಚೂರುಗಳಿಂದ ನಿರ್ಮಿಸಲಾದ ಈ ಭಿತ್ತಿಚಿತ್ರವು ವಿಶ್ವದಲ್ಲೇ ಅತ್ಯಂತ ಉದ್ದದ್ದು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಆ ಊರು ದೂರವಾಗಿದ್ದರೂ, ಅದರ ನೆನಪು ಮನಸ್ಸಿಗೆ ಇನ್ನೂ ಹತ್ತಿರವಾಗಿದೆ.

ಗೋಡೆ ಮೇಲೆ ಸಿಕ್ಕಳು ಹಸಿರು ಸುಂದರಿ!

• ಸಂತೋಷ ಈ. ಚಿನಗುಡಿ

ನಸುಕಿನಲ್ಲಿ ಎದ್ದು ಹೊರಬಂದಾಗ ಗೋಡೆಗೆ ದಾಸವಾಳದ ಹೂವು ಅಂಟಿಕೊಂಡಿದೆ ಅನಿಸಿತು. ಹಸಿರು, ಕೆಂಪು, ಹಳದಿ ಬಣ್ಣಗಳ ಮಿಶ್ರಣ. ಯಾರೋ ತಮಾಷೆಗೆ ಅಂಟಿಸಿದ ಕಾಗದದ ಹೂವಂತೆ ಕಂಡಿತು. ತುಸು ಹತ್ತಿರ ಹೋಗಿ ದಿಟ್ಟಿಸಿದೆ. ಛಂಗನೆ ಮೇಲಕ್ಕೆ ನೆಗೆಯಿತು! ಒಂದು ಕ್ಷಣ ಹಿಂದೆ ಸರಿದೆ. ಅರೆರೇ, ಅದು ಹೂವಲ್ಲ; ಕಪ್ಪೆ. ನನ್ನ ಬದುಕಿನಲ್ಲಿ ಎಂದೂ ನೋಡಿರದ ಅತ್ಯಂತ ಸುಂದರ ಕಪ್ಪೆ! ತಕ್ಷಣ ಮೊಬೈಲ್ ತೆಗೆದು ಚಿತ್ರ ಕ್ಲಿಕ್ಕಿಸಿದೆ.

–ಹೀಗೆ ಬೆಳಗಾವಿ ತಾಲ್ಲೂಕಿನ ಹಿರೇಬಾಗೇವಾಡಿಯ ಶಿವಕುಮಾರ ಪಾಟೀಲ ಅವರು ತಮ್ಮ ಅನುಭವವನ್ನು ಹಂಚಿಕೊಳ್ಳುತ್ತಿದ್ದರು.

ದಟ್ಟ ಹಸಿರು ಮೈಬಣ್ಣದ ಮೇಲೆ ಕಪ್ಪು–ಬಿಳುಪು ಮಿಶ್ರಿತ ಮಿಂಚುವ ಚುಕ್ಕೆಗಳು. ಮುಖದಿಂದ ಹೊರಬಂದ ದೊಡ್ಡ ಕರಿ ಕಣ್ಣುಗಳು, ಸುತ್ತಲೂ ಬಿಳಿ ಹುಬ್ಬಿನ ಗೆರೆಯಂತೆ ಹೊಳಪು. ಮುಂಗಾಲು–ಹಿಂಗಾಲುಗಳಿಗೆ ತಲಾ ನಾಲ್ಕು ಬೆರಳು ಸೇರಿ ಹದಿನಾರು ತಿಳಿ ಹಳದಿ ಬೆರಳುಗಳು. ಅವುಗಳನ್ನು ಜೋಡಿಸಿದ ಕೆಂಪು ಜಾಲಪದರು–ಗಾಳಿಯಲ್ಲಿ ತೇಲಲು ನೆರವಾಗುವ ವಿಶೇಷ ರಚನೆ.

ಚುರುಕಾಗಿ ಹೊರಬಂದು ಒಳಹೋಗುವ ಚೂಪು ನಾಲಿಗೆ... ಈ ಎಲ್ಲವು ಸೇರಿ ಕಪ್ಪೆಗಳ ಲೋಕದಲ್ಲಿ ಇವಳೇ 'ವಿಶ್ವ ಸುಂದರಿ' ಎನ್ನುವಂತೆ ಮಾಡುತ್ತದೆ.

ಆ ಗೋಡೆಯ ಮೇಲೆ ನೆಗೆದ ಕ್ಷಣ, ಒಂದು ಅಪರೂಪದ ಕಪ್ಪೆಯನ್ನು ಮಾತ್ರವಲ್ಲ; ಪ್ರಕೃತಿಯ ನಾಜೂಕಿನ ಭವಿಷ್ಯವನ್ನೇ ಕಣ್ಣಿಗೆ ಕಟ್ಟಿದಂತಾಯಿತು.

ನೀರಿನಲ್ಲಿ ಹರಿದು ಬಂದ ಅತಿಥಿ

'ಈ ಕಪ್ಪೆಗಳು ಹೆಚ್ಚಾಗಿ ಪಶ್ಚಿಮಘಟ್ಟವಾಸಿಗಳು. ಜನವಸತಿ ಪ್ರದೇಶಗಳಲ್ಲಿ ಕಾಣಿಸುವುದು ತುಂಬಾ ಅಪರೂಪ. ಹಿರೇಬಾಗೇವಾಡಿ ಸಂಪೂರ್ಣ ಪಶ್ಚಿಮ-ಘಟ್ಟದ ಭಾಗವಲ್ಲ; ಅರೆ ಮಲೆನಾಡು. 'ಮಳೆಗಾಲದಲ್ಲಿ ಇವು ಮೊಟ್ಟೆ ಇಟ್ಟಾಗ ಹುಟ್ಟುವ ಗೊದಮೊಟ್ಟೆಗಳು (tadpoles) ನೀರಿನ ಹರಿವಿನ ಜೊತೆ ತೇಲಿ ಹೊಸ ಪ್ರದೇಶಗಳಿಗೆ ಸೇರುವ ಸಾಧ್ಯತೆ ಇದೆ. ಹೀಗೆ ಹೊಸ ಪ್ರದೇಶಗಳಲ್ಲಿ ಸಂತತಿಯ ವಿಸ್ತರಣೆ ನಡೆಯಬಹುದು' ಎಂದು ಜೀವವೈವಿಧ್ಯತೆಯ ಸಂಶೋಧಕ ಮಂಜುನಾಥ ಎಸ್. ನಾಯಕ ಅಭಿಪ್ರಾಯಪಡುತ್ತಾರೆ.

ಕಪ್ಪೆಗಳ ಜೀವನ ಮಳೆಗಾಲದಿಂದ ಆರಂಭವಾಗುತ್ತದೆ. ಶೀತರಕ್ತ ಜೀವಿಗಳಾದ ಇವು ಬೇಸಿಗೆಯಲ್ಲಿ ಅಡಗಿಕೊಂಡಂತೆ ಕಾಣೆಯಾಗುತ್ತವೆ. ತೇವಾಂಶವಿರುವ ಜಾಗ ಹುಡುಕಿ ಸಂತಾನೋತ್ಪತ್ತಿಯಲ್ಲಿ ತೊಡಗುತ್ತವೆ. ಮಲಬಾರ್ ಗ್ಲೈಡಿಂಗ್ ಕಪ್ಪೆ ನೀರಿನ ಮೂಲದ ಸಮೀಪದಲ್ಲಿ ತನ್ನದೇ ದೇಹದಿಂದ ನೊರೆ ಉತ್ಪಾದಿಸಿ ಮೊಟ್ಟೆ ಇಡುತ್ತದೆ. ಆ ನೊರೆ ಹೊರಭಾಗದಲ್ಲಿ ಗಟ್ಟಿಯಾಗಿ ಗೂಡಿನಂತಾಗುತ್ತದೆ. ಒಳಗಿನ ತೇವದಲ್ಲಿ ಬೆಳೆಯುವ ಗೊದಮೊಟ್ಟೆಗಳು ವಾರದ ಬಳಿಕ ಜಾರಿ ನೀರಿಗೆ ಬೀಳುತ್ತವೆ. ಸೂಕ್ತ ಜಾಗ ಆಯ್ಕೆ ಮಾಡುವ ಈ ಚಾತುರ್ಯವೇ ಇವುಗಳ ಬದುಕಿನ ಗುಟ್ಟು.

ಸಂಗಾತಿಗಾಗಿ ಮಲ್ಲಯುದ್ಧ

